श्रीतत्त्वनिधिः

प्रथमो भागः

शक्तिनिधिः

ŚRĪTATTVANIDHI

VOLUME I

ŚAKTINIDHI

JACL-KRC
016471

प्राच्यविद्यासंशोधनालयः

मैसूरुविश्वविद्यानिलयः

मैसूरु

योऽनूचानः स नो महान्
राष्ट्रिय संस्कृत संस्थान

राष्ट्रिय संस्कृत संस्थान, जयपुर परिसर

पुस्तकालय

पुस्तक संख्या ....

वर्गीकरण संख्या ....

राष्ट्रिय संस्कृत संस्थान, जयपुर
परिसर

वर्गीकरण सं. ....

पुस्तक सं. .... 16471 दिनाङ्क ....

यह पुस्तक नीचे अङ्कित तिथि या उससे पूर्व लौटा दी जानी चाहिये। यदि पुस्तक निर्धारित तिथि से अधिक समय तक पाठक अपने पास रखेंगे तो 50 पैसे प्रतिदिन के हिसाब से विलम्ब शुल्क देय होगा।

संस्कृत ... क्रमांक 23 दिनांक 7/9/2000 जयपुर

COMPLIMENTS OF THE RASHTRIYA
ANAKPURI, NEW DELHI-110058

Director,
Oriental Research Institute.
MYSORE-570 005.

SV-2024

16471

12·2 L

श्री मुम्मडिकृष्णराजविरचितः

श्रीतत्त्वनिधि :

प्रथमः सम्पुट :

शक्तिनिधि :

ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ ವಿರಚಿತ

ಶ್ರೀ ತತ್ತ್ವನಿಧಿ

ಪ್ರಥಮ ಸಂಪುಟ

ಶಕ್ತಿನಿಧಿ

ŚRĪ MUMMADI KRISHNARAJA WODEYAR'S

ŚRĪ TATTVANIDHI

VOLUME 1

SAKTINIDHI

प्राच्यविद्यासंशोधनालयग्रन्थमाला - १८६

श्री मुम्मडिकृष्णराजविरचित :

श्रीतत्त्वनिधि :

प्रथमः सम्पुटः

शक्तिनिधिः

राष्ट्रिय संस्कृत संस्थान
जयपुर परिसर, जयपुर
पुस्तकालय
क्रमांक 16471

प्रधानसम्पादकः
प्रो. एम्. मादय्यः एम.ए., पिएच्. डि.
कुलपतिः
मैसूरुविश्वविद्यानिलय :
मैसूरु

प्राच्यविद्यासंशोधनालय :
मैसूरुविश्वविद्यानिलय :
मैसूरु
१९९७

© ORIENTAL RESEARCH INSTITUTE,
UNIVERSITY OF MYSORE, MYSORE.

COPIES : 1000

Price : Rs1500-00
$ 100

JACL-KRC
016471

Printed at : Perfect Industries, Printing Division, Mysore

Colour Transperencies : Sri S. Thippeswamy

Colour Scanning : Unity Process, Bangalore.

Oriental Research Institute Series No - 186

Śrī Mummadi Krishnaraja Wodeyar's

ŚRĪ TATTVANIDHI

VOLUME 1

ŚAKTINIDHI

CHIEF EDITOR
Prof. M MADAIAH, M.A. Ph.D.
VICE-CHANCELLOR,
UNIVERSITY OF MYSORE,
MYSORE.

ORIENTAL RESEARCH INSTITUTE
UNIVERSITY OF MYSORE,
MYSORE
1997

EDITORIAL COMMITTEE

Editor-in-Chief
Professor M. MADAIAH, M.A., Ph.D.,
Vice-Chancellor

Deputy Editors
Professor V.G. TALWAR, M.A., Ph.D.,
Registrar

Sri. M. MAHADEVASWAMY, K.S.A.S.
Finance Officer

Editor
Vidushi Dr. H.P. DEVAKI, M.A., Ph.D.,
Director

Joint Editor
Vidwan R.G. MALAGI, M.A.,
Deputy Director

ASSISTANT EDITORS

Vidwan H. SHANKARAGANAPATHI PHATAK, M.A.,

Vidwan H.V. NAGARAJA RAO, M.A.,

Vidwan C.N. BASAVARAJU, M.A.,

Vidwan Dr. T.V. SATHYANARAYANA, M.A., Ph.D.,

Sri R. RAGHAVENDRA RAO, M.A.,

Vidwan A.V. NAGASAMPIGE, M.A.,

Srimati B. MAMATA, M.A.,

Sri K.V. RAMAPRIYA, M.A.,

Srimati Dr. M. GEETHA, M.A., Ph. D.,

Sri S. JAGANNATHA, M.A.,

प्राच्यविद्यासंशोधनालयग्रन्थमाला - १८६
ORIENTAL RESEARCH INSTITUTE SERIES - 186

मुम्मडिकृष्णराजविरचितः

श्रीतत्त्वनिधिः

प्रथमः सम्पुटः

शक्तिनिधिः

SRI MUMMADI KRISHNARAJA WODEYAR'S

ŚRĪTATTVANIDHI

Volume 1

ŚAKTINIDHI

सम्पादिका
अलङ्कारशास्त्रविदुषी

डा. एच्.पि. देवकी एम्.ए . पिएच्.डि.
प्राच्यविद्यासंशोधनालयनिर्देशिका
तथा संस्कृतविभागाध्यक्षा

EDITOR

Dr. H.P. DEVAKI, M.A. Ph.D.
VIDUSHI IN ALANKARA SHASTRA
DIRECTOR, ORIENTAL RESEARCH INSTITUTE
AND
CHAIRPERSON, DEPARTMENT OF STUDIES IN SANSKRIT
MANASAGANGOTRI, MYSORE

UNIVERSITY OF MYSORE,
MYSORE
1997

ಸಂಪಾದಕ ಮಂಡಲಿ

ಪ್ರಧಾನ ಸಂಪಾದಕರು

ಪ್ರೊ.ಎಂ.ಮಾದಯ್ಯ ಎಂ.ಎ., ಪಿಹೆಚ್.ಡಿ.

ಕುಲಪತಿಗಳು

ಉಪ ಸಂಪಾದಕರು

ಪ್ರೊ.ವಿ.ಜಿ.ತಳವಾರ್ ಎಂ.ಎ., ಪಿ.ಹೆಚ್.ಡಿ.

ಕುಲಸಚಿವರು

ಎಂ. ಮಹಾದೇವ ಸ್ವಾಮಿ ಕೆ.ಎಸ್.ಎ.ಎಸ್.

ದ್ರವ್ಯಾಧಿಕಾರಿಗಳು

ಸಂಪಾದಕರು

ಡಾ.ಹೆಚ್.ಪಿ.ದೇವಕಿ ಎಂ.ಎ., ಪಿ.ಹೆಚ್.ಡಿ.

ನಿರ್ದೇಶಕರು

ಸಹ ಸಂಪಾದಕರು

ವಿದ್ವಾನ್ ಆರ್.ಜಿ. ಮಾಳಗಿ ಎಂ.ಎ.

ಉಪ ನಿರ್ದೇಶಕರು

ಸಂಪಾದನ ಸಹಾಯಕರು

ಹಿರಿಯ ಸಂಶೋಧಕರು

ವಿದ್ವಾನ್‌ಹೆಚ್.ಎನ್. ಘಾಟಕ್ ಎಂ.ಎ.

ವಿದ್ವಾನ್ ಎಚ್.ವಿ. ನಾಗರಾಜರಾವ್ ಎಂ.ಎ.

ವಿದ್ವಾನ್ ಸಿ.ಎಸ್. ಬಸವರಾಜು ಎಂ.ಎ.

ವಿದ್ವಾನ್ ಡಾ.ಟಿ.ವಿ. ಸತ್ಯನಾರಾಯಣ ಎಂ.ಎ., ಪಿಹೆಚ್.ಡಿ.

ಸಂಶೋಧಕರು

ಶ್ರೀ ಆರ್. ರಾಘವೇಂದ್ರರಾವ್ ಎಂ.ಎ.

ವಿದ್ವಾನ್ ಎ.ವಿ. ನಾಗಸಂಪಿಗೆ ಎಂ.ಎ.

ಶ್ರೀಮತಿ ಬಿ. ಮಮತಾ ಎಂ.ಎ.

ಶ್ರೀ ಕೆ.ವಿ. ರಾಮಪ್ರಿಯ ಎಂ.ಎ.

ಶ್ರೀಮತಿ ಡಾ.ಎಂ. ಗೀತಾ ಎಂ.ಎ., ಪಿಹೆಚ್.ಡಿ.

ಶ್ರೀ ಎಸ್. ಜಗನ್ನಾಥ ಎಂ.ಎ.

His Highness Śrī Mummaḍi Kṛṣṇarāja Wodeyar

(1794-1868 A.D.)

Vice Chancellor **Professor M. Madaiah**

The Source of Inspiration

FOREWORD

It is a matter of great pride on the part of the University of Mysore to publish **Śaktinidhi**', the first book of **Śrītattvanidhi**, a scholarly work of His Highness Mummaḍi Kṛṣṇarāja Wodeyar, the ruler of the erstwhile Mysore State. Under the patronage of the king, art, architecture and literature flourished. The king himself was a versatile writer both in Kannaḍa and Sanskrit. The mid-nineteenth century is said to be the golden era in the history of Mysore State under the administration of Mummaḍi Kṛṣṇarāja Wodeyar.

Śrītattvanidhi, in nine books, comprising almost all aspects of Indian traditional knowledge in a nutshell, is his *magnum opus*. The elegant traditional paintings of this monumental work add to its attraction. The first book of this work viz., **Śaktinidhi,** edited by Dr. (Mrs.) H.P. Devaki, the first woman director of the institute and her team, is being published by the Oriental Research Institute of the University of Mysore.

Wishing their venture all success, I hope the admirers of Indian art and literature both at home and abroad will warmly welcome the publication of **Śaktinidhi** from the rare manuscript of **Śrītattvanidhi.**

Mysore
Date: 25.8.1997

DR. M. MADAIAH
Vice-Chancellor

ಮುನ್ನುಡಿ

ಶ್ರೀ ಮುಮ್ಮಡಿಕೃಷ್ಣರಾಜ ವಿರಚಿತವಾದ ಶ್ರೀ ತತ್ತ್ವನಿಧಿಯೆಂಬ ಅಪೂರ್ವಕೃತಿಯ ಪ್ರಥಮ ಸಂಪುಟವಾದ ಶಕ್ತಿನಿಧಿಯು ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟವಾಗುತ್ತಿರುವುದು ಹೆಮ್ಮೆಯೆನಿಸುತ್ತದೆ. ಸ್ವತಃ ಕವಿಗಳೂ ಕಲಾವಿದರೂ ಆಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರು ಕವಿಗಳಿಗೆ ಕಲಾವಿದರಿಗೆ ಆಶ್ರಯ ನೀಡಿ ಪೋಷಿಸಿದವರು. ಮೈಸೂರಿನ ಸಾಂಸ್ಕೃತಿಕ ಇತಿಹಾಸದಲ್ಲಿಯೇ ಅತ್ಯಂತ ಉಜ್ವಲವಾದ ಹೆಸರು ಅವರದು.

ಶ್ರೀ ತತ್ತ್ವನಿಧಿಯು ನವನಿಧಿಗಳೆಂಬ ಒಂಬತ್ತು ಸಂಪುಟಗಳುಳ್ಳ ಒಂದು ವಿಶ್ವಕೋಶ. ಇಲ್ಲಿ ಬರುವ ವರ್ಣಮಯ ಚಿತ್ರಗಳೂ ಸಹ ಇದರ ಪ್ರಮುಖ ಆಕರ್ಷಣೆ. ಸಂಸ್ಕೃತಸಾಹಿತ್ಯಕ್ಕೆ ಸಂಬಂಧಿಸಿದ ಅಪರೂಪದ ಹಸ್ತಪ್ರತಿಗಳನ್ನು ಸಂಪಾದಿಸಿ ಪ್ರಕಟಿಸುವ ಕಾರ್ಯದಲ್ಲಿ ತೊಡಗಿರುವ, ಮೈಸೂರು ವಿಶ್ವವಿದ್ಯಾನಿಲಯದ ಅಂಗವೇ ಆಗಿರುವ ಪ್ರಾಚ್ಯವಿದ್ಯಾಸಂಶೋಧನಾಲಯವು ಶಕ್ತಿನಿಧಿಯನ್ನು ಪ್ರಕಟಿಸುತ್ತಿರುವುದು ಈ ಸಂಸ್ಥೆಗೂ ಈ ಮೂಲಕ ವಿಶ್ವವಿದ್ಯಾನಿಲಯಕ್ಕೂ ಸಂತೋಷವನ್ನುಂಟುಮಾಡುವ ವಿಷಯವಾಗಿದೆ. ಸಂಸ್ಥೆಯ ಪ್ರಥಮ ಮಹಿಳಾ ನಿರ್ದೇಶಕಿ ಆಗಿರುವ ಡಾ. ಶ್ರೀಮತಿ ಎಚ್.ಪಿ. ದೇವಕಿಯವರೂ, ಇವರೊಡನೆ ಸಹಕರಿಸಿದ ಸಂಸ್ಥೆಯ ಇತರ ವಿದ್ವಾಂಸರೂ ಅಭಿನಂದನಾರ್ಹರು. ಭಾರತೀಯ ಸಾಹಿತ್ಯ ಸಂಸ್ಕೃತಿಯ ಜಿಜ್ಞಾಸುಗಳಿಗೆ ಇದೊಂದು ಉತ್ತಮ ಆಕರ ಗ್ರಂಥವಾಗಲೆಂದು ಹಾರೈಸುತ್ತೇನೆ.

ಡಾ॥ ಎಂ. ಮಾದಯ್ಯ
ಕುಲಪತಿಗಳು
ಮೈಸೂರು ವಿಶ್ವವಿದ್ಯಾನಿಲಯ

೨೫-೮-೧೯೯೭
ಮೈಸೂರು

EDITOR'S NOTE

I feel honoured to edit and publish the first book of the rare manuscript Śrītattvanidhi, viz., Śaktinidhi with Kannaḍa and English translations. In fact, it was late Dr. G. Marulasiddaiah, the then Director of the Oriental Research Institute, who evinced interest in editing and publishing this manuscript about two decades ago. As the first step of the editorial task he got the entire manuscript (nine books) in Kannaḍa script transliterated into Devanāgarī script with the assistance of senior scholars like Vidvān Maribasavaradhya, Vidvān Malagi Ramacharya, Vidvān H.S. Phatak, Vidvān H.V. Nagaraja Rao and Vidvān Rajashekhara Murthy. Dr. Marulasiddaiah tried time and again to get the funds from the University for the publication of this stupendous work, but in vain. Though he could not get the great work published, he took all measures to preserve the manuscript. Unlike palm leaves which can be preserved by oiling periodically, preservation of paper is difficult. A novel method was adopted; each folio was put under two layers of thick paper-frame and transparent plastic sheets were used on both sides. Śri Srinivasan who was in charge of the microfilm section was assigned this job and he did it excellently. Dr. Marulasiddaiah passed away in 1981 with the desire of publishing Śrītattvanidhi unfulfilled.

The attempt to publish Śrītattvanidhi was not made seriously till 1992. Dr. R.S. Shivaganesha Murthy earnestly tried to mobilise funds from the University and other government agencies to publish the work. While the work of verification of transliteration with the original was in progress, Dr. Shivaganesha Murthy died untimely. His dream did not come true.

It was only after Prof. B.A. Dodamani took the saddle of the O.R.I. in 1994, there was some progress in this regard. He entrusted the work of translation to Vidvān H.S. Phatak and Vidvān H.V. Nagaraja Rao. He also made his efforts to get the funds for its publication. But before the realisation of his wish, his term of office came to an end.

After I took charge of the office of the Director of Oriental Research Institute in August 1996, I pursued the matter with the Vice-Chancellor. Prof. Madaiah, who always encourages academic pursuit, generously sanctioned rupees five lakh from the 'University Golden Jubliee Funds' to publish the first book of Śrītattvanidhi, Viz., Śaktinidhi in original with English and Kannaḍa translations. Scholars of the O.R.I with rich experience in the field of translation, Vidwan H.S. Phatak and Vidwan H.V. Nagaraja Rao have rendered Śaktinidhi into Kannaḍa and English respectively. With the assistance of the Deputy Director and other scholars of the Institute, the publication of Śaktinidhi has been possible in record time.

The author H.H. Mumaḍi Kṛṣṇarāja Wodeyar has made reference to various sources in his work of which many are still in manuscript form; it is not easy to provide all the bibliographical details here. Suggestions for improvement will be incorporated in the next edition.

The Kannaḍa University at Hampi has published a work of H.H. Mummaḍi Kṛṣṇarāja Wodeyar with the title Śrī Mummadi Kṛṣṇarāja Wodeyara Śrītattvanidhi - Śampuṭa - I, Svaracūḍāmaṇi, edited by Prof. S. K. Ramachandra Rao. But this is different from the one which is being published by the Oriental Research Institute, Mysore. The part one or the volume one of the manuscript which is in possession of the O.R.I. is Śaktinidhi and not Svaracūḍāmaṇi.

About the Manuscript:

The rare and stupendous manuscript of Śrītattvanidhi was procured by the Oriental Research Institute through Śri Basavaraja Bahaddur, a resident of Chamundipuram, Mysore on 9-2-1954. Vidvān M.N. Vishveshvara Jois, a research assistant of the institute collected it from him and handed over to Vidvān H.R. Rangaswami Iyengar, the then curator of the O.R.I., for preservation. All these details are documented in the Ledger No. 4 (old), page 35, maintained in the library of the Institute.

The manuscript (SA.852) measuring 15"x11.5" is of a broad royal size paper. It has the appearance of a printed book. The folios are not bound together. All the folios have the text on both sides in beautiful Kannaḍa script. But they are numbered only on one side. Totally there are 578 folios and the folios 1 - 35 contain a detailed list of contents as in a printed book of modern days. The numbering of the folios starts again from the beginning of Śaktinidhi and there are 538 folios in all containing the textual portions of all the nine volumes or books. Each folio has a fairly broad orange border with an inner yellow line. The first five volumes viz., Śaktinidhi, Viṣṇunidhi, Śivanidhi, Brahmanidhi and Grahanidhi contain beautiful paintings. The last four viz; Vaiṣṇavanidhi, Śaivanidhi, Āgamanidhi and Kautukanidhi have only the line diagrams. Most of these are *yoga* postures and pictures of Vaiṣṇava saints.

The folios 1-66 of the text contain Śaktinidhi (106 paintings), 71-93 Viṣṇunidhi (115 paintings), 95-125 Śivanidhi (81 paintings), 130-188 Brahmanidhi (466 paintings), 190-205 Grahanidhi (337 paintings), 323-355 Vaiṣṇavanidhi (14 paintings), 356-392 Śaivanidhi (263 line diagrams), 394-450 Āgamanidhi (50 line diagrams), 454-538 Kautukanidhi (162 line diagrams).

The paintings are elegant and done artistically. The dress, jewels and weapons of the divine and human figures are skillfully painted by the artists with aesthetic sense. The painted figures of animals, birds and trees are also attractive. But the skin tones of divine and human figures are not coloured even though the text describes them of having some colours. The main colours used for the purpose are red, leaf-green, golden-yellow and black. Pale-red, parrot-green, grey mixed blue are also used.

The manuscript of Śrītattvanidhi contains more than a thousand paintings. The different postures of *yoga* are illustrated only through line diagrams. The last two Nidhis have explanatory notes in Kannaḍa.

Śrī Mummaḍi Kṛṣṇarāja Wodeyar was a renowned poet and a prolific writer, both in Sanskrit and Kannaḍa. Being himself a scholar, he brought many reputed schol-

ars to his court. The court was full of doyens of literature and art. Vīṇā Veṅkaṭasubbaiah, Kuṇigal. Rāmaśāstrī, Sosale Garalapurīśāstrī, Aliyaliṅgarāja, Kempu Nārāyaṇa, Devalapura Nañjuṇḍa and Basavappa Śāstrī were prominent in the galaxy of scholars.

The total works of Mummaḍi Kṛṣṇarāja Wodeyar are enlisted as fifty-eight, dealing with diverse themes of Sanskrit literature. The prayer verses in Sanskrit are Cāmuṇḍāmaṅgalamālikāstutiḥ, Mṛtyuñjayaśatakam, Gaṇeśaratnamālā, Nañjuṇḍaśatakam, Devatādhyānamālikā, Sūryacandrastotra, Rāmakṛṣṇastotra, Śaṅkaranārāyaṇastotra, Śrīkaṇṭheśvaratriśatī, Mahāviṣṇutriśatī etc. His commendable poetical works are Rāmakathāpuṣpamañjarī, Kṛṣṇakathāpuṣpamañjarī, Āryārāmāyaṇam and Daśarathanandanacaritam. His composition, Sūryacandravaṁśāvataraṇam is a historical poem. Śrītattvanidhi, Saṅkhyāratnamālā, Gaṇitasaṅgraha, Grahaṇadarpaṇa, Cāmuṇḍā-laghu-nighaṇṭu, Bharatasārasaṅgraha, Svaracūḍāmaṇi are noteworthy among the works based on *śāstras*.

In Kannada, the Saugandhikāpariṇaya is a well known poetic romance. He has written eleven prose works based on Rāmāyaṇa and Mahābhārata. The works based on Purāṇas are fourteen and prose writings based on the plays of Kālidāsa are three.

About the text :

Śrītattvanidhi is a compendium dealing with different themes of traditional knowledge. As declared by the author in the opening verses of Śaktinidhi, the Vedas, Āgamas, Tantras, Purāṇas, Dharmaśātras, Itihāsa, Mantraśāstra, Jyotiṣa, Śilpa are the perennial sources for this encyclopaedic compilation.

nigamāgamatantrāṇām purāṇavacasāmapi I
dharmaśāstretihāsānām upatantragirāmapi I
mantrajyotiṣaśilpānām sāraṁ saṅgṛhya tattvataḥ II (Verse No.6)

The title of the work is also symbolic. The compound word Śrītattvanidhi is intentionally chosen to name this stupendous work. The term 'Śrī' connotes beauty, glory, splendor, and it is also the name of goddess Lakṣmī. It is also used as the honorific prefix in the sense of holy, sacred etc; attached to the names of gods, sages and sacred books, "*siddham siddhādhikārāṁśca śrīpūrvam samudīrayet*'. The term "tattva' has various meanings such as truth, reality, a true principle etc. The term 'nidhi' means treasure, source, ocean etc; (*jalanidhi, toyanidhi, taponidhi, tejonidhi*). Padma, Mahāpadma, Śaṅkha, Makara, Kacchapa, Mukunda, Kunda, Nīla and Kharva are said to be the nine divine *nidhis* (treasures) of Kubera, the lord of wealth according to Indian mythology. These *nidhis* appear to be the inspiration for the titles of the nine volumes of Śrītattvanidhi.

The significance of Śrītattvanidhi lies in the iconographic description of each fundamental aspect of Hindu mythology and religion. Though the text appears to be only a prayer book of meditational verses addressed to gods and goddesses, it furnishes information on every aspect of Indian learning. In addition to the mythological information, other aspects such as the planets and stars, famous pilgrim centres, mountains, oceans, rivers, mythological and real animals, birds, games and pastimes are dealt with. Such works of encyclopaedic nature are very rare in Sanskrit literature. Mention may be made of Mānasollāsa (or Abhilaṣitārthacintāmaṇi) written by Tribhuvanamalla Mummaḍi Someśvara (1129) and Śivatattvaratnākara in 1709-10 written by Basavabhūpāla - I of Keladi.

Each *nidhi* is a treasure house of knowledge based on hundreds of Sanskrit original sources. In addition to its richness of information, elegant paintings with illustrations have made the work all the more attractive. The author Mummaḍi Kṛṣṇarāja Wodeyar employed highly competent artists, namely, Jāvagallu Narasiṁhayya, Vīraṇṇa, Tippaṇṇa and Tanjavoor Koṇḍayya for the purpose. The author, it appears, used to describe the gods and goddesses with minute details to the artists before going to execute the painting work.

Śiva is known for Tāṇḍavanṛtya in Hindu Mythology and religion. Both Śiva and Pārvatī in their dancing posture are well described. The features of seven kinds of Tāṇḍava, namely Ānandatāṇḍava, Sandhyātāṇḍava, Umātāṇḍava, Gaurītāṇḍava, Kālikātāṇḍava, Tripurātāṇḍava, Saṁhāratāṇḍava are described. The same volume delineates thirty two icons of Gaṇapati through thirty two verses and seventeen forms of Subrahmaṇya. The eleven Rudras such as Śambhu, Pinākin and the twenty five beautiful forms of Śiva are iconographically described. Ardhanārīśvara, perphaps a rare icon of Śiva, is magnificently portrayed.

Brahmanidhi: The fourth volume Brahmanidhi is devoted to the icons of Caturmukha-Brahma and Sarasvatī, the god of creation and the goddess of learning respectively. The rare icons of five Brahmas such as Ādya, Lokapāla, Prajāpati, Vidhi and Viśvakarma are described here.

The four Vedas in their personified forms and their wives, the Upavedas such as Āyurveda and Dhanurveda, the six Vedāṅgas, Dharmasūtras, Sixty four lores, Aṣṭadikpālakas (eight guardians of the directions), eight Nāgas (elephants), forty nine varieties of Prāṇa, the famous oceans and rivers are referred to in this volume. Valuable information on Indian music is also available with the illustration from 'Śvaracūḍāmaṇi' composed by the same author.

Grahanidhi: This is the fifth volume of Śrītattvanidhi which is more bulky than others. This volume is based on the popular works on Jyotiśśāstra (Astronomy), namely, Prayogaratnākara, Nakṣatracūḍāmaṇi, Sūryasiddhānta, Jyotiṣaratnākara and Jātakābharaṇa. The luminous bodies like planets and stars are considered astral deities. In addition to their icons, the zodiac movements and the fundamental aspects of Indian calendar, such as Ṛtu, Māsa, Saṁvatsara, Uttarāyaṇa and Dakṣiṇāyana are also icongraphically glorified.

Vaiṣṇavanidhi : The sixth volume Vaiṣṇavanidhi is devoted to the descriptions of the famous holy places for the devotees of Viṣṇu. Following Brahmapurāṇa, a

list of pilgrimage centres with the details of temples, names of deities and their consorts, the posture of the deity and the details of Vimāna (Tower of the temple), and the Tīrthas (holy ponds) are given here. It also refers to the fundamental philosophical concepts of Śrīvaiṣṇavism and significance of the symbols like *'tripuṇḍra'*. In the same section, the entire text of sacred works on Śrīvaiṣṇavism, such as Prapaṭṭisopāna, Ūrdhvapuṇḍradhāraṇa Yatirājasaptati, Tulasīmāhātme are given. The nature and importance of 'Sāligrāma' stone is also referred to, following Nṛsiṁhapurāṇa.

Śaivanidhi: This is the seventh volume which has rich information and guidance for the devotees of Śiva. It enlists about one hundred and thirteen pilgrimage centres as directed in the works Lalītāgama, Vāyavīyasaṁhitā, Śivarahasya and Vīramāheśvarakhaṇḍa of Skandapurāṇa. It refers to the types of *liṅga,* sixty three devotees of Śiva recognised as 'Nāyanārs' with their names and other details. The importance of 'Vibhūti', the sanctity of Rudrakṣa beads, the significance of Bilva plant are dealt with in detail. The line diagrams of Yogāsana postures are included in this volume.

Āgamanidhi: The eighth volume is a compendium on the details of Indian traditional learning. It provides the structural details of the sacred books like Rāmāyaṇa, Mahābhārata and Bhāgavata along with the total number of verses. A reference of all the Vedas, Vedāṅgas, important Upaniṣads, eighteen Purāṇas, Smṛtis, Vaiṣṇava and Śaivāgamas and their significance are made.

Kautukanidhi: The ninth volume Kautukanidhi deals with games and pastime. The literary meaning of Kautuka is curiosity, pleasure and interest.

Games are played for pleasure. Here Kautuka is used in the sense of a game of pleasure. Kautukanidhi illustrates different types of Gañjīphu (a type of game played in the manner of playing cards), the playing dice and also mathematical puzzles in Sanskrit verses. The types of Gañjīphu referred to here are Cāmuṇḍeśvarī,

I am indebted to Śri Śiddegowda and Dr. Mruthyunjaya kulenur, the present and the previous Directors of the University Printing Press, for their co-operation and valuable suggestions.

My special thanks are due to Dr. H. P. Malledevaru, Dr. K. Rajagopalachar, Dr. M.R. Veerabhadraswamy and Dr. B.A. Dodamani, previous Directors of this institute for their suggestions.

Needless to say, Śri Basavarája Bahaddur, who donated the manuscript to our Institute and Śri M.N. Vishveshvara Jois who was Instrumental in collecting it, deserve our sincere thanks.

I express my heartfelt thanks to Śri M.V. Subramanya, partner, Perfect Industries Printing Division, Mysore and his staff for their neat printing and inviting get up of the book.

I should not forget to thank Śri. S. Thippeswamy for his elegant colour transparencies of the book.

Mysore
Date: 18-8-97

Dr. H.P. Devaki
Director

ಸಂಪಾದಕರ ನುಡಿ

ಶ್ರೀತತ್ತ್ವನಿಧಿಯಂತಹ ಅಪೂರ್ವ ಹಸ್ತಪ್ರತಿಯೊಂದರ ಪ್ರಥಮಸಂಪುಟವಾದ ಶಕ್ತಿನಿಧಿಯನ್ನು ಸಂಪಾದಿಸಿ ಅನುವಾದ ಸಹಿತ ಪ್ರಕಟಿಸಿ ಸಾರಸ್ವತಲೋಕಕ್ಕೆ ಅರ್ಪಿಸಲು ಹರ್ಷವೆನಿಸುತ್ತದೆ. ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆಯೇ ಇದರ ಸಂಪಾದನೆ ಮತ್ತು ಪ್ರಕಟಣೆಗೆ ಅತಿಯಾದ ಆಸಕ್ತಿಯನ್ನು ವ್ಯಕ್ತಪಡಿಸಿದವರು ಪ್ರಾಚ್ಯ ವಿದ್ಯಾಸಂಶೋಧನಾಲಯದ ಅಂದಿನ ನಿರ್ದೇಶಕರಾಗಿದ್ದು, ಇಂದು ಕೀರ್ತಿಶೇಷರಾಗಿರುವ ವಿದ್ವಾನ್ ಪ್ರೊ. ಜಿ. ಮರುಳಸಿದ್ಧಯ್ಯನವರು. ತಮ್ಮ ಜೀವಿತ ಹಾಗೂ ಅಧಿಕಾರಾವಧಿಯಲ್ಲಿ ವ್ಯಕ್ತಿರೂಪದ ಶಕ್ತಿಯೆಂದು ಹೆಸರುಗಳಿಸಿದ್ದ ಶ್ರೀಯುತರು 1969 ರಲ್ಲಿಯೇ ಶ್ರೀತತ್ತ್ವನಿಧಿಯ ಸಂಪಾದನಾಕಾರ್ಯವನ್ನು ಪ್ರಾರಂಭಿಸಿದರು. ಸಂಪಾದನಾ ಕಾರ್ಯದ ಪ್ರಥಮ ಹಂತವಾಗಿ ಕನ್ನಡಲಿಪಿಯಲ್ಲಿ ಬರೆಯಲ್ಪಟ್ಟಿದ್ದ ಗ್ರಂಥವನ್ನು ದೇವನಾಗರೀ ಲಿಪಿಗೆ ವರ್ಗಾಯಿಸುವ ಕಾರ್ಯ ಪ್ರಾರಂಭವಾಯಿತು. ಈ ಉದ್ದೇಶಕ್ಕಾಗಿ ಸಂಸ್ಥೆಯ ಹಿರಿಯ ವಿದ್ವಾಂಸರುಗಳಾದ ವಿದ್ವಾನ್ ಮಾಳಗಿ ರಾಮಾಚಾರ್ಯ, ವಿದ್ವಾನ್ ಎಚ್. ಶಂಕರ ಗಣಪತಿ ಫಾಟಕ್, ವಿದ್ವಾನ್ ಎಚ್. ವಿ. ನಾಗರಾಜರಾವ್, ವಿದ್ವಾನ್ ರಾಜಶೇಖರಮೂರ್ತಿ ಇವರುಗಳನ್ನು, ಸಂಸ್ಥೆಯ ಮತ್ತೊಬ್ಬ ಹಿರಿಯ ವಿದ್ವಾಂಸರೂ ಅಂದಿನ ದಿನಗಳಲ್ಲಿ ಸಂಸ್ಥೆಯ ಗ್ರಂಥವಿಭಾಗದ ಅಧೀಕ್ಷಕರೂ ಆಗಿದ್ದ ವಿದ್ವಾನ್ ಮರಿಬಸವಾರಾಧ್ಯರ ಸಹಕಾರದೊಡನೆ ನಿಯೋಜಿಸಲಾಯಿತು. ಈ ವಿದ್ವಾಂಸರುಗಳು ಶ್ರೀತತ್ತ್ವನಿಧಿ ಗ್ರಂಥದ ಹಸ್ತಪ್ರತಿಯಲ್ಲಿನ ಎಲ್ಲಾ ಸಂಪುಟಗಳನ್ನೂ ಅರ್ಥಾತ್ ನವನಿಧಿಗಳನ್ನು ದೇವನಾಗರೀಲಿಪಿಗೆ ವರ್ಗಾಯಿಸಿದರು. ಪ್ರಕಟಣೆಗೆ ಬೇಕಾದ ಧನಸಹಾಯದ ಮಂಜೂರಾತಿಗಾಗಿ ಪ್ರೊ. ಮರುಳಸಿದ್ಧಯ್ಯನವರು ಅಂದಿನ ಕುಲಪತಿಗಳಲ್ಲಿ ಮೇಲಿಂದ ಮೇಲೆ ಮನವಿ ಮಾಡಿಕೊಂಡರೂ ಸಹ ಫಲಕಾರಿಯಾಗಲಿಲ್ಲ. "ಶ್ರೇಯಾಂಸಿ ಬಹುವಿಘ್ನಾನಿ" ಎಂಬ ಸೂಕ್ತಿಯೇ ಸತ್ಯವಾಯಿತು. ಗ್ರಂಥಪ್ರಕಟಣೆಗೆ ಬಹುಮುಖ್ಯವಾಗಿ ಬೇಕಾಗಿದ್ದ ಧನಸಹಾಯಕ್ಕೆ ಅನಂತರ ಬಂದಂತಹ ಯಾವ ಕುಲಪತಿಗಳೂ ಸಹ ಹಸಿರು ನಿಶಾನೆಯನ್ನು ತೋರಿಸಲೇ ಇಲ್ಲ. ಶ್ರೀತತ್ತ್ವನಿಧಿಯ ಸಂಪುಟಗಳೆಲ್ಲವನ್ನೂ ಕ್ರಮವಾಗಿ ಕನ್ನಡ ಮತ್ತು ಇಂಗ್ಲೀಷ್ ಅನುವಾದಗಳೊಡನೆ ಸಂಪಾದಿಸಿ ಪ್ರಕಟಿಸುವ ಮಹದಾಶೆಯೊಡನೆಯೆ ಪ್ರೊ. ಮರುಳಸಿದ್ಧಯ್ಯನವರು 1981ರಲ್ಲಿ ಶಿವಸಾಯುಜ್ಯವನ್ನು ಹೊಂದಿದರು. ಶ್ರೀತತ್ತ್ವನಿಧಿಯನ್ನು ಪ್ರಕಟಿಸುವ ಮಹಾಪ್ರಯತ್ನವು ಕಮರಿಹೋಯಿತು. ಅವರು ಕಂಡಿದ್ದ ಕನಸು ಕನಸಾಗಿಯೇ ಉಳಿದುಹೊಯಿತು. ಶ್ರೀತತ್ತ್ವನಿಧಿಯನ್ನು ಪ್ರಕಟಿಸಲಾಗದಿದ್ದರೂ ಪ್ರೊ. ಮರುಳಸಿದ್ಧಯ್ಯನವರು ಅದರ ಹಸ್ತಪ್ರತಿಯ ಸಂರಕ್ಷಣೆಗೆ ಯೋಗ್ಯವ್ಯವಸ್ಥೆಯನ್ನು ಮಾಡಿದ್ದರು.

ಅದ್ಭುತವಾದ ವರ್ಣಚಿತ್ರಗಳಿಂದಲೂ ಸುಂದರವಾದ ಸ್ಫುಟವಾದ ಅಕ್ಷರಗಳಿಂದಲೂ ಬರೆಯಲ್ಪಟ್ಟಿದ್ದ ಈ ಹಸ್ತಪ್ರತಿಯನ್ನು ಮುರಿದುಹೋಗದಂತೆಯೂ, ಚಿತ್ರಗಳು ಹಾಳಾಗದಂತೆಯೂ ವ್ಯವಸ್ಥಿತ ರೀತಿಯಲ್ಲಿ ಸಂರಕ್ಷಿಸಲು ಕಾರಣರಾದ, ಸಂಸ್ಥೆಯಲ್ಲಿನ ಒಂದು ಅಂಗವಾದ ಮೈಕ್ರೋಫಿಲ್ಮ್ ವಿಭಾಗದಲ್ಲಿ ಕರ್ತವ್ಯ ನಿರ್ವಹಣೆಯಲ್ಲಿದ್ದು ನಿವೃತ್ತರಾಗಿರುವ ಶ್ರೀ ಸಿ.ಯಸ್. ಶ್ರೀನಿವಾಸನ್ ಮತ್ತು ಶ್ರೀ ಹೆಚ್. ಎಸ್. ಸುಬ್ಬರಾಯರನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಲೇಬೇಕಾಗುತ್ತದೆ. ಶ್ರೀತತ್ತ್ವನಿಧಿಯ ಹಸ್ತಪ್ರತಿಯು ಕಾಗದದ ಹಸ್ತಪ್ರತಿಯಾದ್ದರಿಂದ ಸಂರಕ್ಷಣೆಗಾಗಿ

ಅದಕ್ಕೆ ತಾಳೆಗರಿಯ ಹಸ್ತಪ್ರತಿಗಳಿಗೆ ಮಾಡುವಂತೆ ತೈಲಲೇಪನವನ್ನು ಮಾಡುವಂತಿಲ್ಲ. ಸುಮಾರು ನೂರಐವತ್ತು ವರ್ಷಗಳಿಗೂ ಹಿಂದೆಯೇ ಬರೆಯಲ್ಪಟ್ಟಿರಬಹುದಾದ ಈ ಹಸ್ತಪ್ರತಿಯು ತುಟಿತವಾಗದಂತೆ, ಅದರಲ್ಲಿನ ಅದ್ಭುತ ರಮಣೀಯವಾದ ಚಿತ್ರಗಳು ಬೂಜು ಹಿಡಿದು ಹಾಳಾಗದಂತೆ ಕಾಪಾಡುವುದು ಒಂದು ಸಾಹಸವೇ ಸರಿ. ಶ್ರೀನಿವಾಸನ್‌ರವರು ದಪ್ಪನೆಯ ಕಾಗದದ ಎರಡು ಪದರವುಳ್ಳ ಚೌಕಟ್ಟಿನಲ್ಲಿ(ಫ್ರೇಮ್) ಹಸ್ತಪ್ರತಿಯ ಪ್ರತಿ ಪತ್ರವನ್ನು ಮಧ್ಯದಲ್ಲಿ ಇರಿಸಿ, ಮೇಲೆ ಕೆಳಗೆ ತೆಳುವಾದ ಪ್ಲಾಸ್ಟಿಕ್ಕಿನ ಹಾಳೆಗಳನ್ನಿರಿಸಿ, ಹಸ್ತಪ್ರತಿಯನ್ನು ಓದಲು, ಚಿತ್ರಗಳನ್ನು ಯಥಾಪ್ರಕಾರವಾಗಿ ನೋಡಲು ಸಾಧ್ಯವಾಗುವಂತೆಯೂ ಭದ್ರಪಡಿಸಿರುವರು. ಇದೊಂದು ವಿಶಿಷ್ಟ ಬಗೆಯ ಲ್ಯಾಮಿನೇಷನ್ ಎಂದೂ ಸಹ ಹೇಳಬಹುದು. ಇಷ್ಟೆಲ್ಲಾ ಪ್ರಯತ್ನಗಳು ನೆರವೇರಿದ್ದು ಪ್ರಾಚಾರ್ಯ ಮರುಳಸಿದ್ಧಯ್ಯನವರ ನೇತೃತ್ವದಲ್ಲಿಯೇ ಎಂಬುದನ್ನೂ ಸಹ ಮರೆಯುವಂತಿಲ್ಲ.

ಮುಂದಿನ ವರ್ಷಗಳಲ್ಲಿ ಅಂದರೆ 1992ರವರೆಗೂ ಶ್ರೀತತ್ತ್ವನಿಧಿಯ ಪ್ರಕಟಣೆಯ ಪ್ರಯತ್ನ ಶೀಘ್ರಗತಿಯಲ್ಲೇನೂ ನಡೆಯಲಿಲ್ಲ. ಈ ಅವಧಿಯಲ್ಲಿ ಸಂಸ್ಥೆಯ ನಿರ್ದೇಶಕರಾಗಿದ್ದ ಡಾ. ಆರ್. ಎಸ್. ಶಿವಗಣೇಶಮೂರ್ತಿಯವರು ವಿಶ್ವವಿದ್ಯಾನಿಲಯದೊಡನೆಯೂ, ಇತರ ಸಂಸ್ಥೆಗಳೊಡನೆಯೂ ಧನಸಹಾಯವನ್ನು ಕೋರಿ ಪತ್ರವ್ಯವಹಾರದ ಮೂಲಕ ಪ್ರಯತ್ನಿಸಿದರು. ಶ್ರೀತತ್ತ್ವನಿಧಿಯ ಪ್ರಕಟಣೆಯ ವಿಷಯದಲ್ಲಿ ಅತೀವ ಆಸಕ್ತಿಯನ್ನು ಹೊಂದಿದ್ದ ಇವರು, ಹಿಂದೆ ಮರುಳಸಿದ್ಧಯ್ಯನವರ ನೇತೃತ್ವದಲ್ಲಿ, ದೇವನಾಗರೀಲಿಪಿಯಲ್ಲಿ ಬರೆಯಲ್ಪಟ್ಟಿದ್ದ ಶ್ರೀತತ್ತ್ವನಿಧಿ ಗ್ರಂಥವನ್ನು ಮೂಲ ಹಸ್ತಪ್ರತಿಯೊಡನೆ ಪರಿಶೀಲಿಸುವ ಕಾರ್ಯವನ್ನು ಸಂಸ್ಥೆಯ ಹಲವು ವಿದ್ವಾಂಸರಿಗೆ ವಹಿಸಿದ್ದರು. ಆದರೆ ಈ ಕಾರ್ಯಪ್ರಾರಂಭವಾದ ಕೆಲವು ದಿನಗಳಲ್ಲಿಯೇ ದುರ್ದೈವವಶಾತ್ ಆಕಸ್ಮಿಕ ಮರಣವನ್ನಪ್ಪಿದರು. ಇಷ್ಟೆಲ್ಲಾ ನಡೆದುದು 1992 ಸೆಪ್ಟೆಂಬರ್ ತಿಂಗಳಿನಲ್ಲಿ.

ಮುಂದಿನ ವರ್ಷಗಳಲ್ಲಿ, ಅಂದರೆ 1994ರ ವರೆಗೂ ಶ್ರೀತತ್ತ್ವನಿಧಿಯ ಪ್ರಕಟಣೆಯ ಪ್ರಯತ್ನ ಅಷ್ಟೇನೂ ವ್ಯವಸ್ಥಿತವಾಗಿ ನೆರವೇರಲಿಲ್ಲ. 1994ರಲ್ಲಿ ಸಂಸ್ಕೃತಸ್ನಾತಕೋತ್ತರವಿಭಾಗದ ಅಧ್ಯಕ್ಷರಾಗಿಯೂ ಪ್ರಾಚ್ಯವಿದ್ಯಾಸಂಶೋಧನಾಲಯದ ನಿರ್ದೇಶಕರಾಗಿಯೂ, ನೇಮಕಗೊಂಡ ಡಾ. ಬಿ. ಎ. ದೊಡಮನಿಯವರು ಶ್ರೀತತ್ತ್ವನಿಧಿಯ ಪ್ರಕಟಣೆಗಾಗಿ ಆಸಕ್ತಿವಹಿಸಿ ಇದರ ಪ್ರಥಮ ಸಂಪುಟವಾದ 'ಶಕ್ತಿನಿಧಿ'ಯ ಅನುವಾದ ಕಾರ್ಯವನ್ನು ಸಂಸ್ಥೆಯ ಹಿರಿಯವಿದ್ವಾಂಸರುಗಳಾದ ವಿದ್ವಾನ್ ಎಚ್.ಎಸ್. ಫಾಟಕ್ ಅವರಿಗೂ ಮತ್ತು ವಿದ್ವಾನ್ ಎಚ್.ವಿ. ನಾಗರಾಜರಾವ್ ಅವರಿಗೂ ವಹಿಸಿದರು. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾಗಿರುವ ಪ್ರೊ. ಎಂ. ಮಾದಯ್ಯನವರಲ್ಲಿ ಧನಸಹಾಯದ ಮಂಜೂರಾತಿಯನ್ನೂ ಸಹ ಕೋರಿದ್ದರು. ಆದರೆ ಈ ಎರಡು ಪ್ರಯತ್ನಗಳು ನೆರವೇರುವ ಮೊದಲೇ ಅವರ ಅಧಿಕಾರಾವಧಿಯೂ ಪೂರ್ಣಗೊಂಡಿತು.

ಶ್ರೀತತ್ತ್ವನಿಧಿಯ ಅನುವಾದ ಮತ್ತು ಪ್ರಕಟಣೆ ಒಂದು ಮಹಾಯೋಜನೆಯೇ ಸರಿ. ಪ್ರಾಚ್ಯವಿದ್ಯಾಸಂಶೋಧನಾಲಯದ ನಿರ್ದೇಶಕಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಮಾಡಿದ ಪ್ರಯತ್ನದ ಫಲವಾಗಿ, ಕುಲಪತಿಗಳಾದ ಪ್ರೊ. ಮಾದಯ್ಯನವರ ವಿದ್ಯಾಭಿಮಾನದ, ಉದಾರ ಮನಸ್ಸಿನ, ಪ್ರೋತ್ಸಾಹದ ಗುರುತಾಗಿ ವಿಶ್ವವಿದ್ಯಾನಿಲಯದ ಸುವರ್ಣಮಹೋತ್ಸವನಿಧಿಯಿಂದ ಐದುಲಕ್ಷ ರೂಪಾಯಿಗಳ ಮಂಜೂರಾತಿ ದೊರೆತು, ಶ್ರೀತತ್ತ್ವನಿಧಿಯ ಪ್ರಥಮಸಂಪುಟವಾದ ಶಕ್ತಿನಿಧಿಯನ್ನು ಮೂಲಗ್ರಂಥ ಹಾಗೂ ಕನ್ನಡ ಮತ್ತು ಇಂಗ್ಲಿಷ್ ಅನುವಾದಸಹಿತ ಪ್ರಕಟಿಸುವ ಪ್ರಯತ್ನ ನೆರವೇರುತ್ತಿದೆ. ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರಂತಹ ಮಹಾಚೇತನವೊಂದು ಕರ್ನಾಟಕದ ಅಷ್ಟೇಕೆ! ಸಮಗ್ರ ಭಾರತೀಯ ಸಾಹಿತ್ಯ ಹಾಗೂ ಸಂಸ್ಕೃತಿಗೆ ನೀಡಿರುವ ಶಾಶ್ವತವಾದ ಕಾಣಿಕೆ

ಶ್ರೀತತ್ತ್ವನಿಧಿ. ಇದರ ಒಂದು ಭಾಗವಾದ ಶಕ್ತಿನಿಧಿಯನ್ನು ಜಿಜ್ಞಾಸುಗಳ ಕೈಗೊಪ್ಪಿಸುವ ಪ್ರಯತ್ನ ಯಶಸ್ವಿಯಾಗಿದೆ. ಈ ಕೃತಿಯ ಬಗ್ಗೆಯೂ ಕರ್ತೃವಿನ ಬಗ್ಗೆಯೂ ಮುಂದಿನ ಪುಟಗಳಲ್ಲಿ ಪ್ರಸ್ತಾವಿಸಲಿರುವುದರಿಂದ ಇಲ್ಲಿ ಕೈಬಿಡಲಾಗಿದೆ. ಸಜ್ಜನರೂ, ಘನವಿದ್ವಾಂಸರೂ ಆಗಿರುವ ವಿದ್ವಾನ್ ಎಚ್.ಎಸ್. ಘಾಟಕರಿಂದ ಶಕ್ತಿನಿಧಿಯ ಕನ್ನಡ ಅನುವಾದ, ವಿನಯಶೀಲರೂ, ಅಗಾಧವಾದ ಶಾಸ್ತ್ರಜ್ಞಾನವುಳ್ಳವರೂ ಆಗಿರುವ ವಿದ್ವಾನ್ ಎಚ್.ವಿ. ನಾಗರಾಜರಾವ್‌ರವರಿಂದ ಇಂಗ್ಲಿಷ್ ಅನುವಾದ, ಸಂಸ್ಥೆಯ ಉಪನಿರ್ದೇಶಕರಾದ ವಿದ್ವಾನ್ ಮಾಳಗಿ ರಾಮಾಚಾರ್ಯರ ಸಮಯೋಚಿತವಾದ ಸಲಹೆಗಳ ಹಾಗೂ ಸಂಸ್ಥೆಯ ಉಳಿದೆಲ್ಲ ವಿದ್ವಾಂಸರ, ಇತರ ಸಿಬ್ಬಂದಿವರ್ಗದ ಅವಿರತ ಶ್ರಮ ಇವೆಲ್ಲವುಗಳ ಫಲವಾಗಿ ಶಕ್ತಿನಿಧಿ ಸಾರಸ್ವತ ಜಗತ್ತಿನ ಬೆಳಕನ್ನು ಕಾಣುತ್ತಿದೆ. ಅಂದಮಾತ್ರಕ್ಕೆ ಇದರಲ್ಲಿ ಅರಕೆ ಕೊರತೆಗಳೇನೂ ಇಲ್ಲವೆಂದಲ್ಲ. ಸಂಸ್ಕೃತಸಾಹಿತ್ಯದ ಸುದೀರ್ಘ ಇತಿಹಾಸದಲ್ಲಿ ಪ್ರಸಿದ್ಧವಾಗಿರುವ ಹಲವಾರು ಗ್ರಂಥಗಳ ಕೂಲಂಕಷ ಅಧ್ಯಯನ ನಡೆಸಿ ಸಾರಸಂಗ್ರಹರೂಪದಲ್ಲಿ ಹೊರತಂದಿರುವ ಒಂದು ವಿಶ್ವಕೋಶ ಶ್ರೀತತ್ತ್ವನಿಧಿ ಎಂಬುದಂತೂ ನಿಜ. ಇದನ್ನು ರಚಿಸಲು ಮುಮ್ಮಡಿಯವರು ಅವಲಂಬಿಸಿರುವ ಆಕರ ಗ್ರಂಥಗಳಲ್ಲಿ ಕೆಲವು ಇನ್ನೂ ಸಹ ಹಸ್ತಪ್ರತಿರೂಪದಲ್ಲಿಯೇ ಇರುವಂತಹವು. ಶ್ರೀತತ್ತ್ವನಿಧಿಯು ರಚನೆಯಾದ ಕಾಲಕ್ಕೆ ಮುದ್ರಣದ ವ್ಯವಸ್ಥೆಯೇ ಇರಲಿಲ್ಲವೆಂಬುದು ಸಹ ಸರ್ವವಿದಿತ. ಹೀಗಾಗಿ ಮುಮ್ಮಡಿಯವರು ಬಳಸಿಕೊಂಡಿರುವ ಆಕರಗ್ರಂಥಗಳ ನಿರ್ದಿಷ್ಟವಿವರಗಳನ್ನು ಒದಗಿಸುವುದು ಸದ್ಯಕ್ಕೆ ಕಷ್ಟವೇ ಸರಿ.

ಪರಿಪೂರ್ಣತೆಯೆಂಬುದು ಪರಮಾತ್ಮನಲ್ಲಿ ಮಾತ್ರ ಸಿಗುವಂತಹದ್ದು. ಮಾನವನ ಪ್ರಯತ್ನದಲ್ಲಿ ಹಲವಾರು ದೋಷಗಳು ತೋರಿಬರುವುದು ಸಹಜ. ಆದರೆ ದೋಷಗಳನ್ನು ಸಾಧ್ಯವಾದಷ್ಟೂ ಸರಿಪಡಿಸಿಕೊಳ್ಳುವ ಪ್ರಯತ್ನವನ್ನಾದರೂ ಮಾಡಲೇಬೇಕಷ್ಟೆ. ವಿದ್ವಾಂಸರು ನೀಡುವ ಸಲಹೆಗಳನ್ನು ಪ್ರಾಚ್ಯವಿದ್ಯಾಸಂಶೋಧನಾಲಯವು ಖಂಡಿತವಾಗಿಯೂ ಸ್ವಾಗತಿಸುತ್ತದೆ.

ಶಕ್ತಿನಿಧಿಪ್ರಕಟಗೊಳ್ಳುತ್ತಿರುವ ಈ ಸಂದರ್ಭದಲ್ಲಿ ಪ್ರಾಚ್ಯವಿದ್ಯಾಸಂಶೋಧನಾಲಯದ ನಿರ್ದೇಶಕಿಯಾಗಿ ಹಾಗೂ ಶಕ್ತಿನಿಧಿಯ ಸಂಪಾದಕಿಯಾಗಿ ನಾನು ಕೆಲವು ಮಾತುಗಳನ್ನು ಹೇಳಬಹುದೆನಿಸುತ್ತದೆ. ಹಂಪೆಯ ಕನ್ನಡ ವಿಶ್ವವಿದ್ಯಾನಿಲಯವು 1992ರಲ್ಲಿ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ ವಿರಚಿತ 'ಶ್ರೀತತ್ತ್ವನಿಧಿ' ಎಂಬ ಶೀರ್ಷಿಕೆಯೊಡನೆ ಸಂಪುಟ-1 'ಸ್ವರಚೂಡಾಮಣಿ' ಎಂಬ ಕೃತಿಯನ್ನು ಪ್ರಕಟಿಸಿದೆ. ಇದನ್ನು ಸಂಪಾದಿಸಿದವರು ಪ್ರಸಿದ್ಧ ವಿದ್ವಾಂಸರಾದ ಶ್ರೀ ಸಾಲಿಗ್ರಾಮ ಕೃಷ್ಣ ರಾಮಚಂದ್ರರಾಯರು. ಆದರೆ, ಈ ಕೃತಿಯೇ ಬೇರೆ. ಪ್ರಸ್ತುತ ಪ್ರಾಚ್ಯವಿದ್ಯಾಸಂಶೋಧನಾಲಯವು ಪ್ರಕಟಿಸುತ್ತಿರುವ ಕೃತಿಯೇ ಬೇರೆ ಎಂಬುದಾಗಿ ನಮ್ರತೆಯಿಂದ ಸೂಚಿಸಬಯಸುತ್ತೇನೆ. ಪ್ರಾಚ್ಯವಿದ್ಯಾಸಂಶೋಧನಾಲಯದಲ್ಲಿರುವ ಹಸ್ತಪ್ರತಿಯಲ್ಲಿ ಪ್ರಥಮಭಾಗ ಅಥವಾ ಸಂಪುಟ 'ಶಕ್ತಿನಿಧಿ'ಎಂಬುದು ಗಮನಾರ್ಹ. ಮತ್ತೊಂದು ಗಮನಾರ್ಹವಿಷಯವೇನೆಂದರೆ ಶ್ರೀಯುತ ರಾಮಚಂದ್ರರಾಯರು ಸಂಪಾದಿಸಿರುವ 'ಸ್ವರಚೂಡಾಮಣಿ' ಎಂಬ ಭಾಗವು ಶ್ರೀತತ್ತ್ವನಿಧಿಯ ನಾಲ್ಕನೆಯ ಭಾಗವಾದ ಬ್ರಹ್ಮನಿಧಿಗೆ ಸೇರಿದ್ದು, ಹಸ್ತಪ್ರತಿಯ 159ನೇ ಪತ್ರದಿಂದ 188ರ ವರೆಗೂ ಸ್ವರ-ರಾಗ-ತಾಳಗಳಿಗೆ ಸಂಬಂಧಿಸಿದ ಸಚಿತ್ರ ನಿರೂಪಣೆಯು **'ಅಸ್ಮತ್‌ಕೃತಸ್ವರಚೂಡಾಮಣೇಗ್ರಂಥರೀತ್ಯಾ'** ಎಂಬ ಉಪಶೀರ್ಷಿಕೆಯೊಡನೆ ಬ್ರಹ್ಮನಿಧಿಗೆ ಸೇರಿಕೊಂಡಂತೆಯೇ ಇದೆ. ಈ ವಿಷಯವನ್ನು ಶ್ರೀಯುತರು ಗಮನಿಸಿರಬಹುದು, ಹಾಗೂ ಸ್ವರಚೂಡಾಮಣಿ ಮುಮ್ಮಡಿಯವರ ಮತ್ತೊಂದು ಸ್ವತಂತ್ರಕೃತಿಯಾಗಿದ್ದು ಅಲ್ಲಿ ಬಂದಿರುವ ಚಿತ್ರಗಳೇ ಶ್ರೀತತ್ತ್ವನಿಧಿಯ ಚಿತ್ರಗಳಿಗೂ ಪ್ರೇರಣೆ ಎಂಬುದಾಗಿ ಸ್ವತಃ ರಾಮಚಂದ್ರರಾಯರೇ ತಾವು ಸಂಪಾದಿಸಿರುವ ಕೃತಿಯ ಪುಟ 53ರಲ್ಲಿ ಸೂಚಿಸಿದ್ದಾರೆ. ಬಹುಶಃ ಇವರ ಕೃತಿಗೆ

ಬೇರಾವುದೋ ಹಸ್ತಪ್ರತಿಯು ಆಧಾರವಾಗಿರಬಹುದು. ಶ್ರೀಯುತರ ಕೃತಿಯನ್ನು ವಿಮರ್ಶಿಸುವ ಉದ್ದೇಶವೂ ಸಹ ನಮ್ಮದಲ್ಲವೆಂದು ತಿಳಿಸಬಯಸುತ್ತೇನೆ.

ಪ್ರಾಚ್ಯವಿದ್ಯಾಸಂಶೋಧನಾಲಯದಲ್ಲಿರುವ ಶ್ರೀತತ್ತ್ವನಿಧಿಯ ಹಸ್ತಪ್ರತಿ

ಪ್ರಾಚ್ಯವಿದ್ಯಾಸಂಶೋಧನಾಲಯದಲ್ಲಿರುವ ಸಾವಿರಾರು ಹಸ್ತಪ್ರತಿಗಳಲ್ಲಿ ಪ್ರಮುಖವಾಗಿರುವುದು ಶ್ರೀತತ್ತ್ವನಿಧಿಯ ಹಸ್ತಪ್ರತಿ. ಅಮೂಲ್ಯವಾದ ಈ ಸಚಿತ್ರ ಹಸ್ತಪ್ರತಿಯು ಕಾಗದದ ಹಸ್ತಪ್ರತಿಯಾಗಿದ್ದು ಕನ್ನಡಲಿಪಿಯಲ್ಲಿ ಸ್ಫುಟವಾಗಿ ಬರೆಯಲ್ಪಟ್ಟಿದೆ. ಈ ಹಸ್ತಪ್ರತಿಯನ್ನು 9.2.1954 ರಂದು (ಸಾವಿರದ ಒಂಬೈನೂರ ಐವತ್ತನಾಲ್ಕು, ಫೆಬ್ರವರಿ ಒಂಬತ್ತನೇ ತಾರೀಖು) ಶ್ರೀ ಎಂ.ಬಿ. ಬಸವರಾಜ ಬಹಾದ್ದೂರ್, ನಂ 972 ಸಿಮೆಂಟ್ ಬ್ಲಾಕ್, ಚಾಮುಂಡೀಪುರಂ,ಮೈಸೂರು ಇವರಿಂದ, ಪ್ರಾಚ್ಯವಿದ್ಯಾಸಂಶೋಧನಾಲಯದ ಅಂದಿನ ವಿದ್ವಾಂಸರಲ್ಲಿ ಒಬ್ಬರಾದ ಶ್ರೀ ಎಂ. ಎನ್. ವಿಶ್ವೇಶ್ವರ ಜೋಯಿಸ್‌ರು ಪ್ರಾಚ್ಯವಿದ್ಯಾಸಂಶೋಧನಾಲಯಕ್ಕೆ ಉಚಿತವಾಗಿ ಸಂಗ್ರಹಿಸಿದರು. ಸಂಸ್ಥೆಯ ಅಂದಿನ ಕ್ಯುರೇಟರ್ ಆಗಿದ್ದ ಶ್ರೀ ಎಚ್. ಆರ್. ರಂಗಸ್ವಾಮಿ ಅಯ್ಯಂಗಾರ್‌ರವರು ಈ ಹಸ್ತಪ್ರತಿಯನ್ನು ಸಂಸ್ಥೆಗಾಗಿ ಪಡೆದುಕೊಂಡರು. ಈ ವಿಷಯವನ್ನು ಪ್ರಾಚ್ಯವಿದ್ಯಾಸಂಶೋಧನಾಲಯದಲ್ಲಿರುವ ಲೆಡ್ಜರ್ ನಂ. 4 ರ 35ನೇ ಪುಟದಲ್ಲಿ ದಾಖಲಿಸಲಾಗಿದೆ.

ಸುಮಾರು ನೂರಐವತ್ತು ವರ್ಷಗಳಿಗಂತಲೂ ಹಿಂದೆ ಬರೆದಿರಬಹುದಾದ ಈ ಹಸ್ತಪ್ರತಿಯು ಸಾಮಾನ್ಯವಾಗಿ ತಾಳೆಗರಿಗಳ ಮೇಲೆ ಬರೆಯಲ್ಪಟ್ಟ ಹಸ್ತಪ್ರತಿಯಂತಿರದೆ ಮುದ್ರಿತ ಪುಸ್ತಕವನ್ನೇ ಹೆಚ್ಚಾಗಿ ಹೋಲುತ್ತದೆ. ಪ್ರತಿಪತ್ರವೂ ಸುಮಾರು 15 ಅಂಗುಲ ಉದ್ದ ಮತ್ತು11.5 ಅಂಗುಲ ಅಗಲವಿದ್ದು ಸಂಸ್ಕೃತಭಾಷೆಯನ್ನು ಕನ್ನಡಲಿಪಿಯಲ್ಲಿ ಬರೆಯಲಾಗಿದೆ. ಪ್ರತಿಪತ್ರದ ಎರಡು ಮಗ್ಗುಲಿನಲ್ಲೂ ಬರಹ ಹಾಗೂ ಚಿತ್ರಗಳಿವೆ. ಆದರೆ ಪ್ರತಿಪತ್ರದ ಮುಂಬದಿಯ ಮೇಲ್ಭಾಗದಲ್ಲಿ ಮಾತ್ರ ಕ್ರಮಸಂಖ್ಯೆಯನ್ನು ಸೂಚಿಸಲಾಗಿದ್ದು ಸುತ್ತಲೂ ಅಂಚಿನಲ್ಲಿ ಒಂದು ಅಂಗುಲದಷ್ಟು ಒಳಭಾಗಕ್ಕಿದ್ದಂತೆ ಅರ್ಧ ಅಂಗುಲದಷ್ಟು ಅಗಲದ ಕಿತ್ತಳೆ ಬಣ್ಣದ ಚೌಕಟ್ಟನ್ನು ಬರೆಯಲಾಗಿದೆ. ಪುನಃ ಇದರ ಒಳಭಾಗಕ್ಕೆ ಹಳದಿಬಣ್ಣದ ಚೌಕಟ್ಟು - ಗೆರೆಯನ್ನು ಎಳೆಯಲಾಗಿದೆ.

ಹಸ್ತಪ್ರತಿಯಲ್ಲಿ ಬರುವ ಚಿತ್ರಗಳಿಗೆ ವಿಶೇಷವಾಗಿ ವಸ್ತ್ರ ಮತ್ತು ಆಭರಣಾದಿಗಳಿಗೆ ಎಲೆಹಸಿರು, ಕೆಂಪು, ಹಳದಿ ಬಣ್ಣಗಳನ್ನು ಬಳಸಲಾಗಿದ್ದು ಹಲವೆಡೆ ಗಿಳಿ ಹಸಿರು, ತಿಳಿಗೆಂಪು, ಕಪ್ಪು, ಬೂದಿ ಬೆರೆತ ನೀಲಿಯ ಬಣ್ಣಗಳನ್ನು ಬಳಸಲಾಗಿದೆ. ಮತ್ತೊಂದು ಗಮನಾರ್ಹ ವಿಶೇಷವೇನೆಂದರೆ ಶ್ರೀತತ್ತ್ವನಿಧಿಗ್ರಂಥದಲ್ಲಿ ಬರುವ ದೇವ-ಮಾನವರ ಚಿತ್ರಗಳಿಗೆ ಗ್ರಂಥದಲ್ಲಿಯೇ ನಿರ್ದಿಷ್ಟವಾದ ಬಣ್ಣಗಳನ್ನು ಸೂಚಿಸಿದ್ದರೂ ಎಲ್ಲಿಯೂ ಸಹ ಅವರುಗಳ ಶರೀರಕ್ಕೆ ಬಣ್ಣವನ್ನು ತುಂಬಿಸಿಲ್ಲ. ವಸ್ತ್ರಗಳ ನೆರಿಗೆ, ಮಡಿಕೆ, ಮೊದಲಾದವನ್ನು ಸೂಚಿಸಲು, ಆಯಾ ದೇವತೆಗಳ ವಾಹನಗಳ ರೂಪದಲ್ಲಿರುವ ಪ್ರಾಣಿ, ಪಕ್ಷಿಗಳಿಗೆ ಸಾಧ್ಯವಾದಷ್ಟೂ ಅವುಗಳ ಸಹಜ ಬಣ್ಣವನ್ನೇ ತುಂಬಿಸಲಾಗಿದೆ.

ಶ್ರೀತತ್ತ್ವನಿಧಿಯಲ್ಲಿನ ನವಸಂಪುಟಗಳನ್ನು ಕ್ರಮವಾಗಿ ಶಕ್ತಿನಿಧಿ, ವಿಷ್ಣುನಿಧಿ, ಶಿವನಿಧಿ, ಬ್ರಹ್ಮನಿಧಿ, ಗ್ರಹನಿಧಿ, ವೈಷ್ಣವನಿಧಿ, ಶೈವನಿಧಿ, ಆಗಮನಿಧಿ ಮತ್ತು ಕೌತುಕನಿಧಿ ಎಂಬುದಾಗಿ ವಿಂಗಡಿಸಲಾಗಿದ್ದು ಈ ಎಲ್ಲಾ ಸಂಪುಟಗಳೂ ಸಂಸ್ಥೆಯಲ್ಲಿರುವ ಹಸ್ತಪ್ರತಿಯಲ್ಲಿವೆ. ವೈಷ್ಣವನಿಧಿ, ಶೈವನಿಧಿಯಲ್ಲಿ ಬರುವ ಯೋಗಾಸನದ ವಿವಿಧ ಪ್ರಕಾರಗಳನ್ನು ಸೂಚಿಸುವ ಚಿತ್ರಗಳು ಕೇವಲ ರೇಖಾಚಿತ್ರಗಳಾಗಿದ್ದು ಉದ್ದೇಶಪೂರ್ವಕವಾಗಿಯೇ ಇವುಗಳಿಗೆ ಬಣ್ಣವನ್ನು ತುಂಬಿಸಿಲ್ಲವೆನಿಸುತ್ತದೆ. ಕೊನೆಯ ಸಂಪುಟವಾದ ಕೌತುಕನಿಧಿಯ ಯಾವ ಚಿತ್ರಗಳಿಗೂ ಬಣ್ಣವನ್ನು ತುಂಬಿಸಿಲ್ಲ.

ಮೈಸೂರಿನ ಅರಮನೆಗೆ ಸೇರಿದ ಗ್ರಂಥಾಲಯದಲ್ಲಿರುವ ಹಸ್ತಪ್ರತಿಯ ಕೌತುಕನಿಧಿಯಲ್ಲಿ ಬರುವ ಚಿತ್ರಗಳಲ್ಲಿ ಕೆಲವಕ್ಕೆ ಬಣ್ಣಗಳನ್ನು ತುಂಬಿಸಲಾಗಿದ್ದು ಯೋಗಾಸನದ ಪ್ರಕಾರಗಳನ್ನು ಸೂಚಿಸುವ ರೇಖಾಚಿತ್ರಗಳು ವರ್ಣರಹಿತವಾಗಿವೆ ಎಂಬುದಾಗಿ ತಿಳಿದುಬಂದಿದೆ. ಪ್ರಾಚ್ಯವಿದ್ಯಾಸಂಶೋಧನಾಲಯದಲ್ಲಿನ ಹಸ್ತಪ್ರತಿಗೆ ಸೇರಿದಂತೆ 1-35 ಪತ್ರಗಳುಳ್ಳ ವಿಷಯಾನುಕ್ರಮಣಿಕೆ ಸಂಸ್ಕೃತದಲ್ಲಿ ಬರೆಯಲ್ಪಟ್ಟಿದೆ. ಇದಲ್ಲದೆ ಪ್ರಥಮಸಂಪುಟವಾದ ಶಕ್ತಿನಿಧಿಯ ಪ್ರಾರಂಭದೊಡನೆ ಪತ್ರಸಂಖ್ಯೆ ಕ್ರಮವಾಗಿ ಒಂದರಿಂದ ಪ್ರಾರಂಭವಾಗುತ್ತದೆ. ಪ್ರಾಚ್ಯವಿದ್ಯಾಸಂಶೋಧನಾಲಯದಲ್ಲಿರುವ ಶ್ರೀತತ್ತ್ವನಿಧಿಯ ಹಸ್ತಪ್ರತಿಯಲ್ಲಿನ ಒಂಬತ್ತು ಸಂಪುಟಗಳ ಪತ್ರ ಸಂಖ್ಯೆಯ ಕ್ರಮವನ್ನು ಸಹೃದಯರ ಅನುಕೂಲಕ್ಕಾಗಿ ಇಲ್ಲಿ ವಿವರಿಸಲಾಗಿದೆ.

ಅನುಕ್ರಮಣಿಕೆ ಪತ್ರಸಂಖ್ಯೆ 1-35 ರವರೆಗೆ, ಶಕ್ತಿನಿಧಿ 1-66 (ವರ್ಣ ಚಿತ್ರಗಳು 106), ವಿಷ್ಣುನಿಧಿ 71-93 (ವರ್ಣ ಚಿತ್ರಗಳು 115), ಶಿವನಿಧಿ 95-125 (ವರ್ಣಚಿತ್ರಗಳು 81), ಬ್ರಹ್ಮನಿಧಿ 130-188 (ವರ್ಣಚಿತ್ರಗಳು 466), ಗ್ರಹನಿಧಿ 190-265 (ವರ್ಣಚಿತ್ರಗಳು 337), ವೈಷ್ಣವನಿಧಿ 323-392 (ರೇಖಾ ಚಿತ್ರಗಳು 263), ಶೈವನಿಧಿ 356-392 (ರೇಖಾ ಚಿತ್ರಗಳು 263), ಆಗಮನಿಧಿ 394-450 (ರೇಖಾ ಚಿತ್ರಗಳು 50), ಕೌತುಕನಿಧಿ 454-538 (ರೇಖಾ ಚಿತ್ರಗಳು 162).

ಗ್ರಂಥಾಕಾರ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರು (1794-1868)

ವೇದಭಾಷ್ಯಕಾರರಾದ ಸಾಯಣಾಚಾರ್ಯರಂತಹ ವಿದ್ವನ್ಮಣಿಗಳು ಜನಿಸಿದ ನಾಡು ನಮ್ಮ ಈ ಕರ್ನಾಟಕ. ಕಲೆ ಸಾಹಿತ್ಯಗಳ ಅಪೂರ್ವ ಸಮಾಗಮ. 'ಶ್ರೀತತ್ತ್ವನಿಧಿ' ಸಾಹಿತ್ಯಲೋಕಕ್ಕೆ ಕರ್ನಾಟಕದ ಅಪೂರ್ವ ಕೊಡುಗೆ. ಸ್ವತಃ ಕವಿಗಳು ಹಾಗೂ ಶ್ರೇಷ್ಠಕಲಾವಿದರೂ ಆಗಿದ್ದಂತಹ ಮೈಸೂರು ಅರಸು ಮನೆತನದ ರಾಜರುಗಳಲ್ಲಿ ಇಪ್ಪತ್ತರಡನೆಯವರಾಗಿದ್ದ ಶ್ರೀಮುಮ್ಮಡಿ ಕೃಷ್ಣರಾಜಒಡೆಯರ್‌ರವರೇ ಶ್ರೀತತ್ತ್ವನಿಧಿಯ ಕರ್ತೃ. ಇವರ ಜೀವಿತ ಕಾಲ 1794 ರಿಂದ 1868. ಆಳ್ವಿಕೆಯ ಕಾಲ 1799 ರಿಂದ 1868. ಮುಮ್ಮಡಿಯವರ ತಂದೆ ಶ್ರೀ ಖಾಸಾ ಮುಮ್ಮಡಿ ಚಾಮರಾಜ ಒಡೆಯರ್‌ರವರು (1774-1796). ತಾಯಿ ಕೆಂಪನಂಜಮ್ಮಣಿಯವರು. ಮುಮ್ಮಡಿಯವರಿಗೆ ಜನ್ಮನೀಡಿ ಇನ್ನೂ ಬಾಣಂತಿಯಾಗಿರುವಾಗಲೇ ಅವರ ತಾಯಿ ತೀರಿಕೊಂಡರು. ಮುಮ್ಮಡಿಯವರಿನ್ನೂ ಎರಡು ವರ್ಷದ ಹಾಲುಗಲ್ಲದ ಹಸುಳೆಯಾಗಿರುವಾಗಲೇ ಇವರ ತಂದೆಯವರಾದ ಖಾಸ ಮುಮ್ಮಡಿ ಚಾಮರಾಜ ಒಡೆಯರ್‌ರವರು ಸಿಡುಬು ರೋಗಕ್ಕೆ ಬಲಿಯಾಗಿ ತೀರಿಹೋದರು. ಮುಮ್ಮಡಿಯವರ ಅಜ್ಜಿಯಾದ ಮಹಾರಾಣಿ ಲಕ್ಷ್ಮಮ್ಮಣ್ಣಿಯವರೇ ಪೋಷಿಸಿ, ರಕ್ಷಿಸಿ, ಅವರಿನ್ನೂ ಐದು ವರ್ಷ ತುಂಬಿದ ಬಾಲಕನಿರುವಾಗಲೇ, ಅಂದರೆ 1799ರಲ್ಲಿ ಪಟ್ಟ ಕಟ್ಟಿಸಿದರು. ಗುಣವತಿಯೂ ನಿಶಿತಮತಿಯೂ ಆಗಿದ್ದ ಲಕ್ಷ್ಮಮ್ಮಣಿಯವರು ದಿವಾನ್ ಪೂರ್ಣಯ್ಯನವರಂತಹ ರಾಜಕೀಯ ಪಟುಗಳ ಸಹಕಾರದಿಂದ, ತಾವೇ ಆಡಳಿತ ಕಾರ್ಯಗಳೆಲ್ಲವನ್ನು ನೋಡಿಕೊಂಡರು. ಮುಮ್ಮಡಿಯವರು ಹದಿನಾರು ವರ್ಷದವರಿರುವಾಗ, ಅಂದರೆ 1810ರಲ್ಲಿ ಲಕ್ಷ್ಮಮ್ಮಣಿಯವರು ನಿಧನರಾದರು. ಮುಂದೆ 1812ರಲ್ಲಿ ಪೂರ್ಣಯ್ಯನವರು ನಿಧನರಾದ ನಂತರ ಮುಮ್ಮಡಿಯವರು ತಮ್ಮ ಕೊನೆಗಾಲದವರೆಗೂ ಹಲವಾರು ರಾಜಕೀಯ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಅತಿ ವಿಸ್ತರ ಭಯದಿಂದ ಅವುಗಳನ್ನೆಲ್ಲ ಇಲ್ಲಿ ಕೈಬಿಡಲಾಗಿದೆ.

ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಮುಮ್ಮಡಿಯವರದು ಅತಿ ಉಜ್ವಲವಾದ ಹೆಸರು. ಬಾಲ್ಯದಲ್ಲಿಯೇ ದೇವ ಭಾಷೆಯಾದ ಸಂಸ್ಕೃತದಲ್ಲೂ ದೇಶ ಭಾಷೆಯಾದ ಕನ್ನಡದಲ್ಲೂ ಉತ್ತಮ ಶಿಕ್ಷಣ ಪಡೆದಿದ್ದ ಇವರು ತಮ್ಮ ಆಳ್ವಿಕೆಯಲ್ಲಿ ಹಲವಾರು ವಿದ್ವಾಂಸರಿಗೆ, ಕವಿಗಳಿಗೆ, ಸಂಗೀತಗಾರರಿಗೆ, ಶಿಲ್ಪಿಗಳಿಗೆ ಮತ್ತು ಚಿತ್ರಕಾರರಿಗೆ ಆಶ್ರಯ ನೀಡಿ

"ಕವಿಜನ .ಕಾಮಧೇನು" "ಕನ್ನಡದ ಭೋಜ" ಎಂದು ಪ್ರಸಿದ್ಧರಾಗಿದ್ದರು. ವೀಣೆ ವೆಂಕಟಸುಬ್ಬಯ್ಯ, ಕುಣಿಗಲ್ ರಾಮಶಾಸ್ತ್ರಿ, ಸೋಸಲೆ ಗರಳೆಪುರಿ ಶಾಸ್ತ್ರಿ, ಅಳಿಯ ಲಿಂಗರಾಜ, ಕೆಂಪು ನಾರಾಯಣ, ದೇವಲಾಪುರದ ನಂಜುಂಡ, ಬಸವಪ್ಪ ಶಾಸ್ತ್ರಿಗಳೇ ಮೊದಲಾದ ಹಲವಾರು ಕವಿಗಳಿಗೂ, ಸಂಗೀತ ಕಲಾವಿದರಿಗೂ ಆಶ್ರಯ ನೀಡಿ, ಅವರಿಂದ ಹಲವಾರು ಉತ್ತಮ ಕೃತಿಗಳ ರಚನೆಗೆ ಪ್ರೋತ್ಸಾಹ ನೀಡಿದರು.

ಬಹುಮುಖಪ್ರತಿಭೆಯುಳ್ಳವರಾಗಿದ್ದ ಮುಮ್ಮಡಿಯವರು ಸಂಸ್ಕೃತ, ಕನ್ನಡವೆರಡೂ ಸೇರಿದಂತೆ ಒಟ್ಟು 58 ಕೃತಿಗಳನ್ನೂ ರಚಿಸಿರುವರು. ಇವರ ಹಲವಾರು ಕನ್ನಡ ಕೃತಿಗಳಿಗೆ ಸಂಸ್ಕೃತ ಸಾಹಿತ್ಯದಲ್ಲಿನ ಪ್ರಸಿದ್ಧ ಕೃತಿಗಳೇ ಆಕರಗಳಾಗಿವೆ. ಕನ್ನಡದ ಕೆನೆ ಹಾಲಿಗೆ ಸಂಸ್ಕೃತದ ಸಕ್ಕರೆ ಬೆರೆತಾಗ ಲಭಿಸುವ ಸವಿ ಸಂಸ್ಕೃತ ಬಾರದ ಜನಸಾಮಾನ್ಯರಿಗೂ ನಿಲುಕಲೆಂಬ ಹಂಬಲ ಹೊತ್ತವರು ಮುಮ್ಮಡಿಯವರು. ಇವರ ಒಟ್ಟು ಕೃತಿಗಳಲ್ಲಿ ದೇವತಾ ಸ್ತೋತ್ರಗಳೂ, ಕಾವ್ಯಗಳೂ, ಶಾಸ್ತ್ರಾಧಾರಿತ, ರಚನೆಗಳು, ಕೋಶಗ್ರಂಥಗಳೂ, ಗದ್ಯ ರಚನೆಗಳೂ, ಸಂಗೀತ ಕೃತಿಗಳೂ ಸೇರಿವೆ.

ಸಂಸ್ಕೃತದಲ್ಲಿ ಇವರು ರಚಿಸಿರುವ ಸ್ತೋತ್ರಗಳು ಚಾಮುಂಡಾ ತ್ರಿಶತೀ, ಮೃತ್ಯುಂಜಯಶತಕ, ನಂಜುಂಡಶತಕ, ಗಣೇಶ ರತ್ನಮಾಲ, ದೇವತಾಧ್ಯಾನಮಾಲಿಕಾ, ಸೂರ್ಯಚಂದ್ರಸ್ತೋತ್ರ, ರಾಮಕೃಷ್ಣಸ್ತೋತ್ರ, ಶಂಕರನಾರಾಯಣ ಸ್ತೋತ್ರ, ಶ್ರೀಕಂಠೇಶ್ವರ ತ್ರಿಶತೀ, ಮಹಾವಿಷ್ಣುತ್ರಿಶತೀ ಇವೇ ಮೊದಲಾದವು. ಸಂಸ್ಕೃತ ಕಾವ್ಯಗಳಲ್ಲಿ ರಾಮಕಥಾಪುಷ್ಪಮಂಜರಿ, ಕೃಷ್ಣಕಥಾಪುಷ್ಪಮಂಜರಿ, ಸೂರ್ಯಚಂದ್ರವಂಶಾವತರಣಂ ಎಂಬ ಐತಿಹಾಸಿಕ ಕಾವ್ಯ ಮೊದಲಾದವು ಪ್ರಮುಖವೆನಿಸಿವೆ. ಶಾಸ್ತ್ರಾಧಾರಿತ ಸಂಸ್ಕೃತ ಕೃತಿಗಳಲ್ಲಿ, ಶ್ರೀತತ್ತ್ವನಿಧಿ (ಅಲ್ಲಲ್ಲಿ ಕನ್ನಡ ವಿವರಣೆಯೊಡನೆ), ಗಣಿತ ಸಂಗ್ರಹ, ಸಂಖ್ಯಾರತ್ನಮಾಲ, ಗ್ರಹಣದರ್ಪಣ, ಮಹಾಕೋಶಸುಧಾಕರ, ಸ್ವರಚೂಡಾಮಣಿ ಮೊದಲಾದವು ಪ್ರಮುಖವೆನಿಸಿವೆ.

ಇವರ ಕನ್ನಡ ಕೃತಿಗಳಲ್ಲಿ ಪ್ರಮುಖವಾದವು ಸೌಗಂಧಿಕಾಪರಿಣಯ, ವತ್ಸರಾಜ ಕಥೆ, ಕೃಷ್ಣಕಥಾಸಂಗ್ರಹ, ರಾಮಾಯಣ, ಮಹಾಭಾರತಗಳ ಅನುವಾದವನ್ನು ಸಂಸ್ಕೃತ ಬಾರದ ಜನಸಾಮಾನ್ಯರಿಗಾಗಿಯೇ ಮಾಡಲಾಗಿದೆ. ಕಾಳಿದಾಸನ ಮೂರು ನಾಟಕಗಳನ್ನು ಗದ್ಯಾನುವಾದ, ವಿವರಣೆಗಳೊಡನೆ ರಚಿಸಿದ್ದಾರೆ. ರಾಮಕಥಾವತಾರವನ್ನು ರಚಿಸುವಾಗ ಶ್ರೀಮದ್ರಾಮಾಯಣ, ವಿಷ್ಣುಪುರಾಣ, ಪದ್ಮ-ಕೂರ್ಮಪುರಾಣಗಳನ್ನು, ಶಿವ-ವಿಷ್ಣುಪುರಾಣಗಳನ್ನು ಪರಾಮರ್ಶಿಸಿ ರಚಿಸಿದ್ದಾರೆ. ಈ ಕೃತಿಯೂ ಮುಮ್ಮಡಿಯವರಿಗಿದ್ದ ಸಂಶೋಧನಾ ದೃಷ್ಟಿಯನ್ನು ಪ್ರತಿಬಿಂಬಿಸುತ್ತದೆ.

ಶ್ರೀತತ್ತ್ವನಿಧಿ: ಮುಮ್ಮಡಿಯವರ ಮಹಾಕೃತಿಗಳಲ್ಲೆ ಮೇರು ಸದೃಶವಾದ ಕೃತಿ ಶ್ರೀತತ್ತ್ವನಿಧಿ. ಈ ಕೃತಿಗೆ ಹತ್ತಿರವಾಗಬಲ್ಲ, ಸಂಸ್ಕೃತದಲ್ಲಿಯೇ ರಚಿತವಾಗಿರುವ ಕೋಶಗ್ರಂಥಗಳಲ್ಲಿ ಎರಡನ್ನು ಹೆಸರಿಸಬಹುದು. ಮೊದಲನೆಯದಾಗಿ 1129 ರಲ್ಲಿ ಭೂಲೋಕಮಲ್ಲ ಮುಮ್ಮಡಿ ಸೋಮೇಶ್ವರನು ರಚಿಸಿರುವ ಅಭಿಲಷಿತಾರ್ಥಚಿಂತಾಮಣಿ. ಮತ್ತೊಂದು ಕೃತಿ 1709-10 ರಲ್ಲಿ ಕೆಳದಿಯ ಬಸವಪ್ಪಭೂಪಾಲನು ರಚಿಸಿರುವ ಶಿವತತ್ತ್ವರತ್ನಾಕರ. ಆದರೆ ಶ್ರೀತತ್ತ್ವನಿಧಿಯಲ್ಲಿರುವ ಸುಂದರ ವರ್ಣಚಿತ್ರಗಳು ಇವುಗಳಲ್ಲಿಲ್ಲ. ವಿಷಯವ್ಯಾಪ್ತಿಯ ದೃಷ್ಟಿಯಿಂದಲೂ ಸಹ ಇವು ಅದಕ್ಕೆ ಸಮಾನವೆನಿಸಲಾರವು. ಶ್ರೀತತ್ತ್ವನಿಧಿಯು ಹಲವಾರು ಶಾಸ್ತ್ರಗಳ ಸಂಗ್ರಹಸಾರ. ವಿಶಾಲವಾದ ಸಂಸ್ಕೃತ ಸಾಗರವನ್ನು ಮಥಿಸಿ ಹೊರತಂದ ಕೃತಿ ರತ್ನ. ಸ್ವತಃ ಮುಮ್ಮಡಿಯವರೇ ಶಕ್ತಿನಿಧಿಯ ಪ್ರಾಸ್ತಾವಿಕ ಶ್ಲೋಕಗಳಲ್ಲಿ ಈ ರೀತಿ ನುಡಿದಿದ್ದಾರೆ:

ಶ್ರೀಮಚ್ಚಾಮುಂಡಿಕಾದೇವೀ ಕಟಾಕ್ಷಶುಭವೀಕ್ಷಣಾತ್ ।
ನಿಗಮಾಗಮತಂತ್ರಾಣಂ ಪುರಾಣವಚಸಾಮಪಿ ॥ 5 ॥
ಧರ್ಮಶಾಸ್ತ್ರೇತಿಹಾಸಾನಾಂ ಉಪತಂತ್ರಗಿರಾಮಪಿ ।
ಮಂತ್ರಜ್ಯೋತಿಷಶಿಲ್ಪಾನಾಂ ಸಾರಂ ಸಂಗ್ರಹ್ಯ ತತ್ತ್ವತಃ ॥ 6 ॥

ಶ್ರೀತತ್ತ್ವನಿಧಿಯಲ್ಲಿ ಬರುವ ನಾನಾ ವಿಷಯಗಳನ್ನು ಒಂಬತ್ತು ಭಾಗ ಅಥವಾ ಸಂಪುಟಗಳಾಗಿ ವಿಂಗಡಿಸಿಕೊಂಡು ಅವುಗಳಿಗೆ ನವನಿಧಿಗಳೆಂದು ಹೆಸರಿಡಲಾಗಿದೆ. ಕೃತಿಗೆ ಹೆಸರನ್ನು ಆಯ್ದುಕೊಳ್ಳುವಾಗಲೂ ಸಹ ಮುಮ್ಮಡಿಯವರ ಔಚಿತ್ಯ ಪ್ರಜ್ಞೆಯು ಮೆಚ್ಚುವಂತಹದ್ದೇ. ಶ್ರೀತತ್ತ್ವನಿಧಿಯೆಂಬ ಸಮಸ್ತ ಪದದಲ್ಲಿ ಶ್ರೀ ಎಂದರೆ ಸೌಂದರ್ಯ, ಶೋಭೆ, ಸಂಪತ್ತು. ಇದು ಲಕ್ಷ್ಮಿಯ ಹೆಸರೂ ಹೌದು. "ಸಿದ್ಧಂ ಸಿದ್ಧಾಧಿಕಾರಾಂಶ್ಚ ಶ್ರೀ ಪೂರ್ವಂ ಸಮುದೀರಯೇತ್" ಎಂಬ ಸೂಕ್ತಿಗನುಗುಣವಾಗಿ ಶ್ರೇಷ್ಠಕೃತಿಗಳ ಶ್ರೇಷ್ಠವ್ಯಕ್ತಿಗಳ ಹೆಸರಿನ ಮೊದಲು ಹಚ್ಚಬೇಕಾದ ಗೌರವದ್ಯೋತಕವು ಹೌದು. ತತ್ತ್ವವೆಂದರೆ ಸಾರಭೂತವಾಗಿರುವುದು, ಇರುವುದು (ಜಗತ್ತಿನಲ್ಲಿ). ಎಣಿಕೆಗೆ ನಿಲುಕುವಂತಹದ್ದು ಎಂಬರ್ಥದಲ್ಲಿಯೂ 'ತತ್ತ್ವ' ಎಂಬ ಪದವನ್ನು ಬಳಸಲಾಗಿದೆ. ಇಪ್ಪತ್ತೈದು ತತ್ತ್ವಗಳಲ್ಲಿ ಸಾಂಖ್ಯದರ್ಶನವನ್ನು ನಿರೂಪಿಸಿರುವ ಕಪಿಲರು ತಮ್ಮ ಕೃತಿಗೆ ತತ್ತ್ವ ಸಮಾಸವೆಂಬ ಹೆಸರನ್ನು ಕೊಟ್ಟಿರುವರು. ಕಪಿಲರ ಕೃತಿಯನ್ನು ಅನುಸರಿಸಿ ನಂತರ ಬಂದಂತಹ ದಾರ್ಶನಿಕ ಕೃತಿಗಳು ತತ್ತ್ವಕೌಮುದೀ, ತತ್ತ್ವವೈಶಾರದೀ ಮತ್ತು ತತ್ತ್ವಚಿಂತಾಮಣಿ ಎಂಬ ಹೆಸರುಗಳನ್ನು ಪಡೆದವು. ಮುಮ್ಮಡಿಯವರ ಗ್ರಂಥವೂ ಸಹ ಹಲವಾರು ಆಕರ ಗ್ರಂಥಗಳ ಸಾರವಾಗಿದ್ದು "ಸಾರಂ ಸಂಗ್ರಹ್ಯ ತತ್ತ್ವತಃ" ಎಂಬುದಾಗಿ ಅವರೇ ನುಡಿದಿರುವರು.

"ನಿಧಿ" ಎಂದರೆ ಆಶ್ರಯ, ಸಂಗ್ರಹ, ನೆಲೆ, ಕೂಡಿಸುವಿಕೆ (ಜಲನಿಧಿ, ತೋಯನಿಧಿ, ತಪೋನಿಧಿ) ಸಂಪತ್ತು ಎಂಬ ನಾನಾ ಅರ್ಥಗಳುಂಟು. ಭಾರತೀಯ ಪುರಾಣಗಳ ಪ್ರಕಾರ ಕುಬೇರನು ಸಂಪತ್ತಿನ ಅಧಿಪತಿ. ಅವನಲ್ಲಿರುವ ನಿಧಿಗಳೂ ಸಹ ಒಂಬತ್ತು. "ಕುಬೇರಸ್ಯ ನವಧಾರತ್ನವಿಶೇಷಃ", ಇವು ಕ್ರಮವಾಗಿ ಪದ್ಮ, ಮಹಾಪದ್ಮ, ಶಂಖ, ಮಕರ, ಕಚ್ಛಪ, ಮುಕುಂದ, ಕುಂದ, ನೀಲ, ವರ್ಚ. ಈ ನವನಿಧಿಗಳನ್ನು ಕುಬೇರನ ಅನುಚರರೆಂದೂ ಸಹ ವರ್ಣಿಸಲಾಗಿದೆ. ಕುಬೇರನ ನವನಿಧಿಯ ಪ್ರೇರಣೆಯಿಂದಲೇ ಮುಮ್ಮಡಿಯವರೂ ಸಹ ತಮ್ಮ ಕೃತಿಗೆ ಶ್ರೀತತ್ತ್ವನಿಧಿಯೆಂಬ ಹೆಸರನ್ನು ಕೊಟ್ಟಿರಬಹುದು. ಶ್ರೀತತ್ತ್ವನಿಧಿಯ ನವನಿಧಿಗಳ ಅಧ್ಯಯನದಿಂದ ಕುಬೇರನ ನವನಿಧಿಗಳನ್ನು ಗಳಿಸಿಕೊಳ್ಳಬಹುದೆಂದು ಮುಮ್ಮಡಿಯವರು ತಮ್ಮ ಗ್ರಂಥದ ಧ್ಯೇಯ ಉದ್ದೇಶವನ್ನು ಸೂಚಿಸಿರುವರು.

ಶ್ರೀತತ್ತ್ವನಿಧಿಯಲ್ಲಿನ ಎದ್ದು ಕಾಣುವ ಅಂಶವೆಂದರೆ ಅಲ್ಲಿ ಬರುವ ದೇವತೆಗಳಿಗೆ ಮಾಡಿರುವ ಆಕಾರಕಲ್ಪನೆ. ಗ್ರಹ, ನಕ್ಷತ್ರಗಳು ಮಾತ್ರವಲ್ಲದೇ ಸಂವತ್ಸರ, ಋತು, ಮಾಸಗಳಿಗೂ ಸಹ ಆಕೃತಿಯನ್ನು ಸೂಚಿಸಿ ಅವುಗಳಿಗೆ ಪತ್ನಿಯರನ್ನೂ ಕಲ್ಪಿಸಿರುವುದು ಇಲ್ಲಿನ ವಿಶೇಷ. ಈ ಆಕಾರಚಿಂತನೆಯ ಬೇರುಗಳನ್ನು ವೇದಗಳಲ್ಲಿಯೇ ಕಾಣಬಹುದು. ಚತ್ವಾರಿ ಶೃಂಗಾಃ ಎಂಬ ಋಗ್ವೇದದ (4-58-3) ಮಂತ್ರದಲ್ಲಿ ಅಗ್ನಿಗೆ ನಾಲ್ಕು ಕೊಂಬು, ಮೂರುಕಾಲು, ಎರಡುತಲೆ ಎಂದೆಲ್ಲ ಕಲ್ಪಿಸಲಾಗಿದೆ. ನಾಟ್ಯವಾಡುವ ನವತರುಣಿಗೆ ಹೋಲಿಸಲ್ಪಟ್ಟಿರುವ ಉಷಸ್ಸಿನ ಕಲ್ಪನೆಯಂತೂ ಸೌಂದರ್ಯದ ಪರಾಕಾಷ್ಠೆಯನ್ನು ಮುಟ್ಟಿದೆ. ಹೀಗೆ ವೇದಗಳಿಂದಲೇ ಪ್ರಾರಂಭವಾಗಿರುವ ಆಕಾರಕಲ್ಪನೆ ಪರಾಕಾಷ್ಠೆಯನ್ನು ಮುಟ್ಟಿರುವುದನ್ನು ಶ್ರೀತತ್ತ್ವನಿಧಿಯಲ್ಲಿ ಕಾಣಬಹುದು. ಶ್ರೀತತ್ತ್ವನಿಧಿಯಲ್ಲಿ ಬರುವ ಒಟ್ಟು ಆರುಸಾವಿರಕ್ಕೂ ಮೀರಿದ ಶ್ಲೋಕಗಳಲ್ಲಿ ವರ್ಣಿತರಾಗಿರುವ ದೇವತೆಗಳಿಗೆ ಅವರವರ ಬಣ್ಣ, ವಸ್ತ್ರ, ಆಭರಣ, ಮುಖಗಳ ಸಂಖ್ಯೆ, ಕೈಗಳ ಸಂಖ್ಯೆ, ಧರಿಸಿರುವ ಆಯುಧಗಳು, ಕುಳಿತಿರುವ ವಾಹನಗಳ ವರ್ಣನೆಗಳಿಗೆ ಅನುಸಾರವಾಗಿ ಸಾವಿರಕ್ಕೂ ಮೀರಿದ ಚಿತ್ರಗಳು ಬರೆಯಲ್ಪಟ್ಟಿವೆ. ಶ್ರೀತತ್ತ್ವನಿಧಿಯ ಪ್ರಾರಂಭದಲ್ಲಿಯೇ, (ಈ ಗ್ರಂಥದ ಮುಖಪುಟದಲ್ಲಿಯೂ) ಬರುವ ಚಾಮುಂಡಾಂಬಿಕೆಯ ವರ್ಣನೆಯನ್ನು ಗಮನಿಸಬಹುದು:

ನಿಗದ್ಯತೇಽತ್ರ ಯಾ ಚಂಡೀ ಹೇಮಭಾ ಸುಸ್ವರೂಪಿಣೀ ।
ತ್ರಿಣೇತ್ರಾ ಯೌವನಸ್ಥಾ ಚ ಕ್ರುದ್ಧಾ ಚೋರ್ಧ್ವಸ್ಮಿತಾ ಮತಾ ॥ 17 ॥

ಕೃಶಮಧ್ಯಾ ವಿಶಾಲಾಕ್ಷೀ ಚಾರುಪೀನಪಯೋಧರಾ ।
ಏಕವಕ್ತ್ರಾ ತು ಸುಗ್ರೀವಾ ಬಾಹುವಿಂಶತಿಸಂಯುತಾ ॥ 18 ॥
ಶೂಲಾಸಿಶಕ್ತಿಚಕ್ರಾಣಿ ಬಾಣಶಂಖಪವೀನಪಿ ।
ಅಭಯಂ ಡಮರುಂ ಚೈವ ಛುರಿಕಾಂ ದಕ್ಷಿಣೈಃ ಕರೈಃ ॥ 19 ॥
ಊರ್ಧ್ವಾದಿಕ್ರಮಯೋಗೇನ ಬಿಭ್ರತೀ ಸಾ ಸದಾ ಶುಭಾ ।
ನಾಗಂ ಪಾಶಂ ತಥಾ ಖೇಟಂ ಕುಠಾರಾಂಕುಶಕಾರ್ಮುಕಾನ್ ॥ 20 ॥
ಘಂಟಾಧ್ವಜಗದಾದರ್ಶಾನ್ ಬಿಭ್ರಾಣಾ ಕಾಮರೂಪಿಣೀ ।
ತದಧೋ ಮಹಿಷಶ್ಛಿನ್ನಮೂರ್ಧಾ ಪತಿತಮಸ್ತಕಃ ॥ 21 ॥
ತ್ರಸ್ತೋದ್ಯತಕರಃ ಕ್ರುದ್ಧಸ್ತದ್ಗ್ರೀವಾಸಂಭವಃ ಪುಮಾನ್ ।
ಶೂಲಭಿನ್ನೋ ವಮದ್ರಕ್ತೋ ರಕ್ತಭ್ರೂಶ್ಮಶ್ರುಲೋಚನಃ ॥ 22 ॥
ಸಿಂಹೇನ ಖಾದ್ಯಮಾನಸ್ತು ಪಾಶಬದ್ಧೋ ಗಲೇ ಭೃಶಂ ।
ಯಾಭ್ಯಾಂಘ್ರ್ಯಾಂಕ್ರಾಂತಸಿಂಹಾ ಚ ಸವ್ಯಾಂಘ್ರ್ಯಾಲೀಢಗಾಸುರೇ ।
ಚಂಡೀ ಚೋದ್ಯತಶಸ್ತ್ರೇಯಮಶೇಷರಿಪುನಾಶಿನೀ ॥ 23 ॥

ಚಾಮುಂಡಿಯು(ಚಂಡೀ) ಚಿನ್ನದಕಾಂತಿಯವಳು, ಸುಂದರಾಕೃತಿಯವಳದು. ಮೂರು ಕಣ್ಣುಳ್ಳವಳು, ಯೌವನೆ, ಕುಪಿತಳಾಗಿದ್ದರೂ ಮೇಲೆ ಮಂದಹಾಸವಿರುವಂತೆ ತೋರುತ್ತಿದ್ದಾಳೆ. ಕೃಶನಡುವಿನ ಇವಳು ಸುಂದರ, ಪುಷ್ಪಸ್ತನಗಳಿಂದ ಶೋಭಿಸುತ್ತಿರುವಳು, ಇಪ್ಪತ್ತು ಬಾಹುಗಳನ್ನು ಹೊಂದಿ ಶೂಲ, ಖಡ್ಗ, ಶಕ್ತಿ, ಚಕ್ರ, ಬಾಣ, ಶಂಖ, ವಜ್ರಾಯುಧ, ಅಭಯ, ಡಮರುಗ, ಚೂರಿ ಎಂಬ ಆಯುಧಗಳನ್ನು ಬಲಗಡೆ ಮೇಲಿನಿಂದ ಕೆಳಕ್ಕೆ ಬರುವ ಕ್ರಮದಲ್ಲಿ ಧರಿಸಿರುವಳು. ಎಡಭಾಗದ ಹತ್ತು ಕೈಗಳಲ್ಲಿ ಕ್ರಮವಾಗಿ ನಾಗ, ಪಾಶ, ಗುರಾಣಿ, ಕೊಡಲಿ, ಅಂಕುಶ, ಬಿಲ್ಲು, ಘಂಟೆ, ಧ್ವಜ, ಗದೆ ಮತ್ತು ಕನ್ನಡಿಯನ್ನು ಹಿಡಿದಿರುವಳು. ಇವಳ ಕಾಲಿನ ಕೆಳಗೆ ಕಡಿದ ತಲೆಯುಳ್ಳ ಕೋಣದಿಂದ ಉದ್ಭವಿಸಿದ ಮನುಷ್ಯಾಕೃತಿಯು ಹೆದರಿ ಕೈಯನ್ನು ಮೇಲೆತ್ತಿದೆ. ಅವನ ಹುಬ್ಬು, ಮೀಸೆ, ಕಣ್ಣುಗಳೆಲ್ಲವೂ ಕೆಂಪಾಗಿವೆ. ದೇವಿಯ ವಾಹನವಾದ ಸಿಂಹವು ಅವನನ್ನು ಕಬಳಿಸುತ್ತಿದೆ. ಅವನ ಕತ್ತನ್ನು ಪಾಶವು ಬಿಗಿಯಾಗಿ ಸುತ್ತಿದೆ. ಚಾಮುಂಡಿಯು ಎಡಗಾಲನ್ನು ಸಿಂಹದ ಮೇಲಿಟ್ಟು ಬಲಗಾಲಿನಿಂದ ಆ ರಾಕ್ಷಸನನ್ನು ಮೆಟ್ಟಿ ನಿಂತಿದ್ದಾಳೆ. ಶಸ್ತ್ರಗಳನ್ನು ಎತ್ತಿಹಿಡಿದಿರುವ ಚಾಮುಂಡಿಯು ಸಮಸ್ತ ಶತ್ರುವಿನಾಶಿನಿ.

ಮುಮ್ಮಡಿಯವರು ಚಿತ್ರಕಲಾವಿದರಿಗೆ ಪ್ರತಿದೇವತೆಯ ವರ್ಣನೆಯನ್ನು ಮಾಡಿದ ನಂತರ, ಆಯಾದೇವತೆಗಳನ್ನು ಪೂರ್ಣವಾಗಿ ಕಲ್ಪಿಸಿಕೊಂಡು ಚಿತ್ರಕಲಾವಿದರು ರೇಖಾ ಚಿತ್ರಗಳನ್ನು ಸಿದ್ಧಮಾಡಿಕೊಂಡು ಅವುಗಳಿಗೆ ಬಣ್ಣವನ್ನು ತುಂಬಿಸುತ್ತಿದ್ದರು. ಹೀಗಾಗಿ ಶ್ರೀತತ್ತ್ವನಿಧಿಯನ್ನು ಸಿದ್ಧಪಡಿಸಲು ಹಲವಾರು ವರ್ಷಗಳು ಹಿಡಿದಿರಬಹುದು. ಮುಮ್ಮಡಿಯವರ ಕಾಲದಲ್ಲಿ ಚಿತ್ರಕಲೆಗೆ ಸಿಕ್ಕಷ್ಟು ಪ್ರೋತ್ಸಾಹ ಮತ್ತಾರ ಕಾಲದಲ್ಲಿಯೂ ಲಭಿಸಲಿಲ್ಲ. ಚಿತ್ರಕಲೆಯಲ್ಲಿ ಸಿದ್ಧಹಸ್ತರಾದ ಜಾವಗಲ್ಲು ನರಸಿಂಹಯ್ಯ, ವೀರಣ್ಣ, ಅಳಸಿಂಗ್ರಯ್ಯ, ತಿಪ್ಪಣ್ಣ, ತಂಜಾವೂರು ಕೊಂಡಯ್ಯ ಮೊದಲಾದ ಚಿತ್ರಕಾರರು ಅಂದಿನ ದಿನಗಳಲ್ಲಿ ಪ್ರಸಿದ್ಧರಾಗಿದ್ದರು. ಮುಮ್ಮಡಿಯವರು ರಚಿಸಿರುವ ಸಾರಸಂಗ್ರಹ ಭಾರತವೆಂಬ ನಾಟ್ಯಶಾಸ್ತ್ರಾಧಾರಿತ ಕೃತಿಯಲ್ಲಿ ಎಪ್ಪತ್ತು ವರ್ಣಚಿತ್ರಗಳೂ, ಅಭಿನಯದ ಹಸ್ತಮುದ್ರೆಗೆ ಸಂಬಂಧಿಸಿದಂತೆ ತೊಂಬತ್ತು ರೇಖಾಚಿತ್ರಗಳೂ ಇವೆ. ಸ್ವರಚೂಡಾಮಣಿ, ಸೌಗಂಧಿಕಾಪರಿಣಯ, ದೇವೀಮಹಾತ್ಮ್ಯೆ, ಭರತಸಾರಸಂಗ್ರಹ ಇವುಗಳಲ್ಲೂ ಸುಂದರ ವರ್ಣಚಿತ್ರಗಳಿವೆ. ಮುಮ್ಮಡಿಯವರ ಕಾಲದಲ್ಲಿನ ಚಿತ್ರಸಂಪ್ರದಾಯದ ಸವಿಮರ್ಶ ವಿವರಣೆಯನ್ನು ಹಂಪೆಯ

ಕನ್ನಡ ವಿಶ್ವವಿದ್ಯಾವಿಲಯದಿಂದ ಪ್ರಕಟವಾಗಿರುವ ಶ್ರೀ ಎಸ್.ಕೆ. ರಾಮಚಂದ್ರರಾಯರು ಸಂಪಾದಿಸಿರುವ, ಸ್ವರಚೂಡಾಮಣಿಯ ಪೀಠಿಕೆಯಲ್ಲಿ ವಿಸ್ತಾರವಾಗಿ ನೀಡಲಾಗಿದೆ.

ಶ್ರೀತತ್ತ್ವನಿಧಿಯ ಒಟ್ಟು ನವನಿಧಿಗಳಲ್ಲಿ ಬರುವ ವಿಷಯಗಳನ್ನು ಅತಿಸಂಕ್ಷಿಪ್ತವಾಗಿ ಶಕ್ತಿನಿಧಿಯ ಪ್ರಾಸ್ತಾವಿಕ ಶ್ಲೋಕಗಳಲ್ಲೇ ಸೂಚಿಸಲಾಗಿದೆ.

ಪ್ರಥಮನಿಧಿಯಾದ ಶಕ್ತಿನಿಧಿಯಲ್ಲಿ ಚಾಮುಂಡಾದಿ ಮಹಾಶಕ್ತಿಸ್ವರೂಪಿಣಿಯರಾದ ಸ್ತ್ರೀ ದೇವತೆಗಳ ವರ್ಣನೆಯನ್ನು ಧ್ಯಾನಶ್ಲೋಕಗಳಲ್ಲಿ ಮಾಡಲಾಗಿದೆ.

ಎರಡನೆಯ ವಿಷ್ಣುನಿಧಿಯು ವಿಷ್ಣುವಿನ ವಿವಿಧ ಮೂರ್ತಿಸ್ವರೂಪಗಳ ಧ್ಯಾನಮಯವರ್ಣನೆಗೆ ಸೀಮಿತವಾಗಿದೆ.

ಮೂರನೆಯ ಶಿವನಿಧಿಯಲ್ಲಿ ಶಿವ-ಶೈವಾದಿಮೂರ್ತಿಗಳ ಸ್ವರೂಪವರ್ಣನೆಗೆ ಸಂಬಂಧಪಟ್ಟ ಧ್ಯಾನಶ್ಲೋಕಗಳಿವೆ.

ನಾಲ್ಕನೆಯ ಬ್ರಹ್ಮನಿಧಿಯಲ್ಲಿ ಬ್ರಹ್ಮ-ಇಂದ್ರಾದಿ ದೇವತೆಗಳ ಸ್ವರೂಪ ನಿರೂಪಣೆಗೆ ಸಂಬಂಧಿಸಿದ ಧ್ಯಾನಶ್ಲೋಕಗಳಿವೆ.

ಐದನೆಯ ಗ್ರಹನಿಧಿಯಲ್ಲಿ ಗ್ರಹ-ನಕ್ಷತ್ರ-ಕಾಲಾದಿಗಳಿಗೆ ಸಂಬಂಧಿಸಿದಂತೆ ಧ್ಯಾನಶ್ಲೋಕಗಳಿವೆ.

ಆರನೆಯ ವೈಷ್ಣವನಿಧಿಯಲ್ಲಿ ಪ್ರಸಿದ್ಧ ವಿಷ್ಣುಕ್ಷೇತ್ರಗಳ-ಶಾಲಿಗ್ರಾಮಶಿಲೆಯ ಸ್ವರೂಪಾದಿಗಳ ವರ್ಣನೆಯನ್ನು ಮಾಡಲಾಗಿದೆ.

ಏಳನೆಯದಾದ ಶೈವನಿಧಿಯಲ್ಲಿ ಶಿವಕ್ಷೇತ್ರ-ಶಿವಲಿಂಗಾದಿ ಲಕ್ಷಣವನ್ನು ಮಾಡಲಾಗಿದೆ.

ಎಂಟನೆಯ ಆಗಮನಿಧಿಯಲ್ಲಿ ನಿಗಮ-ಆಗಮ ತಂತ್ರಗಳ ಲಕ್ಷಣವನ್ನು ಧ್ಯಾನಮಯ ಶ್ಲೋಕಗಳಲ್ಲಿ ಮಾಡಲಾಗಿದೆ.

ಒಂಬತ್ತನೆಯದಾದ ಕೌತುಕನಿಧಿಯಲ್ಲಿ ಸಂಖ್ಯಾಲಿಪಿಯೇ ಮೊದಲಾದ ಪ್ರಮುಖ ಕೌತುಕ(ಆಟ)ಗಳಿವೆ.

ಶಕ್ತಿನಿಧಿ: ಶಕ್ತಿನಿಧಿಯಲ್ಲಿ ಶಕ್ತಿದೇವತೆಯ(ಪಾರ್ವತಿಯ)ವಿವಿಧ ಸ್ವರೂಪಗಳನ್ನು ವರ್ಣಿಸುವ ಧ್ಯಾನಶ್ಲೋಕಗಳಿವೆ. ಶಕ್ತಿಯ ಉಪಾಸನೆ ನಮ್ಮ ದೇಶದಲ್ಲಿ ಬಹಳ ಹಿಂದಿನಿಂದಲೂ ರೂಢಿಯಲ್ಲಿದ್ದು ಶಾಕ್ತ-ಸಂಪ್ರದಾಯ ಪ್ರಾಚೀನ ಸಂಪ್ರದಾಯಗಳಲ್ಲಿ ಒಂದಾಗಿದೆ. ಮುಮ್ಮಡಿಯವರು ತಮ್ಮ ಕುಲದೈವವಾದ ಚಾಮುಂಡೇಶ್ವರಿಯ ಉಪಾಸನೆಗೆ ಸಂಬಂಧಿಸಿದಂತೆ ವಿವಿಧ ರೂಪಾಕೃತಿಗಳ ಧ್ಯಾನಮಯ ಶ್ಲೋಕಗಳನ್ನು ಹಲವಾರು ಆಕರಗಳಿಂದ ಸಂಗ್ರಹಿಸಿ ಸಚಿತ್ರ ವರ್ಣನೆಯನ್ನು ಶಕ್ತಿನಿಧಿಯಲ್ಲಿ ಮಾಡಿರುವರು. ಲೋಕಸೃಷ್ಟಿಗೆ ಕಾರಣಳಾದ ಜಗನ್ಮಾತೆ ಶಕ್ತಿಯು ಚಾಮುಂಡಾಂಬಿಕೆಯಾಗಿಯೂ, ಮಹಾಕಾಳಿಯಾಗಿಯೂ, ಮಹಾಲಕ್ಷ್ಮಿಯಾಗಿಯೂ, ಮಹಾಸರಸ್ವತಿಯಾಗಿಯೂ, ರಾಜರಾಜೇಶ್ವರಿಯಾಗಿಯೂ, ಶ್ರೀಚಕ್ರದಲ್ಲಿ ನೆಲೆಸಿರುವ ಲಲಿತಾಂಬಿಕೆಯಾಗಿಯೂ ವಿರಾಜಿಸಿದ್ದಾಳೆ.

ಶಕ್ತಿನಿಧಿಯಲ್ಲಿ, ಪುರಾಣ-ಆಗಮಾದಿ ಗ್ರಂಥಗಳಲ್ಲಿ ಬರುವ ನೂರಾರು ಸ್ತ್ರೀದೇವತೆಯರೆಲ್ಲರನ್ನು ಧ್ಯಾನಶ್ಲೋಕಗಳಲ್ಲಿ ವರ್ಣಿಸಿ ಚಿತ್ರಸಹಿತ ನೀಡಲಾಗಿದೆ. ದುರ್ಗಾಧ್ಯಾನ, ತುಳಸೀಧ್ಯಾನ, ಮೂಲಾಧಾರಾದೀ ಸಪ್ತಪೀಠೇಶ್ವರಿಯರು, ಪಾರ್ವತಿಯ ವಿವಿಧ ರೂಪಗಳು, ಚತುಃಷಷ್ಠಿಕಲಾದೇವಿಯರು, ವಾಗೀಶ್ವರಿಯ ವಿವಿಧ ರೂಪಗಳು, ಯೋಗಿನಿಯರು ಇತ್ಯಾದಿಗಳ ಧ್ಯಾನಮಯವರ್ಣನೆಯಿದೆ. ಅಕಾರದಿಂದ ಕ್ಷಕಾರಪರ್ಯಂತ ವರ್ಣಮಾಲೆಯಲ್ಲಿನ ಐವತ್ತೊಂದು ಅಕ್ಷರಗಳನ್ನೂ ದೇವತೆಯರೆಂದು ಕಲ್ಪಿಸಿ ಧ್ಯಾನಶ್ಲೋಕಗಳನ್ನು ಸಿದ್ಧಶಾಬರತಂತ್ರ ಮೊದಲಾದ ಗ್ರಂಥಗಳನ್ನಾಧರಿಸಿ ನೀಡಲಾಗಿದೆ.

ಶ್ರೀ ಚಕ್ರದ ಅಧಿದೇವತೆ ಲಲಿತಾಂಬಿಕೆಯ ಭವ್ಯವರ್ಣನೆಯಲ್ಲಿಯೇ ಭಾರತದ ಅಂದಿನ ದಿನಗಳ ಖನಿಜ ಸಂಪತ್ತು, ಅಮೂಲ್ಯ ರತ್ನಗಳು, ವಾಹನ ರೂಪದಲ್ಲಿ ಮೃಗ-ಪಕ್ಷಿಗಳ ಸಂಪತ್ತು ಮೊದಲಾದ ಹಲವಾರು ವಿಷಯಗಳ ಮಾಹಿತಿಯಿದ್ದು

ಶಕ್ತಿನಿಧಿಯಲ್ಲಿ ಇದೇ ವಿಶೇಷ ವರ್ಣನೆ ಎನಿಸಿದೆ. ಇತರ ದೇವಿಯರ ವರ್ಣನೆಯಲ್ಲಿ ಪ್ರಾಸಂಗಿಕವಾಗಿ ಯೋಗಶಾಸ್ತ್ರಕ್ಕೆ ಸಂಬಂಧಿಸಿದ ಅಣಿಮಾದಿ ಅಷ್ಟಸಿದ್ಧಿಗಳ ವರ್ಣನೆಯು, ಮೂಲಾಧಾರಾದಿ ಚಕ್ರಗಳ ವರ್ಣನೆಯೂ ಇವೆ. ಮತ್ತೊಂದು ವಿಶೇಷವೆಂದರೆ ಬಹಳಷ್ಟು ದೇವಿಯರ ಕೈಗಳಲ್ಲಿ ಕನ್ನಡಿಯೂ ಇರುವಂತೆ ವರ್ಣಿತವಾಗಿದ್ದು ಸ್ತ್ರೀಯರ ಸ್ವಭಾವದ ಸಹಜತೆಯನ್ನೂ ತರಲಾಗಿದೆ.

ಶಕ್ತಿನಿಧಿಯ ಒಟ್ಟು ಸುಮಾರು ಸಾವಿರದ ಮುನ್ನೂರು ಶ್ಲೋಕಗಳ ಹರವಿನಲ್ಲಿ ಹುದುಗಿರುವ ವಿಷಯಗಳು ಅಪಾರ. ದೇವಿಯರ ವರ್ಣನೆಗಳಿಗೆ ಹೊಂದಿಕೊಂಡಂತೆ ಅವರ ಆಯುಧವಿಶೇಷಗಳ, ವಸ್ತ್ರಾಭರಣಗಳ, ಪುರಾಣಪ್ರಸಿದ್ಧವಾದ ಹಲವಾರು ವಿಷಯಗಳನ್ನು ಕಾಣಬಹುದಾಗಿದೆ. ಅಂತಹ ಕೆಲವನ್ನು ಮಾತ್ರ ಸಂಕ್ಷಿಪ್ತವಾಗಿ ನೀಡಲಾಗಿದೆ.

ಆಯುಧಗಳು: ಖಡ್ಗ, ಚಕ್ರ, ಗದೆ, ಶೂಲ, ಬಿಲ್ಲು, ಪರಿಘ, ಗುರಾಣಿ, ಪರಶು, ವಜ್ರಾಯುಧ, ನೇಗಿಲು, ಒನಕೆ, ಛುರಿಕಾ(ಚೂರಿ) ಪಾಶ, ಶಕ್ತ(ಈಟಿ) ಮೊದಲಾದವು.

ಆಭರಣಗಳು: ಹಾರ, ಒಡ್ಯಾಣ, ಕಿರೀಟ, ಕಟಕ, ಕುಂಡಲ, ಅಂಗದ, ಕೇಯೂರ, ನೂಪುರ, ಅರ್ಧಚಂದ್ರಾಕೃತಿಯ ತಲೆಗೆ ಧರಿಸುವ ಆಭರಣ.

ಪುಷ್ಪಗಳು: ಕಮಲದ ವಿವಿಧ ಬಗೆಗಳು, ಜಪಾಕುಸುಮ(ದಾಸವಾಳ), ದಾಳಿಂಬೆಯ ಹೂವು ಇತ್ಯಾದಿ.

ವಿಶೇಷರತ್ನಗಳು: ಪುಷ್ಯರಾಗ, ಪದ್ಮರಾಗ, ಗೋಮೇದಿಕ, ವಜ್ರ, ವೈಢೂರ್ಯ, ಮುತ್ತು, ಮರಕತ, ನೀಲ, ಇಂದ್ರನೀಲ, ಪಚ್ಚೆ, ಹವಳ.

ಲೋಹಗಳು: ಕಾಲಾಯಸ (ಕಬ್ಬಿಣ), ಕಂಚು (ಮಿಶ್ರಲೋಹ), ತಾಮ್ರ, ಸೀಸ, ಹಿತ್ತಾಳೆ(ಮಿಶ್ರಲೋಹ), ಪಂಚಲೋಹ, ಬೆಳ್ಳಿ, ಚಿನ್ನ.

ಧೂಪ-ಸುಂಗಧಗಳು: ಅಗರು, ಚಂದನ, ಕಸ್ತೂರಿ, ಕರ್ಪೂರ.

ಸಂಗೀತವಾದ್ಯಗಳು: ಶಂಖ, ಘಂಟೆ, ಡಮರುಗ, ವೀಣೆ, ರುದ್ರವೀಣೆ, ಮೃದಂಗ, ಕೊಳಲು ಮೊದಲಾದವು ಪ್ರಮುಖವಾಗಿವೆ.

ಶಿವನಿಧಿ: ಪುರಾಣ, ಆಗಮ ಮುಂತಾದ ವಿವಿಧ ಮೂಲಗಳಿಂದ ಸಂಗ್ರಹಿಸಿದ ಶಿವನ ನಾನಾ ಸ್ವರೂಪಗಳನ್ನು ವರ್ಣಿಸುವ ಧ್ಯಾನಶ್ಲೋಕಗಳು ಶಿವನಿಧಿಯಲ್ಲಿ ಅಡಕವಾಗಿವೆ. ಶ್ವೇತವರ್ಣದ ಮಹಾ ಕೈಲಾಸ ಮೂರ್ತಿಯಾಗಿ ಮೂವತ್ತಾರು ಭುಜಗಳ ಅಘೋರ ಮೂರ್ತಿಯಾಗಿ, ಮಹಾಕಾಳೀ ಸಮೇತನಾಗಿ ನೀಲವರ್ಣದಿಂದ ಶೋಭಿಸುವ ಮಹಾಕಾಲನಾಗಿ, ಶುಭ್ರವರ್ಣದ ಅಮೃತಮೃತ್ಯುಂಜಯನಾಗಿ, ಅರುಣವರ್ಣದ ನೀಲಕಂಠನಾಗಿ, ಶ್ವೇತವರ್ಣದ ರುದ್ರಮಹೇಶ್ವರನಾಗಿ ಶೋಭಿಸುವ ಶಿವನ ಸುಂದರ-ಭಯಂಕರಮೂರ್ತಿಗಳ ವರ್ಣನೆಯನ್ನು ಅದ್ಭುತರಮಣೀಯ ಚಿತ್ರಗಳೊಡನೆ ಮಾಡಲಾಗಿದೆ. ಶಿವನ ಪಂಚಮೂರ್ತಿಗಳಾದ ಸದ್ಯೋಜಾತ, ವಾಮದೇವ, ಅಘೋರ, ತತ್ಪುರುಷ, ಈಶಾನ ಸ್ವರೂಪ ವರ್ಣನೆಗಳಿವೆ. ಹಿಂದೂ ಪುರಾಣಗಳಲ್ಲಿ ಶಿವನು ನೃತ್ಯಾಭಿಮಾನಿದೇವತೆ, ದೇವಗಾಯಕನಾದ ತುಂಬುರನ ಗಾನಕ್ಕೆ ನರ್ತಿಸುವ ನಟರಾಜಶಿವನನ್ನು, ಭವಾನಿಯ ನಾಟ್ಯವಿಲಾಸವನ್ನು ಇಲ್ಲಿ ಮನೋಜ್ಞವಾಗಿ ಬಣ್ಣಿಸಲಾಗಿದೆ. ಜಗತ್ತಿನ ಸೃಷ್ಟಿ ಪ್ರಕ್ರಿಯೆಗೆ ಶಿವನ ತಾಂಡವ ನೃತ್ಯವೇ ನಾಂದಿ. ಭಾರತೀಯ ನೃತ್ಯಕಲೆಯ ಅಧಿದೇವತೆಗಳಾದ ಶಿವ-ಶಿವಾಣಿಯರ ಸಪ್ತವಿಧತಾಂಡವಗಳಾದ ಆನಂದತಾಂಡವ, ಸಂಧ್ಯಾತಾಂಡವ, ಉಮಾತಾಂಡವ, ಗೌರೀತಾಂಡವ,

ಕಾಲಿಕಾತಾಂಡವ, ತ್ರಿಪುರತಾಂಡವ, ಸಂಹಾರತಾಂಡವವೆಂಬ ಪ್ರಕಾರಗಳನ್ನು ವರ್ಣಿಸಲಾಗಿದೆ. ಭಸ್ಮಲೇಪಿತನಾಗಿ, ಡಮರುಗವನ್ನು ಕೈಯಲ್ಲಿ ನುಡಿಸುತ್ತಾ ಭರದಿಂದ ನರ್ತಿಸುವ ನಟರಾಜನನ್ನು ಕಲ್ಪಿಸಿಕೊಂಡು ಚಿತ್ರದಲ್ಲಿ ಮೂಡಿಸುವಲ್ಲಿ ಕಲಾವಿದ ತನ್ನ ಕೌಶಲ್ಯವನ್ನೆಲ್ಲಾ ಧಾರೆಯೆರೆಯಲೇಬೇಕಲ್ಲವೆ? ಭವ, ಶರ್ವ ಮೊದಲಾದ ಅಷ್ಟಮೂರ್ತಿಗಳ, ಶಂಭು ಪಿನಾಕಿಯೇ ಮೊದಲಾದ ಏಕಾದಶರುದ್ರರ, ಈಶ್ವರನ ಐವತ್ತೈದು ಲೀಲಾಮೂರ್ತಿಗಳ, ಶಿವಪಾರ್ವತಿಯರ ವಿವಾಹ ಪ್ರಕರಣದಲ್ಲಿ ಕಲ್ಯಾಣಸುಂದರನಾಗಿ ಶೋಭಿಸುವ ವರ್ಣನೆಗಳಿವೆ. ಸತಿಪತಿಯರ ಅದ್ವೈತವನ್ನು ಸಾರುವ ಶಿವನ ವಿಶೇಷಮೂರ್ತಿಯಾದ ಅರ್ಧನಾರೀಶ್ವರನ ಚಿತ್ರಣವು ಮನೋಹರವಾಗಿ ಮೂಡಿಬಂದಿದೆ. ಹೀಗೆ ಜಗದ ಮಾತಾ-ಪಿತರನ್ನು ಅನುಗುಣವಾದ ಧ್ಯಾನಶ್ಲೋಕಗಳಲ್ಲಿ ಚಿತ್ರಗಳೊಡನೆ ಬಣ್ಣಿಸಿರುವ ಮುಮ್ಮಡಿಯವರು ಶಿವಪುತ್ರರನ್ನು ಮರೆತಿಲ್ಲ. ಗಣಪತಿಯ ಅಪೂರ್ವ ಹಾಗೂ ಅಪರೂಪದ ಮೂರ್ತಿಗಳನ್ನು ಮೂವತ್ತೆರಡು ಧ್ಯಾನಶ್ಲೋಕಗಳಲ್ಲಿ ವರ್ಣಿಸಲಾಗಿದ್ದು ಅವುಗಳಿಗನುಗುಣವಾಗಿ ಅದ್ಭುತವಾದ ಮೂವತ್ತೆರಡು ಚಿತ್ರಗಳನ್ನು ಬಿಡಿಸಲಾಗಿದೆ. ಗಣಪತಿಯ ಸೋದರನಾದ ಸುಬ್ರಹ್ಮಣ್ಯನನ್ನು ಅಗ್ನಿಜಾತಸುಬ್ರಹ್ಮಣ್ಯಾದಿ ಹದಿನೇಳು ಬಗೆಯ ಮೂರ್ತಿಗಳಿಗೆ ಸಂಬಂಧಿಸಿದಂತೆ ವರ್ಣಿಸಲಾಗಿದೆ. ಅಷ್ಟವಿಧ ಭೈರವರೂ ಸಹ ವರ್ಣಿಸಲ್ಪಟ್ಟಿದ್ದಾರೆ.

ಬ್ರಹ್ಮನಿಧಿ: ನಾಲ್ಕನೆಯದಾದ ಬ್ರಹ್ಮನಿಧಿಯಲ್ಲಿ ಚತುರ್ಮುಖ ಬ್ರಹ್ಮ, ವಿದ್ಯಾಧಿದೇವತೆಯಾದ ಸರಸ್ವತಿ, ಆದ್ಯ, ಲೋಕಪಾಲ, ಪ್ರಜಾಪತಿ, ವಿಧಿ, ವಿಶ್ವಕರ್ಮರೆಂಬ ಪಂಚವಿಧ ಬ್ರಹ್ಮರನ್ನು ವರ್ಣಿಸುವ ಧ್ಯಾನಶ್ಲೋಕಗಳಿವೆ. ಪುರಾಣ ಸಾಹಿತ್ಯದಲ್ಲಿ ಪ್ರಸಿದ್ಧರಾದ ಸಪ್ತರ್ಷಿಗಳು, ಪುಣ್ಯಪಾಪ ಪುರುಷರ ಸ್ವರೂಪ ವರ್ಣನೆಗಳಿವೆ. ಈ ಭಾಗವಲ್ಲಿನ ಇನ್ನೊಂದು ವಿಶೇಷವೇನೆಂದರೆ ನಾಲ್ಕು ವೇದಗಳಿಗೂ ಆಕಾರವನ್ನು ಕಲ್ಪಿಸಿ ಕ್ರಮವಾಗಿ ಅವರುಗಳಿಗೆ ಗೋತ್ರಾದಿಗಳನ್ನೂ, ಪತ್ನಿಯರನ್ನೂ ಕಲ್ಪಿಸಲಾಗಿದೆ. ಆರು ವೇದಾಂಗಗಳನ್ನು, ಆಯುರ್ವೇದ ಮೊದಲಾದ ಉಪವೇದಗಳನ್ನು, ಪ್ರಮುಖದರ್ಶನಗಳನ್ನೂ, ಭರತಶಾಸ್ತ್ರ, ಶೈವ ವೈಷ್ಣವ ಪಂಥಗಳಿಗೆ ಸಂಬಂಧಿಸಿದಂತೆ ಪಾಶುಪತಶಾಸ್ತ್ರ, ಪಾಂಚರಾತ್ರ ಮೊದಲಾದವನ್ನು ಈ ನಿಧಿಯಲ್ಲಿ ವರ್ಣಿಸಲಾಗಿದೆ. ಪುರಾಣಪ್ರಸಿದ್ಧ ವರ್ಣನೆಗಳಾದ ದಶದಿಕ್ಕುಗಳು, ಅಷ್ಟದಿಗ್ಗಜಗಳು, ಹದಿನಾಲ್ಕು ಮನುಗಳು, ಮೃತ್ಯುವನ್ನು ಗೆದ್ದು ಚಿರಂಜೀವಿಗಳೆಂದು ಪ್ರಸಿದ್ಧರಾಗಿರುವ ಅಶ್ವತ್ಥಾಮ, ಬಲಿ, ವ್ಯಾಸ, ಹನುಮಾನ್, ವಿಭೀಷಣ, ಕೃಪ, ಪ್ರಹ್ಲಾದ, ಮಾರ್ಕಂಡೇಯರ ವರ್ಣನೆಗಳೂ, ಮರೀಚಿ ಮೊದಲಾದ ಋಷಿಗಳಿಗೂ ಸಂಬಂಧಿಸಿದ ವರ್ಣನೆಗಳಿವೆ.

ಬ್ರಹ್ಮನಿಧಿಯಲ್ಲಿ (ಹಸ್ತಪ್ರತಿಯಲ್ಲಿ 159-188) ಸಂಗೀತಶಾಸ್ತ್ರಕ್ಕೆ ಸಂಬಂಧಿಸಿದ ವಿಶೇಷ ವಿಷಯಗಳಾದ ಸ್ವರ, ರಾಗ-ತಾಳಗಳಿಗೂ ಸಹ ರೂಪಕಲ್ಪನೆಯಿದ್ದು, ರಮಣೀಯ ಚಿತ್ರಗಳೊಡನೆ ಬಣ್ಣಿಸಲಾಗಿದೆ. ಈ ಭಾಗವನ್ನು ಮುಮ್ಮಡಿಯವರು ತಮ್ಮ ಮತ್ತೊಂದು ಕೃತಿಯಾದ ಸ್ವರಚೂಡಾಮಣಿಯನ್ನು ಆಧರಿಸಿ ರಚಿಸಿದ್ದು "ಅಸ್ಮತ್‌ಕೃತಸ್ವರಚೂಡಾಮಣಿಗ್ರಂಥರೀತ್ಯಾ" ಎಂಬುದಾಗಿ ಇದರ ಪ್ರಾರಂಭದಲ್ಲಿಯೇ ಹೇಳಿದ್ದಾರೆ. ಛಂದಸ್ಸು, ಅಲಂಕಾರಗಳ ಸಂಗ್ರಹ ನಿರೂಪಣೆಯೂ ಸಹ ಇಲ್ಲಿಯೇ ಬಂದಿದೆ.

ಗ್ರಹನಿಧಿ: ಐದನೆಯ ಭಾಗವಾದ ಗ್ರಹನಿಧಿಯು ಸಮಗ್ರ ಭಾರತೀಯ ಜ್ಯೋತಿಶ್ಶಾಸ್ತ್ರದ ಸಾರಸಂಗ್ರಹವೋ ಎಂಬಂತಿದ್ದು ಇಡೀ ಗ್ರಂಥದಲ್ಲಿ ಇದೇ ದೊಡ್ಡದೆನಿಸಿದೆ. ಪ್ರಯೋಗರತ್ನ, ನಕ್ಷತ್ರಚೂಡಾಮಣಿ, ಸೂರ್ಯಸಿದ್ಧಾಂತ, ಜ್ಯೋತಿಷರತ್ನಾಕರ, ಜಾತಕಾಭರಣವೇ ಮೊದಲಾದ ಪ್ರಸಿದ್ಧಗ್ರಂಥಗಳನ್ನು ಆಧರಿಸಿ ಈ ಭಾಗವನ್ನು ರಚಿಸಲಾಗಿದೆ.

ಸೂರ್ಯ, ಚಂದ್ರಾದಿಗ್ರಹಗಳನ್ನು, ನಕ್ಷತ್ರಗಳನ್ನು, ಯುಗಾದಿಕಾಲಸ್ವರೂಪವನ್ನು, ಅರವತ್ತು ಸಂವತ್ಸರಗಳು, ಆರು ಋತುಗಳು, ಭೂಮ್ಯಾದಿ ಗ್ರಹಗಳ ಚಲನೆಯ ಕಾರಣದಿಂದ ಉಂಟಾಗುವ ಉತ್ತರಾಯಣ, ದಕ್ಷಿಣಾಯನಗಳಿಗೂ ಅಧಿದೇವತೆಗಳನ್ನು ಕಲ್ಪಿಸಿ ಧ್ಯಾನಶ್ಲೋಕಗಳನ್ನು ರಚಿಸಲಾಗಿದೆ. ಆಯಾಯ ಮಾಸಾದಿ ಕಾಲಗಳಿಗನುಗುಣವಾಗಿ

ಮಾಡಬೇಕಾದ ಕರ್ತವ್ಯಗಳನ್ನೂ, ವರ್ಜಿಸಬೇಕಾದ ಕ್ರಿಯೆಗಳನ್ನೂ, ಸಂದರ್ಭಗಳಿಗನುಗುಣವಾಗಿ ಮಾಡಬೇಕಾದ ದಾನವಿವರಗಳನ್ನೂ, ಅವುಗಳಿಂದ ಲಭಿಸುವ ಫಲಗಳನ್ನೂ ವಿವರಿಸಲಾಗಿದೆ. ಪ್ರಭವಾದಿ ಸಂವತ್ಸರಗಳಲ್ಲಿ ಜನಿಸುವ ವ್ಯಕ್ತಿಗಳ ಸ್ವಭಾವವನ್ನು ಜಾತಕಾಭರಣವೆಂಬ ಗ್ರಂಥದಲ್ಲಿರುವಂತೆ ವಿವರಿಸಲಾಗಿದೆ. ಇಷ್ಟಲ್ಲದೆ ಕ್ಷುದ್ರ ಸ್ವರೂಪರಾದ ಕಾಳರಾಹು, ಅಪಸ್ಮಾರ, ಮಹಾಕಾಲ, ಮೃತ್ಯು ದೇವತೆ, ಕೃತ್ಯಾ ಇತ್ಯಾದಿ ದೇವತೆಗಳ ಸ್ವರೂಪ ಚಿತ್ರಣವೂ ಇದೆ. ಒಟ್ಟಿನಲ್ಲಿ ಜ್ಯೋತಿಶ್ಶಾಸ್ತ್ರದಲ್ಲಿರುವ ಸಮಸ್ತವಿಚಾರಗಳನ್ನೂ ಇಲ್ಲಿ ಸಂಕ್ಷಿಪ್ತವಾಗಿ ನಿರೂಪಿಸಲಾಗಿದೆ.

ವೈಷ್ಣವನಿಧಿ: ಆರನೇಯ ವೈಷ್ಣವನಿಧಿಯು ಭಾರತದ ಮೂಲೆ ಮೂಲೆಯಲ್ಲಿರುವ ಪ್ರಸಿದ್ಧ ವೈಷ್ಣವಕ್ಷೇತ್ರಗಳ, ಯಾತ್ರಾ ಸ್ಥಳಗಳ ವಿವರಣಾತ್ಮಕ ಗಣಿಯಂತಿದೆ. ಬ್ರಹ್ಮಾಂಡಪುರಾಣದಲ್ಲಿ ಬರುವ ಲಕ್ಷ್ಮೀ-ನಾರಾಯಣರ ಸಂವಾದವನ್ನು ಆಧರಿಸಿ ವಿಷ್ಣುಭಕ್ತರಿಗೆ ಪವಿತ್ರವಾದ ನೂರಹದಿನಾರು ಯಾತ್ರಾಸ್ಥಳಗಳ ಸಮಗ್ರ ಪಟ್ಟಿಯನ್ನೇ ನೀಡಲಾಗಿದೆ. ಪ್ರಸಿದ್ಧ ವೈಷ್ಣವಕ್ಷೇತ್ರಗಳಾಗಿ ನೂರೆಂಟು ತಿರುಪತಿಗಳನ್ನೂ, ಶ್ರೀರಂಗವೇ ಮೊದಲಾದ ಅಷ್ಟಕ್ಷೇತ್ರಗಳನ್ನೂ ವರ್ಣಿಸಲಾಗಿದೆ. ಪ್ರತಿಯೊಂದು ಪವಿತ್ರಕ್ಷೇತ್ರದ ಹೆಸರು, ಅಲ್ಲಿನ ದೇವರುಗಳ, ಅವರೊಡನಿರುವ ದೇವಿಯರ ಹೆಸರುಗಳು, ದೇವಸ್ಥಾನಕ್ಕೆ ನಿರ್ಮಿಸಿರುವ ಅಷ್ಟಾಂಗವಿಮಾನ, ತಪ್ತಕಾಂಚನವಿಮಾನ, ಗೋವರ್ಧನವಿಮಾನವೇ ಮೊದಲಾದ ವಿಮಾನಸ್ವರೂಪವನ್ನು, ದೇವಸ್ಥಾನಕ್ಕೆ ಸೇರಿದ ತೀರ್ಥಗಳ ಹೆಸರುಗಳನ್ನು, ದೇವರು ಅಭಿಮುಖವಾಗಿರುವ ದಿಕ್ಕು, ದೇವರು ನಿಂತಿರುವ, ಕುಳಿತಿರುವ ಅಥವಾ ಶಯನಿಸಿರುವ ಭಂಗಿ ಮೊದಲಾದ ಸಮಸ್ತ ವಿವರಗಳನ್ನು ನೀಡಲಾಗಿದೆ. ಉದಾಹರಣೆಗೆ, ಮಧುರೆ. ಇಲ್ಲಿನ ದೇವರ ಹೆಸರು ಶ್ರೀಕೃಷ್ಣ. ಜೊತೆಗಿರುವವರು ರುಕ್ಮಿಣೀ-ಸತ್ಯಭಾಮಾದೇವಿಯರು. ಭದ್ರವೆಂಬ ವಿಮಾನ, ಯಮುನಾತೀರ್ಥ, ದೇವರ ಮೂರ್ತಿಯು ಪೂರ್ವಾಭಿಮುಖವಾಗಿ ನಿಂತಿರುವ ಭಂಗಿ. ದೇವತೆಗಳೂ ವಸುದೇವನೂ ಸೇವಾನಿರತರಾಗಿದ್ದಾರೆ.

ಶ್ರೀವೈಷ್ಣವಸಂಪ್ರದಾಯಕ್ಕೆ ಸಂಬಂಧಪಟ್ಟಂತೆ ಹನ್ನೆರಡು ಮಂದಿ ಆಳ್ವಾರರುಗಳ, ರಾಮಾನುಜರೇ ಮೊದಲಾದ ಆಚಾರ್ಯರುಗಳ ರೇಖಾಚಿತ್ರ ಸಹಿತವಾದ ವಿವರಣೆಗಳಿವೆ. ಶ್ರೀವೈಷ್ಣವಸಂಪ್ರದಾಯದ ಪವಿತ್ರಗ್ರಂಥಗಳಾದ ಪ್ರಪತ್ತಿಸೋಪಾನ, ಊರ್ಧ್ವಪುಂಡ್ರವಿಧಾನ, ಯತಿರಾಜಸಪ್ತತಿ, ತುಳಸಿಮಹಾತ್ಮ್ಯೆ, ರಾಮಾನುಜಾಚಾರ್ಯ ವಿರಚಿತ ಅಷ್ಟೋತ್ತರ ಇವುಗಳ ಸಂಪೂರ್ಣ ಪಾಠವನ್ನೇ ನೀಡಲಾಗಿದೆ. ನೃಸಿಂಹ ಪುರಾಣವನ್ನು ಆಧರಿಸಿ ನಲವತ್ತು ಶಾಲಿಗ್ರಾಮ ಲಕ್ಷಣಗಳನ್ನು ನೀಡಲಾಗಿದೆ.

ಶೈವನಿಧಿ: ಶೈವಸಂಪ್ರದಾಯಕ್ಕೆ ಸಂಬಂಧಪಟ್ಟ ಹಲವಾರು ವಿಷಯಗಳ ಸೂಕ್ತಮಾಹಿತಿ ಶೈವನಿಧಿಯಲ್ಲಿ ಅಡಕವಾಗಿದೆ. ಶಿವಭಕ್ತರಿಗೆ ಪವಿತ್ರವಾದ ನೂರಹದಿಮೂರು ಪ್ರಸಿದ್ಧ ಕ್ಷೇತ್ರಗಳ ವಿಸ್ತೃತ ವಿವರಣೆಯಿದೆ. ಲಲಿತಾಗಮ, ವಾಯವೀಯಸಂಹಿತಾ, ಶಿವರಹಸ್ಯ ಮತ್ತು ಸ್ಕಂದಪುರಾಣದಲ್ಲಿ ವೀರಮಹೇಶ್ವರಕಾಂಡ ಮೊದಲಾದ ಆಕರ ಗ್ರಂಥಗಳನ್ನು ಆಧಾರವಾಗಿಟ್ಟು ವರ್ಣಿಸಲಾಗಿದೆ. ಇಷ್ಟಲ್ಲದೆ ಪಾರ್ಥಿವಾದಿ ಲಿಂಗಭೇದಗಳನ್ನು, ಅರವತ್ತಮೂರು ಜನ "ನಾಯನಾರ್‌ಗಳೆಂದು" ಪ್ರಸಿದ್ಧರಾದ ಶಿವಭಕ್ತರನ್ನು ಅವರ ಹೆಸರು, ವರ್ಣ, ಆಶ್ರಮಧರ್ಮ, ಸ್ವಕ್ಷೇತ್ರಗಳೊಡನೆ ವರ್ಣಿಸಲಾಗಿದೆ. ಶಿವಭಕ್ತರಿಗೆ ಪವಿತ್ರವಾಗಿದ್ದು ನಿತ್ಯವೂ ಧರಿಸುವ ವಿಭೂತಿಯ ಮಹಾತ್ಮ್ಯೆ, ರುದ್ರಾಕ್ಷಿಮಹಾತ್ಮ್ಯೆ, ಅದರಿಂದ ಲಭಿಸುವ ಫಲ, ಬಿಲ್ವಪತ್ರೆಯ ಮಹಾತ್ಮ್ಯೆ, ಇವುಗಳನ್ನು ವಿವರಿಸಲಾಗಿದ್ದು ಶಿವಾಚಾರದವರಿಗೆ ಹೆಚ್ಚು ಉಪಯುಕ್ತವೆನಿಸುವ ಮಾಹಿತಿಗಳನ್ನು ಈ ಭಾಗವು ಒದಗಿಸುತ್ತದೆ. ಈ ಭಾಗದಲ್ಲಿ ಯೋಗಾಸನದ ವಿವಿಧ ಭಂಗಿಗಳ ರೇಖಾಚಿತ್ರಗಳಿವೆ.

ಆಗಮನಿಧಿ: ಅತಿ ವಿಪುಲವಾಗಿರುವ ಸಂಸ್ಕೃತಸಾಹಿತ್ಯಸಂಪತ್ತಿನ ಸಂಗ್ರಹ ನಿರೂಪಣೆಯೆ ಆಗಮನಿಧಿಯೆಂಬ ಎಂಟನೆಯ ಭಾಗದ ವಿಷಯ. ಆಗಮ ನಿಧಿಯು ರಾಮಾಯಣ, ಪುರಾಣ, ಮಹಾಭಾರತ, ಭಾಗವತ ಮೊದಲಾದವುಗಳಲ್ಲಿನ ಶ್ಲೋಕಸಂಖ್ಯೆಯನ್ನು ಎಣಿಸಿ ಹೇಳಲಾಗಿದೆ. ಇಲ್ಲಿಯೂ ಸಹ ನಾಲ್ಕುವೇದ, ಆರುವೇದಾಂಗಗಳು, ಮುಖ್ಯ ಉಪನಿಷತ್ತುಗಳು,

ಹದಿನೆಂಟು ಪುರಾಣಗಳು, ಸ್ಮೃತಿಗಳು, ಪ್ರಮುಖ ವೈಷ್ಣವಾಗಮಗಳು, ಶೈವಾಗಮಗಳ ಪ್ರಶಂಸೆಯಿದೆ. ಪಂಚಾಯತನ ಪೂಜಾ ಕ್ರಮಗಳನ್ನು ರೇಖಾಚಿತ್ರಗಳೊಡನೆ ವಿವರಿಸಲಾಗಿದೆ. ಕನ್ನಡಭಾಷೆಯಲ್ಲಿ ವಿವರಣೆಯನ್ನೂ ಬರೆಯಲಾಗಿದೆ. ಒಟ್ಟಿನಲ್ಲಿ ಸಂಸ್ಕೃತ ಸಾಹಿತ್ಯ ಚರಿತ್ರೆಯ ಜಿಜ್ಞಾಸುಗಳಿಗೆ ಎಲ್ಲಾ ಮಾಹಿತಿಯೂ ಏಕತ್ರ ದೊರೆಯುವಂತಿದೆ.

ಕೌತುಕನಿಧಿ: ಇದು ಶ್ರೀತತ್ತ್ವನಿಧಿಯ ಕೊನೆಯ ನಿಧಿ(ನವಮ ನಿಧಿ)ಯಾಗಿದ್ದು ಇಲ್ಲಿ ಬರುವ ವಿಷಯ ಇತರ ನಿಧಿಗಳಿಗಿಂತ ಸಂಪೂರ್ಣಭಿನ್ನವಾಗಿದೆ. ಕೌತುಕವೆಂದರೆ ಕುತೂಹಲ, ಹರ್ಷ, ಉತ್ಸವ, ಮನರಂಜನೆಗಾಗಿ ಆಡುತ್ತಿದ್ದ ಹಲವು ಬಗೆಯ ಆಟಗಳ ವರ್ಣನೆಯನ್ನು ಕೌತುಕನಿಧಿಯಲ್ಲಿ ವಿವರಿಸಲಾಗಿದೆ. ಈ ಭಾಗವು ಮುಮ್ಮಡಿಯವರ ಸ್ವಂತರಚನೆಯಾಗಿದ್ದು, ಸಂಸ್ಕೃತದಲ್ಲಿ ಆಟಗಳ ವಿವರಣೆಯಿದ್ದು ಕನ್ನಡದಲ್ಲಿಯೂ ಅವುಗಳಿಗೆ ವಿವರಣೆಯನ್ನೂ ನೀಡಲಾಗಿದೆ.

एतदावरणस्यैव तृतीये फलके तथा ।
सर्वसंक्षोभिणीमुद्रा सर्वविद्राविणी तथा ।। 1164
सर्वाकर्षिणिकामुद्रा मुद्रा सर्ववशङ्करी ।

सर्वोन्मादिनिका मुद्रा तथा सर्वमहाङ्कुशा ।। 1165
सर्वाखेचरिका मुद्रा सर्वबीजाख्यमुद्रिका ।
सर्वयोन्याख्यमुद्रा च मुद्रा सर्वत्रिखण्डिका ।। 1166
मुद्रादेव्य इति प्रोक्ता दशाप्यत्र समासते ।
एतासां ध्यानसादृश्यादेका मूर्तिः प्रदर्शिता ।। 1167
नाम्ना प्रकटयोगिन्यः फलकत्रयसंस्थिताः ।
एताभिस्सहिता देवी त्रिपुरा चक्रनायिका ।। 1168
सर्वसंक्षोभिणीमुद्रां वहन्तीं जगदाम्बिकाम् ।
कामेश्वरीं सर्वकालां ध्यायन्ती तत्र राजते ।। 1169
द्वितीयावरणे नाम्ना सर्वाशापरिपूरके ।
स्वरपत्राब्जसंज्ञेऽस्मिन् षोडशारैः समन्विते ।। 1170
कामाकर्षणिका चैव ऋध्याकर्षणिका तथा ।
अहङ्काराकर्षिणी च शब्दाकर्षिणिका तथा ।। 1171
स्पर्शाकर्षिणिका चान्या रूपाकर्षिणिका तथा ।
रसाकर्षिणिका चैव गन्धाकर्षिणिका कला ।। 1172
चित्ताकर्षिणिका चैव धैर्याकर्षिणिका कला ।
स्मृत्याकर्षिणिका चैव नामाकर्षिणिका कला । 1173
बीजाकर्षिणिका चैवमात्माकर्षिणिका कला ।
अमृताकर्षिणी चैव शरीराकर्षिणी कला ।। 1174
षोडशैता गुप्तयोगिन्याख्या देव्योऽत्र सन्ति हि ।
आसामपि सरूपत्वान्मूर्तिरिका प्रदर्शिता ।। 1175
सर्वविद्राविणीमुद्रासंयुता चक्रनायिका ।
त्रिपुरेशी च पूर्वोक्तदेवीभिः परिवारिता ।। 1176
सर्वदा जगदम्बाया ध्यायन्त्यास्ते पदाम्बुजम् ।
तृतीयावरणे सर्वसंक्षोभिण्याख्यया युते ।। 1177
वस्वरैः सहिते नागदलैश्च परिशोभिते ।
अनङ्गकुसुमानङ्गमेखला च द्वितीयका ।। 1178

अनङ्गमदना चैवमनङ्गमदनातुरा ।
पञ्चम्यनङ्गरेखा चानङ्गवेगा तथा परा ।। 1179
तथानङ्गा कुशा चैव तथैवानङ्गमालिनी ।
अष्टौ गुप्ततराभिख्या योगिन्यस्सन्ति सर्वदा ।। 1180
प्रतिमा रूपसामान्यादासामेका प्रदर्शिता ।
चक्रेश्वरी च त्रिपुरसुन्दरी ताभिरन्विता ।। 1181
ससर्वाकर्षिणी मुद्रा भाति देव्यर्चने रता ।
तुरीयावरणे नाम्ना सर्वसौभाग्यदायके ।। 1182
चक्रे च भुवनाश्राख्ये मनुकोणसमन्विते ।
सर्वसंक्षोभिणी चैव सर्वविद्राविणी तथा ।। 1183
सर्वाकर्षिणिका चैव सर्वाह्लादिनिका तथा ।
सर्वसम्मोहिनी चैव सर्वस्तम्भिनिका तथा ।। 1184
64a सर्वजृम्भिणिका शक्तिश्शक्तिः सर्ववशङ्करी ।
सर्वरञ्जनिकाशक्तिस्सर्वोन्मादिनिका तथा ।। 1185
सर्वार्थसाधिका शक्तिः सर्वसम्पत्प्रपूरिणी ।
सर्वमन्त्रमयीशक्तिः सर्वद्वन्द्वक्षयङ्करी ।। 1186
सम्प्रदायाख्ययोगिन्यः शक्रसंख्या इहासते ।
प्रतिमैका तथैवासां ध्यानसाम्यात्प्रदर्शिता ।। 1187
चक्रेश्यास्ते च त्रिपुरवासिनी ताभिरन्विता ।
युक्ता सर्ववशंकर्या मुद्रयाम्बार्चने रता ।। 1188
पञ्चमावरणे चक्रे नाम्ना सर्वार्थसाधके ।
बहिर्दशारसंयुक्ते वर्तन्ते देवता दश ।। 1189
सर्वसिद्धिप्रदा देवी सर्वसम्पत्प्रदायिनी ।
सर्वप्रियङ्करी देवी सर्वमङ्गलकारिणी ।। 1190
सर्वकामप्रदा देवी सर्वदुःखविनाशिनी ।
सर्वमृत्युप्रशमनी सर्वविघ्ननिवारिणी ।। 1191
सर्वाङ्गसुन्दरी देवी सर्वसौभाग्यदायिनी ।

कुलोत्तीर्णा इति ख्याताः सरूपाश्च परस्परम् ।। 1192
मूर्तिरिका दर्शितासामेताभिश्चैव सङ्गता ।
त्रिपुरा श्रीश्च चक्रेशी सर्वोन्मादिनीकाभिधाम् ।। 1193
मुद्रां वहन्ती तत्रास्ते देवीपादार्चनोत्सुका ।
सर्वरक्षाकरे षष्ठावरणेऽन्तर्दशारके ।। 1194
सर्वज्ञा सर्वशक्तिश्च सर्वैश्वर्यप्रदायिनी ।
सर्वज्ञानमयी शक्तिः सर्वव्याधिविनाशिनी ।। 1995
सर्वाधारस्वरूपा च सर्वपापहरा तथा ।
सर्वानन्दमयी देवी सर्वरक्षास्वरूपिणी ।। 1196
सर्वेप्सितप्रदादेवी देव्य एकादशासते ।
एता निगर्भयोगिन्य आसामप्येकरूपतः ।। 1197
प्रदर्शिता मूर्तिरिका संयुतैकाभिरन्वहम् ।
मुद्रां च बिभ्रती नित्यं नाम्ना सर्वमहाङ्कुशाम् ।। 1198
चक्रेश्वरी च त्रिपुरमालिनी तत्र राजते ।
श्रीदेवीचरणाम्भोजसक्तचित्ता निरन्तरम् ।। 1199
सप्तमावरणेऽष्टारे सर्वरोगहराह्वये ।
वसुकोणेऽत्र वर्तन्ते रमासंख्याश्च देवताः । 1200
स्वराधिदेवी वशिनी कामेशी च कवर्गगा ।
चवर्गगा मोदिनी च विमला च टवर्गगा ।। 1201
तवर्गगा स्यादरुणा पवर्गे जयिनी स्थिता ।
यवर्गगा च सर्वेशी कौलिनी च शवर्गगा ।। 1202
रहस्ययोगिनी नाम्न्यः आसामप्येकरूपतः ।
प्रदर्शिता मूर्तिरिका नित्यमेताभिरन्विता ।। 1203
चक्रेशी त्रिपुरा सिद्धा सर्वखेचरिकाभिधाम् ।
मुद्रां च दधती चास्ते देव्यङ्घ्र्यर्चनतत्पराः ।। 1204
वशिन्याद्यन्तरालस्यास्त्युपर्यायुधशालिका ।
इक्षुचापद्वयं पुष्पशरपञ्चकयोर्द्वयम् ।। 1205

पाशद्वयं चाङ्कुशयोर्द्वितयं चेति वै क्रमात् ।
मुख्यायुधाष्टकं त्वादिदम्पत्योस्तत्र राजते ।। 1206
वज्रं शक्तिः शतघ्नी च भुशुण्डी मुसलं हलम् ।
पटसः परशुः कुन्तो मुद्गरो भिण्डिवालकः ।। 1207
64b शङ्खचक्राद्यायुधानि चास्त्रोपास्त्रानि कोटिशः ।
भण्डादिदैतेयरक्तसिक्ततृप्तान्यनेकधा ।। 1208
अस्यामेवास्त्रशालायां प्रज्वलन्ति निरन्तरम् ।
अष्टमावरणे त्र्यश्रे सर्वसिद्धिप्रदायके ।। 1209
कामेशी चैव वज्रेशी भगमालेति देवताः ।
तिस्रोऽप्यतिरहस्याख्ययोगिन्य इति विश्रुताः ।। 1210
ध्यानसाम्यात्तथैवासां प्रतिमैका प्रदर्शिता ।
एताभिरन्विता चक्रनायिका त्रिपुराभिधा ।। 1211
सर्वबीजाख्यमुद्राढ्या भाति देव्यर्चनोत्सुका ।
तस्योपरिष्टधिष्ण्यं तु नाथान्तरमुपाश्रिताः ।। 1212
मित्रेशोड्डीशषष्ठीशचर्यानाथा इति क्रमात् ।
चत्वारो युगनाथास्तु गुरवश्चेति विश्रुताः ।। 1213
एतेषामपि सारूप्यादेका मूर्तिः प्रदर्शिता ।
तैः सृष्टा बहवो लोकरक्षार्थं पादुकात्मकाः ।। 1214
दिव्यौघा मानवौघाश्च सिद्धौघाः सुरतापसाः ।
प्राप्तसालोक्यसारूप्यसायुज्यादिकसिद्धयः ।। 1215
गुरूनेतान्प्रसेवन्ते क्रमादेते निरन्तरम् । 1216
अस्योपरिष्टाद्धिष्ण्ये तु नित्यान्तरसमाह्वये ।
कामेशी भगमाला च नित्यक्लिन्ना तृतीयका ।। 1217
भेरुण्डावह्निवासिन्यौ महावज्रेश्वरी तथा ।
शिवदूती च त्वरिता नवमी कुलसुन्दरी ।। 1218
नित्या नीलपताका च विजया सर्वमङ्गला ।
ज्वालामालनिका चित्रा चैता देव्य इहासते ।। 1219

नित्या देव्य इति ख्यातिमास्थिताः तिथिसंख्यकाः ।
आसां च समरूपत्वादेका मूर्तिः प्रदर्शिता ।। 1120
ग्रन्थान्तरानुसारात्तु दर्शिताः प्रतिमाः पृथक् ।
एताभिः सह चक्रेशी महात्रिपुरसुन्दरी ।। 1220
सर्वयोन्याख्यमुद्राढ्या राजन्तेऽम्बार्चनापराः । 1222
त्रिपुरा प्रथमा प्रोक्ता त्रिपुरेशी द्वितीयका ।
तथा तृतीया त्रिपुरसुन्दरी परिकीर्तिता ।। 1221
ततस्तुरीया त्रिपुरवासिनीति प्रविश्रुता ।
पञ्चमी त्रिपुराश्रीश्च षष्ठी त्रिपुरमालिनी ।। 1222
सप्तमी त्रिपुरासिद्धा त्रिपुराम्बा तथाष्टमी ।
चक्रेश्वरी तु नवमी महात्रिपुरसुन्दरी ।। 1223
चक्रेश्वर्य इति ख्याता मुद्राञ्चितकराम्बुजाः ।
नवानां रूपसादृश्यान्मूर्तिरेका प्रदर्शिता ।। 1224
तस्योपर्यङ्गदेवीनामन्तरं समुदाहृतम् ।
हृद्देवी च शिरोदेवी शिखादेवी तथैव च ।। 1225
वर्मदेवी दृष्टिदेवी चास्त्रदेवीति च क्रमात् ।
षडङ्गदेव्यस्सन्त्यत्र भक्तियुक्ता निरन्तरम् ।।
जागरूका महादेव्या बिन्दुपीठस्य दक्षिणे ।
आसां लक्षणसादृश्यादेका मूर्तिः प्रदर्शिता ।। 1226
नवमावरणे चक्रे सर्वानन्दमये शुभे ।
श्रीपीठनामके बिन्दुस्थाने सर्वमनोहरे ।। 1227
65a सर्वत्रिखण्डिकामुद्रायुक्ता श्रीललिताम्बिका ।
पञ्चप्रेतासनारूढा परब्रह्मस्वरूपिणी ।। 1228
चतुर्भुजा त्रिणेत्रा च चन्द्ररेखावतंसिनी ।
कौसुम्भवसनोपेता दिव्यकञ्चुकधारिणी ।। 1229
इक्षुकोदण्डपुष्पेषुपाशाङ्कुशलसत्करा ।
सर्वमङ्गलसम्पूर्णा सच्चिदानन्दविग्रहा ।। 1230

राष्ट्रीय संस्कृत संस्थान जयपुर परिसर, जयपुर पुस्तकालय क्रमांक 16971

जपाकुसुमसङ्काशा सृष्टिस्थित्यन्तकारिणी ।
अनेककोटिब्रह्माण्डरक्षणैकधुरन्धरा ।। 1231
कामेशबद्धमाङ्गल्यसूत्रशोभितकन्धरा ।
पारिजातप्रसूनादिमालावेल्लितवेणिका ।। 1232
अप्राकृतविभूषाढ्या जगन्मङ्गलकारिणी ।
कामेश्वराङ्कपीठस्था कामितार्थप्रदायिनी ।। 1233
समस्तदेववन्द्यांङ्घ्रिसरोजाता महेश्वरी ।
सर्ववेदैः स्तूयमानमहिमाद्भुतविक्रमा ।। 1234
कामेश्वर्यादिमानान्तनामभिः प्रतिपादिता ।
मूलप्रकृतिरूपा च परंज्योतिः परात्परा ।। 1235
एतादृशी महादेवी श्रीचक्रेऽस्मिन्विराजते । 1236

इति श्रीनगरविराजमानपञ्चविंशतिसालादिबिन्दुपीठपर्यन्तवास्तव्यदेवतानामकथनम् ।

अतः परं प्रवक्ष्यन्ते इतराः शक्तिदेवताः ।
योगनिद्रामनोन्मन्यौ मन्त्रिणी श्यामला तथा ।। 1237
राजमाताङ्गिका बाला तथैव भुवनेश्वरी ।
सौभाग्यमायाभुवनेश्वर्यौ सूर्यात्मिका परा ।। 1238
अष्टादशभुजा भद्रकाल्यष्टभुजकालिका ।
दुर्गा च षोडशभुजा दुर्गान्या विन्ध्यवासिनी ।। 1239
रुद्रांशदुर्गा च जया दुर्गा च वनदुर्गिका ।
रिपुमारिणिका दुर्गा चाग्निदुर्गा ततः परम् ।। 1240
प्रथमा शैलपुत्री च द्वितीया ब्रह्मचारिणी ।
चण्डखण्डा स्कन्दमाता कूष्माण्डा चैव पञ्चमी ।। 1241
कात्यायनी रात्रिदुर्गा गौरी वै सिद्धिदायिनी ।
नव दुर्गा इमाः ख्याताः शैवागम उदाहृताः ।। 1242
तथा चण्डा शची शैवा चण्डी क्रूरानुचण्डिका ।
नवमी नामिका चैवमुग्रचण्डा ततः परम् ।। 1243

रुद्रा दुर्गा चेति नवदुर्गा ग्रन्थान्तरे स्थिताः ।
आस्वष्टौ षोडशभुजाः समरूपास्तथादिमाः ।। 1244
तस्मदिहाष्टदुर्गाणामेका मूर्तिः प्रदर्शिता ।
रुद्राख्याष्टादशभुजा दुर्गैका दर्शिता पृथक् ।। 1245
मिलित्वा नवदुर्गाणामासां रूपद्वयं स्थितम् ।
श्रीविद्या शुद्धविद्या च बगलेन्द्राक्षिका तथा ।। 1246
दण्डनाथा च वाराही शुद्धवाराहिका तथा ।
स्वप्नवाराहिका चैव ततो वागीश्वरी तथा ।। 1247
सोभाग्यवागीश्वरी च धेनुवागीश्वरी तथा ।
त्रिपुराख्या भैरवी च स्यात्संवित्त्रिपुरा तथा ।। 1248
नित्या च मोहिनी नित्या बाला त्रिपुरसुन्दरी ।
प्रत्यङ्गिरा वश्यमुखी प्राणशक्तिश्च शूलिनी ।। 1249
65b मृतसञ्जीविनी स्वस्थावेशिनी च ततः परम् ।
शत्रुविध्वंसिनी चैव वज्रप्रस्तारिणी तथा ।। 1250
धूमावती च त्वरिता त्रिकण्टक्यपराजिता ।
सर्ववर्णेश्वरी चैव तथा कामकलेश्वरी ।। 1251
तिरस्करिण्यासुरी चाप्यश्वारूढोग्रतारका ।
चतुर्भुजान्नपूर्णा च द्विभुजा चान्नपूर्णिका ।। 1252
शाकम्भरी द्वादशार्धदेवी च बनशङ्करी ।
लोपामुद्रा च तुलजाभवानी तुलसी तथा ।। 1253
ततस्समष्टिगायत्री सावित्री च सरस्वती ।
गायत्री साकिनी चैव काकिनी लाकिनी तथा ।। 1254
राकिनी ढाकिनी चैव हाकिनी याकिनी ततः
चतुःषष्टिकलादेवी स्याच्चण्डा परमेश्वरी ।। 1255
ब्राह्मी माहेश्वरी चैव कौमारी वैष्णवी तथा ।
वाराही च तथेन्द्राणी चण्डिका चैव सप्तमी ।। 1256
दिव्ययोगी महायोगी सिद्धयोगी महेश्वरी ।

पिशाचिनी डाकिनी च कालरात्री निशाचरी ।। 1257
कङ्काली रौद्री वेताली हुङ्कारी भुवनेश्वरी ।
ऊर्ध्वकेशी विरूपाक्षी शुष्काङ्गी नरभोजनी ।। 1258
फट्कारी वीरभद्री च धूम्राक्षी कलहप्रिया ।
रक्ताक्षी राक्षसी घोरा विश्वरूपा भयङ्करी ।। 1259
कामाक्षी चोग्रचामुण्डा भीषणा त्रिपुरान्तका ।
वीरकौमारिका चण्डी वाराही मुण्डधारिणी ।। 1260
भैरवी हस्तिनी क्रोधदुर्मुखी प्रेतवाहिनी ।
खट्वाङ्गदीर्घलम्बोष्ठी मालती मन्त्रयोगिनी ।। 1261
अस्थिनी चक्रिणी ग्राहा कङ्काली भुवनेश्वरी ।
कण्टकी ताटकी शुभ्रा क्रियादूती करालिनी ।। 1262
शङ्खिनी पद्मिनी क्षीरा असङ्गा च प्रहारिणी ।
लक्ष्मीश्च कामुकी लोलकाकदृष्टिरधोमुखी ।। 1263
धूर्जटी मालिनी घोरा कपाली विषभोजिनी ।
चतुःषष्टिः समाख्याता योगिन्यो नाम विश्रुताः ।। 1264
आसामष्टावष्टकानि क्रमाद्ज्ञेयानि सूरिभिः ।
एकैकस्याष्टकस्यात्र रूपसाम्यात्प्रदर्शिता ।। 1265
एकैका प्रतिमेत्येवं परिज्ञेयं विचक्षणैः ।
तथैव द्विभुजालक्ष्मीः गजलक्ष्मीस्ततः परम् ।। 1266
श्रीदेवी च महालक्ष्मीर्वीरलक्ष्मीस्तथैव च ।
द्विभुजावीरलक्ष्मीश्च सिद्धलक्ष्मीस्ततः परम् ।। 1267
वीरलक्ष्मीरष्टभुजा पद्मालक्ष्मीस्ततः परम् ।
प्रसन्नलक्ष्मीरित्येवं दश लक्ष्म्यः प्रकीर्तिताः ।। 1268
श्रीर्भूस्सरस्वती प्रीतिः शान्तिः कीर्तिः कृतिस्तथा ।
तुष्टिः पुष्टिः परीवारशक्तयो नव वै हरेः ।। 1269
नवानां रूपसादृश्यादेका मूर्तिः प्रदर्शिता ।
अजामुखी तथैवाथर्वणी चेला तथेश्वरी ।। 1270

उग्रा चोर्जस्वलाचैव ऋतुधामा च रेणुका ।
लृतम्बरा लृञ्झिका च रेवती शुष्करेवती ।। 1271
66a ओजस्विनी त्वघोरा चाप्यञ्जना च ततस्त्वजा ।
भूतविन्यासिनी खद्योतिनी धूम्राघरूपिणी ।। 1272
अनन्तशक्तिदेवेशी षडाननसमन्विता ।
ततश्च सुषमा प्रोक्ता निर्झरारुन्धती तथा ।। 1273
भोगदा निर्झरनदी प्रबोधिन्यपि धारिणी ।
क्रियासरस्वती तत्कारिणी च श्रीघना तथा ।। 1274
अनन्तशक्तिदेवेशी मयूरवरवाहना ।
सरस्वती चापि तथा नीलकण्ठा सरस्वती ।। 1275
स्याद्भोगदायिनी चैव तथैव श्यामलापि च ।
अनन्तशक्तिदेवेशी मत्तमातङ्गवाहना ।। 1276
इच्छाशक्तिस्ततः प्रोक्ता स्याज्ञयश्यामला तथा ।
चिच्छ्यामला ततः प्रोक्ता तथानुश्यामलाभिधा ।। 1277
तथा विद्याश्यामला च दीपिनी रेचिका तथा ।
मोचिनी पारायणी च तथा मङ्गलगौरिका ।। 1278
अनुक्रिया तथा सिद्धाक्रिया चाप्यायनी तथा ।
स्याद्बन्धमोचिनी मायामालिनी चेति विश्रुताः ।। 1279
अकारादिक्षकारन्ताः क्रमादक्षरदेवताः ।
नारायणश्च प्रणवाभिमानी परिकीर्तितः ।। 1280
तथैव रक्तचामुण्डा कालरात्री च शीतला ।
ज्येष्ठालक्ष्मीर्मोहिनी च जगन्मोहिनिका तथा ।। 1281
पुलिन्दिनी रेणुका च दुर्गा महिषमर्दिनी ।
तथा चामुण्डिका सप्तमातृकान्तर्गतापि च ।। 1282
तथैवाष्टाक्षरी दुर्गा स्याच्चिन्तामणिदुर्गिका ।
चित्रिणी यकलादेवी चिन्तामणि सरस्वती ।। 1283
बालासरस्वती सूर्यमण्डलान्तस्थदुर्गिका ।

ततः परन्तु सम्प्रोक्ता तथैव मणिकर्णिका ।। 1284
तथा देव्याः हस्तपद्मस्थितपञ्चाक्षरी शुकः ।
गुणवार्ध्यक्षिसंख्यानां देवतानां तु मूर्तयः ।। 1285
प्रदर्शिताः शक्तिनिधौ भिन्नरूपाः परस्परम् ।
श्रीदुर्गाभूमिसंख्यानां देवीनामेकरूपतः ।। 1286
प्रदर्शिताभिर्देवीभिः मूर्तयो न प्रदर्शिताः ।
सर्वाः शक्तिनिधौ देव्याश्चन्द्रसागरसागराः ।। 1287

अस्मिन्प्रथमशक्तिनिधौ प्रोक्तानां ४४ प्रतिमानां रूपसादृश्यादप्रोक्तानां १९८ प्रतिमाणां विवरणम् ।

अणिमादि विंशतिसिद्धिषु एकोनविंशतिः
अष्टमातृकादेवीषु सप्त ।
दशमुद्रादेवीषु नव ।
गुप्तयोगिनीषु षोडशसु पञ्चदश ।
अष्टगुप्ततरयोगिनीषु सप्त ।
चतुर्दशसम्प्रदाययोगिनीषु त्रयोदश ।
बहिर्दशारस्थितकुलोत्तीर्णासु दशसु नव ।
अन्तर्दशारस्थितनिगर्भयोगिनीषु दशसु नव ।
अष्ट रहस्ययोगिनीषु सप्त ।
तिसृषु अतिरहस्ययोगिनीषु द्वे ।
चतुर्षु युगनाथेषु त्रयः ।
नित्यक्लिन्नाः पञ्चदश तासां रूपान्तरेण पञ्चदश । आहत्य त्रिंशत् ।
तासु चतुर्दश । षडङ्गदेवीषु पञ्च ।
66b नवचक्रेश्वरीषु अष्टौ । यामलोक्तनवदुर्गासु सप्त । चतुःषष्टियोगिनीषु
षट्पञ्चाशत् । नव विष्णुपरिवारशक्तिषु अष्टौ ।
एवं १९८ प्रतिमाः विहाय शिष्टाः २४३ आलिखिताः वर्तन्ते ।।

महाकाली । तन्त्रोपाख्याने –

सद्यश्छिन्नशिरः कृपाणमभयं हस्तैर्वरं बिभ्रतीं
घोरास्यां शिरसां स्रजासुरुचिरामुन्मुक्तकेशावलीम् ।
सृक्वासृक्प्रवहां श्मशाननिलयां श्रुत्योः शवालङ्कृतिं
श्यामाङ्गी कृतमेखलां शवकरैः देवीं भजे कालिकाम् ।। 1288

ध्यानान्तरे –

ध्यानमस्याः प्रवक्ष्यामि स्मरणाच्छिवतां व्रजेत् ।
करालवदनां घोरां मुक्तकेशीं चतुर्भुजाम् ।। 1289
दक्षिणाकालिकां दिव्यां मुण्डमालाविभूषिताम् ।
सद्यश्छिन्नशिरः खड्गवामोर्ध्वाधः कराम्बुजाम् ।। 1290
अभयं वरदं चैव दक्षिणाधोर्ध्वपाणिकाम् ।
महामेघप्रभां श्यामां तथैव च दिगम्बराम् ।। 1291
कण्ठावसक्तमुण्डालिगलद्रुधिरचर्चिताम् ।
कर्णावतंसतां नीतशवयुग्मभयानकाम् ।। 1292
घोरदंष्ट्रां करालां च पीनोन्नतपयोधराम् ।
शवानां करसङ्घातैः कृतकाञ्चीं हसन्मुखीम् ।। 1293
सृक्वद्वयगलद्रक्तधाराविस्फुरिताननाम् ।
घोररवां महारौद्रीं श्मशानालयवासिनीम् ।। 1294
दक्षिणाकालिकां दिव्यां मुक्तलम्बिकचोच्चयाम् ।
शवरूपमहादेवहृदयोपरिसंस्थिताम् ।। 1295
शिवाभिर्घोररावभिश्चतुर्दिक्षु समन्विताम् ।
महाकालानलसमां विपरीतरतातुराम् ।। 1296
सुप्रसन्नाब्जवदनां घोराननसरोरुहाम् ।
योगिनीचक्रसहितां कालिकां भावयेत्ततः ।। 1297

एतत्प्रतिमारूपं नालिखितम् ।

श्रीः

इति श्रीमुम्मडिकृष्णराजवोडेयर्विरचिते
श्रीतत्त्वनिधौ प्रथमः शक्तिनिधिः सम्पूर्णः ।

ಶ್ರೀತತ್ತ್ವನಿಧಿ

ಪ್ರಥಮ ಸಂಪುಟ

ಶಕ್ತಿನಿಧಿ

ಕನ್ನಡ ಅನುವಾದ

ವಿದ್ವಾನ್ ಹೆಚ್. ಶಂಕರಗಣಪತಿ ಫಾಟಕ್ ಎಂ.ಎ.

ವಿಷಯಾನುಕ್ರಮಣಿಕೆ

ವಿಷಯ	ಪುಟಸಂಖ್ಯೆ
ಮಂಗಳಶ್ಲೋಕ	161
ಶ್ರೀಕೃಷ್ಣರಾಜ ಒಡೆಯರ ಬಿರುದುಗಳು ಮತ್ತು ನವನಿಧಿಗಳ ಸ್ಥೂಲಪರಿಚಯ	161-162
ಚಾಮುಂಡೇಶ್ವರೀಧ್ಯಾನ	162
ಮಹಾಕಾಳೀ, ಮಹಾಲಕ್ಷ್ಮೀ, ಮಹಾಸರಸ್ವತೀ ಸ್ವರೂಪ	163
ರಾಜರಾಜೇಶ್ವರೀ ಧ್ಯಾನ	163
ಷೋಡಶೀಧ್ಯಾನ	165
ಮಹಾಕಾಳೀ ಸಮೇತ ಮಹಾಕಾಲನ ಧ್ಯಾನ (ಕೋಟೆ ೧)	166
ಮಧುಶ್ರೀ ಮಾಧವಶ್ರೀ ಸಮೇತ ವಸಂತ ಋತುಧ್ಯಾನ (ಕೋಟೆ ೨)	167
ಶುಕ್ರಶ್ರೀ ಶುಚಿಶ್ರೀ ಸಮೇತ ಗ್ರೀಷ್ಮಋತುಧ್ಯಾನ (ಕೋಟೆ ೩)	168
ನಭಶ್ರೀ ನಭಸ್ಯಶ್ರೀ ಸಮೇತ ವರ್ಷಋತುಧ್ಯಾನ (ಕೋಟೆ ೪)	168
ಇಷಶ್ರೀ ಊರ್ಜಶ್ರೀ ಸಮೇತ ಶರದೃತುಧ್ಯಾನ (ಕೋಟೆ ೫)	169
ಸಹಶ್ರೀ ಸಹಸ್ಯಶ್ರೀ ಸಮೇತ ಹೇಮಂತ ಋತುಧ್ಯಾನ (ಕೋಟೆ ೬)	170
ತಪಃಶ್ರೀ ತಪಸ್ಯಶ್ರೀ ಸಮೇತ ಶಿಶಿರ ಋತುಧ್ಯಾನ (ಕೋಟೆ ೭)	170
ಸಿದ್ಧಶ್ರೀಸಮೇತ ಸಿದ್ಧರ ಧ್ಯಾನ (ಕೋಟೆ ೮)	171
ಚಾರಣಸ್ತ್ರೀಸಮೇತ ಚಾರಣರ ಧ್ಯಾನ (ಕೋಟೆ ೯)	171
ಭೈರವ ಮತ್ತು ಯೋಗಿನಿಯರ ಧ್ಯಾನ (ಕೋಟೆ ೧೦)	172
ರಂಭಾದಿಸಮೇತ ಗಂಧರ್ವರ ಧ್ಯಾನ (ಕೋಟೆ ೧೧)	172
ನಾಗಸ್ತ್ರೀಸಮೇತಶೇಷಾದಿನಾಗರ ಮತ್ತು ಬಲೀಂದ್ರನ ಧ್ಯಾನ (ಕೋಟೆ ೧೨)	173
ಮನುಗಳ ಮತ್ತು ಭೂಪಾಲಕರ ಧ್ಯಾನ (ಕೋಟೆ ೧೩)	174
ಇಂದ್ರಾದಿದಿಕ್ಪಾಲಕರ ಧ್ಯಾನ (ಕೋಟೆ ೧೪)	174
ದಂಡಿನೀವಾರಾಹೀಧ್ಯಾನ (ಕೋಟೆ ೧೫)	176
ಪರಿವಾರಸಮೇತ ಬ್ರಹ್ಮನ ಧ್ಯಾನ (ಕೋಟೆ ೧೬)	177

ವಿಷಯ	ಪುಟಸಂಖ್ಯೆ
ಪರಿವಾರಸಮೇತ ವಿಷ್ಣುವಿನ ಧ್ಯಾನ (ಕೋಟೆ ೧೭)	178
ಪರಿವಾರಸಮೇತ ಮಹೇಶ್ವರನ ಧ್ಯಾನ (ಕೋಟೆ ೧೮)	178
ಪರಿವಾರಸಮೇತಳಾದ ತಾರಾದೇವಿಯ ಧ್ಯಾನ (ಕೋಟೆ ೧೯)	179
ಪರಿವಾರಸಮೇತ ವಾರುಣಿಯ ಧ್ಯಾನ (ಕೋಟೆ ೨೦)	180
ಪರಿವಾರಸಮೇತ ಕುರುಕುಲಾದೇವಿಯ ಧ್ಯಾನ (ಕೋಟೆ ೨೧)	181
ಪರಿವಾರಸಮೇತ ಸೂರ್ಯನ ಧ್ಯಾನ (ಕೋಟೆ ೨೨)	181
ಪರಿವಾರಸಮೇತ ಸೋಮನಾಥನ ಧ್ಯಾನ (ಕೋಟೆ ೨೩)	182
ರತಿ ಮೊದಲಾದ ಸ್ತ್ರೀಸಮೇತ ಮನ್ಮಥನ ಧ್ಯಾನ (ಕೋಟೆ ೨೪)	183
ದೇವಿಯ ಅರ್ಘ್ಯ-ಪಾದ್ಯಾದಿ ಉಪಚಾರ ಪಾತ್ರೆಗಳ ಧ್ಯಾನ (ಕೋಟೆ ೨೫)	184
ಚಿಂತಾಮಣಿಗೃಹದ ಚತುರಾಮ್ನಾಯರೂಪವಾದ ನದಿಗಳ ಧ್ಯಾನ	187
ಒಂಬತ್ತು ಆವರಣಗಳ ದೇವತಾದಿಗಳ-ಸಮಷ್ಟಿಶ್ಲೋಕಗಳು (೧ ಫಲಕ)	188
ಎರಡನೇ ಫಲಕದ ದೇವತೆಗಳು	189
ಮೂರನೇ ಫಲಕದ ಮುದ್ರಾದೇವತೆಗಳು	189
ಎರಡನೆ ಆವರಣದ ದೇವತೆಗಳು	190
ಮೂರನೆ ಆವರಣದ ದೇವತೆಗಳು	191
ನಾಲ್ಕನೆ ಆವರಣದ ದೇವತೆಗಳು	191
ಐದನೆ ಆವರಣದ ದೇವತೆಗಳು	192
ಆರನೆ ಆವರಣದ ದೇವತೆಗಳು	192
ಏಳನೆ ಆವರಣದ ದೇವತೆಗಳು	193
ಅಸ್ತ್ರಶಾಲೆಯ ಆಯುಧಗಳು	194
ಎಂಟನೆ ಆವರಣದ ದೇವತೆಗಳು	194
ನಾಥಾಂತರ	195
ನಿತ್ಯಾಂತರಸ್ಥದೇವತೆಗಳು	195
ಕಾಮೇಶೀಧ್ಯಾನ	196
ಭಗಮಾಲಾಧ್ಯಾನ	196

ವಿಷಯ	ಪುಟಸಂಖ್ಯೆ
ನಿತ್ಯಕ್ಲಿನ್ನೆಯರ ಧ್ಯಾನ	196
ಭೇರುಂಡಾಧ್ಯಾನ	196
ವಹ್ನಿವಾಸಿನೀಧ್ಯಾನ	197
ಮಹಾವಜ್ರೇಶ್ವರೀಧ್ಯಾನ	197
ಶಿವದೂತೀಧ್ಯಾನ	197
ತ್ವರಿತಾಧ್ಯಾನ	197
ಕುಲಸುಂದರೀಧ್ಯಾನ	198
ನಿತ್ಯಾಧ್ಯಾನ	198
ನೀಲಪತಾಕಾಧ್ಯಾನ	198
ವಿಜಯಾಧ್ಯಾನ	198
ಸರ್ವಮಂಗಲಾಧ್ಯಾನ	198
ಜ್ವಾಲಾಮಾಲಿನೀಧ್ಯಾನ	199
ಚಿತ್ರಾಸ್ವರೂಪ	199
ನವ ಚಕ್ರೇಶ್ವರಿಗಳ ಧ್ಯಾನ	199
ಅಂಗದೇವತಾಧ್ಯಾನ	199
ಅಂಗದೇವ್ಯಂತರ	200
ಒಂಬತ್ತನೆ ಆವರಣದ ಲಲಿತಾದೇವೀಧ್ಯಾನ	200
ದೇವೀಸ್ತುತಿ, ಶ್ರೀ ದೇವಿಯ ಆವಿರ್ಭಾವ ಮತ್ತು ಕಲ್ಯಾಣ	205
ಮಹಿಷಾಸುರಮರ್ದಿನೀಸ್ತೋತ್ರ	210
ಶ್ರೀ ಚಕ್ರೋದ್ಧಾರಕ್ರಮ	212
ಯೋಗಿನೀಧ್ಯಾನ	213
ಮನೋನ್ಮನೀಧ್ಯಾನ	213
ಶ್ಯಾಮಲಾಧ್ಯಾನ	213
ರಾಜಮಾತಂಗೀಧ್ಯಾನ	213
ಬಾಲಾಧ್ಯಾನ	213
ಭುವನೇಶ್ವರೀಧ್ಯಾನ	214
ಸೌಭಾಗ್ಯಭುವನೇಶ್ವರೀಧ್ಯಾನ	214
ಮಾಯಾಭುವನೇಶ್ವರೀಧ್ಯಾನ	214
ಸೂರ್ಯಾತ್ಮಕಭುವನೇಶ್ವರೀಧ್ಯಾನ	214
ಅಷ್ಟಾದಶಭುಜಾಭದ್ರಕಾಳೀಧ್ಯಾನ	215
ಷೋಡಶಭುಜಾದುರ್ಗಾಧ್ಯಾನ	215
ವಿಂಧ್ಯವಾಸಿನೀದುರ್ಗಾಧ್ಯಾನ	215
ರುದ್ರಾಂಶದುರ್ಗಾಧ್ಯಾನ	215
ಜಯದುರ್ಗಾಧ್ಯಾನ	216
ವನದುರ್ಗಾಧ್ಯಾನ	216

ವಿಷಯ	ಪುಟಸಂಖ್ಯೆ
ರಿಪುಮಾರಿಣೀದುರ್ಗಾಧ್ಯಾನ	216
ಅಗ್ನಿದುರ್ಗಾಧ್ಯಾನ	216
ನವದುರ್ಗಾಭೇದದಲ್ಲಿ ಶೈಲಪುತ್ರೀಧ್ಯಾನ	216
ನವದುರ್ಗಾಭೇದದಲ್ಲಿ ಬ್ರಹ್ಮಚಾರಿಣೀ ದುರ್ಗಾಧ್ಯಾನ	216
ನವದುರ್ಗಾಭೇದದಲ್ಲಿ ಚಂಡಖಂಡದುರ್ಗಾಧ್ಯಾನ	217
ನವದುರ್ಗಾಭೇದದಲ್ಲಿ ಚಂಡಮಾತೃದುರ್ಗಾಧ್ಯಾನ	217
ನವದುರ್ಗಾಭೇದದಲ್ಲಿ ಕೂಷ್ಮಾಂಡದುರ್ಗಾಧ್ಯಾನ	217
ನವದುರ್ಗಾಭೇದದಲ್ಲಿ ಕಾತ್ಯಾಯನೀದುರ್ಗಾಧ್ಯಾನ	217
ನವದುರ್ಗಾಭೇದದಲ್ಲಿ ರಾತ್ರಿದುರ್ಗಾಧ್ಯಾನ	217
ನವದುರ್ಗಾಭೇದದಲ್ಲಿ ಗೌರೀದುರ್ಗಾಧ್ಯಾನ	217
ನವದುರ್ಗಾಭೇದದಲ್ಲಿ ಸಿದ್ಧಿದಾಯಿನೀದುರ್ಗಾಧ್ಯಾನ	217
ಪ್ರಕಾರಾಂತರ ದುರ್ಗಾಧ್ಯಾನ	218
ಅಷ್ಟಾದಶಭುಜಾ ರುದ್ರಾದುರ್ಗಾಧ್ಯಾನ	218
ಶ್ರೀವಿದ್ಯಾಧ್ಯಾನ	218
ಶುದ್ಧವಿದ್ಯಾಧ್ಯಾನ	219
ಬಗಲಾಧ್ಯಾನ	219
ಇಂದ್ರಾಕ್ಷೀಧ್ಯಾನ	219
ದಂಡನಾಥಾವಾರಾಹೀಧ್ಯಾನ	219
ಶುದ್ಧವಾರಾಹೀಧ್ಯಾನ	219
ಸ್ವಪ್ನವಾರಾಹೀಧ್ಯಾನ	220
ವಾಗೀಶ್ವರೀಧ್ಯಾನ	220
ಸೌಭಾಗ್ಯವಾಗೀಶ್ವರೀಧ್ಯಾನ	220
ಧೇನುವಾಗೀಶ್ವರೀಧ್ಯಾನ	220
ತ್ರಿಪುರಭೈರವೇಶ್ವರೀಧ್ಯಾನ	221
ಸಂವಿತ್ತ್ರಿಪುರಾಧ್ಯಾನ	221
ಬಾಲಾತ್ರಿಪುರಸುಂದರೀಧ್ಯಾನ	221
ನಿತ್ಯಾಧ್ಯಾನ	221
ಮೋಹಿನೀನಿತ್ಯಾಧ್ಯಾನ	221
ವಶ್ಯಮುಖೀಧ್ಯಾನ	222
ಪ್ರತ್ಯಂಗಿರಾಧ್ಯಾನ	222
ಶೂಲಿನೀಧ್ಯಾನ	222
ಪ್ರಾಣಶಕ್ತಿಧ್ಯಾನ	222
ಮೃತಸಂಜೀವಿನೀಧ್ಯಾನ	222
ಸ್ವಸ್ಥಾವೇಶಿನೀಧ್ಯಾನ	222
ಶತ್ರುವಿಧ್ವಂಸಿನೀಧ್ಯಾನ	223
ವಜ್ರಪ್ರಸ್ತಾರಿಣೀಧ್ಯಾನ	223

ವಿಷಯ	ಪುಟಸಂಖ್ಯೆ
ತ್ರಿಕಂಟಕೀಧ್ಯಾನ	223
ಅಪರಾಜಿತಾಧ್ಯಾನ	223
ಧೂಮಾವತೀಧ್ಯಾನ	224
ಕಾಮಕಲೇಶ್ವರೀಧ್ಯಾನ	224
ಸರ್ವವರ್ಣೇಶ್ವರೀಧ್ಯಾನ	224
ತ್ವರಿತಾಧ್ಯಾನ	224
ದ್ವಾದಶಾರ್ಧದೇವೀಧ್ಯಾನ	224
ತಿರಸ್ಕರಿಣೀಧ್ಯಾನ	225
ಅಶ್ವಾರೂಢಾಧ್ಯಾನ	225
ಆಸುರೀದೇವೀಧ್ಯಾನ	225
ಉಗ್ರತಾರಾಧ್ಯಾನ	225
ಲೋಪಾಮುದ್ರಾಧ್ಯಾನ	225
ಚತುರ್ಭುಜಅನ್ನಪೂರ್ಣಾಧ್ಯಾನ	226
ದ್ವಿಭುಜ ಅನ್ನಪೂರ್ಣಾಧ್ಯಾನ	226
ಗಾಯತ್ರೀಧ್ಯಾನ	226
ಸಾವಿತ್ರೀಧ್ಯಾನ	226
ಸರಸ್ವತೀಧ್ಯಾನ	227
ತ್ರಿಸಂಧ್ಯಾತ್ಮಕಸಮಷ್ಟಿಗಾಯತ್ರೀಧ್ಯಾನ	227
ಶಾಕಂಭರೀಧ್ಯಾನ	227
ಬನಶಂಕರೀಧ್ಯಾನ	227
ತುಳಜಾಭವಾನೀಧ್ಯಾನ	228
ತುಲಸೀದೇವೀಧ್ಯಾನ	228
ಚಂದ್ರಾಪರಮೇಶ್ವರೀಧ್ಯಾನ	228
ಅರವತ್ತನಾಲ್ಕು ಕಲಾದೇವಿಯರ ಧ್ಯಾನ	228
ಸಾಕಿನೀಧ್ಯಾನ	229
ಕಾಕಿನೀಧ್ಯಾನ	229
ಲಾಕಿನೀಧ್ಯಾನ	229
ರಾಕಿನೀಧ್ಯಾನ	229
ಢಾಕಿನೀಧ್ಯಾನ	229
ಹಾಕಿನೀಧ್ಯಾನ	230
ಯಾಕಿನೀಧ್ಯಾನ	230
ಷಟ್‌ಚಕ್ರಕ್ರಮ	231
ಬ್ರಾಹ್ಮೀದೇವತಾಧ್ಯಾನಸ್ವರೂಪ	231
ಮಾಹೇಶ್ವರೀದೇವತಾಸ್ವರೂಪ	231
ಕೌಮಾರೀದೇವತಾರೂಪ	231
ವಾರಾಹೀರೂಪಧ್ಯಾನ	232

ವಿಷಯ	ಪುಟಸಂಖ್ಯೆ
ಇಂದ್ರಾಣೀದೇವತಾಧ್ಯಾನ	232
ಚಂಡಿಕಾಧ್ಯಾನ	232
ಅರವತ್ತನಾಲ್ಕು ಯೋಗಿನಿಯರ ಧ್ಯಾನ (ಮೊದಲನೆ ಅಷ್ಟಕ)	232
ಎರಡನೆ ಅಷ್ಟಕದ ದೇವತೆಗಳು	233
ಮೂರನೆ ಅಷ್ಟಕದ ದೇವತೆಗಳು	233
ನಾಲ್ಕನೆ ಅಷ್ಟಕದ ದೇವತೆಗಳು	233
ಐದನೆ ಅಷ್ಟಕ ದೇವತೆಗಳ ಧ್ಯಾನ	233
ಆರನೆ ಅಷ್ಟಕದ ದೇವತೆಗಳ ಧ್ಯಾನ	233
ಏಳನೆ ಅಷ್ಟಕದ ದೇವತೆಗಳ ಧ್ಯಾನ	234
ಎಂಟನೆ ಅಷ್ಟಕದೇವತೆಗಳ ಧ್ಯಾನ	234
ಅಷ್ಟಮಹಾಲಕ್ಷ್ಮೀಧ್ಯಾನ(ದ್ವಿಭುಜಲಕ್ಷ್ಮೀ)	234
ಗಜಲಕ್ಷ್ಮೀಧ್ಯಾನ	234
ಮಹಾಲಕ್ಷ್ಮೀಧ್ಯಾನ	235
ಶ್ರೀದೇವೀಧ್ಯಾನ	235
ವೀರಲಕ್ಷ್ಮೀಧ್ಯಾನ	235
ದ್ವಿಭುಜಾವೀರಲಕ್ಷ್ಮೀಧ್ಯಾನ	235
ಅಷ್ಟಭುಜಾವೀರಲಕ್ಷ್ಮೀಧ್ಯಾನ	235
ಪ್ರಸನ್ನಲಕ್ಷ್ಮೀಧ್ಯಾನ	235
ಸಿದ್ಧಿಲಕ್ಷ್ಮೀಧ್ಯಾನ	236
ಪದ್ಮಾಲಕ್ಷ್ಮೀಧ್ಯಾನ	236
ವಿಷ್ಣುಪರಿವಾರದೇವತೆಗಳ ಧ್ಯಾನ	236
ಅಕಾರಾದಿ ಕ್ಷಕಾರಾಂತ ಅಕ್ಷರಸ್ವರೂಪ	237-246
ಪ್ರಣವದೇವತಾಧ್ಯಾನ	247
ರಕ್ತಚಾಮುಂಡೀಧ್ಯಾನ	247
ಕಾಲರಾತ್ರಿಸ್ವರೂಪ	247
ಸೀತಲಾಸ್ವರೂಪ	247
ಮೋಹಿನೀಧ್ಯಾನ	247
ಮಾಯಾಜಗನ್ಮೋಹಿನೀಧ್ಯಾನ	248
ಜ್ಯೇಷ್ಠಾಲಕ್ಷ್ಮೀಧ್ಯಾನ	248
ಪುಲಿಂದಿನೀಧ್ಯಾನ	248
ರೇಣುಕಾಧ್ಯಾನ	248
ಮಹಿಷಾಸುರಮರ್ದಿನೀದುರ್ಗಾಧ್ಯಾನ	248
ಅಷ್ಟಾಕ್ಷರೀದುರ್ಗಾಧ್ಯಾನ	249
ಮಾತೃಕಾಂತರ್ಗತಚಾಮುಂಡಾಧ್ಯಾನ	249
ಚಿಂತಾಮಣಿದುರ್ಗಾಧ್ಯಾನ	249

ವಿಷಯ	ಪುಟಸಂಖ್ಯೆ
ಚಿತ್ರಿಣೀಧ್ಯಾನ	249
ಯಕಲಾದೇವೀಧ್ಯಾನ	250
ಚಿಂತಾಮಣಿಸರಸ್ವತೀಧ್ಯಾನ	250
ಬಾಲಾಸರಸ್ವತೀಧ್ಯಾನ	250
ಸೂರ್ಯಮಂಡಲದುರ್ಗಾಧ್ಯಾನ	250-251
ಮಣಿಕರ್ಣಿಕಾಧ್ಯಾನ	251
ಶುಕಪಕ್ಷಪಂಚಾಕ್ಷರೀಪ್ರಭೇದ	251
ಶುಕಲಕ್ಷಣ ಶ್ಲೋಕ	252
೧೨೦ ನಾಮಗಳ ಪ್ರಸ್ತಾರಕ್ರಮ	253
ಚಂಡಘಾತುಕಜ್ವಲಜ್ಜಿಹ್ವಾಧ್ಯಾನ	254
ಶಿವಪಂಚಾಕ್ಷರೀಪ್ರಭೇದ	255
ಜಗದಂಬಾಚಕ್ರಶ್ಲೋಕಗಳು	255
ಶ್ರೀ ಪಂಚಾಕ್ಷರೀಪ್ರಸ್ತಾರಯಂತ್ರಕ್ರಮ	256
೧೦೮ ಶಕ್ತಿಕ್ಷೇತ್ರ ಹೆಸರುಗಳು	256
೧೮ ಶಕ್ತಿಪೀಠಗಳು	259

ವಿಷಯ	ಪುಟಸಂಖ್ಯೆ
ಗೌರಿಯ ಹೆಸರುಗಳು	259
ಸೋಪಾನತತ್ತ್ವದ ಹೆಸರುಗಳು	259
ಒಂಬತ್ತು ನಾಥಸಿದ್ಧರು	259
ಸಿದ್ಧರ ಹೆಸರುಗಳು	260
ರಾಜಯೋಗ್ಯ ಖಡ್ಗಗಳ ಹೆಸರುಗಳು	260
ಸಿಂಹಾಸನದ ಅಷ್ಟದಿಕ್ಕುಗಳ ಸಿಂಹಗಳ ಹೆಸರುಗಳು	260
ಶತ್ರುಪರಾಜಯಕ್ಕಾಗಿ ಆವಾಹಿಸಬೇಕಾದ ದೇವತೆಗಳು	260
ಸಿಂಹಾಸನಸಾಲಭಂಜಿಕೆಗಳ ಹೆಸರುಗಳು	260
ಶಕ್ತಿಮಂತ್ರಜಪಾಂಗಗಳು	261
ದೇವೀಮಂತ್ರನ್ಯಾಸಗಳು	261
ಅಷ್ಟದಳಪರ್ವತಗಳು	261
ಗ್ರಂಥಾಂತಗದ್ಯ	261
ಶಕ್ತಿನಿಧಿಯ ಚಿತ್ರಗಳ ವಿವರಣ	262
ಇತರ ಶಕ್ತಿದೇವತೆಗಳ ಹೆಸರುಗಳು	268
ಮಹಾಕಾಳೀಸ್ವರೂಪ	270
ಕಾಳೀಸ್ವರೂಪ	270

1a

ಶಕ್ತಿನಿಧಿ

ಶ್ರೀ ಕೃಷ್ಣರಾಜಮಹಾರಾಜಕಂಠೀರವವಿರಚಿತವಾದ, ಮಂತ್ರರಹಸ್ಯಗಳನ್ನೊಳಗೊಂಡ ಶ್ರೀತತ್ತ್ವನಿಧಿಯೆಂಬ ಗ್ರಂಥವನ್ನು ಸಚಿತ್ರವಾಗಿ ಬರೆಯುವುದಕ್ಕೆ ನಿರ್ವಿಘ್ನಮಸ್ತು.

ಶಕ್ತಿನಿಧಿಯ ಆರಂಭ

ಶ್ರೀ ಗಣಾಧಿಪತಿಗೆ ನಮಸ್ಕಾರ. ಶುಭಮಸ್ತು. ಶ್ರೀ ಚಾಮುಂಡಾಂಬಿಕೆಗೆ ನಮಸ್ಕಾರ.

ಬಿಳುಪಾದ ವಸ್ತ್ರವನ್ನು ಧರಿಸಿರುವವನೂ, ವ್ಯಾಪಕನೂ, ಚಂದ್ರನ ಬಣ್ಣದವನೂ, ನಾಲ್ಕು ಭುಜಗಳನ್ನು ಹೊಂದಿರುವವನೂ, ಪ್ರಸನ್ನಮುಖವನ್ನುಳ್ಳವನೂ ಆದ ದೇವರನ್ನು ಸಕಲವಿಘ್ನಗಳ ಶಾಂತಿಗಾಗಿ ಧ್ಯಾನಿಸಬೇಕು. 1

ಐಶ್ವರ್ಯವನ್ನು ನೀಡುವ ವೇಳೆಯಲ್ಲಿ ಹೊಸಹವಳದ ಕಾಂತಿಯನ್ನುಳ್ಳವಳೂ, ವಿದ್ಯೆಯನ್ನು ಕೊಡುವ ಕಾಲದಲ್ಲಿ ಶರತ್ಕಾಲದ ಚಂದ್ರನಂತೆ ಬೆಳ್ಳಗಿರುವವಳೂ, ಶತ್ರುಗಳ ಸಮೂಹವನ್ನು ಗೆಲ್ಲುವ ವೇಳೆಯಲ್ಲಿ ಇಂದ್ರನೀಲಮಣಿಯ ಬಣ್ಣವನ್ನು ಹೊಂದಿರುವವಳೂ, ಮೂರುಲೋಕಗಳ ತಾಯಿಯೂ, ಜನ್ಮರಹಿತಳೂ ಆದ ಅಂಬೆ(ಪಾರ್ವತಿ)ಯನ್ನು ಆಶ್ರಯಿಸುತ್ತೇನೆ. 2

ದೇವಿ, ಚಾಮುಂಡಿ, ಜಯವನ್ನು ಹೊಂದು. ಭೂತಸಂಹಾರಿಣಿ, ಜಯವನ್ನು ಪಡೆ. ಭೂಲೋಕದ ಸಂತಾಪವನ್ನು ಕಳೆಯುವವಳೆ, ಜಯಶೀಲಳಾಗು. ಸರ್ವವ್ಯಾಪಿನಿ ದೇವಿ, ಜಯಿಸು. ಭದ್ರಕಾಳಿ, ನಿನಗೆ ನಮಸ್ಕಾರ. 3

ಸಮಸ್ತಭೂಮಂಡಲಕ್ಕೆ ಆಭರಣದಂತೆ, ಎಲ್ಲ ದೇಶಗಳಿಗೆ ಶಿರೋಲಂಕಾರದಂತೆ ಇರುವ ಕರ್ಣಾಟಕದೇಶದ ಸಂಪತ್ತಿಗೆ ಅಧಿಷ್ಠಾನವಾಗಿರುವ ಶ್ರೀಮನ್ ಮಹೀಶೂರ(ಮೈಸೂರು)ಮಹಾಸಂಸ್ಥಾನದ ಮಧ್ಯದಲ್ಲಿ ಅತಿಶಯವಾಗಿ ಹೊಳೆಯುತ್ತಿರುವ ಪೂರ್ಣಚಂದ್ರಕುಲಕ್ರಮದಲ್ಲಿ ಬಂದ ರಾಜಪ್ರಮುಖ, ನಿಖಿಲರಾಜಾಧಿರಾಜ, ಮಹಾರಾಜಚಕ್ರವರ್ತಿ-ಮಂಡಲವು ಅನುಭವಿಸಿದ ದಿವ್ಯರತ್ನಸಿಂಹಾಸನಾರೂಢ ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪ ಅಪ್ರತಿಮವೀರ ನರಪತಿಬಿರುದೆಂತೆಂಬರಗಂಡ ಲೋಕೈಕವೀರ ಯದುಕುಲಪಯ:ಪಾರಾವಾರಕಲಾನಿಧಿ, ಶಂಖ-ಚಕ್ರ-ಅಂಕುಶ-ಕುಠಾರ-ಮಕರ-ಮತ್ಸ್ಯ-ಶರಭ-ಸಾಲ್ವ-ಗಂಡಭೇರುಂಡ-ಧರಣೀವರಾಹ-ಹನುಮದ್ಗರುಡ-ಕಂಠೀರವಾದಿ ಅನೇಕ ಬಿರುದಾಂಕಿತರಾದ ಮೈಸೂರುಪುರಶ್ರೇಷ್ಠಾಧೀಶ ಶ್ರೀಕೃಷ್ಣರಾಜಒಡೆಯವರೇಣ್ಯರು ನಿರ್ಮಿಸಿದ ಶ್ರೀತತ್ತ್ವನಿಧಿ ಎಂಬ ಹೆಸರುಳ್ಳ ಗ್ರಂಥವನ್ನು ಸಚಿತ್ರವಾಗಿ ಬರೆಯಲು ನಿರ್ವಿಘ್ನವಿರಲಿ.

ಮಲ್ಲಿಗೆ, ಚಂದ್ರ, ಹಿಮ, ಹಾರದಂತೆ ಬಿಳುಪಾಗಿರುವ, ಬಿಳುಪಾದ ವಸ್ತ್ರಗಳನ್ನುಟ್ಟಿರುವ, ವೀಣೆಯ ಹಿರಿದಾದ ದಂಡದಿಂದ ಅಲಂಕೃತವಾದ ಕೈಗಳನ್ನು ಹೊಂದಿರುವ, ಬಿಳಿದಾವರೆಯಲ್ಲಿ ಕುಳಿತಿರುವ, ಬ್ರಹ್ಮಾ-ವಿಷ್ಣು-ಶಿವ ಮುಂತಾದ ದೇವತೆಗಳಿಂದ ಸತತವಾಗಿ ಪೂಜೆಗೊಂಡ, ಜಾಡ್ಯವನ್ನು ನಿಃಶೇಷವಾಗಿ ದೂರಮಾಡುವ ಆ ಭಗವತೀಸರಸ್ವತಿಯು ನನ್ನನ್ನು ಕಾಪಾಡಲಿ. 4

1 b ಶ್ರೀ ಚಾಮುಂಡಿಕಾದೇವಿಯ ಕಟಾಕ್ಷದ ಮಂಗಳಮಯನೋಟದ ಬಲದಿಂದ, ವೇದ-ಆಗಮ-ತಂತ್ರ-ಪುರಾಣವಾಕ್ಯಗಳ ಹಾಗೂ ಧರ್ಮಶಾಸ್ತ್ರ-ಇತಿಹಾಸ-ಉಪತಂತ್ರ-ವಾಕ್ಯಗಳ ಮತ್ತು ಮಂತ್ರ-ಜ್ಯೋತಿಷ-ಶಿಲ್ಪಗಳ ಸಾರವನ್ನು ತಾತ್ತ್ವಿಕವಾಗಿ ಸಂಗ್ರಹಿಸಿ, ಚಾಮುಂಡಾಂಬಿಕಾ ಮುಂತಾದ ದೇವತೆಗಳ ಸ್ವರೂಪ, ಆಯುಧ, ವರ್ಣ, ಆಭರಣ, ವಾಹನ, ಚಿಹ್ನೆ, ಪುಷ್ಪ, ನಾಮಧೇಯ, ವಸ್ತ್ರಗಳ ಪ್ರಭೇದಗಳನ್ನು ನಿರೂಪಿಸಿ, ಆ ಬಳಿಕ ವಿಷ್ಣು, ಈಶ್ವರ, ಬ್ರಹ್ಮಾ, ಇಂದ್ರ, ಮುಂತಾದ ದೇವತೆಗಳ ಲಕ್ಷಣಗಳನ್ನೂ, ಯುಗ ಮೊದಲಾದ ಕಾಲಭೇದಗಳನ್ನೂ, ಕಾಲಗಳಿಂದ ಉಂಟಾದ ಗುಣ-ದೋಷಗಳನ್ನೂ, ಈ ಪ್ರಸಂಗದಿಂದಾಗಿ ಹೇಳಬೇಕಾದ ಬೇರೆ ವಿಷಯಗಳ ಕ್ರಮಗಳನ್ನೂ, ಮೈಸೂರಿನ ಮಹಾರಾಜ ಶ್ರೀ ಕೃಷ್ಣರಾಜ ಒಡೆಯರು ಪ್ರಪಂಚದ ಉಪಕಾರಕ್ಕಾಗಿ ಒಂಬತ್ತು ನಿಧಿಗಳನ್ನೊಳಗೊಂಡಿರುವ ಶ್ರೀತತ್ತ್ವನಿಧಿ ಎಂಬ ಮಂಗಳಕರವಾದ ಗ್ರಂಥದಲ್ಲಿ ಯಥಾವಿಧಿಯಾಗಿ ನಿರೂಪಿಸುತ್ತಾರೆ. ಮುಂದೆ ಹೇಳುವ ನಿಧಿಗಳಲ್ಲಿ ಈ ಅನುಕ್ರಮವನ್ನು ತಿಳಿದುಕೊಳ್ಳಬೇಕು. 5-11

ಮೊದಲನೆಯ ನಿಧಿಯಲ್ಲಿ ಚಾಮುಂಡಾ ಮುಂತಾದ ಮಹಾಶಕ್ತಿಗಳ ಲಕ್ಷಣವಿದೆ. ಎರಡನೆಯದರಲ್ಲಿ ವಿಷ್ಣುವಿನ ಮೂರ್ತಿಪ್ರಭೇದಗಳ ಲಕ್ಷಣವನ್ನು ಹೇಳಲಾಗಿದೆ. ಮೂರನೆಯದರಲ್ಲಿ ಶಿವ-ಶೈವ ಮೂರ್ತಿಗಳ ಲಕ್ಷಣವನ್ನು ನಿರೂಪಿಸಲಾಗಿದೆ. ನಾಲ್ಕನೆಯ ನಿಧಿಯಲ್ಲಿ ಬ್ರಹ್ಮಾ, ಇಂದ್ರ ಮುಂತಾದ ದೇವತೆಗಳ ರೂಪದ ನಿರೂಪಣೆ ಇದೆ. ಐದನೆಯದರಲ್ಲಿ ಗ್ರಹ-ನಕ್ಷತ್ರ-ಕಾಲಗಳ ಲಕ್ಷಣವಿದೆ. ಆರನೆಯ ನಿಧಿಯಲ್ಲಿ ವಿಷ್ಣುಕ್ಷೇತ್ರ, ಶಾಲಿಗ್ರಾಮ ಇತ್ಯಾದಿಗಳ ಲಕ್ಷಣವನ್ನು ಹೇಳಲಾಗಿದೆ. ಏಳನೆಯದರಲ್ಲಿ ಶಿವಕ್ಷೇತ್ರ-ಶಿವಲಿಂಗ ಮುಂತಾದವುಗಳ ಲಕ್ಷಣವನ್ನು ಹೇಳಲಾಗಿದೆ. ಎಂಟನೆಯ ನಿಧಿಯಲ್ಲಿ ನಿಗಮ-ಆಗಮ-ತಂತ್ರ ಮೊದಲಾದುವುಗಳ ಲಕ್ಷಣವನ್ನು ಹೇಳಲಾಗಿದೆ. ಒಂಬತ್ತನೆಯ ನಿಧಿಯಲ್ಲಿ ಸಂಖ್ಯಾ-ಲಿಪಿಗೆ ಸಂಬಂಧಿಸಿದ ಕೌತುಕವು ಹೇಳಲ್ಪಟ್ಟಿದೆ. ಈ ನವನಿಧಿಗಳ ಜ್ಞಾನದಿಂದ ನವನಿಧಿಗಳೂ ಸುಲಭವಾಗಿ ದೊರೆಯುವಂತಾಗುತ್ತದೆ. 12-16

ಶ್ರೀ ಚಾಮುಂಡೇಶ್ವರೀಧ್ಯಾನ, ನೃಸಿಂಹಪ್ರಾಸಾದವೆಂಬ ಗ್ರಂಥದಲ್ಲಿ

ಈ ಜಯಂತಿಯು ಆಷಾಢಮಾಸದ ರೇವತೀನಕ್ಷತ್ರದಲ್ಲಿ ಬರುತ್ತದೆ.

ಚಂಡಿಯು ಚಿನ್ನದ ಕಾಂತಿಯನ್ನು ಹೊಂದಿದ ಸುಂದರಾಕೃತಿಯನ್ನುಳ್ಳವಳಾಗಿದ್ದಾಳೆ. ಈಕೆ ಮೂರು ಕಣ್ಣುಗಳುಳ್ಳವಳು, ಯುವತಿ. ಕೋಪಗೊಂಡಿದ್ದಾಳೆ. ಆದರೆ ಮಂದಹಾಸವಿರುವಂತೆ ಕಾಣುವಳು. ಸಣ್ಣನಡುವಿದ್ದು, ಅಗಲವಾದ ಕಣ್ಣುಗಳುಳ್ಳ ಈಕೆಗೆ ಸುಂದರವಾದ ಪುಷ್ಟವಾದ ಸ್ತನಗಳಿವೆ. ಒಂದು ಮುಖ, ಸುಂದರವಾದ ಕಂಠ, ಇಪ್ಪತ್ತು ಬಾಹುಗಳನ್ನು ಹೊಂದಿದ್ದಾಳೆ. ಶೂಲ, ಖಡ್ಗ, ಶಕ್ತಿ, ಚಕ್ರ, ಬಾಣ, ಶಂಖ, ವಜ್ರಾಯುಧ, ಅಭಯ, ಡಮರು, ಚೂರಿ ಎಂಬ ಆಯುಧಗಳನ್ನು ಬಲಗೈಗಳಿಂದ ಮೇಲಿನಿಂದ ಕೆಳಕ್ಕೆ ಬರುವ ಕ್ರಮದಲ್ಲಿ ಧರಿಸಿರುವ ಆ ದೇವಿಯು ಸದಾ ಮಂಗಲರೂಪೆ.

2 a/1 ಎಡಭಾಗದ ಹತ್ತು ಕೈಗಳಲ್ಲಿ ಅವಳು ಕ್ರಮವಾಗಿ ನಾಗ, ಪಾಶ, ಗುರಾಣಿ, ಕೊಡಲಿ, ಅಂಕುಶ, ಬಿಲ್ಲು, ಘಂಟೆ, ಧ್ವಜ, ಗದೆ ಮತ್ತು ಕನ್ನಡಿ ಇವುಗಳನ್ನು ಹಿಡಿದಿರುವ ಕಾಮರೂಪಿಣಿಯಾಗಿದ್ದಾಳೆ. ಚಂಡಿಯ ಕಾಲಿನ ಕೆಳಗೆ ತುಂಡಾಗಿ ಕೆಳಗೆ ಬಿದ್ದ ತಲೆಯುಳ್ಳಂಥ ಕೋಣವು ಇರುತ್ತದೆ. ಆ ಕೋಣದ ಕುತ್ತಿಗೆಯಿಂದ ಉದ್ಭವಿಸಿದ ಪುರುಷನು ಹೆದರಿದಂತೆ ಕಾಣುತ್ತಿದ್ದು ಕೈಯನ್ನು ಮೇಲಕ್ಕೆ ಎತ್ತಿರುತ್ತಾನೆ. ಅವನು ಶೂಲದಿಂದ ತಿವಿಯಲ್ಪಟ್ಟದ್ದರಿಂದ ರಕ್ತವನ್ನು ಕಕ್ಕುತ್ತಾನೆ.

ಅವನ ಹುಬ್ಬು, ಮೀಸೆ, ಕಣ್ಣುಗಳು ಕೆಂಪಾಗಿವೆ. ಸಿಂಹವು ಅವನನ್ನು ತಿನ್ನುತ್ತಿದೆ. ಅವನ ಕತ್ತನ್ನು ಪಾಶವು ಬಿಗಿಯಾಗಿಸುತ್ತಿದೆ. ಚಂಡಿಯು ಬಲಗಾಲನ್ನು ಸಿಂಹದ ಮೇಲಿಟ್ಟು ಬಲಗಾಲಿನಿಂದ ರಾಕ್ಷಸನನ್ನು ಮೆಟ್ಟಿನಿಂತಿದ್ದಾಳೆ. ಶಸ್ತ್ರಗಳನ್ನು ಎತ್ತಿಹಿಡಿದಿರುವ ಚಂಡಿ ಸಮಸ್ತ ಶತ್ರುಗಳನ್ನು ನಾಶಮಾಡಬಲ್ಲವಳು. (ಸುವರ್ಣವರ್ಣ) 17-23

2 a/2

ಮಹಾಕಾಳಿಯ ಸ್ವರೂಪ, ಚಂಡೀಕಲ್ಪದಲ್ಲಿ

ಖಡ್ಗ, ಚಕ್ರ, ಗದೆ, ಬಾಣ, ಬಿಲ್ಲು, ಪರಿಘ, ಶೂಲ, ಭೃಶುಂಡಿ, ಕಪಾಲ ಮತ್ತು ಶಂಖ ಇವುಗಳನ್ನು ಕೈಗಳಿಂದ ಧರಿಸಿರುವ, ಮೂರು ಕಣ್ಣುಗಳುಳ್ಳ, ಎಲ್ಲ ಅಂಗಗಳಲ್ಲಿ ಒಡವೆಗಳನ್ನು ತುಂಬಿರುವ, ಇಂದ್ರನೀಲಮಣಿಯ ಕಾಂತಿಯಿಂದ ಶೋಭಿಸುವ, ಹತ್ತು ಮುಖಗಳನ್ನೂ ಪಾದಗಳನ್ನೂ ಹೊಂದಿರುವ ಮಹಾಕಾಳಿಯ ಸೇವೆಯನ್ನುಮಾಡುತ್ತೇನೆ. ವಿಷ್ಣುವು ನಿದ್ರೆಯಲ್ಲಿದ್ದಾಗ ಮಧು-ಕೈಟಭರ ಸಂಹಾರಕ್ಕಾಗಿ, ಬ್ರಹ್ಮನು ಅವಳನ್ನು ಸ್ತೋತ್ರಮಾಡಿದನು. (ನೀಲವರ್ಣ)24

2 b/1

ಮಹಾಲಕ್ಷ್ಮಿಯ ಸ್ವರೂಪ, ಚಂಡೀಕಲ್ಪದಲ್ಲಿ

ಅಕ್ಷಮಾಲೆ(ಸ್ಫಟಿಕಹಾರ), ಪರಶು, ಗದೆ, ಬಾಣ, ವಜ್ರ, ಪದ್ಮ, ಬಿಲ್ಲು, ಕುಡಿಕೆ, ದಂಡ, ಶಕ್ತಿ, ಖಡ್ಗ, ಗುರಾಣಿ, ಶಂಖ, ಘಂಟೆ, ಹೆಂಡದ ಪಾತ್ರೆ, ಶೂಲ, ಪಾಶ, ಸುದರ್ಶನಚಕ್ರಗಳನ್ನು ಕೈಗಳಿಂದ ಧರಿಸಿಕೊಂಡು ಹವಳದ ಕಾಂತಿಯನ್ನು ಹೊಂದಿರುವವಳಾಗಿ, ಮಹಿಷನನ್ನು ಮರ್ದಿಸುತ್ತಿರುವ, ಪದ್ಮಾಸನೆಯಾದ ಮಹಾಲಕ್ಷ್ಮಿಯನ್ನು ಇಲ್ಲಿ ಧ್ಯಾನಿಸುತ್ತೇನೆ. (ಪ್ರವಾಲವರ್ಣ) 25

2 b/2

ಮಹಾಸರಸ್ವತೀ ಸ್ವರೂಪ, ಚಂಡೀಕಲ್ಪದಲ್ಲಿ

ಘಂಟೆ, ಶೂಲ, ನೇಗಿಲು, ಶಂಖ, ಒನಕೆ, ಚಕ್ರ, ಬಿಲ್ಲು ಮತ್ತು ಬಾಣ ಇವುಗಳನ್ನು ಕರಕಮಲಗಳಿಂದ ಧರಿಸಿದವಳನ್ನು, ಮೋಡದ ಅಂಚಿನಲ್ಲಿ ಹೊಳೆಯುವ ಚಂದ್ರಸಮಾನವಾದ ಕಾಂತಿಯುಳ್ಳವಳನ್ನು, ಗೌರಿಯ ದೇಹದಿಂದ ಉದ್ಭವಿಸಿದವಳನ್ನು, ಮೂರುಲೋಕಗಳಿಗೆ ಆಧಾರಭೂತಳಾದವಳನ್ನು, ಶುಂಭ ಮುಂತಾದ ರಾಕ್ಷಸರನ್ನು ಹಿಂಸಿಸುವ ಮಹಾಸರಸ್ವತಿಯನ್ನು ಭಜಿಸುತ್ತೇನೆ. (ಶ್ವೇತವರ್ಣ) 26

3 a/1

ರಾಜರಾಜೇಶ್ವರೀ ಧ್ಯಾನ, ಷೋಡಶೀಕಲ್ಪದಲ್ಲಿ

ರಾಜರಾಜೇಶ್ವರಿಯು ಕೋಟಿಮನ್ಮಥರ ಲಾವಣ್ಯವನ್ನು ಹೊಂದಿರುವ ಶಿವನ ಎಡತೊಡೆಯ ಮೇಲೆ ಕುಳಿತಿದ್ದಾಳೆ. ಒಂದೇ ಕಾಲದಲ್ಲಿ ಒಟ್ಟಿಗೆ ಉದಯಿಸಿದ ಅನೇಕ ಕೋಟಿ ಸೂರ್ಯಚಂದ್ರರ ಕಾಂತಿಯನ್ನು ಪಡೆದಿದ್ದಾಳೆ. ಅನೇಕ ಕೋಟಿಬ್ರಹ್ಮಾಂಡಮಂಡಲಗಳನ್ನು ತನ್ನ ಕಾಂತಿಯಿಂದ ಪಾಟಲವರ್ಣಮಯಗಳನ್ನಾಗಿ ಮಾಡಿದ್ದಾಳೆ. ದಾಸವಾಳದ ಹೂವಿನ ಬಣ್ಣಕ್ಕೆ ಸಮಾನಳಾದ ಆ ದೇವಿ ಅಜಪಾಗಾಯತ್ರಿಯ ಸ್ವರೂಪದ 'ಅಜಪಾ' ಆಗಿರುವಳು. ಕುಂಕುಮದ ಒಳಭಾಗ(ಕೇಸರಗಳು)ದಂತೆ, ದಾಳಿಂಬೆಯ ಹೂವಿನಂತೆ ಅರುಣವರ್ಣದವಳಾಗಿದ್ದಾಳೆ. ಉದಯಿಸುವ ಕೋಟಿ ಸೂರ್ಯರ ಕಾಂತಿ ಅವಳಿಗಿದೆ. ಮೂರು ಕಣ್ಣುಗಳಿಂದ ಕೂಡಿರುವಳು. ಬಾಲಚಂದ್ರನಿಂದ ಕೂಡಿರುವ ಕಿರೀಟದಿಂದ ಆಕೆಯು ಶೋಭಿಸುತ್ತಿರುವಳು. ಅವಳ ಕೈಗಳು ಪಾಶ, ಅಂಕುಶ, ಕಬ್ಬಿನ ಬಿಲ್ಲು ಮತ್ತು ಐದುಬಾಣಗಳಿಂದ

ಶೋಭಿಸುತ್ತಿವೆ. ಅವಳ ವಸ್ತ್ರವು ಸ್ತಬ್ಧವಾಗಿ ಹೊಳೆಯುವ ಕೋಟ್ಯಂತರ ಮಿಂಚುಗಳ ಪ್ರಭೆಯಂತೆ ಪಿಂಗಳವರ್ಣದ್ದಾಗಿದೆ. ಸಮವೃತ್ತವೂ, ವೃತ್ತಾಕಾರವಾಗಿಯೂ ಇರುವ ವಿಶಾಲವಾದ ಜಘನ ಮತ್ತು ಸ್ತನಗಳನ್ನು ಅವಳು ಹೊಂದಿರುವಳು. ಕಿರೀಟದ ತುದಿಯಲ್ಲಿ ಸಂಬದ್ಧವಾದ ಚಂದ್ರನ ಬೆಳದಿಂಗಳಿಂದ ಅವಳು ತೊಯ್ದಿದ್ದಾಳೆ. ಅವಳ ಮೂರನೆಯ ಕಣ್ಣು ಹಣೆಯಲ್ಲಿ ತಿಲಕದಂತಿದೆ. ಆಕೆಯ ಕಣ್ಣುಗಳು ಅಭಿಲಾಷಾಪೂರ್ಣವಾಗಿವೆ. ಕಡೆಗಣ್ಣಿನ ನೋಟಗಳ ಪಂಕ್ತಿಯಿಂದ
3 b ಹೊಮ್ಮುವ ಕರುಣೆಯಿಂದ ಅವಳ ಕಣ್ಣುಗಳು ತುಂಬಿವೆ. ಸೂರ್ಯ-ಚಂದ್ರಮಂಡಲಗಳ ಆಕಾರದಲ್ಲಿರುವ ಮಣಿಕುಂಡಲಗಳಿಂದ ಅವಳು ವಿರಾಜಿತಳಾಗಿದ್ದಾಳೆ. ಶುಕ್ರತಾರೆ(ನಕ್ಷತ್ರ)ಯ ಆಕಾರವನ್ನುಳ್ಳ ನಾಸಾಭರಣದಿಂದ ಅವಳು ಶೋಭಿಸುತ್ತಿದ್ದಾಳೆ. ಅವಳ ಹಲ್ಲುಗಳ ಪಂಕ್ತಿಯು ದಾಳಿಂಬೆಯ ಬೀಜಗಳ ಸಮೂಹವೆ ಎಂಬ ಸಂದೇಹ ವನ್ನು ಹುಟ್ಟಿಸುವಂತಿದೆ. ಅವಳ ಮಾತಿನ ಧ್ವನಿಯ ಆರಂಭವು ವೀಣಾಧ್ವನಿಯನ್ನು ನಾಚಿಸುವಂತಿದೆ. ಅವಳು ಮೆಲ್ಲುತ್ತಿರುವ ಕರ್ಪೂರದಿಂದ ಕೂಡಿದ ತಾಂಬೂಲದ ಸುಗಂಧದಿಂದ ದಿಗ್ಭಾಗಗಳು ಸುಗಂಧಪೂರ್ಣವಾಗಿವೆ.

ರಾಜರಾಜೇಶ್ವರಿಯ ಕಪೋಲಗಳ ಕಾಂತಿಯು ಮಣಿ(ಕನ್ನಡಿ)ಯ ಅಹಂಕಾರವನ್ನು ನಾಶಮಾಡುವಂತಿದೆ. ಅವಳು ಸದಾ ಪ್ರಸನ್ನಮುಖಕಮಲೆ. ನೋಟವು ಮಂದಹಾಸದಿಂದ ಕೂಡಿದೆ. ಮಣಿಗಳ ಮಂಗಳಸೂತ್ರದಿಂದ ಶಂಖದಂತಹ ಅವಳ ಕಂಠವು ಶೋಭಿಸುತ್ತಿದೆ. ಅವಳ ನಾಲ್ಕು ಬಾಹುಲತೆಗಳು ಆಶ್ರಿತರಿಗೆ ಕಲ್ಪಲತೆಗಳಾಗುತ್ತವೆ. ಚಿಗುರಿನಂತಹ ಅವಳ ಬೆರಳುಗಳು ರತ್ನದ ಉಂಗುರಗಳ ಸಮೂಹದಿಂದ ಶೋಭಿಸುತ್ತವೆ. ಮೊನಚಾದ ಅವಳ ಸ್ತನಪರ್ವತಗಳು ಹೊಳೆಯುವ ಹಾರಗಳೆಂಬ ಝರಿಗಳಿಂದ ಶೋಭಿಸುತ್ತವೆ. ಸ್ತನಭಾರದಿಂದ ನಡುವು ಬಗ್ಗುತ್ತಿರುವುದರಿಂದ ಉದರಭಾಗವು ತ್ರಿವಳಿಗಳಿಂದ ಕೂಡಿದೆ. ಅವಳ ಸೊಂಟದಲ್ಲಿ ಬೆಲೆಕಟ್ಟಲಾಗದ ರತ್ನಗಳನ್ನು ಪೋಣಿಸಿದ ಒಡ್ಯಾಣವಿದೆ. ಅವಳ ಜಂಘೆ ಮತ್ತು ತೊಡೆಗಳು ದುಂಡಾಗಿವೆ. ಪಾದಗಳ ಗುಲ್ಫ(ಹರಡು)ಗಳು ಮೇಲೆ ಕಾಣಿಸದಂತೆ ಬಚ್ಚಿಟ್ಟುಕೊಂಡಿವೆ. ಸುರುಳಿ ಸುರುಳಿಯಾದ ಗುಂಗುರು ಕೂದಲುಗಳಿವೆ. ಧ್ವನಿಗೈಯುತ್ತಿರುವ ಮಣಿನೂಪುರಗಳಿಂದ ಸುಂದರವಾದ ಪಾದಕಮಲಗಳಿಂದ ಆಕೆಯು ಸುಂದರಿಯಾಗಿದ್ದಾಳೆ.

ರತ್ನಮಯವಾದ ಕಂಠಾಭರಣ, ಬಳೆ, ಕಿರೀಟ, ಅಂಗದ(ತೋಳಿನ ಆಭರಣ) ಮತ್ತು ಕಂಕಣಗಳನ್ನು ರಾಜರಾಜೇಶ್ವರಿ ಧರಿಸಿದ್ದಾಳೆ. ಅವಳ ಕತ್ತು ಶಂಖದಂತಿದೆ. ಮೂಗು ಸುಂದರವಾಗಿದೆ. ತುಟಿಗಳು ತೊಂಡೆಹಣ್ಣಿನಂತಿವೆ. ಮುಖವು ಚಂದ್ರನಂತಿದೆ. ಶೃಂಗಾರದ ಸಮಸ್ತ ಉಡುಗೆಯನ್ನು ಹೊಂದಿರುವ ಆಕೆ ಸಮಸ್ತ ಆಭರಣಗಳಿಂದ ಅಲಂಕೃತಳಾಗಿದ್ದಾಳೆ. ಚಂದನ, ಅಗುರು, ಕರ್ಪೂರ, ಕಸ್ತೂರಿ ಮೊದಲಾದುವುಗಳ ಸುವಾಸನೆಯನ್ನು ಹೊಂದಿದ್ದಾಳೆ. ಕಾರಣೇಶನ ತಲೆಯ ರತ್ನಗಳನ್ನು ಅವಳ ಪಾದಕಮಲಗಳು ಉಜ್ಜುತ್ತಿವೆ. ಆಕೆಯು ಪಂಚಪ್ರೇತಾಸನದಲ್ಲಿ ಆಸೀನಳಾಗಿರುವಳು. ರಾಜರಾಜೇಶ್ವರಿ ಐದು ಓಂಕಾರಗಳನ್ನೇ ತನ್ನ ಸ್ವರೂಪವಾಗಿ ಹೊಂದಿದ್ದಾಳೆ. (ಸಿಂದೂರವರ್ಣ) 27-42

ರಾಜರಾಜೇಶ್ವರಿಯ ಇಪ್ಪತ್ತೈದು ಹೆಸರುಗಳು, ಲಲಿತೋಪಾಖ್ಯಾನದಲ್ಲಿ

ಸಿಂಹಾಸನೇಶೀ, ಲಲಿತಾ, ಮಹಾರಾಜ್ಞೀ, ಪರಾಂಕುಶಾ, ಚಾಪಿನೀ, ತ್ರಿಪುರಾ, ಮಹಾತ್ರಿಪುರಸುಂದರೀ, ಸುಂದರೀ, ಚಕ್ರನಾಥಾ, ಸಮ್ರಾಜ್ಞೀ, ಚಕ್ರಿಣೀ, ಚಕ್ರೇಶ್ವರೀ, ಮಹಾದೇವೀ, ಕಾಮೇಶೀ, ಪರಮೇಶ್ವರೀ, ಕಾಮರಾಜಪ್ರಿಯಾ, ಕಾಮಕೋಟಿಕಾ, ಚಕ್ರವರ್ತಿನೀ, ಮಹಾವಿದ್ಯಾ, ಶಿವಾ, ಅನಂಗವಲ್ಲಭಾ, ಸರ್ವಪಾಟಲಾ, ಕುಲನಾಥಾ, ಆಮ್ನಾಯ-ನಾಥಾ, ಸರ್ವಾಮ್ನಾಯನಿವಾಸಿನೀ, ಶೃಂಗಾರನಾಯಿಕಾ ಎಂಬಿವು ಇಪ್ಪತ್ತೈದು ಹೆಸರುಗಳು. 43-46

ಷೋಡಶೀಧ್ಯಾನ, ಗಗನಾನಂದನಾಥ ವಿರಚಿತವಾದ ಶ್ರೀವಿದ್ಯಾವಿಲಾಸದಲ್ಲಿ

ಕಬ್ಬಿನಬಿಲ್ಲು, ಹೂವಿನ ಬಾಣ, ಪಾಶ, ಅಂಕುಶ, ಪುಸ್ತಕ, ಮಾಣಿಕ್ಯಗಳ ಜಪಮಾಲೆ, ಮಣಿಘಟಿತವಾದ ವೀಣೆ, ಎರಡು ಪದ್ಮಗಳನ್ನೂ, ವರ, ಅಭಯಮುದ್ರೆಗಳನ್ನೂ ಕೈಗಳಲ್ಲಿ ಧರಿಸಿರುವ, ಬ್ರಹ್ಮಾದಿದೇವತೆಗಳಿಂದ ಸೇವೆಗೊಳ್ಳುತ್ತಿರುವ, ಸಿಂದೂರದಂತೆ ಅರುಣವರ್ಣದ ದೇಹವನ್ನು ಹೊಂದಿರುವ, ಭಗವತೀ ಷೋಡಶಿಯನ್ನು ಸದಾ ಧ್ಯಾನಿಸಬೇಕು. (ಸಿಂಧೂರವರ್ಣ) (ಇದರ ಚಿತ್ರವನ್ನು ಬರೆದಿಲ್ಲ). 47

4 a ಶ್ರೀಚಕ್ರದಲ್ಲಿ ಲೋಹ(ಕಬ್ಬಿಣ)ದಿಂದ ನಿರ್ಮಿಸಿರುವ ಮೊದಲನೆ ಪ್ರಾಕಾರದಲ್ಲಿ ಮಹಾಕಾಳೀಸಮೇತ ಮಹಾಕಾಲನ ಧ್ಯಾನ, ಲಲಿತೋಪಾಖ್ಯಾನದಲ್ಲಿ

ಶ್ರೀ ಚಾಮುಂಡಾಂಬಿಕಾಯ್ಯೆ ನಮಃ

ಶ್ರೀದೇವಿಯ ಪಾದಾರವಿಂದಗಳ ಸೇವೆಯನ್ನು ನಿರ್ವಹಿಸುವುದಕ್ಕೊಸ್ಕರ ಕೃಷ್ಣರಾಜಭೂಪಾಲನು ಲಲಿತೋಪಾಖ್ಯಾನವೆಂಬ ಅಮೃತಸಮುದ್ರರಸದ ಸಾರಸಂಗ್ರಹವನ್ನು ಮಾಡುವನು. 48

ಶ್ರೀಮದ್ರಾಜೇಶ್ವರಿಯ ನಿತ್ಯನಿವಾಸಸ್ಥಾನವಾದ ಇಪ್ಪತ್ತೈದು ಪ್ರಾಕಾರಗಳನ್ನುಳ್ಳ, ಶ್ರೀನಗರಮಧ್ಯದಲ್ಲಿರುವ ಶ್ರೀಚಕ್ರರಾಜರೂಪವಾದ ಶ್ರೀಮತ್‌ಚಿಂತಾಮಣಿಗೃಹದ ಮೊದಲ ಪ್ರಾಕಾರವನ್ನು ಆರಂಭಿಸಿ ಬಿಂದು ಪೀಠಾಂತದವರೆಗೆ, ಆಯಾ ಕೋಟೆಯ ಆವರಣ, ದೇವತಾಸ್ವರೂಪಗಳನ್ನು ಪ್ರತಿದಿನದ ಧ್ಯಾನದ ಉಪಯೋಗಕ್ಕಾಗಿ ಇಲ್ಲಿ ಸಚಿತ್ರವಾಗಿ ಮೊದಲಿಗೆ ನಿರೂಪಿಸಲಾಗುತ್ತದೆ.

ಎತ್ತರವಾದ ಮೇರುಪರ್ವತವು ಒಂದುಸಹಸ್ರಯೋಜನಗಳಿದ್ದು ಅಖಿಲಜಗತ್ತಿಗೆ ಆಧಾರವಾಗಿದೆ. ಹದಿನಾಲ್ಕು ಜಗತ್ತುಗಳ ಸಮೂಹದಲ್ಲಿ ಮೇರುಪರ್ವತದ ಗಾತ್ರವು ಹಾಸುಹೊಕ್ಕಾಗಿದೆ. ಪೂರ್ವ, ನೈಋತ್ಯ, ವಾಯವ್ಯ ದಿಕ್ಕುಗಳಲ್ಲಿ ಮತ್ತು ಮಧ್ಯದಲ್ಲಿ ಅದರ ನಾಲ್ಕು ಶಿಖರಗಳಿವೆ. ಅವುಗಳ ಎತ್ತರವನ್ನು ಈಗ ಹೇಳಲಾಗುತ್ತದೆ. ಮೊದಲು ಹೇಳಿದ ಮೂರು ಶಿಖರಗಳು ನೂರುಯೋಜನ ಎತ್ತರವಾಗಿಯೂ, ನೂರುಯೋಜನ ವಿಸ್ತಾರವೂ ಆಗಿವೆ. ಅವುಗಳ ಮೇಲೆ ಬ್ರಹ್ಮಲೋಕ, ವಿಷ್ಣುಲೋಕ ಮತ್ತು ರುದ್ರಲೋಕಗಳಿವೆ. ಇವುಗಳ ಗೃಹವಿನ್ಯಾಸಗಳನ್ನು ಬೇರೆ ಸಂದರ್ಭದಲ್ಲಿ ಹೇಳುವೆನು. ಮಧ್ಯದಲ್ಲಿರುವ ಶಿಖರದ ವಿಸ್ತಾರವನ್ನೂ, ಎತ್ತರವನ್ನೂ ಶ್ರವಣಮಾಡು. ಅದು ನಾಲ್ಕುನೂರು ಯೋಜನ ವಿಸ್ತಾರವನ್ನೂ, ಅಷ್ಟೇ ಎತ್ತರವನ್ನೂ ಹೊಂದಿದೆ. ಆ ಮಹಾಶಿಖರದಲ್ಲಿಯೇ ಇಬ್ಬರು ಶಿಲ್ಪಿಗಳಿಂದ ಶ್ರೀಪುರವು ನಿರ್ಮಿತವಾಗಿದೆ.

ಎಲೈ ಕುಂಭಸಂಭವ ಅಗಸ್ತ್ಯನೆ, ನಾಲ್ಕುನೂರು ಯೋಜನಗಳ ವಿಸ್ತಾರದಲ್ಲಿ ಒಳಗಿನ ವಿಭಾಗಗಳನ್ನು ವಿಶದವಾಗಿ ತೋರಿಸುತ್ತೇನೆ. ಮೊದಲನೆಯ ಕೋಟೆಯು ಕಬ್ಬಿಣದಿಂದ ನಿರ್ಮಿತವಾಗಿದೆಯೆಂದು ಹೇಳಲಾಗಿದೆ. ಇದು ನಾಲ್ಕು ದಿಕ್ಕುಗಳಲ್ಲಿಯೂ ಬಾಗಿಲುಗಳನ್ನು ಹೊಂದಿದೆ. ನಾಲ್ಕುಗೋಪುರಗಳಿಂದ ಕೂಡಿದೆ. ಒಂದೊಂದು ಬಾಗಿಲಿನಲ್ಲೂ ಕಬ್ಬಿಣದಿಂದ ಮಾಡಿದ ಎರಡೆರಡು ಕವಾಟಗಳಿವೆ. ಕಾಲಾಯಸ(ಕಬ್ಬಿಣ)ವೆಂಬ ಕೋಟೆಯೊಳಗೆ ಏಳು ಯೋಜನಗಳ ಅಂತರದಲ್ಲಿ ಹಿಂದೆ ಹೇಳಿರುವಂತೆಯೇ ಗೋಪುರಗಳನ್ನುಳ್ಳ ಕಂಚಿನಕೋಟೆ ಇದೆ. ಕಾಲಾಯಸ ಮತ್ತು ಕಂಚಿನಕೋಟೆಗಳ ಸುತ್ತಲೂ ಮಧ್ಯದೇಶವಿದೆ. ಅಲ್ಲಿ ನಾನಾ ಮರಗಳಿರುವ ದೊಡ್ಡ ಉದ್ಯಾನವಿದೆ. ಕುಂಭ ಸಂಭವನೆ, ಎಷ್ಟು ಪ್ರಕಾರದ ಸಸ್ಯಗಳು ಲೋಕದಲ್ಲಿವೆಯೋ, ಅವೆಲ್ಲವೂ ಆ ಉದ್ಯಾನದಲ್ಲಿವೆ.

ಅಲ್ಲಿರುವ ಸಹಸ್ರಾರು ಮರಗಳು ಯಾವಾಗಲೂ ಚಿಗುರು ಹೂವು, ಹಣ್ಣುಗಳಿಂದ ಶೋಭಿಸುವುವು. ಅವು ಯಾವಾಗಲೂ ಸುಗಂಧಪೂರ್ಣವಾಗಿವೆ. ಅಲ್ಲಿ ಕಾಳಿಯನ್ನು ಆಲಿಂಗಿಸಿಕೊಂಡಿರುವ ಶರೀರವುಳ್ಳ ಮಹಾಕಾಲನು ನೆಲೆಸಿದ್ದಾನೆ. ಸರ್ವಲೋಕಸಂಹಾರಕನಾದ ಮಹಾಕಾಲನು ಕಪ್ಪುಬಣ್ಣದ ದೇಹವುಳ್ಳವನು. ಕಪ್ಪುಬಣ್ಣದ ಕಂಚುಕವನ್ನು ಧರಿಸಿ ಮದದಿಂದ ಕೆಂಪಾದ ಕಣ್ಣುಗಳುಳ್ಳವನಾಗಿ ಬ್ರಹ್ಮಾಂಡವೆಂಬ ಪಾನಪಾತ್ರೆಯಲ್ಲಿ ತುಂಬಿರುವ ವಿಶ್ವವೆಂಬ ರಸಾಸವವನ್ನು ಕುಡಿಯುತ್ತಿದ್ದಾನೆ. ಕಾಮದಿಂದ ಕ್ಲಿನ್ನಳಾದ ಮೋಡದಂತೆ ಕಪ್ಪುಬಣ್ಣದ ಮಹಾಕಾಳಿಯನ್ನು ಕಡೆಗಣ್ಣಿನಿಂದ ನೋಡುತ್ತಾ ಮಂಗಳಕರವಾದ, ಕಲ್ಪನಾತ್ಮಕವಾದ ಸಿಂಹಾಸನದಲ್ಲಿ ಕುಳಿತಿರುವನು. ಕಾಲಮೃತ್ಯುಪ್ರಮುಖರಾದ ಸೇವಕರು ಮಹಾಕಾಲನ ಸೇವೆಯನ್ನು ಮಾಡುತ್ತಿದ್ದಾರೆ. ಲಲಿತಾದೇವಿಯ ಧ್ಯಾನ ಮಾಡುತ್ತಾ ಅವಳ ಪೂಜೆಯಲ್ಲಿ ಉತ್ಸಾಹಿಯಾಗಿ ಲಲಿತಾದೇವಿಯ ಭಕ್ತರಿಗೆ ಸುದೀರ್ಘವಾದ ಆಯುಷ್ಯವನ್ನು ನೀಡುತ್ತಿದ್ದಾನೆ. ಲಲಿತಾದೇವಿಯ ಅಪ್ಪಣೆಯನ್ನು ನಡೆಸುವ ಮಹಾಕಾಳಿ ಮತ್ತು ಮಹಾಕಾಳರು ಪ್ರಥಮೋದ್ಯಾನದಲ್ಲಿ ನೆಲಸಿಕೊಂಡು ಸಂಪೂರ್ಣವಾದ ವಿಶ್ವವನ್ನು ನಿರ್ವಹಿಸುತ್ತಾರೆ. ಅವನ(ಮಹಾಕಾಲ) ಆಸನವಾಗಿರುವ ಬೃಹತ್ಪ್ರಮಾಣದ ಕಾಲಚಕ್ರವು ನಾಲ್ಕು ಆವರಣಗಳನ್ನು ಹೊಂದಿದೆ. ಅದರ ನಡುವು ಬಿಂದುವಿನಿಂದ ಚಿತ್ತಾಕರ್ಷಕವಾಗಿದೆ. ಇಲ್ಲಿ(ಕಾಲಚಕ್ರ) ತ್ರಿಕೋಣ, ಪಂಚಕೋಣ, ಹದಿನಾರು ದಳಗಳ ತಾವರೆ, ಎಂಟು ಅರ(ದಳ)ಗಳ ತಾವರೆಗಳಿವೆ. ಮಹಾಕಾಲನು ಮಧ್ಯದಲ್ಲಿ ನೆಲೆಸಿದ್ದಾನೆ. ತ್ರಿಕೋಣದಲ್ಲಿ ಮಹಾಕಲ್ಪಾ, ಮಹಾಸಂಧ್ಯಾ ಮತ್ತು ಮಹಾನಿಶಾ ಈ ಮೂವರು ಮಹಾದೇವಿಯರು
4 b ಮಹಾಕಾಲನ ಶಕ್ತಿಗಳಾಗಿದ್ದಾರೆ. ಪಂಚಕೋಣದಲ್ಲಿ, ಕೃತಾ, ಶ್ವೇತಾ, ದ್ವಾಪರಾ, ಕಲಿ ಹಾಗೂ ಮನ್ವಂತರಾ ಇವರು ಮಹಾಕಾಲನ ಶಕ್ತಿಗಳಾಗಿರುವರು.

ಅಲ್ಲಿಯೇ ಪಂಚಕೋಣಾಗ್ರದಲ್ಲಿ ಪ್ರತ್ಯೂಷಾ, ಪಿತೃಪ್ರಸೂ, ಪ್ರಾಹ್ಣಾ, ಅಪರಾಹ್ಣಾ, ಮಧ್ಯಾಹ್ನಾ ಈ ಐದು ಕಾಲನ ಶಕ್ತಿಗಳಿರುತ್ತವೆ. ಮುನಿಯೆ, ಹದಿನಾರು ದಳಗಳ ಕಮಲದಲ್ಲಿ ಇರುವ ದೇವಿಯರನ್ನು ಶ್ರವಣಮಾಡು. ದಿವಾ, ನಿಶಾ, ತಮಿಸ್ರಾ, ಜ್ಯೋತ್ಸ್ನಾ, ಪಕ್ಷಿಣೀ, ಪ್ರದೋಷಾ, ನಿಶೀಥಾ, ಪ್ರಹರಾ, ಪೂರ್ಣಿಮಾ, ರಾಕಾ, ಅನುಮತಿ, ಅಮಾತಿಥಿ, ಸಿನೀವಾಲೀ, ಕುಹೂ, ಭದ್ರಾ ಹಾಗೂ ಷೋಡಶೀ ಈ ಹದಿನಾರು ಶಕ್ತಿಗಳು ಷೋಡಶಪತ್ರಗಳಲ್ಲಿ ನೆಲೆಸಿರುವರು. ಕಲಾ, ಕಾಷ್ಠಾ, ನಿಮೇಷಾ, ಕ್ಷಣಾ, ಲವಾ, ತ್ರುಟಿ, ಮುಹೂರ್ತಾ, ಕುತಪಾ, ಹೋರಾ, ಶುಕ್ಲಪಕ್ಷಾ, ಕೃಷ್ಣಪಕ್ಷಾ, ಅಯನಾ, ವಿಷುವಾ, ಸಂವತ್ಸರಾ, ಪರಿವತ್ಸರಾ, ಇಡಾವತ್ಸರಾ ಈ ಹದಿನಾರು ಶಕ್ತಿಗಳು ಹದಿನಾರು ಪತ್ರಗಳ ಅಂಗಗಳಲ್ಲಿ ವಾಸಿಸುವವರೆಂದು ಹೇಳಲ್ಪಟ್ಟಿರುವರು. ಇದ್ವತ್ಸರಾ, ಇಡಾವತ್ಸರಾ, ವತ್ಸರಾ, ತಿಥಿ, ವಾರಾ, ನಕ್ಷತ್ರಾ, ಯೋಗಾ, ಕರಣಾ ಈ ಶಕ್ತಿಗಳು ಅಷ್ಟಪತ್ರಕಮಲದ ಮೇಲೆ ನೆಲೆಸಿರುವರು. ಕಲಿ, ಕಾಲ್ಯಾ, ಕಲನಾ ಮತ್ತು ಕಾಲೀ ಎಂಬ ನಾಲ್ವರು ದೀಪ್ಯಮಾನನಾದ ಕಾಲಚಕ್ರನ ದ್ವಾರಪಾಲಕಕಾರ್ಯದಲ್ಲಿ ತೊಡಗಿರುವರು. ಮಹಾಕಾಲನ ದೇವಿಯರಾದ ಇವರೆಲ್ಲರು ಮದದಿಂದ ಮೊಗದಲ್ಲಿ ನಗುವನ್ನು ತುಂಬಿ ಮದ್ಯಪೂರ್ಣವಾದ ಪಾನಪಾತ್ರೆಯನ್ನು ಕೆಂಬಣ್ಣದ ಕಾಂತಿಯುಳ್ಳ ಮಾಂಸವನ್ನು ಹಿಡಿದು ಶ್ಯಾಮಲವರ್ಣದೇಹವುಳ್ಳವರಾಗಿ ಕಾಲನ ಸ್ತ್ರೀಯರಾಗಿದ್ದಾರೆ. ಇವರು ಲಲಿತಾದೇವಿಯ, ಪೂಜನ, ಧ್ಯಾನ, ಜಪ, ಹಾಗೂ ಸ್ತೋತ್ರಗಳಲ್ಲಿ ನಿರತರಾಗಿ ಕಾಲಚಕ್ರಾಸನದಲ್ಲಿ ನೆಲೆಸಿರುವ ಮಹಾಕಾಲನ ಸೇವೆಯನ್ನು ಮಾಡುವರು. 49-80

ಈ ರೀತಿಯಾಗಿ ಮೊದಲನೆ ಕೋಟೆ.

ಈ ಕಬ್ಬಿಣದ ಕೋಟೆಯ ಹಾಗೂ ಮುಂದಿರುವ ಕಂಚಿನಕೋಟೆಯ ಮಧ್ಯಭಾಗದ ಮೊದಲ ಅಂಕಣದಲ್ಲಿ ವಿವಿಧವೃಕ್ಷಗಳಿಂದ ಕೂಡಿದ ಉದ್ಯಾನದಲ್ಲಿ ಕಾಲಚಕ್ರಾಸನದ ಮೇಲೆ ಚಕ್ರದಲ್ಲಿರುವ ದೇವತೆಗಳೊಂದಿಗೆ
4 b/1 ಮಹಾಕಾಲೀಸಮೇತನಾದ ಮಹಾಕಾಲನು ರಕ್ಷಕನಾಗಿರುತ್ತಾನೆ. ಮಹಾಕಾಲನು ನೀಲವರ್ಣ. ಮಹಾಕಾಲಿಯು ನೀಲವರ್ಣೆ. ನಾನಾವೃಕ್ಷಗಳಿಂದ ಕೂಡಿದ ವನವಾಟಿಕೆ(ಉದ್ಯಾನ).

5 a

ಎರಡನೆ ಕಂಚಿನ ಕೋಟೆಯಲ್ಲಿರುವ ಮಧುಶ್ರೀ, ಮಾಧವಶ್ರೀ ಸಮೇತನಾದ ವಸಂತಋತುವಿನ ಧ್ಯಾನ, ಲಲಿತೋಪಾಖ್ಯಾನದಲ್ಲಿ

ಕಂಚಿನ ಕೋಟೆಯ ನಡುವೆ ಏಳು ಯೋಜನಗಳ ದೂರದಲ್ಲಿ ಚೌಕಾಕಾರದ ತಾಮ್ರದ ಕೋಟೆಯಿದೆ. ಅದು ಏಳು ಯೋಜನಗಳಷ್ಟು ಎತ್ತರವಾಗಿದೆ. ಇವೆರಡರ ನಡುವಿನ ಭೂಭಾಗವು 'ಕಲ್ಪಕ-ವಾಟಿಕಾ' ಎಂಬುದು. ಮಹರ್ಷಿ ಅಗಸ್ತ್ಯನೆ, ಆ ಕಲ್ಪವಾಟಿಕೆಯಲ್ಲಿ ಮಹಾತೇಜಸ್ವಿಯಾದ ವಸಂತಋತುವು ರಕ್ಷಕನಾಗಿರುವನು. ಆತನ ಚಕ್ರವನ್ನು ಶ್ರವಣಮಾಡು. ತ್ರಿಕೋಣ, ಪಂಚಕೋಣ, ಅಷ್ಟಕೋಣ, ಪದ್ಮ,ಷೋಡಶಕೋಣ, ಪದ್ಮ,ದಶಕೋಣಗಳ ಎರಡು ಪದ್ಮಗಳು, ಹಾಗೂ ಚತುರಶ್ರ, ಈ ರೀತಿಯಾಗಿ ಈ ಚಕ್ರವು ಏಳು ಆವರಣಗಳಿಂದ ಕೂಡಿದೆ. ಈ ಚಕ್ರಮಧ್ಯದಲ್ಲಿ ಬಿಂದುಚಕ್ರದಲ್ಲಿ ತೇಜೋಮಯನಾದ ವಸಂತಋತುವು ಇರುವನು. ಆತನ ಎರಡು ತೊಡೆಗಳ ಮೇಲೆ ಮಧುಶ್ರೀ ಮತ್ತು ಮಾಧವಶ್ರೀ ಎಂಬ ಸ್ತ್ರೀಯರಿರುವರು. ಋತುವಸಂತನು ತನ್ನೆರಡು ಹಸ್ತಗಳಿಂದ ಇಬ್ಬರು ಹೆಂಗಳೆಯರ ಒಂದೊಂದು ಸ್ತನವನ್ನು ಒತ್ತುತ್ತಿರುವನು. ಬೇರೆ ಎರಡು ಹಸ್ತಗಳಿಂದ ಸುಗಂಧವುಳ್ಳ ಸ್ವರ್ಗಪುಷ್ಪ(ಕಲ್ಪವೃಕ್ಷದ ಪುಷ್ಪ)ದ ಮದಿರೆಯಿಂದ ತುಂಬಿದ ಪಾನಪಾತ್ರೆಯನ್ನು ಮತ್ತು ಮಾಂಸವನ್ನು ಹಿಡಿದುಕೊಂಡು ಪುಷ್ಪಸಿಂಹಾಸನದ ಮೇಲೆ ಆರೂಢನಾಗಿದ್ದಾನೆ. ಹೂವುಗಳ ಮದ್ಯದ ಮದದಿಂದ ಕೆಂಬಣ್ಣವನ್ನು ಹೊಂದಿರುವನು. ಆತನು ಪುಷ್ಪಾಯುಧ, ಪುಷ್ಪಭೂಷಣ, ಪುಷ್ಪಛತ್ರದಿಂದ ಅಲಂಕೃತನು. ಅಗಸ್ತ್ಯಮಹರ್ಷಿಯೆ, ಈ ವಸಂತ ಚಕ್ರದಲ್ಲಿರುವ ದೇವತೆಗಳನ್ನು ನಿನಗೆ ಹೇಳುವೆನು. ಚೈತ್ರಶುದ್ಧಪಾಡ್ಯ ಮೊದಲುಗೊಂಡು ವೈಶಾಖಕೃಷ್ಣಪಕ್ಷದ ಕೊನೆಯವರೆಗೂ ಇರುವ ಆತನ ಚಕ್ರದೇವತೆಗಳು ಅರುವತ್ತು. ಈ ಶಕ್ತಿಗಳಿಂದ ಕೂಡಿದವನಾಗಿ ವಸಂತನು ಲಲಿತಾಂಬಿಕೆಯ ಸೇವೆಮಾಡುತ್ತಿರುವನು. 81-89

ಈ ರೀತಿಯಾಗಿ ಎರಡನೆ ಕೋಟೆ.

5 a/1 ಈ ಕಂಚಿನ ಕೋಟೆಯ ಹಾಗೂ ಮುಂದಿರುವ ತಾಮ್ರದ ಕೋಟೆಯ ಮಧ್ಯಭಾಗದ ಎರಡನೆ ಅಂಕಣದ ಕಲ್ಪವಾಟಿಕೆಯಲ್ಲಿ ವಸಂತಚಕ್ರಾಸನದಲ್ಲಿ ಚಕ್ರದಲ್ಲಿರುವ ದೇವತೆಗಳು ಹಾಗೂ ಮಧುಶ್ರೀ, ಮಾಧವಶ್ರೀ ಎಂಬ ಪತ್ನಿಯರೊಂದಿಗೆ ವಸಂತಋತುವು ರಕ್ಷಕನಾಗಿ ಇರುವನು. (ಕಲ್ಪವೃಕ್ಷವನ ಉದ್ಯಾನ. ಮಧುಶ್ರೀ: ಕನಕವರ್ಣ. ಮಾಧವಶ್ರೀ: ಕನಕವರ್ಣ. ವಸಂತಋತು: ಧವಲವರ್ಣ).

5 b **ತಾಮ್ರಮಯವಾದ ಮೂರನೆ ಕೋಟೆಯಲ್ಲಿರುವ, ಶುಕ್ರಶ್ರೀ ಮತ್ತು ಶುಚಿಶ್ರೀ-ಸಮೇತನಾದ ಗ್ರೀಷ್ಮಋತುವಿನ ಧ್ಯಾನ**

ತಾಮ್ರದ ಕೋಟೆಯ ನಡುವೆ ಏಳು ಯೋಜನಗಳ ದೂರದಲ್ಲಿ ಸೀಸದ ಕೋಟೆಯಿದೆ. ಅದು ಹಿಂದಿನ ಕೋಟೆಯ ಆಕಾರವನ್ನು ಹೊಂದಿದೆ. ಅಗಸ್ತ್ಯ ಮುನಿಯೇ(ಕುಂಭಸಂಭವ), ಸಂತಾನ ವಾಟಿಕೆಯಲ್ಲಿ ಗ್ರೀಷ್ಮಋತುವೆಂದು ಪ್ರಖ್ಯಾತನಾದ ರಕ್ಷಕನು ಅಲ್ಲಿರುವನು. ಆತನ ಚಕ್ರದ ವರ್ಣನೆಯನ್ನು ಶ್ರವಣಮಾಡು. ಇದು ಏಳು ಆವರಣಗಳಿಂದ ಕೂಡಿದ ವಸಂತ ಚಕ್ರದಂತೆಯೇ ಇದೆ. ಅದರ ಮಧ್ಯದಲ್ಲಿ ಉರಿಗಣ್ಣಿನ ಗ್ರೀಷ್ಮಋತುವು ಬಿಂದು ಚಕ್ರಾಸೀನನಾಗಿದ್ದಾನೆ. ಶುಕ್ರಶ್ರೀ ಮತ್ತು ಶುಚಿಶ್ರೀ ಎಂಬ ಆತನ ಪತ್ನಿಯರಿಬ್ಬರು ಅಲ್ಲಿರುವರು. ಗ್ರೀಷ್ಮಋತುವು ಸಮಸ್ತ ಆಭರಣಗಳಿಂದ ಕೂಡಿರುವನು. ಹೂಮಾಲೆಯಿಂದ ಅಲಂಕೃತನಾಗಿದ್ದಾನೆ. ಶುಕ್ರ(ಜ್ಯೇಷ್ಠ) ಶುಕ್ಲಪಾಡ್ಯದಿಂದ ಮೊದಲುಗೊಂಡು ಶುಚಿ(ಆಷಾಢ)ಯ ಕೃಷ್ಣಪಕ್ಷದ ಕೊನೆಯವರೆಗಿನ ಅರುವತ್ತು ತಿಥಿ ದೇವತೆಗಳು ಆತನ ಚಕ್ರದಲ್ಲಿರುವರು. ಗ್ರೀಷ್ಮಋತುವು ಈ ಶಕ್ತಿಗಳಿಂದೊಡಗೂಡಿ ಲಲಿತಾಂಬಿಕೆಯ ಸೇವೆಯನ್ನು ಕೈಗೊಳ್ಳುವನು.
90-94

ಈ ರೀತಿಯಾಗಿ ಮೂರನೆ ಕೋಟೆ.

ಈ ತಾಮ್ರದ ಕೋಟೆಯ ಹಾಗೂ ಮುಂದಿರುವ ಸೀಸದ ಕೋಟೆಯ ಮಧ್ಯಭಾಗದಲ್ಲಿರುವ ಮೂರನೆಅಂಕಣದ ಸಂತಾನವಾಟಿಕೆಯಲ್ಲಿ ಗ್ರೀಷ್ಮಚಕ್ರಾಸನದಲ್ಲಿ ಚಕ್ರದಲ್ಲಿರುವ ದೇವತೆಗಳು ಹಾಗೂ ಶುಕ್ರಶ್ರೀ ಮತ್ತು ಶುಚಿಶ್ರೀ ಎಂಬ ಇಬ್ಬರು ಹೆಂಡಂದಿರೊಂದಿಗೆ ಗ್ರೀಷ್ಮಋತುವು ರಕ್ಷಕನಾಗಿ ಇರುವನು.

5 b/1 (ಸಂತಾನವೃಕ್ಷವನವಾಟಿಕಾ. ಗ್ರೀಷ್ಮಋತುವು ಧೂಮ್ರವರ್ಣ(ಹೊಗೆಬಣ್ಣ) ಶುಕ್ರಶ್ರೀ ಸುವರ್ಣವರ್ಣ. ಶುಚಿಶ್ರೀ ಸುವರ್ಣವರ್ಣ).

ನಾಲ್ಕನೆ ಸೀಸದ ಕೋಟೆಯಲ್ಲಿರುವ ನಭಃಶ್ರೀ, ನಭಸ್ಯಶ್ರೀ ಮೊದಲಾದ ಹನ್ನೆರಡು ಪತ್ನಿಯರೊಂದಿಗಿರುವ ವರ್ಷಋತುಧ್ಯಾನ, ಲಲಿತೋಪಾಖ್ಯಾನದಲ್ಲಿ

ಸೀಸದ ಕೋಟೆಯ ನಡುವೆ ಏಳು ಯೋಜನಗಳ ದೂರದಲ್ಲಿ ಹಿತ್ತಾಳೆಯ ಕೋಟೆ ಇದೆ. ಅದು ಹಿಂದಿನ ಕೋಟೆಯ ಆಕಾರದಲ್ಲಿದೆ. ಈ ಎರಡು ಕೋಟೆಗಳ ಮಧ್ಯ ಭೂಭಾಗವು ಹರಿಚಂದನವಾಟಿಕೆ. ಅದರ ಪಾಲಕನು ವರ್ಷಋತು. ಅವನ ಚಕ್ರವು ಹಿಂದಿನ ಚಕ್ರದಂತಿದೆ. ಆ ವಾಟಿಕೆಯ ಮಧ್ಯದ ಬಿಂದುಪೀಠದಲ್ಲಿ ಹಳದಿ ಕಣ್ಣಿನ ವರ್ಷಋತುವಿರುವನು. ಅವನು ಸಿಡಿಲಿನ ಅಟ್ಟಹಾಸದಿಂದ ಬೊಬ್ಬಿಡುವನು. ಮದವೇರಿದ ಮೋಡವು ಆತನ
6 a ವಾಹನ. ಅವನು ಮೇಘಕವಚದಿಂದ ಮುಚ್ಚಿಹೋಗಿದ್ದಾನೆ. ಮಣೆಗಳಿಂದ ತುಂಬಿದ ಬಿಲ್ಲನ್ನು ಧರಿಸಿದ್ದಾನೆ. ನಭಃಶ್ರೀ, ನಭಸ್ಯಶ್ರೀ, ಸರಸಾ, ಸಸ್ಯಮೂಲಿನೀ, ಅಂಬಾ, ಅಮಲಾ, ನಿರಕ್ತಿ, ಭೂಯಂತೀ, ಮೇಘಯಂತೀ, ವರ್ಷಯಂತೀ, ರುಣಿಕಾ ಮತ್ತು ವಾರಿಧಾರಾ ಎಂಬುದಾಗಿ ಮದದಿಂದ ಕಣ್ಣುಗಳುಳ್ಳ ಈ ಹನ್ನೆರಡು ವರ್ಷಋತುವಿನ ಶಕ್ತಿಗಳು. ವರ್ಷಋತುವಿನ ಧ್ಯಾನಕಾಲದಲ್ಲಿ ಮೊದಲ ಎರಡು ಶಕ್ತಿಗಳು ಆತನ ತೊಡೆಯ ಮೇಲಿರುವರೆಂದು ತಿಳಿಯಬೇಕು. ಇತರ ಶಕ್ತಿಗಳು ಸಮೀಪವರ್ತಿನಿಗಳು. ಇವರೊಂದಿಗೆ ವರ್ಷಋತುವು ಮೂಲೋಕಗಳಿಗೆ

ಸಂತೋಷವನ್ನುಂಟುಮಾಡುತ್ತಿರುವನು. ಶ್ರಾವಣಶುಕ್ಲ ಪಾಡ್ಯದಿಂದಾರಂಭಿಸಿ ಭಾದ್ರಪದ ಕೃಷ್ಣಪಕ್ಷದ ಕೊನೆಯವರೆಗೆ ಅರುವತ್ತು ತಿಥಿದೇವತೆಗಳು ಆತನ ಚಕ್ರದೇವತೆಗಳು.

ವರ್ಷಋತುವು ಈ ಶಕ್ತಿಗಳಿಂದೊಡಗೂಡಿ ತನ್ನಿಂದಲೇ (ವರ್ಷಋತು) ಉದ್ಭವವಾದ ಹೂವುಗಳ ರಾಶಿಗಳಿಂದ ಲಲಿತಾಪರಮೇಶ್ವರಿಯನ್ನು ನಿರಂತರವಾಗಿ ಪೂಜಿಸುತ್ತಿರುವನು. ಲಲಿತಾದೇವಿಯಲ್ಲಿ ಭಕ್ತಿ ಇರುವ ದೇಶಗಳನ್ನು ಸಸ್ಯಸಂಪತ್ತಿನಿಂದ ಶೃಂಗರಿಸುತ್ತಾ, ಅವಳ ವೈರಿಗಳ ದೇಶಗಳನ್ನು ಅನಾವೃಷ್ಟಿಯಿಂದ ಹಿಂಸಿಸುತ್ತಾ ಲಲಿತಾದೇವಿಯ ದಾಸನಾದ ವರ್ಷಋತುವು ಸದಾ ಕಾಲವೂ ಅಲ್ಲಿ ಇರುತ್ತಾನೆ. 95-104

ಈ ರೀತಿಯಾಗಿ ನಾಲ್ಕನೆ ಕೋಟೆ.

6 a/1 ಈ ಸೀಸದ ಕೋಟೆಯ ಮತ್ತು ಮುಂದಿರುವ ಹಿತ್ತಾಳೆಯ ಕೋಟೆಯ ಮಧ್ಯಭಾಗದ ನಾಲ್ಕನೇ ಅಂಕಣದ ಹರಿಚಂದನವಾಟಿಕೆಯಲ್ಲಿ ವಾರ್ಷಿಕಚಕ್ರಾಸನದಲ್ಲಿ ಚಕ್ರದೇವತೆಗಳು ಹಾಗೂ ನಭಃಶ್ರೀ, ನಭಸ್ಯಶ್ರೀ, ಸರಸಾ, ಸಸ್ಯ ಮಾಲಿನೀ, ಅಂಬಾ, ಅಮಲಾ, ನಿರಕ್ತಿ, ಭೂಯಂತೀ, ಮೇಘಯಂತೀ, ವರ್ಷಯಂತೀ, ರುಣಿಕಾ, ವಾರಿಧಾರಾ ಎಂಬ ಹನ್ನೆರಡು ಮಂದಿ ಪತ್ನಿಯರೊಂದಿಗಿರುವ ವರ್ಷಋತುವು ರಕ್ಷಕನಾಗಿರುವನು.

6 b ಹಿತ್ತಾಳೆಯ ಐದನೆ ಕೋಟೆಯಲ್ಲಿ ಇಷಶ್ರೀ, ಊರ್ಜಶ್ರೀ ಸಮೇತನಾಗಿರುವ ಶರದೃತುವಿನ ಧ್ಯಾನ, ಲಲಿತೋಪಾಖ್ಯಾನದಲ್ಲಿ

ಹಿತ್ತಾಳೆಕೋಟೆಯ ಒಳಭಾಗದಲ್ಲಿ ಏಳು ಯೋಜನಗಳ ದೂರದಲ್ಲಿ ಪಂಚಲೋಹ(ಚಿನ್ನ, ಬೆಳ್ಳಿ, ತಾಮ್ರ, ತವರ, ಸೀಸಗಳ ಮಿಶ್ರಣ ಅಥವಾ ತಾಮ್ರ, ಕಂಚು, ತವರ, ಸೀಸ, ಕಬ್ಬಿಣಗಳ ಮಿಶ್ರಣ)ಗಳಿಂದ ರಚಿತವಾದ ಕೋಟೆಯಿದೆ. ಅದು ಮೊದಲಿನ ಕೋಟೆಗೆ ಸಮಾನವಾದ ಆಕಾರದಲ್ಲಿದೆ. ಅವೆರಡರ ಮಧ್ಯದ ಭೂಭಾಗವು ಮಂದಾರದ್ರುಮ (ಐದು ದೇವವೃಕ್ಷಗಳಲ್ಲೊಂದು) ವಾಟಿಕೆಯೆಂದು ಹೇಳಲಾಗಿದೆ. ಮಂದಾರದ್ರುಮವಾಟಿಕೆಯಲ್ಲಿ ಜನಮಾನಸಸಂತೋಷವನ್ನು ನೀಡುವ ಶರದೃತುವು ವಾಸಮಾಡುತ್ತ ಆ ಅಂಕಣವನ್ನು ಸತತವಾಗಿ ಕಾಪಾಡುತ್ತಾನೆ. ಶರದೃತುವಿನ ಚಕ್ರವು ಹಿಂದಿನ ಚಕ್ರದಂತೆ ಎಂದು ಹೇಳಲಾಗಿದೆ. ಆ ಚಕ್ರದ ಮಧ್ಯಬಿಂದುವಿನಲ್ಲಿ ಸಂಸ್ಥಾಪಿತನಾದ ಶರದೃತುವು ಕಾಂತಿಯಿಂದ ಹೊಳೆಯುತ್ತಿರುವನು. ಆ ಋತುವಿನ ಪ್ರಾಣನಾಯಿಕೆ(ಪ್ರಾಣಪ್ರಿಯೆ)ಯರು ಇಷಶ್ರೀ ಮತ್ತು ಊರ್ಜಶ್ರೀ ಎಂಬುವರು. ಆಶ್ವೀಜಶುಕ್ಲಪಾಡ್ಯದಿಂದಾರಂಭಿಸಿ ಕಾರ್ತಿಕಕೃಷ್ಣಪಕ್ಷದ ಕೊನೆಯವರೆಗಿನ ಅರುವತ್ತು ತಿಥಿದೇವತೆಗಳು ಆತನ ಚಕ್ರದೇವತೆಗಳು. ಈ ಶಕ್ತಿಗಳೊಂದಿಗೆ ತನ್ನಲ್ಲಿ (ಶರದೃತು)ಉದ್ಭವವಾದ ಪುಷ್ಪರಾಶಿಗಳಿಂದ ಸಾಮ್ರಾಜ್ಞಿಯಾದ ಶ್ರೀಕಾಮೇಶ್ವರನ ಪತ್ನಿಯನ್ನು(ಲಲಿತಾಂಬಿಕೆ) ಶರದೃತುವು ಪೂಜಿಸುತ್ತಾನೆ. 105-110

ಈ ರೀತಿಯಾಗಿ ಐದನೆ ಕೋಟೆ.

6 b/1 ಹಿತ್ತಾಳೆಯ ಈ ಕೋಟೆಯ ಮುಂದಿನ ಹಾಗೂ ಪಂಚಲೋಹದ ಕೋಟೆಯ ಮಧ್ಯಭಾಗದಲ್ಲಿರುವ ಐದನೆಯ ಅಂಕಣದ ಮಂದಾರವಾಟಿಕೆಯಲ್ಲಿ ಶರಚ್ಚಕ್ರಾಸನದಲ್ಲಿ ಚಕ್ರದೇವತೆಗಳು ಹಾಗೂ ಇಷಶ್ರೀ ಮತ್ತು ಊರ್ಜಶ್ರೀ ಎಂಬ ಪತ್ನಿಯರೊಂದಿಗೆ ಶರದೃತುವು ರಕ್ಷಕನಾಗಿರುತ್ತಾನೆ.

ಪಂಚಲೋಹಗಳ ಆರನೆ ಕೋಟೆಯಲ್ಲಿ ಸಹಶ್ರೀ, ಸಹಸ್ಯಶ್ರೀ ಸಮೇತನಾದ ಹೇಮಂತಋತುವಿನ ಧ್ಯಾನ, ಲಲಿತೋಪಾಖ್ಯಾನದಲ್ಲಿ

ಪಂಚಲೋಹದ ಕೋಟೆಯೊಳಗೆ ಏಳು ಯೋಜನಗಳ ದೂರದಲ್ಲಿ ಬೆಳ್ಳಿಯ ಕೋಟೆಯಿದೆಯೆಂದು ಹೇಳಲಾಗಿದೆ. ಅದು ಹಿಂದೆ ಹೇಳಿದ ಲಕ್ಷಣಗಳಿಂದ ಕೂಡಿದೆ. ಈ ಎರಡು ಕೋಟೆಗಳ ನಡುವಿನ ಭೂಭಾಗವು ಪಾರಿಜಾತದ್ರುಮವಾಟಿಕೆಯೆಂದು ಹೇಳಲಾಗಿದೆ. ಈ ವಾಟಿಕೆಯಲ್ಲಿ ಹಿಮದಿಂದ ತಂಪಾದ ಶರೀರವನ್ನುಳ್ಳ ಹೇಮಂತಋತುವು ಇರುವನು. ಹೇಮಂತಋತುವಿನ ಚಕ್ರವು ಹಿಂದಿನಂತೆಯೇ ಎಂದು ತಿಳಿಯಬೇಕು. ಆ ಚಕ್ರದ ಮಧ್ಯಬಿಂದುವಿನಲ್ಲಿ ವಾಸಿಸುವ ಹೇಮಂತಋತುವು ಆನಂದಿತನಾಗಿದ್ದಾನೆ. ಅವನ ಇಬ್ಬರು ಭಾರ್ಯೆಯರು ಸಹಶ್ರೀ ಮತ್ತು ಸಹಸ್ಯಶ್ರೀ ಎಂಬುವರು ಶುಭಲಕ್ಷಣಾನ್ವಿತೆಯರು. ಆ ಇಬ್ಬರೊಂದಿಗೆ ಈ ಋತುವು ತನ್ನಲ್ಲಿ(ಹೇಮಂತ) ಉತ್ಪನ್ನವಾದ ಪುಷ್ಪರಾಶಿಗಳಿಂದ ಲಲಿತಾಪರಮೇಶ್ವರಿಯನ್ನು ಸತತವಾಗಿ ಪೂಜಿಸುತ್ತಿರುವನು.
7 a ಮಾರ್ಗಶೀರ್ಷಶುಕ್ಲಪಾಡ್ಯದಿಂದಾರಂಭಿಸಿ ಪುಷ್ಯಮಾಸದ ಕೃಷ್ಣಪಕ್ಷದ ಕೊನೆಯವರೆಗಿನ ಅರುವತ್ತು ತಿಥಿದೇವತೆಗಳು ಆತನ ಚಕ್ರದೇವತೆಗಳು. ಈ ಶಕ್ತಿಗಳೊಂದಿಗೆ ಲಲಿತಾದೇವಿಯ ಪ್ರಿಯಸೇವಕನಾದ ಹೇಮಂತಋತು ಲಲಿತಾಂಬೆಯ ಅರ್ಚನೆಯಲ್ಲಿ ಮಗ್ನನಾಗಿ ಆ ಮಹೇಶ್ವರಿಯನ್ನು ಧ್ಯಾನಿಸುತ್ತಿರುವನು. ಇಲ್ಲಿಯೇ ಬಹುಚಿತ್ತಾಕರ್ಷಕವಾದ ಮಂತ್ರಿನಾಥೆಯ ಮಂದಿರವಿದೆ. ಕದಂಬವನವಾಟಿಕೆಯ ಆಗ್ನೇಯ ವಿದಿಕ್ಕು ಮೊದಲುಗೊಂಡು ವಿದಿಕ್ಕುಗಳಲ್ಲಿ ಎತ್ತರವಾದ ನಾಲ್ಕು ಮಂದಿರಗಳಿವೆ. ಇವುಗಳನ್ನು ಆದಿಶಿಲ್ಪಿಯು ರಚಿಸಿರುವನು. ಒಂದೊಂದು ಗೃಹದ ವಿಸ್ತಾರವು ಐದು ಯೋಜನಗಳಷ್ಟು ಇದೆ. ಸುತ್ತಳತೆಯು ಐದು ಯೋಜನಗಳಷ್ಟಿದೆ. ಅದು ಏಳು ಆವರಣಗಳಿಗೆ ಸೀಮಿತವಾಗಿದೆ. ಇದು ಶ್ಯಾಮಲಾದೇವಿಯ ಸಂವಾಸನಗರಿಯೆಂದು ಹೇಳಲಾಗಿದೆ. 111-119

ಈ ರೀತಿಯಾಗಿ ಆರನೆ ಕೋಟೆ.

a/1 ಈ ಪಂಚಲೋಹಮಯವಾದ ಕೋಟೆಯ ಮುಂಭಾಗದ ಬೆಳ್ಳಿಯ ಕೋಟೆಯ ಮಧ್ಯಭಾಗದಲ್ಲಿ, ಆರನೆಯ ಅಂಕಣದ ಪಾರಿಜಾತವಾಟಿಕೆಯಲ್ಲಿ ಹೇಮಂತಚಕ್ರಾಸನದಲ್ಲಿ ಚಕ್ರಸ್ಥದೇವತೆಗಳು ಹಾಗೂ ಸಹಶ್ರೀ, ಸಹಸ್ಯಶ್ರೀ ಎಂಬ ಇಬ್ಬರು ಪತ್ನಿಯರೊಂದಿಗಿರುವ ಹೇಮಂತಋತುವು ರಕ್ಷಕನಾಗಿ ಇರುವನು. ಈ ಅಂಕಣದಲ್ಲಿ ಮಂತ್ರಿಣಿಯಾದ ಶ್ಯಾಮಲಾದೇವಿಯ ಗೃಹಗಳು ನಾಲ್ಕು ದಿಕ್ಕುಗಳಲ್ಲೂ ಇವೆ.

ಬೆಳ್ಳಿಯ ಏಳನೆ ಕೋಟೆಯಲ್ಲಿರುವ ತಪಃಶ್ರೀ, ತಪಸ್ಯಶ್ರೀ ಸಮೇತನಾದ ಶಿಶಿರಋತುಧ್ಯಾನ, ಲಲಿತೋಪಾಖ್ಯಾನದಲ್ಲಿ

ಬೆಳ್ಳಿಯ ಕೋಟೆಯ ನಡುಭಾಗದಲ್ಲಿ ಏಳು ಯೋಜನಗಳ ದೂರದಲ್ಲಿ ಹಿಂದಿನ(ಕೋಟೆಯ) ಲಕ್ಷಣಗಳಿಂದ ಕೂಡಿದ ಚಿನ್ನದ ಕೋಟೆಯು ಇದೆಯೆಂದು ಹೇಳಲಾಗಿದೆ. ಆ ಎರಡು ಕೋಟೆಗಳ ಮಧ್ಯದ ಭೂಭಾಗವು ಕದಂಬವನವಾಟಿಕಾ ಎಂಬುದಾಗಿದೆ. ಕದಂಬವನವಾಟಿಕೆಯ ರಕ್ಷಕನು ಶಿಶಿರಸಮಯದ ಆಕಾರವುಳ್ಳ ಶಿಶಿರಋತು. ಆತನ ಚಕ್ರವು ಹಿಂದಿನ(ಋತು) ಚಕ್ರದಂತೆ ಎಂದು ತಿಳಿಸಲಾಗಿದೆ. ಆ ಚಕ್ರದ ಮಧ್ಯಬಿಂದುವಿನಲ್ಲಿ ವಾಸಸ್ಥಾನವನ್ನು ಕಲ್ಪಿಸಿಕೊಂಡಿರುವವನು ಶಿಶಿರ ಎಂಬ ಸಂಜ್ಞೆಯುಳ್ಳವನಾಗಿದ್ದಾನೆ. ತಪಃಶ್ರೀ ಮತ್ತು ತಪಸ್ಯಶ್ರೀ ಎಂಬಿಬ್ಬರು ಅವನಿಗೆ ಉತ್ತಮಸ್ತ್ರೀಯರು(ಪತ್ನಿಯರು). ಶಿಶಿರಋತುವು ಆ ಪತ್ನಿಯರೊಡಗೂಡಿ ವಿಶ್ವಪಾವನಿಯಾದ ಲಲಿತಾಂಬೆಯನ್ನೂ

ಪೂಜಿಸುವನು. ಆ ಕೊಠಡಿಯ ಭೂತಳವನ್ನು ಅವನು ವ್ಯಾಪಕವಾಗಿ ಶೀತಲವಾಗಿರಿಸಿದ್ದಾನೆ. ಆದ್ದರಿಂದ ಅಲ್ಲಿ ವಾಸಿಸುವಂಥ ಶ್ಯಾಮಾದೇವತೆಯು ಶೀತಲಾಕಾರದವಳಾಗಿದ್ದಾಳೆ. ತಪಸ್(ಮಾಘ) ಶುಕ್ಲಪಕ್ಷದ ಪಾಡ್ಯದಿಂದಾರಂಭಿಸಿ ಫಾಲ್ಗುನಕೃಷ್ಣಪಕ್ಷದ ಕೊನೆಯವರೆಗಿನ ಅರುವತ್ತು ತಿಥಿದೇವತೆಗಳು ಆತನ ಚಕ್ರದೇವತೆಗಳಾಗಿವೆ. ಶಿಶಿರಋತುವು ಅವರೊಡಗೂಡಿ ಜಗದಂಬಿಕೆಯ ಸೇವೆಯನ್ನು ಮಾಡುತ್ತಾರೆ. 120-125

ಈ ರೀತಿಯಾಗಿ ಏಳನೆ ಕೋಟೆ.

7 b/1 ಈ ಬೆಳ್ಳಿಯ ಕೋಟೆಯ ಹಾಗೂ ಮುಂಭಾಗದಲ್ಲಿರುವ ಚಿನ್ನದ ಕೋಟೆಯ ನಡುವಿನಲ್ಲಿ ಏಳನೆ ಕೊಠಡಿಯಲ್ಲಿ ಕದಂಬವಾಟಿಕೆಯಲ್ಲಿ ಶಿಶಿರಚಕ್ರಾಸನದಲ್ಲಿ ಚಕ್ರಸ್ಥದೇವತೆಗಳೊಂದಿಗೆ ತಪಃಶ್ರೀ ಮತ್ತು ತಪಸ್ಯಶ್ರೀ ಎಂಬ ಇಬ್ಬರು ಪತ್ನಿಯರೊಡಗೂಡಿದ ಶಿಶಿರಋತುವು ರಕ್ಷಕನಾಗಿ ಇರುವನು.

ಚಿನ್ನದ ಎಂಟನೆ ಕೋಟೆಯಲ್ಲಿರುವ ಸಿದ್ಧಶ್ರೀಗಳೊಂದಿಗಿರುವ ಸಿದ್ಧರ ಧ್ಯಾನ, ಲಲಿತೋಪಾಖ್ಯಾನದಲ್ಲಿ

ಚಿನ್ನದ ಕೋಟೆಯ ಹಾಗೂ ಪುಷ್ಯರಾಗದ (ಹಳದಿಬಣ್ಣದ ಮಣಿ) ಕೋಟೆಯ ಅಂತರವು ಏಳು ಯೋಜನಗಳಷ್ಟು ಎಂದು ಹೇಳಲಾಗಿದೆ. ನಡುವಿನ ಭೂಭಾಗವು ಪುಷ್ಯರಾಗದಿಂದಲೇ ರಚಿತವಾಗಿದೆ. ಪುಷ್ಯರಾಗ ಮೊದಲಾದ ಕೋಟೆಗಳಲ್ಲಿ ಮಹಾದ್ವಾರಗಳು, ಚಿಲಕಗಳು(ಕೀಲು) ಹಾಗೂ ಗೋಪುರಗಳು ಉದಯಸೂರ್ಯನಕಾಂತಿಯನ್ನೂ ಹೊಂದಿದ ಪುಷ್ಯರಾಗದಿಂದಲೆ ನಿರ್ಮಿತವಾಗಿವೆ. ಅಲ್ಲಿ ಹಕ್ಕಿಗಳು ಸರೋವರಗಳೂ ಪುಷ್ಯರಾಗದವುಗಳಾಗಿವೆ.
8 a ಹೊಳೆಗಳು ಪುಷ್ಯರಾಗದ ನೀರಿನಿಂದ ಕೂಡಿವೆ. ಮಣಿವೃಕ್ಷಗಳು ಪುಷ್ಯರಾಗದ ವರ್ಣದಿಂದಲೇ ಕೂಡಿವೆ. ರಸಗಳಿಂದ, ರಸಾಯನಗಳಿಂದ, ಖಡ್ಗಗಳಿಂದ ಮತ್ತು ಪಾದಾಂಜನಗಳನ್ನು ಲೇಪಿಸುವುದರ ಮೂಲಕ ಸಿದ್ಧರೂ ಸಿದ್ಧಸ್ತ್ರೀಯರೂ ಇಲ್ಲಿ ಕಾಮಖಿನ್ನರಾಗಿ ಕ್ರೀಡಿಸುವರು. ಲಲಿತಾಂಬಾದೇವಿಯ ಭಕ್ತರಾದ ಮಹಾಜನರನ್ನು ಸಂತೋಷಪಡಿಸುತ್ತ ಲಲಿತಾಮಂತ್ರವನ್ನು ಜಪಿಸುತ್ತ ಲಲಿತಾಕ್ರಮ(ಪೂಜಾವಿಧಾನ)ತತ್ಪರರಾಗುತ್ತ, ಸಿದ್ಧಜಾತಿಗಳಲ್ಲಿ ನಾನಾವಿಧಾನಗಳಿಂದ ದೇವಿಯನ್ನು ಉಪಾಸನೆ ಮಾಡಿ ಈ ಹಿಂದೆ ದೇಹತ್ಯಾಗಮಾಡಿದವರು ಸ್ತ್ರೀಸಮೇತರಾಗಿ ಅಲ್ಲಿ ನೆಲೆಸಿರುವರು.
126-131

ಈ ರೀತಿಯಾಗಿ ಎಂಟನೆ ಕೋಟೆ.

8 a/1 ಈ ಚಿನ್ನದ ಕೋಟೆಯ ಮತ್ತು ಇದರ ಮುಂದಿರುವ ಪುಷ್ಯರಾಗದ ಕೋಟೆಯ ಮಧ್ಯದಲ್ಲಿ ಎಂಟನೆಯ ಕೊಠಡಿಯಲ್ಲಿ ಸಿದ್ಧರೂ ಸಾಧ್ಯರೂ ತಮ್ಮ ತಮ್ಮ ಪತ್ನಿಯರೊಡಗೂಡಿ ರಕ್ಷಕರಾಗಿರುತ್ತಾರೆ.

ಪುಷ್ಯರಾಗದ ಒಂಬತ್ತನೆ ಕೋಟೆಯಲ್ಲಿರುವ ಚಾರಣಸ್ತ್ರೀಯರೊಂದಿಗಿರುವ ಚಾರಣರ ಧ್ಯಾನ, ಲಲಿತೋಪಾಖ್ಯಾನದಲ್ಲಿ

ಪುಷ್ಯರಾಗದ ಮಹಾದುರ್ಗದ ಮಧ್ಯಭಾಗದ ಏಳುಯೋಜನದೂರದಲ್ಲಿ ಪದ್ಮರಾಗದ ಕೋಟೆಯಿದೆ. ಇದು ಸುತ್ತಲೂ ಚೌಕಾಕಾರದಲ್ಲಿದೆ. ಅಲ್ಲಿನ ನೆಲವು ಪದ್ಮರಾಗದಿಂದ ತುಂಬಿದೆ. ಗೋಪುರಗಳೂ ಪದ್ಮರಾಗಮಯವಾಗಿದೆ.

ಚಾರಣಲೋಕದಲ್ಲಿರುವವರು ತಮ್ಮ ಪೂರ್ವದೇಹಗಳು ಗತಿಸಿದ ಅನಂತರದಲ್ಲಿ ಸಿದ್ಧಿಯನ್ನು ಹೊಂದಿ ಅಲ್ಲಿ ಮಹಾರಾಜ್ಞಿಯ(ಲಲಿತಾಂಬೆ)ಪಾದಕಮಲಗಳ ಸೇವಕರಾಗಿದ್ದಾರೆ. ಸುಂದರಾಂಗಿಯರಾದ ಕಾಮಲಾಲಸೆಯನ್ನು ಹೊಂದಿದ ಚಾರಣರ ಸ್ತ್ರೀಯರೂ ಕೂಡಾ ಲಲಿತಾದೇವಿಯ ಗೇಯಕಾವ್ಯಗಳನ್ನೂ ಪದೇ ಪದೇ ಹಾಡುವರು. ಇಲ್ಲಿಯೇ ಕಲ್ಪವೃಕ್ಷಗಳ ಕೆಳಗಿನ ವೇದಿಕೆಗಳಲ್ಲಿ ಕುಳಿತಿರುವ ಪತಿಗಳೊಂದಿಗೆ ಸಹಧರ್ಮಿಣಿಯರಾದ (ಚಾರಣಸ್ತ್ರೀಯರು)ಸಿಹಿಯಾದ ಮದ್ಯವನ್ನು ಕುಡಿಯುತ್ತಾರೆ. 132-135

ಈ ರೀತಿಯಾಗಿ ಒಂಬತ್ತನೆ ಕೋಟೆ.

8 b/1 ಈ ಪುಷ್ಯರಾಗದ ಕೋಟೆಯ ಹಾಗೂ ಮುಂದಕ್ಕಿರುವ ಪದ್ಮರಾಗದ ಕೋಟೆಯ ಮಧ್ಯಭಾಗದ ಒಂಬತ್ತನೆ ಅಂಕಣದ ಕಲ್ಪವೃಕ್ಷವನದಲ್ಲಿ ಕೋಟಿಕೋಟಿ ಚಾರಣರು ತಮ್ಮ ತಮ್ಮ ಸ್ತ್ರೀಯರೊಂದಿಗೆ ಈ ಕೋಟೆಯನ್ನು ಕಾಪಾಡಿಕೊಂಡು ಸುಖದಿಂದಿರುವರು.

ಪದ್ಮರಾಗದ ಹತ್ತನೆ ಕೋಟೆಯಲ್ಲಿರುವ ಭೈರವರ ಹಾಗೂ ಯೋಗಿನಿಗಳ ಧ್ಯಾನ, ಲಲಿತೋಪಾಖ್ಯಾನದಲ್ಲಿ

ಪದ್ಮರಾಗಮಹಾಸಾಲ(ದೊಡ್ಡ ಕೋಟೆ)ದ ನಡುವಿನ ಏಳು ಯೋಜನಗಳ ದೂರದಲ್ಲಿ ಗೋಮೇದಕವೆಂಬ ಕೋಟೆಯು ಇದೆ. ಇದು ಹಿಂದಿನ ಕೋಟೆಯ ಪ್ರಮಾಣದಲ್ಲಿದೆ. ಇಲ್ಲಿನ ಭೂಭಾಗವು ಗೋಮೇದಕದಿಂದ ನಿರ್ಮಿತವಾಗಿದೆ. ಗೋಪುರಗಳು ಕೂಡಾ ಗೋಮೇದಕನಿರ್ಮಿತವಾಗಿದೆ. ಅದರೊಳಗೆ ಕೋಟಿ ಕೋಟಿ ಸಂಖ್ಯೆಯಲ್ಲಿ ಯೋಗಿನಿಯರು ಹಾಗೂ ಭೈರವರು ಇರುವರು. ಅಲ್ಲಿ ರಕ್ಷಣೆಯನ್ನು ಪಡೆದ ಅವರು ಕಾಲಸಂಕರ್ಷಿಣಿ(ಲಲಿತಾಂಬೆಯ ಹೆಸರು)ಯ ಸೇವೆಯನ್ನು ಮಾಡುತ್ತಾರೆ. 136-137

ಈ ರೀತಿಯಾಗಿ ಹತ್ತನೆ ಕೋಟೆ.

8 b/2 ಈ ಪದ್ಮರಾಗದ ಕೋಟೆಗೂ ಮುಂದಿರುವ ಗೋಮೇದಕ ಕೋಟೆಗೂ ನಡುವಿನಲ್ಲಿರುವ ಹತ್ತನೆ ಕೊಠಡಿಯಲ್ಲಿ ಕೋಟಿ ಕೋಟಿ ಭೈರವರು ಯೋಗಿನಿಗಳ ಸಮೂಹದೊಂದಿಗೆ ರಕ್ಷಕರಾಗಿದ್ದಾರೆ.

9 a ಗೋಮೇದಕದ ಹನ್ನೊಂದನೆ ಕೋಟೆಯಲ್ಲಿರುವ ರಂಭೆ ಮೊದಲಾದ ಅಪ್ಸರಃಸ್ತ್ರೀಯರೊಡಗೂಡಿದ ಗಂಧರ್ವರ ಧ್ಯಾನ, ಲಲಿತೋಪಾಖ್ಯಾನದಲ್ಲಿ

ಗೋಮೇದಕ ಮಹಾಸಾಲ(ದೊಡ್ಡಕೋಟೆ)ದ ಒಳಭಾಗದಲ್ಲಿ ಏಳು ಯೋಜನಗಳ ದೂರದಲ್ಲಿ ವಜ್ರಮಯವಾದ ಕೋಟೆಯಿದೆ. ಅದು ತನ್ನ ಕಾಂತಿಯಿಂದ ದಿಗಂತಗಳನ್ನು ತುಂಬಿದೆ. ಇಲ್ಲಿನ ಭೂಭಾಗವು ವಜ್ರಮಯವಾಗಿದೆ. ಗೋಪುರಗಳು ವಜ್ರಮಯ. ಅಗಸ್ತ್ಯನೆ, ಪೂರ್ವಜನ್ಮದಲ್ಲಿ ದೇವಿಯನ್ನು ಅರ್ಚನೆ ಮಾಡಿದ ಗಂಧರ್ವಶ್ರೇಷ್ಠರು ಅಪ್ಸರೋಗಣಗಳೊಂದಿಗೆ ಇಲ್ಲಿ ವಾಸಿಸುತ್ತಾರೆ. ಅವರು ಮಹಾರಾಜ್ಞಿಯ ಗುಣಸಮೂಹಗಳನ್ನು ವೀಣಾಧ್ವನಿಗಳೊಂದಿಗೆ ಹಾಡುತ್ತ ಕಾಮಭೋಗರಸಾಸ್ವಾದಕರಾಗಿದ್ದಾರೆ. ಅವರು ಮನ್ಮಥನಷ್ಟು ಸುಂದರರಾಗಿದ್ದಾರೆ. ಮೃದುವಾದ ಸ್ವಭಾವದ ಈ ಗಂಧರ್ವರು ಶ್ರೀದೇವಿಯ ಭಕ್ತಿಯಿಂದ ಮೆರೆಯುವರು. ಉತ್ತಮವಾದ ಆಭರಣಗಳಿಂದ ಅಲಂಕರಿಸಿಕೊಂಡ

ಅಪ್ಸರಃಸ್ತ್ರೀಯರು ಅಲ್ಲಿ ವಾಸಿಸುವರು. ದೇವಗಣಿಕೆಯರಾದ ಊರ್ವಶೀ, ಮೇನಕಾ, ರಂಭಾ, ಅಲಂಬುಸಾ, ಮಂಜುಘೋಷಾ, ಸುಕೇಶೀ, ಪೂರ್ವಚಿತ್ತಿ, ಘೃತಾಚಿಕಾ, ಕೃತಸ್ಥಲಾ, ವಿಶ್ವಾಚೀ, ಪುಂಜಕಸ್ಥಲಾ, ತಿಲೋತ್ತಮಾ ಎಂಬವ ಇವರಂತಿರುವ ಇತರ ವೇಶ್ಯೆಯರು ಗಂಧರ್ವರೊಡಗೂಡಿ ಕಲ್ಪವೃಕ್ಷದ ಹೊಸ ಮದ್ಯಗಳನ್ನು ಕುಡಿಯುತ್ತ ನಿರಂತರವಾಗಿ ಲಲಿತಾದೇವಿಯನ್ನು ಮನಸ್ಸಿನಲ್ಲಿ ಧ್ಯಾನಮಾಡುತ್ತ, ನರ್ತನಮಾಡುತ್ತ, ಹಾಡುತ್ತ ಇರುತ್ತಾರೆ. ಅಗಸ್ತ್ಯಮುನಿಯೆ, ಅಲ್ಲಿಯೇ ವಜ್ರದ ಕೊಠಡಿಯಲ್ಲಿ ವಜ್ರಾ ಎಂಬ ಹೆಸರಿನ ಹೊಳೆಯಿದೆ. ಮಾನವಶ್ರೇಷ್ಠರಾಗಿ ಲಲಿತಾಪರಮೇಶ್ವರಿಯ ಭಕ್ತರಾದವರು ಈ ಹೊಳೆಯ ನೀರನ್ನು ಕುಡಿದು ವಜ್ರಸದೃಶವಾದ ದೇಹವುಳ್ಳವರಾಗಿ ದೀರ್ಘಾಯುಷಿಗಳೂ ರೋಗರಹಿತರೂ ಆಗುವರು. 138-147

ಈ ರೀತಿಯಾಗಿ ಹನ್ನೊಂದನೆ ಕೋಟೆ.

9 a/1 ಈ ಗೋಮೇದಕದ ಕೋಟೆಯ ಮತ್ತು ಮುಂಭಾಗದಲ್ಲಿರುವ ವಜ್ರದ ಕೋಟೆಯ ನಡುವಿನ ಹನ್ನೊಂದನೆಯ ಕೊಠಡಿಯಲ್ಲಿ ರಂಭೆ ಮೊದಲಾದ ಅಪ್ಸರಃಸ್ತ್ರೀಸಮೂಹವು ಗಂಧರ್ವ ಸಮೂಹದೊಂದಿಗೆ ಈ ಕೋಟೆಯನ್ನು ಕಾಪಾಡುತ್ತಿದೆ. ಇಲ್ಲಿ ವಜ್ರಾ ಎಂಬ ಹೆಸರಿನ ಹೊಳೆಯಿದೆ.

9 b ವಜ್ರಮಯವಾದ ಹನ್ನೆರಡನೆ ಕೋಟೆಯೊಳಗಿರುವ ನಾಗಸ್ತ್ರೀಸಮೇತರಾದ ಶೇಷ ಮೊದಲಾದ ನಾಗಗಳ ಹಾಗೂ ಬಲೀಂದ್ರನ ಧ್ಯಾನ, ಲಲಿತೋಪಾಖ್ಯಾನದಲ್ಲಿ

ವಜ್ರವೆಂಬ ಹೆಸರಿನ ಕೋಟೆಯ ಮಧ್ಯದಲ್ಲಿ ಏಳು ಯೋಜನಗಳ ಅಂತರದಲ್ಲಿ ಎತ್ತರವಾದ ವೈಡೂರ್ಯದ ಕೋಟೆ ಇದೆ. ಇದು ಹಿಂದಿನ ಕೋಟೆಗಳಂತೆಯೇ ಗೋಪುರದಿಂದ ಕೂಡಿದೆ. ಅಲ್ಲಿ ವೈಡೂರ್ಯದಿಂದ ನಿರ್ಮಾಣ ಮಾಡಿದ ಹೊಳೆಯುವ ಆಕೃತಿಯುಳ್ಳ ಭೂಭಾಗವಿದೆ. ಪಾತಾಳವಾಸಿಗಳಾಗಿ ದೇವಿಯನ್ನು ಅರ್ಚನೆ ಮಾಡುವವರೆಲ್ಲರೂ ಪೂರ್ಣಸುಖಿಗಳಾಗಿ ಮುಕ್ತಿಯ ಸಿದ್ಧಿಯನ್ನು ಮಾಡಿಕೊಂಡು ಅಲ್ಲಿ ವಾಸಮಾಡುತ್ತಾರೆ. ಶೇಷ, ಕಾರ್ಕೋಟಕ, ಮಹಾಪದ್ಮ, ವಾಸುಕಿ, ಶಂಖಕ, ತಕ್ಷಕ, ಶಂಖಚೂಡ, ಮಹಾದಂತ, ಮಾಹಾಫಣ ಇವರೇ ಮೊದಲಾದ ನಾಗರೂ ನಾಗಸ್ತ್ರೀಯರೂ ಧಾರ್ಮಿಕರಾದ ಬಲೀಂದ್ರ ಮೊದಲಾದ ದೈತ್ಯರ ಸಮೂಹವು ತಮ್ಮ ಸ್ತ್ರೀಯರೊಂದಿಗೆ, ಲಲಿತಾದೇವಿಮಂತ್ರಗಳನ್ನು ಜಪಿಸುವ ಲಲಿತಾದೇವ್ಯರ್ಚನ ಶಾಸ್ತ್ರದಲ್ಲಿ ದೀಕ್ಷೆಯನ್ನು ಪಡೆದ ಲಲಿತಾಪೂಜಕರಾದ ಅಸುರರೂ ನಾಗರೂ ಅಲ್ಲಿ ವಾಸಮಾಡುತ್ತಾರೆ. 148-153

ಈ ರೀತಿಯಾಗಿ ಹನ್ನೆರಡನೆ ಕೋಟೆ.

9 b/1 ಈ ವಜ್ರದ ಕೋಟೆಯ ಹಾಗೂ ಮುಂಭಾಗದಲ್ಲಿರುವ ವೈಡೂರ್ಯದ ಕೋಟೆಯ ಮಧ್ಯಭಾಗವಾಗಿರುವ ಹನ್ನೆರಡನೆಯ ಕೊಠಡಿಯಲ್ಲಿ ನಾಗಲೋಕದಲ್ಲಿ ವಾಸಿಸುವ ಶೇಷ ಮೊದಲಾದ ನಾಗರು ನಾಗಸ್ತ್ರೀಯರೊಡಗೂಡಿ ರಕ್ಷಕರಾಗಿ ಇರುತ್ತಾರೆ. ಇಲ್ಲಿ ಬಲೀಂದ್ರ ಮೊದಲಾದ ಅಸುರರು ವಾಸಮಾಡುತ್ತಾರೆ.

ವೈಡೂರ್ಯ ನಿರ್ಮಿತವಾದ ಹದಿಮೂರನೆ ಕೋಟೆಯಲ್ಲಿರುವ ಮನುಗಳ ಮತ್ತು ಭೂಪಾಲಕರ ಧ್ಯಾನ, ಲಲಿತೋಪಾಖ್ಯಾನದಲ್ಲಿ

ವೈಡೂರ್ಯ ಎಂಬ ಹೆಸರಿನ ಮಹಾಸಾಲದ(ದೊಡ್ಡಕೋಟೆ) ನಡುವಿನಲ್ಲಿ ಏಳು ಯೋಜನಗಳ ಅಂತರದಲ್ಲಿ ಇಂದ್ರನೀಲಮಣಿಮಯವಾದ ಮತ್ತೊಂದು ಕೋಟೆ ಇದೆ. ಇದು ಮಂಡಲಾಕಾರವಾಗಿದೆ. ಅದರ ನಡುವಿನ ಪ್ರಕೋಷ್ಠದ ಭೂಭಾಗವು ನೀಲಮಣಿಮಯವಾಗಿದೆ. ಮುನಿಯೆ, ಅಲ್ಲಿ ಮಧುರವಾದ ನೀರಿನ ಹೊಳೆಗಳಿವೆ. ತಂಪಾದ ನೀರಿನ ಸರೋವರಗಳಿವೆ. ನಾನಾಪ್ರಕಾರದ ಸುಖದಾಯಕ ಹಾಗೂ ರಸಭರಿತವಾದ ವಸ್ತುಗಳಿವೆ.

10 a ಅಗಸ್ತ್ಯನೆ, ಭೂಲೋಕದಲ್ಲಿರುವ ಭೂಪತಿಗಳು ಲಲಿತಾ ಅರ್ಚನಾಕ್ರಮವನ್ನು ಸಾಧಿಸಿಕೊಂಡು ತಮ್ಮ ಶರೀರಾವಸಾನದಲ್ಲಿ ಇಂದ್ರನೀಲವೆಂಬ ಈ ಕೊಠಡಿಯನ್ನು ಹೊಂದಿ ವಾಸಮಾಡುವರು. ಅಲ್ಲಿ ತಮ್ಮ ಸ್ತ್ರೀಯರ ಗೆಳೆಯರಾಗಿ ದಿವ್ಯವಸ್ತುಗಳನ್ನು ಉಪಭೋಗಿಸುತ್ತ, ಸಿಹಿಯಾದ ಮದ್ಯವನ್ನು ಕುಡಿಯುತ್ತ, ಭಕ್ತಿಭೂಯಿಷ್ಠರಾಗಿ ನರ್ತನವನ್ನು ಮಾಡುತ್ತ, ಸರೋವರಗಳ ದಡಗಳಲ್ಲಿ, ನದಿಗಳ ತಟಗಳಲ್ಲಿ, ಲತಾಗೃಹಗಳಲ್ಲಿ ಸುಂದರವಾದ ಸಮೃದ್ಧವಾದ ಮಂಟಪಗಳಲ್ಲಿ ಶ್ರೀಲಲಿತಾದೇವಿಯನ್ನು ನಿರಂತರವಾಗಿ ಜಪಿಸುತ್ತ ಅವಳ ಗುಣಗಳನ್ನು ಪಾಠಮಾಡುತ್ತ ಈ ಮಹಾಮಹಿಮರು ತಮ್ಮ ಸ್ತ್ರೀಯರಿಂದ ಸುತ್ತುವರೆದವರಾಗಿ ವಾಸಮಾಡುತ್ತಾರೆ. ತಮ್ಮ ಕರ್ಮ ಕಳೆದ ಬಳಿಕ ಪುನಃ ಭೂಮಿಯಲ್ಲಿ ಭೂಪಾಲಕರಾಗಿ ಪೂರ್ವಜನ್ಮವಾಸನಾಯುಕ್ತರಾಗಿ ಚಕ್ರಿಣಿ (ಲಲಿತಾ)ದೇವಿಯ ಅರ್ಚನೆಯನ್ನು ಮಾಡುತ್ತಾರೆ. ಅವರು ಪುನಃ(ಭವದೇಹಾವಸಾನದಲ್ಲಿ) ಶ್ರೀನಗರದಲ್ಲಿರುವ ಇಂದ್ರನೀಲಮಹಾಸ್ಥಲಕ್ಕೆ ಹೋಗುವರು. ಅಲ್ಲಿಯೇ ಸ್ವಯಂಭೂ ಮೊದಲಾದ ಹದಿನಾಲ್ಕು ಮನುಗಳು ಪರಿವಾರಸಮೇತರಾಗಿ ಇರುವರೆಂದು ಕೆಲವರು ಹೇಳುತ್ತಾರೆ. 154-162

ಈ ರೀತಿಯಾಗಿ ಹದಿಮೂರನೆ ಕೋಟೆ.

10 a/1 ಈ ವೈಡೂರ್ಯದ ಕೋಟೆಯ ಹಾಗೂ ಮುಂಭಾಗದಲ್ಲಿರುವ ಇಂದ್ರನೀಲಮಣಿದುರ್ಗದ ಮಧ್ಯಭಾಗದ ಹದಿಮೂರನೆಯ ಕೊಠಡಿಯಲ್ಲಿ ಪತ್ನಿಪುತ್ರಸಮೇತರಾದ ಹದಿನಾಲ್ಕು ಮನುಗಳೂ, ಇಷ್ಟರವರೆಗೂ ಲಲಿತೋಪಾಸನೆಯನ್ನು ಮಾಡಿ ಭೂಲೋಕದಲ್ಲಿ ವಾಸಮಾಡುತ್ತಿದ್ದ ಭೂಪಾಲಕರೂ ಈ ಕೊಠಡಿಯಲ್ಲಿ ಸುಖವನ್ನು ಅನುಭವಿಸುತ್ತ, ರಕ್ಷಣೆಯನ್ನು ಮಾಡುತ್ತಿರುವರು.

ಇಂದ್ರನೀಲಮಣಿಮಯವಾದ ಹದಿನಾಲ್ಕನೆ ಕೋಟೆಯಲ್ಲಿರುವ ಇಂದ್ರನೇ ಮೊದಲಾದ ದಿಕ್ಪಾಲಕರ ಧ್ಯಾನ, ಲಲಿತೋಪಾಖ್ಯಾನದಲ್ಲಿ

ಇಂದ್ರನೀಲ ಹೆಸರಿನ ಕೋಟೆಯ ಒಳಭಾಗದಲ್ಲಿ ಏಳು ಯೋಜನಗಳ ದೂರದಲ್ಲಿ ಮುತ್ತುಗಳ ಕೋಟೆಯಿದೆ. ಅದಕ್ಕೆ ಹಿಂದಿನ ಕೋಟೆಯಂತೆಯೇ ಗೋಪುರವಿದೆ. ಮಧ್ಯದ ಈ ಭೂಭಾಗವು ಮುತ್ತುಗಳಿಂದ ತುಂಬಿದ್ದು ಶೀತಲವಾಗಿ ಚಿತ್ತಾಕರ್ಷಕವಾಗಿದೆ. ಈ ಭೂಭಾಗದಲ್ಲಿ ತಾಮ್ರಪರ್ಣೀ, ಮಹಾಪರ್ಣೀ, ಸದಾಮುಕ್ತಾ ಹಾಗೂ ಸದೋದಕಾ ಮೊದಲಾದ ಮಹಾನದಿಗಳು ಹರಿಯುತ್ತಿವೆ. ಪೂರ್ವಜನ್ಮದಲ್ಲಿ ಶ್ರೀದೇವಿ(ಲಲಿತಾ)ಯ ಮಂತ್ರಸಿದ್ಧಿಪಡೆದ ದೇವಲೋಕನಿವಾಸಿಗಳು ಆ ನದಿಗಳ ದಡಗಳಲ್ಲಿ ವಾಸಮಾಡುತ್ತಾರೆ. ಪೂರ್ವ ಮೊದಲಾದ ಎಂಟು ಭಾಗ
10 b (ದಿಗ್ಭಾಗ)ಗಳಲ್ಲಿ ಇಂದ್ರನೆ ಮೊದಲಾದವರು ಗೋಚರಿಸುವಂಥ ಲೋಕಗಳಿವೆ. ಪೂರ್ವಭಾಗದಲ್ಲಿ ಇಂದ್ರಲೋಕವಿದೆ.

ಐರಾವತವನ್ನು ಏರಿ ವಜ್ರಪಾಣಿಯಾಗಿ, ಸುರರಿಂದ ಸುತ್ತುವರೆದಿರುವ ಪುರಂದರ(ಇಂದ್ರ)ನು ಅದನ್ನು ರಕ್ಷಿಸುತ್ತಾನೆ. ಅಗ್ನಿಭಾಗ(ಆಗ್ನೇಯದಿಗ್ಭಾಗ)ದಲ್ಲಿ ಅಗ್ನಿಲೋಕವಿದೆ. ಅದರ ಯಜಮಾನನು ಸಪ್ತಾರ್ಚಿ(ಏಳು ಜ್ವಾಲೆಗಳುಳ್ಳ) ಅಗ್ನಿ. ಆತನು ಟಗರನ್ನು ಏರಿಕೊಂಡಿದ್ದು ಶಕ್ತಿ(ಆ ಹೆಸರಿನ ಆಯುಧ)ಯನ್ನು ಹಿಡಿದವನಾಗಿ ಸ್ವಧಾ ಮತ್ತು ಸ್ವಾಹಾ(ಅಗ್ನಿಯ ಪತ್ನಿಯರಿಬ್ಬರು) ಸಮೇತನಾಗಿರುವನು.

ಯಾಮ್ಯ(ದಕ್ಷಿಣ)ಭಾಗದಲ್ಲಿ ಯಮನ ನಗರವಿದೆ. ಅಲ್ಲಿ ದಂಡಧರ(ಯಮ)ನು ರಾಜನಾಗಿದ್ದಾನೆ. ಆತನು ಎತ್ತರವಾದ ಕೋಣವನ್ನೇರಿದ್ದಾನೆ. ಅವನು ತುಂಬ ದೃಢಸ್ವಭಾವದವನು. ಆಜ್ಞಾಪಾಲಕನಾದ ಅವನು ಚಿತ್ರಗುಪ್ತ ಮೊದಲಾದ ಯಮಕಿಂಕರರೊಡಗೂಡಿ ಲಲಿತಾದೇವಿಯ ಶಾಸ್ತ್ರವಿಧಿಗೆ ದ್ರೋಹ ಮಾಡುವವರನ್ನು ಖಂಡಿತವಾಗಿಯೂ ಹಿಂಸಿಸುತ್ತಾನೆ. ಅದರ ಪಶ್ಚಿಮದಿಗ್ಭಾಗದಲ್ಲಿ ನರವಾಹನನಾದ ಮಹಾಬಾಹುಯುತನಾದ ನಿರ್ಋತಿಯು ಖಡ್ಗ ಹಸ್ತನಾಗಿ ಲಲಿತಾದೇವಿಯ ಅರ್ಚನೆಯನ್ನು ಮಾಡುತ್ತಿರುವನು. ಅದರ ಉತ್ತರದಿಗ್ಭಾಗದಲ್ಲಿ ಪಾಶವನ್ನು ಕೈಯಲ್ಲಿ ಧರಿಸಿದ ವರುಣನು ಇರುವನು. ಆತನು ವಾರುಣಿ ಎಂಬ ಮದ್ಯದ ಪರಿಮಳದಿಂದ ಹುಚ್ಚನಂತಾಗಿದ್ದಾನೆ. ಮೊಸಳೆಯು ಅವನ ವಾಹನ. ವಿಶದವಾದ ಕಿರಣಗಳಿಂದ ಆತ ಕೂಡಿರುವನು. ಶ್ರೀದೇವತೆ(ಲಲಿತೆ)ಯ ದರ್ಶನವನ್ನು ದ್ವೇಷಿಸುವವನನ್ನು ಆತನು ಪಾಶದ ಕಟ್ಟುಗಳಿಂದ ಕಟ್ಟಿ ಅಧೋಮಾರ್ಗ(ನರಕ)ಕ್ಕೆ ಕೊಂಡೊಯ್ಯುತ್ತಾನೆ. ಆತನು ಭಕ್ತರ ಬಂಧಮೋಚಕನಾಗಿದ್ದಾನೆ. ಅದರ ಉತ್ತರದಿಗ್ಭಾಗದಲ್ಲಿ ಮಹಾಪ್ರಕಾಶದಿಂದ ಕೂಡಿದ ವಾಯುಲೋಕವಿದೆ. ಹೇ ಅಗಸ್ತ್ಯನೆ, ಏಳು ರೀತಿಯಿಂದ ಭಿನ್ನಶರೀರನಾದ (ಏಳು ವಿಭಾಗಗಳಾಗಿ ವಿಂಗಡನೆ ಹೊಂದಿದ) ವಾಯುವು ಅಲ್ಲಿರುವನು. ಸಮಸ್ತ ಐಶ್ವರ್ಯ ಸಂಪನ್ನನಾದ ಆ ವಾಯುದೇವನು ಧ್ವಜಹಸ್ತನಾಗಿ ಜಿಂಕೆಯನ್ನೇರಿ ಗೋರಕ್ಷ ಮೊದಲಾದ ಯೋಗಿಗಳೊಂದಿಗೆ, ಸಿದ್ಧರೊಂದಿಗೆ, ಮಹರ್ಷಿಗಳೊಂದಿಗೆ, ಇಡಾ ಮೊದಲಾದ ಶಕ್ತಿಗಳೊಂದಿಗೆ ಚಕ್ರಿಣಿ(ಲಲಿತಾದೇವಿ)ಯನ್ನು ನಿರಂತರವಾಗಿ ಜಪಿಸುತ್ತಿರುವನು. ಅವನ ಲೋಕದ ಪೂರ್ವಭಾಗದಲ್ಲಿ ಮಹಾಪ್ರಕಾಶಮಯವಾದ ಯಕ್ಷಲೋಕ ಇದೆ. ಅಲ್ಲಿ ಕುಂತ ಎಂಬ ಆಯುಧವನ್ನು ಧರಿಸಿ ಅಶ್ವವಾಹನನಾದ ಯಕ್ಷರಾಜನು ಇರುವನು. ಒಂಬತ್ತು ಆಕೃತಿಗಳುಳ್ಳ ನಿಧಿಗಳಿಂದ ಋದ್ಧಿ, ವೃದ್ಧಿ ಮೊದಲಾದ ಶಕ್ತಿಗಳಿಂದ ಕೂಡಿದ ಆತನು ಧನಸಂಪತ್ತಿನಿಂದ ಲಲಿತಾ ಭಕ್ತರನ್ನು ಐಶ್ವರ್ಯಪೂರ್ಣರನ್ನಾಗಿ ಮಾಡುತ್ತ ತನ್ನ ಅನುಕೂಲಕ್ಕೆ ತಕ್ಕಂತೆ ನಡೆದುಕೊಳ್ಳುತ್ತಿರುವ ಸುಂದರಿಯರಾದ ಯಕ್ಷಿಗಳೊಂದಿಗೆ ಇರುವನು.

ಮಣಿಭದ್ರ, ಪೂರ್ಣಭದ್ರ, ಮಣಿಮಾನ್, ಮಣಿಕಂಧರ ಈ ಮೊದಲಾದ ಯಕ್ಷಸೇನಾಪತಿಗಳು ಅಲ್ಲಿ ವಾಸಮಾಡುತ್ತಾರೆ. ನಾನಾ ವಸ್ತು (ಸಂಪತ್ತು) ಭೇದಗಳಿಂದ ಚಕ್ರಿಣಿ(ಲಲಿತಾ)ಯನ್ನು ಯಕ್ಷರಾಜನು ಪೂಜಿಸುತ್ತಾನೆ. ಆ ಲೋಕದ ಪೂರ್ವಭಾಗದಲ್ಲಿ ಶ್ರೇಷ್ಠತರವಾದ ರುದ್ರಲೋಕವಿದೆ. ಅಲ್ಲಿರುವ ರುದ್ರಾಲಯವು ಮುತ್ತುಗಳ ಜಾಲ(ಬಲೆ)ಗಳಿಂದ ನಿರ್ಮಿತವಾಗಿದೆ. ಇದು ಐದು ಯೋಜನಗಳಷ್ಟು ವಿಸ್ತಾರವಾಗಿದೆ. ಅದೇ ಸಂಖ್ಯೆಯ(ಐದು ಯೋಜನಗಳು) ಸುತ್ತಳತೆಯಿದ್ದು ಹೊಳೆಯುತ್ತಿದೆ. ಅಲ್ಲಿ ಮಹಾರುದ್ರನ ಚಕ್ರವಿದೆ. ಅದು ಹದಿನಾರು ಆವರಣಗಳಿಂದ ಕೂಡಿದೆ. ಇದು ಬಿಂದು, ತ್ರಿಕೋಣ, ಷಟ್‌ಕೋಣ, ಅಷ್ಟಕೋಣ, ದಶಪತ್ರ, ದ್ವಾದಶಪತ್ರ, ತ್ರಯೋದಶದಳ, ಷೋಡಶದಳ, ಅಷ್ಟಾದಶಾರ, ವಿಂಶತಿದಳ, ಧ್ವಾವಿಂಶತಿದಳ, ಚತುರ್ವಿಂಶತಿದಳ, ಷಡ್ವಿಂಶತಿದಳ, ತ್ರಿಂಶದ್ದಳ, ದ್ವಾತ್ರಿಂಶದ್ದಳಗಳಿಂದ (ಬಿಂದು, ಮೂರು, ಆರು, ಎಂಟು, ಹತ್ತು, ಹನ್ನೆರಡು, ಹದಿಮೂರು, ಹದಿನಾರು, ಹದಿನೆಂಟು, ಇಪ್ಪತ್ತು, ಇಪ್ಪತ್ತ ಎರಡು, ಇಪ್ಪತ್ತನಾಲ್ಕು, ಇಪ್ಪತ್ತಆರು, ಮೂವತ್ತು, ಮುವತ್ತ ಎರಡು) ಕೂಡಿದೆ. ಈ ಮಹಾರುದ್ರಚಕ್ರವು ನಾಲ್ಕುದ್ವಾರಗಳಿಂದ ಹದಿನಾರು ಆವರಣಗಳಿಂದ ಕೂಡಿ ಶೋಭಿಸುತ್ತಿದೆ.

ರುದ್ರಾಧ್ಯಾಯದಲ್ಲಿ ಹೇಳಲಾದಂತಹ ರುದ್ರರುಗಳು ಆ ಚಕ್ರದಲ್ಲಿ ಇರುವರು. ಮಧ್ಯಪೀಠದಲ್ಲಿ ಮಹಾರುದ್ರನು ಸಿಟ್ಟಿನಿಂದ ಉರಿಯುತ್ತಿದ್ದಾನೆ. ಅವನು ತ್ರಿಲೋಚನ. ಅವನು ಬಿಲ್ಲನ್ನು ಹೆದೆಯೇರಿಸಿಕೊಂಡಿದ್ದಾನೆ. ಅವನ ಕಣ್ಣುಗಳು ಉರಿಯುತ್ತಿದೆ. ಅವು ಕೆಂಪಾಗಿವೆ. ಆತನು ಜಟಾ ಕಿರೀಟದಿಂದ ಶೋಭಾಯುಕ್ತನು. ಸರ್ಪಾಭರಣಗಳಿಂದ ಕೂಡಿದವನು. ಎತ್ತರವಾದ ಎತ್ತನ್ನು ಏರಿರುವನು. ಶೂಲವನ್ನು ಧರಿಸಿರುವನು. ಪ್ರಮಥಗಣಗಳಿಂದ ಪೂಜೆಗೊಳ್ಳುವನು. ಲಲಿತಾದೇವಿಯ ದರ್ಶನದಿಂದ ವಿಮುಖರಾದವರನ್ನು ಉದ್ಧರಿಸುವನು. ಹೇ ಅಗಸ್ತ್ಯಮಹರ್ಷಿ, ಗುರುಗಳ ಧಿಕ್ಕಾರವನ್ನು ಪಡೆದವರನ್ನು ತನ್ನ ಶೂಲದ ತುದಿಯಿಂದ ಸೀಳಿ ಕಣ್ಣುಗಳಿಂದ ಹೊರಹೊಮ್ಮಿದ ತೀಕ್ಷ್ಣವಾದ ಅಗ್ನಿಗಳಿಂದ ಸುಡುತ್ತಾ ಅವರ ಪಶುಗಳನ್ನು, ಸೇವಕರನ್ನು, ಅರ್ಚನೆಗಳನ್ನು ವಿನಾಶಮಾಡುತ್ತ ಆತನು ಅತ್ಯಂತ
11 a ಸುಂದರವಾದ ರುದ್ರಲೋಕದಲ್ಲಿ ಇರುತ್ತಾನೆ. ಋಷಿಯೆ, ಎಣಿಕೆಗೆ ಬಾರದಷ್ಟಿರುವ ಆ ಮಹಾರುದ್ರನ ಪರಿವಾರಗಣಾಧಿಪತಿಗಳಾದ ರುದ್ರರುಗಳನ್ನು ಕುರಿತು ವರ್ಣಿಸುವ ಬುದ್ಧಿವಂತನು ಯಾರಿರುವನು? ಇಂದ್ರನೆ ಮೊದಲಾದ ದಿಕ್ಪಾಲಕರು ಈ ಮುತ್ತಿನ ಕೋಟೆಯನ್ನು ಆಶ್ರಯಿಸಿಕೊಂಡು ಲಲಿತಾಪರಮೇಶ್ವರಿಯ ಸೇವೆಯನ್ನೇ ವಿಸ್ತಾರವಾಗಿ ಕೈಗೊಂಡಿದ್ದಾರೆ.

'ಶತರುದ್ರ'ರು ಎಂದು ಹೆಸರುಳ್ಳವರು ಕೂಡಾ ಈ ಮುತ್ತಿನ ಕೋಟೆಯಲ್ಲಿ ಪೂರ್ವ ಮೊದಲಾದ ಹತ್ತು ದಿಕ್ಕುಗಳಲ್ಲಿ ಪ್ರತ್ಯೇಕವಾಗಿ ಹತ್ತರಂತೆ ಇರುವರು ಎಂದು ಕೆಲವರ ಅಭಿಪ್ರಾಯ. ಅವರ ಹೆಸರುಗಳು ಬೇರೆ ಗ್ರಂಥದಲ್ಲಿ ಇವೆ. 163-191

ಈ ರೀತಿಯಾಗಿ ಹದಿನಾಲ್ಕನೆ ಕೋಟೆ.

11 a/1 ಈ ಇಂದ್ರನಿಲಪೂರ್ಣವಾದ ಕೋಟೆಯ ಹಾಗೂ ಮುಂದಿರುವ ಮುತ್ತಿನ ಕೋಟೆಯ ನಡುವಿನಲ್ಲಿರುವ ಹದಿನಾಲ್ಕನೆಯ ಕೊಠಡಿಯಲ್ಲಿ ಇಂದ್ರ ಮೊದಲಾದ ದಿಕ್ಪಾಲಕರು ಅದೇ ಕ್ರಮವಾದ ದಿಕ್ಕುಗಳಲ್ಲಿರುವರು. ಅವರುಗಳಲ್ಲಿ ಈಶಾನನು ರುದ್ರಾಧ್ಯಾಯದಲ್ಲಿ ಹೇಳಲಾದ ರುದ್ರರೊಂದಿಗೆ ಚಕ್ರಾಸನದಲ್ಲಿರುವನು. ಅಲ್ಲದೇ ಶತರುದ್ರರುಗಳು ಹತ್ತೂ ದಿಕ್ಕುಗಳಲ್ಲಿರುವರು. ಹಾಗೆಯೇ, ಗೋರಕ್ಷ ಮೊದಲಾದ ಯೋಗಿಗಳು ಮಣಿಭದ್ರ ಮೊದಲಾದ ಯಕ್ಷರುಗಳು ತಾಮ್ರಪರ್ಣಿ ಮೊದಲಾದ ನದಿಗಳು ಕೂಡ ಇವೆ. ಇಂದ್ರ ಮೊದಲಾದ ದಿಕ್ಪಾಲಕರು ಈ ಕೊಠಡಿಯ ರಕ್ಷಕರಾಗಿದ್ದಾರೆ.

11 b ಹದಿನೈದನೆ ಮುತ್ತುಗಳ ಕೋಟೆಯಲ್ಲಿರುವ ದಂಡಿನೀವಾರಾಹಿಯ ಧ್ಯಾನ

ಮುತ್ತುಗಳ ಕೋಟೆಯೊಳಗೆ ಏಳು ಯೋಜನಗಳ ದೂರದಲ್ಲಿ ಮರಕತ ಎಂಬ ಹೆಸರಿನ ಕೋಟೆಯಿದೆ. ಅದು ನಾಲ್ಕು ಯೋಜನಗಳಷ್ಟು ಎತ್ತರವಾಗಿದೆ. ಹಿಂದಿನ ಕೋಟೆಗಳಂತೆಯೆ ಗೋಪುರಗಳ ನಿವೇಶನದಿಂದ ಅದು ಹೊಳೆಯುತ್ತದೆ. ಅದರ ಶುಭ್ರವಾದ ಸಮಸ್ತಭೂಭಾಗವು ಮರಕತಗಳ ಸಾಲುಗಳಿಂದ ಪೋಣಿಸಲಾಗಿದೆ. ಅದು ಚಿನ್ನದ ತಾಳೆವನಗಳಿಂದ ಕೂಡಿದೆ. ಹಾಗೂ ಎಲ್ಲ ವಸ್ತುಗಳಿಂದ ತುಂಬಿದೆ. ಆಗ್ನೇಯ ಮೊದಲಾದ ದಿಕ್ಕುಗಳಲ್ಲಿ ಶ್ರೀದಂಡನಾಥಾದೇವಿಯ ನಾಲ್ಕು ವಾಸಗೃಹಗಳಿವೆ. ಅವು 'ಮಂತ್ರಿಣಿ'ಯ ವಾಸಗೃಹದ ವಿಸ್ತಾರವನ್ನೊಳಗೊಂಡಿದೆ. ಭಂಡಾಸುರನೊಂದಿಗೆ ಯುದ್ಧನಡೆದಾಗ ಕಿರಿಚಕ್ರಶ್ರೇಷ್ಠದ ಹಂತಗಳನ್ನು ಆಶ್ರಯಿಸಿದ್ದ ದೇವಿಯರು ಈ ವಾಸಗೃಹಗಳಲ್ಲಿ ಈಗ ಎಚ್ಚರಿಕೆಯಿಂದ ವಾಸಿಸುತ್ತಾರೆ. ಜಂಭಿನಿ ಮೊದಲಾದ ಚಕ್ರದೇವಿಯರು, ಹೇತುಕರೆಂಬ ಭೈರವರು, ಏಳು ಮಂದಿ ನಿಗ್ರಹದೇವಿಯರು ಕೂಡಾ ಅಲ್ಲಿ ಮದಮತ್ತರಾಗಿ ನೃತ್ಯಮಾಡುತ್ತಿದ್ದಾರೆ. ದಂಡಿನಿಯ ಮಹಾಗೃಹಗಳಿರುವ

ನಾಲ್ಕು ವಿದಿಕ್ಕುಗಳಲ್ಲಿ ದಂಡಿನೀದೇವಿಗೆ ಸಮಾನವಾದ ವರ್ಚಸ್ಸು ಇರುವ ಉನ್ಮತ್ತಭೈರವಿ. ಸ್ವಪ್ನೇಶಿ, ತಿರಸ್ಕೃತಿ, ಹಾಗೂ ಕಿರೀಟಿನಿ ಎಂಬ ನಾಲ್ವರು ದೇವಿಯರು ದಂಡನಾಯಿಕೆಯ ಸೇವೆಯನ್ನೂ ಮಾಡುತ್ತಿರುತ್ತಾರೆ. ಈ ಎಲ್ಲ ದಿಕ್ಕುಗಳಲ್ಲೂ ಮರಕತ ಭೂಯಿಷ್ಠವಾದ ಈ ಕೊಠಡಿಯು ದಂಡನಾಥಾದೇವಿಯ ಮುಖ್ಯವಾದ ಅಭಿಮಾನಾರ್ಹ ನಿವಾಸಸ್ಥಾನ. ಅಲ್ಲಿ ದಂಡನಾಥಾದೇವಿಯು ನೂರು ಸ್ತಂಭಗಳಿಂದ ಕೂಡಿದ ಮಂಟಪದಲ್ಲಿರುವಳು. ಅಲ್ಲಿ ಚಿನ್ನದ ಕಮಲದ ಕರ್ಣಿಕೆ(ನಾಲದಂಡ)ಯ ನಡುವೆ ಕಾದಚಿನ್ನದಂತಿರುವ ಚಕ್ರವು ಶೋಭಿಸುತ್ತದೆ. ಅದು ಬಿಂದು, ತ್ರಿಕೋಣ ಮತ್ತು ವರ್ತುಳದಿಂದ ಕೂಡಿದೆ. ಅದಕ್ಕೆ ಆರು ದಳಗಳು ಇವೆ. ಎರಡು ವಲಯಗಳಿವೆ. ಸಂಜೆಯ ಕೆಂಬಣ್ಣದಂತೆ ಹೊಳೆಯುವ ಬಟ್ಟೆಯುಳ್ಳ, ಸಮಸ್ತ ಆಭರಣಗಳಿಂದ ಶೋಭಿತೆಯಾದ, ಶಂಖ, ಚಕ್ರ, ಅಭಯ, ವರ, ನೇಗಿಲು, ಒನಕೆ, ಹಾಗೂ ಪಾಶ ಮತ್ತು ಅಂಕುಶಗಳನ್ನು ಧರಿಸಿದ, ಚಂದ್ರಕಲೆಯನ್ನು ಶಿರಸ್ಸಿನಲ್ಲಿ ಸಿಂಗರಿಸಿಕೊಂಡ, ದಂಡಿನಿಯು ಅಲ್ಲಿ ಹಂದಿಯ ಮುಖವನ್ನು ಹೊಂದಿರುವಳು.

ಈ ರೀತಿಯಾಗಿ ಹದಿನೈದನೆ ಕೋಟೆ.

11 b/1 ಈ ಮುತ್ತಿನ ಕೋಟೆಯ ಹಾಗೂ ಮುಂದಿರುವ ಮರಕತಕೋಟೆಯ ನಡುವಿನಲ್ಲಿರುವ ಹದಿನೈದನೆಯ ಕೊಠಡಿಯ ಚಿನ್ನದ ತಾಳವನದಲ್ಲಿ ಕಿರಿಚಕರಥದಲ್ಲಿರುವ ಕಿರಿಚಕ್ರಾಸನದಲ್ಲಿ ದಂಡಿನಿಯಾದ ವಾರಾಹೀದೇವಿಯು ಪರಿವಾರದೊಂದಿಗೆ ತನ್ನ ಆಯುಧಗಳನ್ನು ಧರಿಸಿ ರಕ್ಷಕಳಾಗಿರುವಳು.

12 a

ಮರಕತದ ಹದಿನಾರನೆ ಕೋಟೆಯಲ್ಲಿರುವ ಪರಿವಾರಸಮೇತವಾದ ಬ್ರಹ್ಮನ ಧ್ಯಾನ, ಲಲಿತೋಪಾಖ್ಯಾನದಲ್ಲಿ

ಮರಕತಕೋಟೆಯ ಒಳಭಾಗದಲ್ಲಿ ಏಳು ಯೋಜನಗಳ ಅಂತರದಲ್ಲಿ ವಿದ್ರುಮನಿರ್ಮಿತವಾದ ಆಕೃತಿಯುಳ್ಳ ಕೋಟೆಯಿದೆ. ಅದು ಉದಯಸೂರ್ಯನಂತೆ ಕೆಂಬಣ್ಣವುಳ್ಳದ್ದಾಗಿದೆ. ಅಲ್ಲಿನ ಭೂಭಾಗವೆಲ್ಲವೂ ಹವಳದಿಂದಲೇ ರಚಿಸಲಾಗಿದೆ. ಬ್ರಹ್ಮನು ಅಲ್ಲಿ ವಿದ್ರುಮವರ್ಣದವನು. ಕನ್ನೈದಿಲೆಯು ಅವನ ಆಸನ. ಆತನು ಶ್ರೀಲಲಿತಾದೇವಿಯ ಸೇವೆಗಾಗಿ ಸಮಸ್ತ ಮುನೀಂದ್ರರೊಡಗೂಡಿ, ಬ್ರಹ್ಮಲೋಕದಿಂದ ಬಂದು ಆಲಸ್ಯವಿಲ್ಲದೆ ಸತತವಾಗಿ ಮರೀಚಿ
12 a/1 ಮೊದಲಾದ ಸೃಷ್ಟಿಪ್ರವರ್ತಕರೊಂದಿಗೆ ಅಲ್ಲಿರುತ್ತಾನೆ. ಸಾಗರವನ್ನು ಕುಡಿದ ಅಗಸ್ತ್ಯನೆ, ಬ್ರಹ್ಮನೊಂದಿಗೆ ಮಹತ್ತರವಾದ ಹದಿನಾಲ್ಕು ವಿದ್ಯೆಗಳು ಸಾವಿರಾರು ಉಪವಿದ್ಯೆಗಳು ಹಾಗೂ ಅರವತ್ತನಾಲ್ಕು ಕಲೆಗಳು ರೂಪುಪಡೆದುಕೊಂಡು ಅವನ ಸೇವೆಯನ್ನು ಮಾಡುತ್ತಿರುವುವು.

ಈ ರೀತಿಯಾಗಿ ಹದಿನಾರನೆ ಕೋಟೆ.

ಈ ಮರಕತದ ಕೋಟೆಯ ಹಾಗೂ ಮಂದಿರದ ವಿದ್ರುಮದ ಕೋಟೆಯ ಮಧ್ಯಭಾಗದಲ್ಲಿರುವ ಹದಿನೆಂಟನೆಯ ಕೊಠಡಿಯಲ್ಲಿ ಚತುರ್ಮುಖಬ್ರಹ್ಮನು ಕಮಲಾಸದಲ್ಲಿ ಕುಳಿತುಕೊಂಡು ಮರೀಚಿ ಮೊದಲಾದ ಒಂಬತ್ತೂ ಪ್ರಜಾಪತಿಗಳೊಂದಿಗೆ, ಹದಿನಾಲ್ಕು ವಿದ್ಯಾದೇವತೆಗಳೊಂದಿಗೆ, ಉಪದೇವತೆಗಳೊಂದಿಗೆ ಅರುವತ್ತನಾಲ್ಕು ಕಲಾದೇವತೆಗಳೊಂದಿಗೂ ಸೇರಿ ರಕ್ಷಕನಾಗಿರುವನು.

ವಿದ್ರುಮನಿರ್ಮಿತವಾದ ಹದಿನೇಳನೆ ಕೋಟೆಯೊಳಗೆ ಪರಿವಾರಸಮೇತನಾಗಿರುವ ವಿಷ್ಣುಧ್ಯಾನ, ಲಲಿತೋಪಾಖ್ಯಾನದಲ್ಲಿ

ವಿದ್ರುಮದ ಕೋಟೆಯ ನಡುವೆ ಏಳು ಯೋಜನಗಳ ಅಂತರದಲ್ಲಿ ಮಾಣಿಕ್ಯಮಂಟಪ ಎಂಬ ಇನ್ನೊಂದು ಕೊಠಡಿ ಇದೆ. ಅಲ್ಲಿ ಮಾಣಿಕ್ಯದ ಕೋಟೆ ಇದೆ. ಅದರ ಗೋಪುರವು ಹಿಂದಿನ ಕೋಟೆಯ ಗೋಪುರದಂತೆ ಇದೆ. ಅಲ್ಲಿನ ಭೂಭಾಗವು ಮಾಣಿಕ್ಯಗಳಿಂದ ಪರಿಷ್ಕಾರಗೊಂಡಿದೆ (ಸಿದ್ಧವಾಗಿದೆ). ಆ ಮಾಣಿಕ್ಯಮಂಟಪದಲ್ಲಿ ನಿತ್ಯನಾದ ಸಾಕ್ಷಾತ್ ವಿಷ್ಣುವಿರುವನು. ಅವನು ಶಂಖ, ಚಕ್ರ, ಗದಾ, ಪದ್ಮಹಸ್ತನಾಗಿ ಪೀತಾಂಬರವನ್ನು ಉಟ್ಟು ಶ್ರೀವತ್ಸ ಹಾಗೂ ವನಮಾಲೆಗಳಿಂದ ಕೂಡಿ, ಕೇಯೂರಾಂಗದಭೂಷಿತನಾಗಿ, ನಾಲ್ಕು ರೂಪಗಳಿಂದ, ಹತ್ತು ರೂಪಗಳಿಂದ ಹಾಗೂ ಹನ್ನೆರಡು ರೂಪಗಳಿಂದ ಲಕ್ಷ್ಮೀಪತಿಯಾಗಿ ಸ್ವಯಂ ವಾಸವಾಗಿರುವನು. ಭಂಡಾಸುರನೊಡನೆ ಯುದ್ಧ ನಡೆದಾಗ ಶ್ರೀದೇವಿಯ ಉಗುರುಗಳಿಂದ ಜನ್ಮವೆತ್ತ ದಶಾವತಾರ (ಹತ್ತು ಅವತಾರ) ದೇವರು ಕೂಡಾ ಆ ಮಾಣಿಕ್ಯಮಂಟಪದಲ್ಲಿ ನೆಲೆಸಿರುವರು. ಈ ದೇವರುಗಳೊಂದಿಗಿರುವ ಲಲಿತಾದೇವಿಯ ಪರಮ ಭಕ್ತನಾದ ವಿಷ್ಣುವು ಅಲ್ಲಿ ಮಾಣಿಕ್ಯಮಂಟಪ ದಲ್ಲಿ ಶೋಭಿಸುತ್ತಿರುವನು.

ಈ ರೀತಿಯಾಗಿ ಹದಿನೇಳನೆ ಕೋಟೆ.

12 b/1 ಈ ವಿದ್ರುಮದ ಕೋಟೆಯ ಹಾಗೂ ಮುಂಭಾಗದಲ್ಲಿರುವ ಮಾಣಿಕ್ಯದ ಕೋಟೆಯ ನಡುವೆ ಇರುವ ಹದಿನೇಳನೆಯ ಕೊಠಡಿಯಲ್ಲಿ, ಮಾಣಿಕ್ಯಮಂಟಪದಲ್ಲಿ ಮಹಾವಿಷ್ಣುವು, ವಾಸುದೇವ ಮೊದಲಾದ ವ್ಯೂಹಮೂರ್ತಿಗಳು, ಕೇಶವ ಮೊದಲಾದ ಹನ್ನೆರಡು ಮೂರ್ತಿಗಳು ಹಾಗೂ ಮತ್ಸ್ಯ ಮೊದಲಾದ ದಶಾವತರಮೂರ್ತಿಗಳೊಂದಿಗೆ ರಕ್ಷಕನಾಗಿರುವನು.

ಮಾಣಿಕ್ಯದ ಹದಿನೆಂಟನೆ ಕೋಟೆಯಲ್ಲಿರುವ ಪರಿವಾರಸಮೇತನಾದ ಮಹೇಶ್ವರನ ಧ್ಯಾನ, ಲಲಿತೋಪಾಖ್ಯಾನದಲ್ಲಿ

ಮಾಣಿಕ್ಯದ ಕೋಟೆಯು ನಡುವೆ ಏಳು ಯೋಜನಗಳ ದೂರದಲ್ಲಿ ನಾನಾರತ್ನಗಳಿಂದ ಕೂಡಿದ್ದಾಗಿದೆ. ಅದರ ಮಂಟಪವು ಸಾವಿರ ಕಂಬಗಳಿಂದ ಕೂಡಿದೆ. ಅದು ನಾನಾ ರತ್ನಖಚಿತವಾಗಿದ್ದು ನಾನಾ ಅಲಂಕಾರಗಳಿಂದ ಸಿಂಗರಿಸಲ್ಪಟ್ಟಿದೆ. ಒಂದು ಸಾಲಿನಲ್ಲಿ ಒಂದು ಸಹಸ್ರ ಸ್ತಂಭಗಳಿದ್ದು ಅಡ್ಡಕ್ಕೆ ಅದೇ ರೀತಿ ಅನೇಕ ಪಂಕ್ತಿಗಳಿವೆ. ನಾಲ್ಕು ದಿಕ್ಕುಗಳಲ್ಲೂ ಈ ರೀತಿ ಸ್ತಂಭಗಳಿವೆ. ಅವುಗಳ ಮೇಲ್ಛಾವಣಿಯು ಹಿಂದಿನ ಕೋಟೆಯಂತೆಯೇ ಇದ್ದು ಅದು ರತ್ನವೃಕ್ಷಗಳಿಂದ ನಿರ್ಮಿತವಾಗಿದೆ. ಅಲ್ಲಿ ಸಶರೀರವಾಗಿ ಕಂಗೊಳಿಸುವ ಮಹಾನ್ ಶಿವಲೋಕವು ಇದೆ. ಇಪ್ಪತ್ತೆಂಟು ಶೈವಾಗಮಗಳು ಅಲ್ಲಿ ಸಶರೀರವಾಗಿ ಇವೆ. ಸದ್ಯೋಜಾತ ಮೊದಲಾದ ಐವರು, ಭವ ಮೊದಲಾದ ಅಷ್ಟ ಮೂರ್ತಿಗಳು, ಇಪ್ಪತ್ತೈದು ಲೀಲೆಗಳು, ಹನ್ನೊಂದು ರುದ್ರರು ಮುವತ್ತ ಆರು ತತ್ತ್ವದೇವರುಗಳು, ಸಹಸ್ರ –ಸಹಸ್ರ ಸಂಖ್ಯೆಯಲ್ಲಿ ಗಜವಕ್ತ್ರರು (ಆನೆಮುಖ) ನಾನಾ ಆಕಾರದಿಂದಿರುವ ಗುಹರು (ಸ್ಕಂದ) ಹಾಗೆಯೇ ವೀರಭದ್ರ, ನಂದಿ, ಭೃಂಗಿ, ಮಹಾಕಾಲ

12 b ಮುಂತಾದ ಗಣಗಳೂ ಅಲ್ಲಿರುವರು. ಇವರುಗಳಿಂದ ಸುತ್ತುವರೆಯಲ್ಪಟ್ಟು ಲಕ್ಷ್ಮೀಸಂಪನ್ನನಾಗಿ, ಮಹೇಶ್ವರನು ಸಹಸ್ರಸ್ತಂಭಮಂಟಪದಲ್ಲಿರುವನು. ಮಹೇಶ್ವರನು ಸರ್ವ ವಿದ್ಯಾಧೀಶ, ಚಂದ್ರಚೂಡ, ಸರ್ವಾಂಗಗಳಲ್ಲೂ ಭಸ್ಮಲೇಪನವುಳ್ಳವನು, ಸರ್ಪಯಜ್ಞೋಪವೀತ, ವ್ಯಾಘ್ರಚರ್ಮವನ್ನು ಬಟ್ಟೆಯಂತೆ ತೊಟ್ಟವನು, ಜಟಾ ಮತ್ತು ಮಕುಟಗಳಿಂದ ಶೋಭಿಸುವವನು, ಗಂಗೆಯನ್ನು ಧರಿಸಿದವನು, ಮುಕ್ಕಣ್ಣ, ನೀಲಕಂಠ, ಎತ್ತಿನ ಚಿಹ್ನೆಯ ಪತಾಕೆಯುಳ್ಳವನು,

ವಿವಿಧ ರತ್ನಾಭರಣಗಳಿಂದ ಕೂಡಿದವನು, ಪಾರ್ವತಿಯ ಪ್ರಾಣಪ್ರಿಯನು, ಶೂಲವನ್ನು ಕೈಯಲ್ಲಿ ಉಳ್ಳವನು, ಅತ್ಯಂತ
13 a ಸಂತೋಷಚಿತ್ತನು, ಭೋಗ, ಮೋಕ್ಷಗಳೆರಡನ್ನೂ ಕೊಡುವವನು; ಲಲಿತಾಮಂತ್ರಸಿದ್ಧಿಗಾಗಿ ತನ್ನ ಭಕ್ತರ ಆಂತರಿಕ ಹಾಗೂ ಬಾಹ್ಯ ಅಂಧಕಾರ (ಅಜ್ಞಾನಾಂಧಕಾರ) ರಾಶಿಯನ್ನು ಭೇದಿಸುವಲ್ಲಿ ಚತುರವಾದ ಮಹಾಪ್ರಕಾಶರೂಪವಾದ ಮೇಧಾಶಕ್ತಿಯನ್ನು ದೀಪ್ತಿಗೊಳಿಸುತ್ತ ಸರ್ವಜ್ಞನಾದ, ಸರ್ವಕರ್ತೃವಾದ ಮಹಾದೇವನು ಸಹಸ್ರಸ್ತಂಭಮಂಟಪದಲ್ಲಿರುತ್ತ ಶ್ರೀದೇವಿಯ ಸೇವೆಯನ್ನೇ ಮಾಡುವನು. 192-226

ಈ ರೀತಿಯಾಗಿ ಹದಿನೆಂಟನೆ ಕೋಟೆ.

13 a/1 ಈ ಮಾಣಿಕ್ಯದ ಕೋಟೆಯ ಹಾಗೂ ಮುಂಭಾಗದಲ್ಲಿರುವ ನಾನಾರತ್ನ ನಿರ್ಮಿತವಾದ ಕೋಟೆಯ ಮಧ್ಯಭಾಗದಲ್ಲಿರುವ ಹದಿನೆಂಟನೆಯ ಕೊಠಡಿಯಲ್ಲಿ ನವರತ್ನಗಳಿಂದ ನಿರ್ಮಿತವಾದ ಸಹಸ್ರ ಸ್ತಂಭಮಂಟಪದಲ್ಲಿ ಮಹೇಶ್ವರನು ಸದ್ಯೋಜಾತ ಮೊದಲಾದ ಐದು ಮೂರ್ತಿಗಳೊಂದಿಗೆ, ಭವ ಮೊದಲಾದ ಎಂಟು ಮೂರ್ತಿಗಳೊಂದಿಗೆ, ಹನ್ನೊಂದು ರುದ್ರರೊಂದಿಗೆ ಹಾಗೂ ಶೈವಾಗಮ ಸಂಪ್ರದಾಯದ ಇಪ್ಪತ್ತಎಂಟು ಮೂರ್ತಿಗಳೊಂದಿಗೆ ನಾನಾ ವಿನಾಯಕರೊಂದಿಗೆ, ಅನೇಕ ಪ್ರಕಾರದ ಗುಹರೊಂದಿಗೆ ನಂದಿ, ಭೃಂಗಿ ಮೊದಲಾದ ಪ್ರಮಥರಿಂದ ಕೂಡಿದ ವೀರಭದ್ರನೊಂದಿಗೆ ಹಾಗೂ ಮುವತ್ತಾರು ತತ್ತ್ವದೇವತೆಗಳೊಂದಿಗೆ ಕೊಠಡಿಯ ರಕ್ಷಕನಾಗಿರುವನು.

ನಾನಾರತ್ನನಿರ್ಮಿತವಾದ ಹತ್ತೊಂಬತ್ತನೆ ಕೋಟೆಯುಲ್ಲಿರುವ ಪರಿವಾರಸಮೇತಳಾದ ತಾರಾದೇವಿಯ ಧ್ಯಾನ, ಲಲಿತೋಪಾಖ್ಯಾನದಲ್ಲಿ

ಸಹಸ್ರಸ್ತಂಭಗಳ ಕೋಟೆಯ ನಡುವೆ ಏಳುಯೋಜನಗಳ ಅಂತರದಲ್ಲಿ 'ಮನಸ್' ಎಂಬ ಹೆಸರಿನ ದೊಡ್ಡ ಕೋಟೆಯಿದೆ. ಅದು ಸಮಸ್ತರತ್ನಗಳಿಂದ ಖಚಿತವಾಗಿದೆ. ಹಿಂದಿನ ಕೋಟೆಯಂತೆಯೇ ಗೋಪುರದ್ವಾರ ಹಾಗೂ ಕಪಾಟ ಅರ್ಗಲ(ತಡೆ, ಕೀಲು)ದಿಂದ ಕೂಡಿದೆ. ಅದರ ಮಧ್ಯದ ಕೊಠಡಿಯ ಸಮಸ್ತಭಾಗವು ಅಮೃತದ ವಾಪಿಯಾಗಿದೆ. (ವಾಪಿ=ಮೆಟ್ಟಿಲುಗಳಿರುವ ಆಯತ, ವರ್ತುಳ ಆಕಾರದ ದೊಡ್ಡ ಜಲಾಶಯ) ಈ ಅಮೃತವನ್ನು ಯೋಗಿಗಳು, ಸಿದ್ಧರು ಕುಡಿದು ವಜ್ರದೇಹಿಗಳಾಗುತ್ತಾರೆ. ಪ್ರಾಜ್ಞನಾದವನೇ (ಅಗಸ್ತ್ಯ) ಆ ರಸಾಯನವೇ ಆ ಅಮೃತವಾಪಿಯೊಳಗೆ ನೀರಾಗಿ
13 b ಪರಿಣಮಿಸಿದೆ. ಆ ರಸಾಯನದ ಸುವಾಸನೆಯನ್ನು ಕೇವಲ ಮೂಸಿದವನು ಸಿದ್ಧಿ(ಅಷ್ಟಸಿದ್ಧಿಗಳು)ಗಳ ಯಜಮಾನನಾಗುತ್ತಾನೆ. ಎರಡು ಕೋಟೆಗಳ ಪಕ್ಕಗಳಲ್ಲಿ ಈ ಅಮೃತವಾಪಿಯ ಎರಡು ದಡಗಳಿವೆ. ಆ ದಡಗಳು ಅರ್ಧಕ್ರೋಶದಷ್ಟು ದೀರ್ಘವಾಗಿವೆ. ಉಳಿದೆಲ್ಲಾ ಭಾಗವು ವಾಪಿಯಾಗಿದೆ. ನೀರಿನೊಳಗೆ ಈ ವಾಪಿಯ ತಳಭಾಗವು ನಾಲ್ಕು ಯೋಜನಗಳಷ್ಟು ಆಳದಲ್ಲಿದೆ. ಆ ವಾಪಿಯಲ್ಲಿ ನಾನಾರತ್ನಖಚಿತವಾದ ಮೆಟ್ಟಿಲುಗಳ ವರ್ತುಳಗಳಿವೆ. ಅಲ್ಲಿ ಸುವರ್ಣವರ್ಣದ, ರತ್ನವರ್ಣದ ಹಂಸಗಳು ಮತ್ತು ಸಾರಸಗಳಿವೆ(ಸಾರಸ= ಒಂದು ಜಾತಿಯ ಹಂಸ ಅಥವಾ ಕೊಕ್ಕರೆ). ಹಂಸ ಹಾಗೂ ಕಾರಂಡವ ಪಕ್ಷಿಗಳು ತಾವು ಕೂಗುವ ನೆಪದಿಂದ ಲಲಿತಾದೇವಿಯ ಶ್ರೇಷ್ಠತರವಾದ ಮಂತ್ರವನ್ನೇ ಜಪಿಸುವುವು. ವಾಪೀಚಕ್ರದ ಸುತ್ತಲು ಎರಡು ದಡಗಳ ನಡುಭಾಗದಲ್ಲಿ ಹೋಗಲು ನೌಕಾವಾಹನವಿಲ್ಲದೆ ಬೇರೆ ಮಾರ್ಗವಿಲ್ಲ. ಅಲ್ಲಿ ಮಂತ್ರಿಣಿ ಮತ್ತು ದಂಡನಾಥೆಯರ ಆಜ್ಞಾಮಾತ್ರದಿಂದ ತರಣೀಶ್ವರಿ(ದಾಟಿಸಲು ಯಜಮಾನಿಯಾದವಳು) ಮಹಾಶಕ್ತಿಯಾದ 'ತಾರಾ' ಎಂಬುವಳು ಇರುವಳು. ಅಲ್ಲಿ ತಾರಾದೇವಿಯ ಪರಿಚಾರಿಕೆಯರಾದ ಹೊಸತಾರುಣ್ಯದ ನಾವಿಕೆಯರು ಕೋಟಿ ಕೋಟಿ ಸಂಖ್ಯೆಯಲ್ಲಿರುತ್ತಾರೆ. ಅವರು ಆಗಾಗ ಗಾನಮಾಡುವರು, ನೃತ್ಯಮಾಡುವರು. ಆಗಾಗ ದೋಣಿಗಳನ್ನು

ಹಾಯಿಸುವರು. ಆ ಮಂತ್ರಿಣೀ ಮತ್ತು ದಂಡನಾಥೆಯರ ಅಪ್ಪಣೆಯಿಲ್ಲದೇ ತಾರಾದೇವಿಯು ಆ ವಾಪಿಯ ನೀರಲ್ಲಿ ಮುಕ್ಕಣ್ಣನನ್ನೂ ದಾಟಿಸಲಾರಳು. 227-237

ಈ ರೀತಿಯಾಗಿ ಹತ್ತೊಂಭತ್ತನೆ ಕೋಟೆ.

13 b/1 ಈ ನಾನಾರತ್ನಗಳ ಕೋಟೆಯ ಹಾಗೂ ಮುಂಭಾಗದಲ್ಲಿರುವ ಮನೋಮಯವಾದ ಕೋಟೆಯ ನಡುವೆ ಇರುವ ಹತ್ತೊಂಬತ್ತನೆಯ ಕೊಠಡಿಯ ಅಮೃತವಾಪಿಯಲ್ಲಿ ನೌಕಾಧೀಶ್ವರಿ (ದೋಣಿಗಳ ಯಜಮಾನಿ)ಯಾದ ತಾರಾದೇವಿಯು ತನ್ನ ಪರಿವಾರದೊಂದಿಗೆ ರಕ್ಷಕಳಾಗಿರುತ್ತಾಳೆ.

14 a ಮನೋಮಯವಾದ ಇಪ್ಪತ್ತನೆ ಕೋಟೆಯಲ್ಲಿ ಪರಿವಾರಸಮೇತವಾಗಿರುವ ವಾರುಣಿಯ ಧ್ಯಾನ

ಮನೋಮಯವಾದ ಕೋಟೆಯ ನಡುವಿನಲ್ಲಿ ಏಳು ಯೋಜನಗಳ ದೂರದಲ್ಲಿ ಬುದ್ಧಿಸಾಲ(ಕೋಟೆ)ವಿದೆ. ಅದು ನಾಲ್ಕು ಯೋಜನಗಳಷ್ಟು ಎತ್ತರವಾಗಿದೆ. ಅದರ ನಡುವಿನ ಕೊಠಡಿಯ ಭಾಗವೆಲ್ಲವೂ ಆನಂದವಾಪಿ. ಅಲ್ಲಿ ದಿವ್ಯವಾದ ರೆಂಜೆಯ ಹೂವಿನ ಪರಿಮಳದಿಂದ ನಿಬಿಡವಾದ, ಚೆನ್ನಾಗಿ ಕಾದ ಚಿನ್ನದ ಛಾಯೆಯುಳ್ಳ ಶ್ರೇಷ್ಠ ಮದ್ಯವಿದೆ. ಆ ಮದ್ಯವು ಆನಂದವಾಪಿಯ ನೀರು. ಆನಂದವಾಪಿಯ ಆಳವು ಹಿಂದಿನಂತೆಯೇ ಎಂದು ಹೇಳಲಾಗಿದೆ. ಅಲ್ಲಿನ ಮೆಟ್ಟಿಲುಗಳ ಕ್ರಮವೂ ಹಾಗೂ ಹಕ್ಕಿಗಳೂ ಹಿಂದಿನಂತೆಯೇ ಇದೆ. ಅಲ್ಲಿರುವ ಮದ್ಯರೂಪವಾದ ನೀರನ್ನು ಪದೇ ಪದೇ ಕುಡಿಯುತ್ತ ಮದದಿಂದ ಕೆಂಪಾದ ದಡದಲ್ಲಿರುವ ಶಕ್ತಿಗಳು(ದೇವತೆ)ಮದೋನ್ಮತ್ತರಾಗಿ ವಿಹಾರ ಮಾಡುವರು. ಸಾಕ್ಷಾತ್ ವಾರುಣೀದೇವಿಯು ಅಲ್ಲಿ ನೌಕಾಧಿನಾಯಿಕೆ. ಅವಳನ್ನು ಸುಧಾಮಾಲಿನಿಯೆಂದೂ ಅಮೃತೇಶ್ವರಿಯೆಂದೂ ಹೇಳುವರು. ಮಣಿನೌಕೆಯಲ್ಲಿದ್ದು ಶಕ್ತಿಸೇನೆಯಿಂದ ಕೂಡಿದ ಅವಳು(ವಾರುಣಿ) ಅಲ್ಪವಾದ ನೋಟದಿಂದ ತ್ರೈಲೋಕ್ಯಕ್ಕೆ ಮದವನ್ನು ನೀಡಬಲ್ಲಳು. ಅವಳು ಬಾಲಸೂರ್ಯನಂತಿರುವಳು, ಅವಳ ಕೆನ್ನೆಗಳ ಪ್ರದೇಶಗಳು ಮದದಿಂದ ಕೆಂಪಾಗಿದೆ. ಅವಳು ತನ್ನ ಕೂದಲ ತುರುಬಿಗೆ ಪಾರಿಜಾತ ಕುಸುಮಗಳ ಹಾರವನ್ನು ಸುತ್ತಿರುವಳು. ಅವಳು ಅಡ್ಡಾಡುವ ತಾವರೆಯಿರುವ ಮದ್ಯಪೂರ್ಣವಾದ ಪಾನಪಾತ್ರೆಯನ್ನು ಧರಿಸುತ್ತಾಳೆ. ಇನ್ನೊಂದು ಮಣಿಪಾತ್ರೆಯಲ್ಲಿ ಬೇಯಿಸಿದ ಮಾಂಸಖಂಡವನ್ನು ಹಿಡಿದುಕೊಂಡಿದ್ದಾಳೆ. ಇಂಥ ವಾರುಣಿಯು ತರುಣಿಯರ ಸಾಲಿನಲ್ಲಿ ಅಗ್ರಗಾಮಿನಿಯಾಗಿ ಶೋಭಿಸುವಳು. ಅವಳು ಕೂಡಾ ಮಂತ್ರಿಣಿ ಮತ್ತು ದಂಡನಾಥೆಯ ಆಜ್ಞಾಮಾತ್ರದಿಂದಲೇ ಎಲ್ಲರಿಗೂ ಬಾವಿಯನ್ನು ದಾಟಿಸುವಳು. ಆಜ್ಞೆ ಪಡೆಯದೇ ಅವಳು ಮುಕ್ಕಣ್ಣನಿಗೂ ಅವಕಾಶವನ್ನು(ವಾಪೀತರಣ) ಕಲ್ಪಿಸುವುದಿಲ್ಲ. 238-247

ಈ ರೀತಿಯಾಗಿ ಇಪ್ಪತ್ತನೆ ಕೋಟೆ.

14 a/1 ಈ ಮನೋಮಯವಾದ ಕೋಟೆಯ ಹಾಗೂ ಮುಂಭಾಗದಲ್ಲಿರುವ ಬುದ್ಧಿಮಯವಾದ ಕೋಟೆಯ ನಡುಭಾಗದ ಇಪ್ಪತ್ತನೆಯ ಕೊಠಡಿಯ ಆನಂದವಾಪಿಯಲ್ಲಿ ನೌಕಾಧೀಶ್ವರಿಯಾದ ವಾರುಣೀದೇವಿಯು ನಾನಾ ಹೆಸರುಗಳಿಂದ ಶೋಭಿತಳಾಗಿ ತನ್ನ ಪರಿವಾರದೊಡಗೂಡಿ ರಕ್ಷಕಿಯಾಗಿರುವಳು.

14 b

ಬುದ್ಧಿಮಯವಾದ ಇಪ್ಪತ್ತಒಂದನೆ ಕೋಟೆಯಲ್ಲಿರುವ ಪರಿವಾರಸಮೇತಳಾದ ಕುರುಕುಲಾ ದೇವಿಯ ಧ್ಯಾನ

ಬುದ್ಧಿಮಯವಾದ ಇಪ್ಪತ್ತಒಂದನೆ ಕೋಟೆಯ ಮಧ್ಯಭಾಗದಲ್ಲಿ ಏಳು ಯೋಜನಗಳ ಅಂತರದಲ್ಲಿ ಅಹಂಕಾರ ಎಂಬ ಮಹಾಸಾಲ(ಕೋಟೆ) ಇದೆ. ಅದು ಹಿಂದಿನ ಕೋಟೆಯಂತೆಯೆ ಗೋಪುರಗಳನ್ನು ಹೊಂದಿದೆ. ಆ ಎರಡು ಕೋಟೆಗಳ ಮಧ್ಯಭಾಗದಲ್ಲಿರುವ ಇಡೀ ಕೊಠಡಿಯ ಭೂಭಾಗವು 'ವಿಮರ್ಶವಾಪಿ' ಎಂಬುದಾಗಿದೆ. ಅದು ಸೌಷುಮ್ನಾಮೃತರೂಪಿಣಿ(ಸೌಷುಮ್ನಾಮೃತಪೂರ್ಣೆ)ಯಾಗಿದೆ. ಮಹಾಯೋಗಿಗಳ ಮನೋಮಾರುತದಿಂದ ಪೂರ್ಣವಾದ ಸುಷುಮ್ನಾನಾಡಿಯ ವಿವರ(ಕುಹರರಂಧ್ರ)ದಲ್ಲಿ ಒಳಭಾಗದಲ್ಲಿ ಶ್ರೇಷ್ಠವಾದ ಅಮೃತವು ಇರುವುದು. ತಪೋಧನನೆ, ಅದೇ ಈ ವಾಪಿಯ ನೀರು. ಹಿಂದಿನ ವಾಪಿಯ ರೀತಿಯಲ್ಲೇ ದಡಗಳು, ಮೆಟ್ಟಿಲುಗಳು, ಪಕ್ಷಿಗಳು, ನೌಕೆ ಮೊದಲಾದುವುಗಳು ಇರುವುವು. ಅಲ್ಲಿ ಕುರುಕುಲಾ ಎಂಬ ಹೆಸರಿನಿಂದ ಪ್ರಸಿದ್ಧಳಾದ ನೌಕೇಶ್ವರೀದೇವಿಯು ಇರುವಳು. ಅವಳ ಶರೀರವು ಹೊಂಗೆಯಂತೆ ಶ್ಯಾಮಲವಾಗಿದೆ. ಅವಳು ಶ್ಯಾಮವರ್ಣದ ಕುಪ್ಪಸವನ್ನು ತೊಟ್ಟಿರುವಳು. ಮುನಿಯೇ, ಅವಳು ತನಗೆ ಸಮಾನರಾದಂಥ ಇತರ ನೌಕೇಶ್ವರಿಯರನ್ನು ಕೂಡಿಕೊಂಡು, ರತ್ನನಿರ್ಮಿತವಾದ ಹುಟ್ಟನ್ನು (ದೋಣಿನಡೆಸುವ ಕೋಲು) ಕೈಯಲ್ಲಿ ಧರಿಸಿರುವಳು. ಉಕ್ಕಿದ ಮದದಿಂದ ಬೀಗಿಕೊಂಡು ಶೋಭಿಸುತ್ತಿರುವ ಅವಳು ಮಣಿನೌಕೆಯನ್ನು ಏರಿಕೊಂಡು ಸುತ್ತಲೂ ಸಂಚರಿಸುತ್ತಾಳೆ. ಬಾವಿಯ ನೀರಿನ ಆಳವು ಹಿಂದಿನ ಬಾವಿಯ ರೀತಿಯಲ್ಲೇ ಇರುವುದೆಂದು ಹೇಳಲಾಗಿದೆ. 248-254

ಈ ರೀತಿಯಾಗಿ ಇಪ್ಪತ್ತಒಂದನೆ ಕೋಟೆ.

14 b/1 ಈ ಬುದ್ಧಿಮಯವಾದ ಕೋಟೆಯ ಹಾಗೂ ಮುಂಭಾಗದಲ್ಲಿರುವ ಅಹಂಕಾರಮಯವಾದ ಕೋಟೆಯ ನಡುವಿನ ಇಪ್ಪತ್ತಒಂದನೆ ಕೊಠಡಿಯಲ್ಲಿರುವ ವಿಮರ್ಶವಾಪಿಯಲ್ಲಿ ನೌಕಾಧೀಶ್ವರಿಯಾದ ಕುರುಕುಲಾದೇವಿಯು ತನ್ನ ಪರಿವಾರದೊಂದಿಗೆ ರಕ್ಷಕಳಾಗಿರುವಳು.

ಅಹಂಕಾರಮಯವಾದ ಇಪ್ಪತ್ತಎರಡನೆ ಕೋಟೆಯಲ್ಲಿರುವ ಪರಿವಾರಸಮೇತ ಸೂರ್ಯನ ಧ್ಯಾನ, ಲಲಿತೋಪಾಖ್ಯಾನದಲ್ಲಿ

15 a ಅಹಂಕಾರಮಯವಾದ ಕೋಟೆಯ ಒಳಭಾಗಲ್ಲಿ ಏಳು ಯೋಜನಗಳ ದೂರದಲ್ಲಿ ಸೂರ್ಯಬಿಂಬಕೋಟೆಯು ಇದೆ. ಇದು ನಾಲ್ಕು ಯೋಜನಗಳಷ್ಟು ಎತ್ತರವಾಗಿದೆ. ಈ ಕೋಟೆಯ ಪ್ರಭಾವಿರ್ಭಾವವು ಸೂರ್ಯನ ತೇಜಸ್ಸಿಗೆ ಸಮಾನವಾಗಿದೆ. ಈ ಕೋಟೆಯ ಮಧ್ಯದ ಭೂಭಾಗವು ಕುರುವಿಂದ(ಪದ್ಮರಾಗ)ಗಳಿಂದ ಜೋಡಿಸಲ್ಪಟ್ಟಿದೆ. ಮುನಿಯೇ, ಇಲ್ಲಿ ಎಳೆಬಿಸಿಲು ಸತತವಾಗಿ ಹೊರಹೊಮ್ಮಿರುತ್ತದೆ. ಸುರರು, ಸಿದ್ಧರು, ನರರು ಹಾಗೂ ಅಸುರರು ಅದನ್ನು ಸ್ಪರ್ಶಮಾಡಿದ ಮಾತ್ರದಿಂದ ಸೂರ್ಯನಂತೆ ತೇಜೋರೂಪವನ್ನು ಪಡೆದು ಹೊಳೆಯುವರು. ಎಳೆಬಿಸಿಲು ಹೊರಹೊಮ್ಮಿದ ಆ ಪ್ರದೇಶದಲ್ಲಿ ಸೂರ್ಯನು ಪ್ರೀತಿಪೂರ್ವಕವಾಗಿ ಲಲಿತಾಪರಮೇಶ್ವರಿಯ ತಪಸ್ಸನ್ನು ಆಚರಿಸಿ ಅಂಥ ಕಾಂತಿಯನ್ನು ಪಡೆದನು. ಗ್ರಹಗಳು, ಎಲ್ಲಾ ರಾಶಿಸಮೂಹ, ಹಾಗೆಯೇ ನಕ್ಷತ್ರಗಳು ಹಾಗೂ ತಾರಕೆಗಳು. ಅಲ್ಲಿಯೇ ತಪಸ್ಸನ್ನಾಶ್ರಯಿಸಿ ಲೋಕಕ್ಕೆ ಬೆಳಗಾಗಿಬಿಟ್ಟರು. ಅಲ್ಲಿ ಹನ್ನೆರಡು ರೂಪಗಳಿಂದ ಭಿನ್ನನಾಗಿರುವ

ಮಾರ್ತಾಂಡಭೈರವನು ಕೋಟಿ ಕೋಟಿಸಂಖ್ಯೆಯ ತೇಜೋಮಯವಾದ ಶಕ್ತಿಗಳಿಂದ ಕೂಡಿದ್ದಾನೆ. ಅವನು ಮಹಾಪ್ರಕಾಶಸ್ವರೂಪನಾಗಿ ಮದದಿಂದ ರಕ್ತನಯನನವಾಗಿ ಕಂಕೇಲಿ ಮರಗಳ ಸಮೂಹ (ಕಂಕೇಲಿತರುವನ)ದಲ್ಲಿ ಸತತವಾಗಿ ಕ್ರೀಡಾಪ್ರೀತಿಯುಳ್ಳವನಾಗಿದ್ದಾನೆ. ವಿಂಧ್ಯಪರ್ವತದ ದರ್ಪಕ್ಕೆ ಶತ್ರುಸ್ವರೂಪವಾದ, ಅಂಧಕಾರದ ದಡದಲ್ಲಿರುವ ಆತನಲ್ಲಿ ಹಿರಿದಾದ 'ಮಹಾಪ್ರಕಾಶ' ಎಂಬ ಹೆಸರಿನ ಶಕ್ತಿ. ಇನ್ನೊಂದು ಚಕ್ಷುಷ್ಮತಿಯೆಂಬ ಶಕ್ತಿ. ಮತ್ತೊಂದು ಛಾಯಾದೇವಿ ಎಂಬ ಶಕ್ತಿಯಿದೆ. ಈ ರೀತಿಯ ಮೂರು ಶಕ್ತಿಗಳಿಂದ ಕೂಡಿಕೊಂಡಿರುವ (ಮಾರ್ತಾಂಡಭೈರವ) ಮಹೇಶ್ವರಿ ಲಲಿತಾದೇವಿಯ ವಿದ್ಯೆಯನ್ನು ಮನಸ್ಸಿನಲ್ಲಿ ಸತತವಾಗಿ ಜಪಿಸುತ್ತ ಅವಳ ಭಕ್ತರ ಇಂದ್ರಿಯಗಳನ್ನು ಹೊಳೆಯುವ ರೀತಿಯಲ್ಲಿ ಬೆಳಗಿಸುತ್ತ ಬಾಹ್ಯ ಹಾಗೂ ಆಂತರಿಕ ಅಂಧಕಾರಜಾಲ(ಬಲೆ, ಸಮೂಹ)ವನ್ನು ಮೂಲಸಹಿತವಾಗಿ ಪುಡಿ ಮಾಡುತ್ತ ಬಾಲಾತಪೋ ದ್ವಾರದಲ್ಲಿ ಪ್ರಕಾಶಿಸುತ್ತಾನೆ. 255-265

ಈ ರೀತಿಯಾಗಿ ಇಪ್ಪತ್ತೆರಡನೆ ಕೋಟೆ.

15 a/1 ಈ ಅಹಂಕಾರದುರ್ಗದ ಹಾಗೂ ಮುಂದಿರುವ ಸೂರ್ಯಬಿಂಬದುರ್ಗದ ಮಧ್ಯಭಾಗದ ಇಪ್ಪತ್ತ ಎರಡನೆಯ ಕೊಠಡಿಯ ಕಂಕೇಲಿವನದಲ್ಲಿ ಮಾರ್ತಾಂಡಭೈರವನು ಹನ್ನೆರಡು ಆಕಾರಭೇದಗಳಿಂದ ಛಾಯಾ ಮೊದಲಾದ ತನ್ನ ಶಕ್ತಿಗಳು ಹಾಗೂ ಗ್ರಹರಾಶಿಗಳೊಂದಿಗೆ ರಕ್ಷಕನಾಗಿರುತ್ತಾನೆ.

15 b ಸೂರ್ಯಬಿಂಬಪೂರ್ಣವಾದ ಇಪ್ಪತ್ತಮೂರನೆ ಕೋಟೆಯಲ್ಲಿರುವ ಪರಿವಾರಸಹಿತನಾದ ಸೋಮನಾಥನ ಧ್ಯಾನ, ಲಲಿತೋಪಾಖ್ಯಾನದಲ್ಲಿ

ಸೂರ್ಯಬಿಂಬಮಯವಾದ ದೊಡ್ಡಕೋಟೆಯ ನಡುವೆ ಏಳು ಯೋಜನಗಳ ದೂರದಲ್ಲಿ ಚಂದ್ರಬಿಂಬ ಮಹಾದುರ್ಗವಿದೆ. ಅದು ನಾಲ್ಕು ಯೋಜನಗಳಷ್ಟು ಎತ್ತರವಾಗಿದೆ. ಹಿಂದಿನ ಕೋಟೆಗಳಿಗಿರುವಂತೆ ಗೋಪುರ, ದ್ವಾರ, ಕವಾಟ ಹಾಗೂ ಕೀಲುಗಳನ್ನು ಹೊಂದಿರುತ್ತದೆ. ಇದರ ನಡುವಿನ ಸಮಸ್ತಭೂಭಾಗವು ಚಂದ್ರಿಕೋದ್ಗಾರ (ಬೆಳದಿಂಗಳ ಚಿಲುಮೆ) ಎಂದು ಹೇಳಲಾಗಿದೆ. ಅತ್ರಿಯ ಕಣ್ಣುಗಳಿಂದ ಜನ್ಮಪಡೆದ ಚಂದ್ರನು ಅದೇ ಚಂದ್ರಿಕೋದ್ಗಾರದಲ್ಲಿ ಘೋರವಾದ ತಪಸ್ಸನ್ನಾಚರಿಸಿ ಕಾಂತಿಯುಕ್ತನಾದನು. ಇಲ್ಲಿ ಮಂಗಳಾಂಗನಾದ ಶ್ರೀ ಸೋಮನಾಥ ಎಂಬ ಹೆಸರಿನ ದೇವನಿರುವನು. ಆತನು ಮೂರುಲೋಕಗಳ ಕಗ್ಗತ್ತಲ ರೂಪವಾದ ಸಂಸಾರದಿಂದ ಬಿಡುಗಡೆ ಮಾಡಿಸುವನು. ಚಂದ್ರಿಕಾಮೃತವನ್ನು ಪಾನಪಾತ್ರೆಯಲ್ಲಿ ತುಂಬ ಕುಡಿಯುತ್ತ ಇಪ್ಪತ್ತ ಏಳು ನಕ್ಷತ್ರಶಕ್ತಿಗಳಿಂದ ಸುತ್ತುವರೆದವನಾಗಿ ಸತತವಾಗಿ ಪರಿಪೂರ್ಣವಾದ ತನ್ನ ಆಕಾರವನ್ನು ಪಡೆದು ಕಲಂಕರಹಿತವಾದ ಭಗವಾನ್ ಚಂದ್ರನು ಅಲ್ಲಿ ಚಂದ್ರಿಕೋದ್ಗಾರದಲ್ಲಿ ಲಲಿತಾದೇವಿಯ ಜಪ, ಧ್ಯಾನಗಳನ್ನು, ಸ್ತೋತ್ರಗಳನ್ನು ಮತ್ತು ನೂರಾರು ಪೂಜಾ ವಿಧಾನಗಳನ್ನು ನಡೆಸುತ್ತ ಅಶ್ವಿನೀ ಮೊದಲಾದ ನಕ್ಷತ್ರಗಳೊಂದಿಗೆ ಕಾಲಯಾಪನೆಯನ್ನು ಮಾಡುತ್ತಿರುವನು. ತಾರಾ ಎಂಬ ಹೆಸರಿನ ಸಹಸ್ರಾರು ಸಂಖ್ಯೆಯ ಇತರ ಶಕ್ತಿಗಳು ಅವನ ಬಳಿಯಲ್ಲೇ ನೆಲೆಸಿರುವರು. ಆ ಪ್ರಕೋಷ್ಠವು ಅವರಿಂದ ತುಂಬಿಕೊಂಡಿದೆ. 266-273

ಹೀಗೆ ಇಪ್ಪತ್ತಮೂರನೆ ಕೋಟೆ.

15 b/1 ಈ ಸೂರ್ಯಬಿಂಬಮಯವಾದ ಕೋಟೆಯ ಹಾಗೂ ಅದರ ಮುಂಭಾಗದಲ್ಲಿರುವ ಚಂದ್ರಬಿಂಬಮಯವಾದ ಕೋಟೆಯ ನಡುವಿನ ಇಪ್ಪತ್ತ ಮೂರನೆಯ ಅಂಕಣದಲ್ಲಿ ಅಶ್ವಿನಿ ಮೊದಲಾದ ತನ್ನ ಪತ್ನಿಯರಿಂದೊಡಗೂಡಿದ ಹಾಗೂ ಅಸಂಖ್ಯವಾದ ತಾರಾಗಣಗಳೊಂದಿಗಿರುವ ಸೋಮನಾಥನು ಕೊಠಡಿಯನ್ನು ಕಾಪಾಡುತ್ತ ಇದ್ದಾನೆ.

16 a

ಚಂದ್ರಬಿಂಬಮಯವಾದ ಇಪ್ಪತ್ತನಾಲ್ಕನೆ ಕೋಟೆಯಲ್ಲಿರುವ ರತಿ ಮೊದಲಾದ ಸ್ತ್ರೀಯರೊಂದಿಗಿರುವ ಮನ್ಮಥನ ಧ್ಯಾನ, ಲಲಿತೋಪಾಖ್ಯಾನದಲ್ಲಿ

ಚಂದ್ರ ಎಂಬ ಹೆಸರಿನ ಕೋಟೆಯ ಏಳು ಯೋಜನಗಳ ದೂರದಲ್ಲಿ ಶೃಂಗಾರವೆಂಬ ಹೆಸರಿನ ಕೋಟೆಯಿದೆ. ಅದು ನಾಲ್ಕು ಯೋಜನಗಳಷ್ಟು ಎತ್ತರವಾಗಿದೆ. ಅದು ಶೃಂಗಾರದ ಆಕೃತಿಗೆ ತಕ್ಕಂತ ರೂಪವುಳ್ಳ ಕೌಸ್ತುಭಗಳಿಂದ ನಿರ್ಮಿತವಾಗಿದೆ. ಆ ಕೋಟೆಯ ನಡುವಿನ ಭೂಭಾಗವೆಲ್ಲ ಮಹಾಶೃಂಗಾರರೂಪದ ಪರಿಖ (ಕಂದಕ)ವನ್ನು ಹೊಂದಿದೆ. ಅಲ್ಲಿ ಶೃಂಗಾರರಸಪೂರ್ಣವಾದ ಕೋಟೆಯ ಸುತ್ತಿನಲ್ಲಿ ನಾನಾ ಭೂಷಣಗಳಿಂದ ಅಲಂಕೃತರಾದ ಶೃಂಗಾರಶಕ್ತಿಗಳಿವೆ. ಸಾವಿರಾರು ದೋಣಿಗಳ ಸಹಾಯದಿಂದ ಸಂಚಾರ ಮಾಡುತ್ತಿರುವ ಮದದಿಂದ ಗರ್ವಿಷ್ಠರಾಗಿರುವ ಈ ಶಕ್ತಿಗಳು ಅಲ್ಲಿ ದೋಣಿಯಲ್ಲಿ ಕುಳಿತಿರುವ ಮದವಿಹ್ವಲನಾದ ಪುಷ್ಪಾಯುಧ(ಕಾಮ)ನನ್ನು ಸಮೀಪದಲ್ಲಿದ್ದು ಸೇವೆ ಮಾಡುವರು. ಆತನು ಲಲಿತಾದೇವಿಯ ಆಜ್ಞಾಪ್ರಕಾರವಾಗಿ ನಡೆಯುತ್ತ ವಿಶ್ವವನ್ನು ಸಮ್ಮೋಹನಗೊಳಿಸುವ ಶಕ್ತಿಯುಳ್ಳ ಬಾಣಗಳಿಂದ ಎಲ್ಲ ಲೋಕಗಳನ್ನು ಮೋಹನಗೊಳಿಸುತ್ತಾನೆ. ಇವನನ್ನು ಎಂಟು ಬಾಹುಗಳುಳ್ಳವನನ್ನಾಗಿ ರಚಿಸಬೇಕು. ಶಂಖ, ಪದ್ಮ, ಬಿಲ್ಲು, ಬಾಣಗಳನ್ನು ಹಸ್ತಗಳಲ್ಲಿ ಧರಿಸಿ ಶೋಭಿತನಾಗಿರಬೇಕು. ಅವನು ಮದದಿಂದ ಹೊಳೆಯುವ ಕಣ್ಣುಗಳುಳ್ಳವನು. ಹೊಳೆಯುವ ಕಾಂತಿಯನ್ನುಳ್ಳ, ರೂಪದಿಂದ ಮನಸ್ಸನ್ನು ಸೆಳೆಯುವ ರತಿ, ಪ್ರೀತಿ, ಶಕ್ತಿ ಹಾಗೂ ಭೇದಶಕ್ತಿ ಎಂಬ ನಾಲ್ವರು ಪತ್ನಿಯರು ಅವನನ್ನು ಸುತ್ತುವರೆದಿದ್ದಾರೆ. ಅವನ ನಾಲ್ಕು ಹಸ್ತಗಳು ಹೆಂಡಂದಿರ ಸ್ತನಗಳ ಸಮೀಪದಲ್ಲಿವೆ. ಅವನ ಪ್ರಭಾವದಿಂದ ಸಮ್ಮೋಹಿತರಾದ ಸುರರು, ಸಿದ್ಧರು, ನರರು ಹಾಗೂ ಅಸುರರು ಆ ಮಹಾಪದ್ಮಾಟವೀ ಸ್ಥಳಕ್ಕೆ ಹೋಗಲು ಶಕ್ತರಾಗುವುದಿಲ್ಲ. ಮುನಿಯೆ, ಸ್ವಾಭಾವಿಕವಾಗಿ ನಿರ್ಮಲಮನಸ್ಸಿನ ಬ್ರಹ್ಮಾವಿಷ್ಣುಮಹೇಶ್ವರುಗಳು ಅವಳ (ಲಲಿತಾದೇವಿ) ಆಜ್ಞೆಯನ್ನು ಹೊಂದಿ ಮಹಾಪದ್ಮಾಟವಿಗೆ ಹೋಗುವರು. ಸಂಸಾರಿಗಳು, ಮೋಹದಿಂದ ಕುರುಡಾದವರು, ಅತಿ ಹೆಚ್ಚಿನ ಸಂಕಲ್ಪವಿಚಾರವನ್ನುಳ್ಳವರು. ಅಜ್ಞಾನ ತುಂಬಿದ ಪುರುಷರು, ವಿಕಲ್ಪದ ಅಬ್ಬರದಿಂದ ಕಲುಷಿತರಾದವರು, ಅತಿ ನಿಬಿಡವಾಗಿ ಹೆಚ್ಚಾದ ವ್ಯಾಮೋಹವುಳ್ಳ ಜ್ಞಾನಿಗಳೂ ವಿಶೇಷವಾದ ಮೋಹವನ್ನು ಉಂಟುಮಾಡಬಲ್ಲ ಮಹಾಶೃಂಗಾರಕಂದಕವನ್ನು ದಾಟಿ ಹೋಗಲು ಸಮರ್ಥರಾಗಿಲ್ಲ. ಈ ಮಹಾಶೃಂಗಾರಪರಿಖೆಯ ಅಧಿಕಾರಿಯು ಸ್ಮರ. 274-285

ಈ ರೀತಿಯಾಗಿ ಇಪ್ಪತ್ತನಾಲ್ಕನೆ ಕೋಟೆ.

16 a/1 ಈ ಚಂದ್ರಬಿಂಬಮಯವಾದ ಕೋಟೆಯ ಹಾಗೂ ಇದರ ಮುಂದಿರುವ ಶೃಂಗಾರಮಯವಾದ ಕೌಸ್ತುಭಮಣಿಗಳಿಂದ ರಚಿಸಲ್ಪಟ್ಟ ಕೋಟೆಯ ನಡುಭಾಗದ ಇಪ್ಪತ್ತನಾಲ್ಕನೆಯ ಪ್ರಕೋಷ್ಠದ ಶೃಂಗಾರಪರಿಧಿಯಲ್ಲಿ ವಿಚಿತ್ರವಾದ ನೌಕೆಯನ್ನೇರಿ ರತಿ ಮೊದಲಾದ ಸ್ತ್ರೀಯರೊಂದಿಗಿರುವ ಪಂಚಬಾಣ(ಕಾಮ) ರಕ್ಷಕನಾಗಿರುತ್ತಾನೆ.

ಚಿಂತಾಮಣಿಮಹಾಗೃಹಕ್ಷೆದ ವಾಯುಭಾಗ(ವಾಯವ್ಯ ದಿಕ್ಕು)ದಲ್ಲಿರುವ ಕಮಲವನದಲ್ಲಿ ಮಂತ್ರಿಣಿಯ ಗೇಯಚಕ್ರ
17 b ಮಹಾರಥವಿದೆ. ಚಿಂತಾಮಣಿಮಹಾಗೃಹದ ರುದ್ರಭಾಗ(ಈಶಾನ್ಯದಿಕ್ಕು)ದ ಕಮಲವನದಲ್ಲಿ ದಂಡನಾಥಾದೇವಿಯ ಒಲವಿನ ಕಿರಿಚಕ್ರವೆಂಬ ಮಹಾರಥವಿದೆ. ಈ ಮೂರು ರಥಗಳು ಸಂಪೂರ್ಣವಾದ ಶ್ರೀಪುರಗಳ ಸಾಲುಗಳಲ್ಲಿ ಸಮಾನವೆಂದು ತಿಳಿಯಬೇಕು. ಅಲ್ಲಿನ ದೇವತೆಗಳು ಈ ರೀತಿ ಇವೆ.

ಎಲೈ ಕುಂಭಜನ್ಮನಾದ ಅಗಸ್ತ್ಯನೆ, ದಕ್ಷಿಣ ದಿಕ್ಕಿನಲ್ಲಿ ಅಗ್ನಿಕುಂಡವನ್ನು ಆರಂಭಿಸಿ, ಗಾಯತ್ರಿ, ಭಯಂಕರ, ಘೃಣಿ, ಓಂಕಾರಗಾಯತ್ರೀ, ತುರ್ಯಾಗಾಯತ್ರೀ, ಚಕ್ಷುಷ್ಮತೀ, ಗಂಧರ್ವರಾಜರ ಪರಿಷತ್, ರುದ್ರ, ತಾರಾ, ಅಂಬಿಕಾ ಹಾಗೂ ಹರಿ ಇವರುಗಳು ಆಲಯವನ್ನು(ನಿವಾಸ) ರಚಿಸಿರುವರು. ಹರಿಯ ನಿವಾಸವನ್ನು ಆರಂಭಿಸಿ ಮಹಾಗಣಪತಿ, ಶಿವ, ಮೃತ್ಯುಂಜಯೇಶ, ಧಾರಣಾ, ಸರಸ್ವತಿ, ಮಾತೃಕಾ, ಸಂಪದೀಶೀ, ಕಾಲಸಂಕರ್ಷಣೀ, ಶ್ರೀಮಹಾಶಂಭುನಾಥ, ಪರಾಂಬಾ, ಬಾಲಾ, ಅನ್ನಪೂರ್ಣಾ, ಹಯಾರೂಢಾ, ಶ್ರೀಪಾದುಕಾದೇವೀ, ಲಘುಶ್ಯಾಮಾ, ವಾಗ್ವಾದಿನೀ, ನಕುಲಾ ಮತ್ತು ಶ್ಯಾಮಾ ಇವರುಗಳು ಪಶ್ಚಿಮ ದಿಕ್ಕಿನಲ್ಲಿ ನಿವಾಸಮಾಡಿರುವರು. ಶ್ಯಾಮಾಂಬೆಯ ನಿವಾಸವನ್ನು ಆರಂಭಿಸಿ ಕ್ರಮವಾಗಿ ಉನ್ಮತ್ತ ಭೈರವಿ, ಸ್ವಪ್ನಕ್ರೀಡಾಪರಾ, ತಿರಸ್ಕರಣಿಕಾಪರಾ, ಪಂಚಮೀಪರಾ, ಶ್ರೀಮೂರ್ತಿ, ಶ್ರೀಪಾದುಕಾ ಎಂಬುದಾಗಿ ಈ ಷಡಾಮ್ನಾಯದೇವಿಯರು (ಆರು ಶಾಸ್ತ್ರಗಳ ಪ್ರಮುಖದೇವಿಯರು) ಉತ್ತರದಲ್ಲಿ ನಿವಾಸಮಾಡಿರುವರು. ಶಂಕರನು(ಈಶ್ವರನು) ಷಡಾಮ್ನಾಯಸಾಗರ(ಆರುಶಾಸ್ತ್ರಗಳೆಂಬ ಸಮುದ್ರ)ದಲ್ಲಿ ಪ್ರತಿಪಾದಿಸಿದ ಎಲ್ಲಾ ವಿದ್ಯೆಗಳು ಮಹಾಪದ್ಮಾಟವೀಸ್ಥಳದಲ್ಲಿ ಇರುವುವು. ಸಮುದ್ರವನ್ನು ಕುಡಿದವನೆ (ಅಗಸ್ತ್ಯನೆ), ಚಿಂತಾಮಣಿಮಹಾಗೃಹದ ಪೂರ್ವದ್ವಾರದ ದಕ್ಷಿಣಪಾರ್ಶ್ವಭಾಗದಲ್ಲಿ ಮಂತ್ರಿನಾಥನ ದೊಡ್ಡದಾದ ಗೃಹವಿದೆ. ವಾಮಭಾಗದಲ್ಲಿ ದಂಡನಾಥಾದೇವಿಯ ರತ್ನನಿರ್ಮಿತಭವನವಿದೆ. ಅರ್ಘ್ಯಸ್ಥಾನದ ಪೂರ್ವದಲ್ಲಿ ಬ್ರಹ್ಮವಿಷ್ಣುಮಹೇಶ್ವರರ ನಿವಾಸಗಳಿವೆ. ಅವುಗಳು ರತ್ನಗಳ ಕಾಂತಿಗಳಿಂದ ಸಮಸ್ತ ದಿಕ್‌ಚಕ್ರವನ್ನು ಹೊಳೆಯುವಂತೆ ಮಾಡಿವೆ.

ತಪೋಧನನೆ, ಈ ಪ್ರಕಾರವಾಗಿ ಶ್ರೀರಶ್ಮಿಮಾಲಾದೇವಿಯ(ಕಿರಣಮಾಲೆಗಳಿಂದ ಪ್ರಕಾಶಿಸುವವಳು) ಮಣಿನಿರ್ಮಿತವಾದ ಮಹಾನಿವಾಸಗಳು ಎತ್ತರವಾದ ಬಾವುಟಗಳು(ಧ್ವಜ, ಪತಾಕಾ) ಹಾಗೂ ಕೋಟೆಗಳು ಮತ್ತು ಉದ್ಯಾನಗಳಿಂದ ಕೂಡಿವೆ.
286-346

ಈ ರೀತಿಯಾಗಿ ಇಪ್ಪತ್ತ ಐದನೆ ಕೋಟೆ.

ಈ ಶೃಂಗಾರಪೂರ್ಣವಾದ ಕೋಟೆಯ ಹಾಗೂ ಮುಂದಿರುವ ಚಿಂತಾಮಣಿಗೃಹದ ಗೋಡೆಯ(ಪ್ರಾಕಾರ) ಮಧ್ಯದಲ್ಲಿರುವ ಇಪ್ಪತ್ತಐದನೆ ಪ್ರಕೋಷ್ಠ(ಕೋಣೆ)ದಲ್ಲಿ ಮಹಾಪದ್ಮಾಟವಿಯು ಇರುವುದು. ಕಪ್ಪು ಕಬ್ಬಿಣ(ಕರ್ಬೊನ್ನು)ದ ಮೊದಲಕೋಟೆಯನ್ನು ಆರಂಭಿಸಿ ಈ ಶೃಂಗಾರಪೂರ್ಣವಾದ ಕೋಟೆಯವರೆಗೆ ನಾಲ್ಕು ದಿಕ್ಕುಗಳು ಸೇರಿಕೊಂಡು ಇಪ್ಪತ್ತ ಐದು ಕೋಟೆಗಳಿಗೆ ನೂರು ಗೋಪುರಗಳಿವೆ. ಈ ಪ್ರಾಕಾರದ ಮಹಾ ಪದ್ಮಾಟವಿಯಲ್ಲಿರುವ ಪದ್ಮಗಳು ಮಹಾಪ್ರಮಾಣದಲ್ಲಿ ಸತತವಾಗಿ ಅರಳಿರುತ್ತವೆ. ಹಾಗೂ ವಿಚಿತ್ರವಾದ ಸುಗಂಧದಿಂದ ಕೂಡಿರುತ್ತವೆ. ಈ ಪ್ರಕಾರವಾಗಿ ಇರುವ ಪದ್ಮಾಟವಿಯಲ್ಲಿ ದೇವಿಯ ಅರ್ಘ್ಯ, ಪೂಜಾ, ಪಾದ್ಯ ಮೊದಲಾದ ಉಪಚಾರಗಳಿಗೆ ಯೋಗ್ಯವಾದ ಅರ್ಘ್ಯಪಾತ್ರೆಗಳು ದಿವ್ಯಾಮೃತದಿಂದ ತುಂಬಿವೆ. ಈ ಅರ್ಘ್ಯಪಾತ್ರಗಳಲ್ಲಿ ರವಿಕಲಾ ೧೨, ಚಂದ್ರಕಲಾ ೧೬, ಅಗ್ನಿಕಲಾ ೧೦, ವಿಷ್ಣುಕಲಾ ೧೦, ರುದ್ರಕಲಾ ೧೦, ಬ್ರಹ್ಮಕಲಾ ೧೦, ಈಶ್ವರಕಲಾ ೪, ಸದಾಶಿವಕಲಾ ೧೬ ಎಂಬ ಹೆಸರಿನ ೮೮ ಕಲಾದೇವತೆಗಳು ಸಣ್ಣ ದೋಣಿಗಳನ್ನೇರಿ ದೇವಿಯ ಪಾದಧ್ಯಾನದಲ್ಲಿ ಆಸಕ್ತಿಪಡೆದುಕೊಂಡವರಾಗಿ ಸಂಚರಿಸುತ್ತಾರೆ. ಹಾಗೆಯೇ ಆದಿದಂಪತಿಗಳಿಗೆ ಔಪಾಸನಕ್ಕೆ

18a ಅರ್ಹವಾದ ಒಂದು ಯೋಜನ ವಿಸ್ತಾರವುಳ್ಳ ಇದೇ ಪ್ರಮಾಣದಲ್ಲಿ ಚಿದಗ್ನಿಕುಂಡವಿದೆ. ಈ ಪದ್ಮಾಟವಿಯಲ್ಲೇ ನೈಋತ್ಯ ಮೊದಲಾದ ಭಾಗದಲ್ಲಿ ಶ್ರೀದೇವಿಯು ಆರೋಹಣ ಮಾಡಲು ಸೂಕ್ತವಾದ ಶ್ರೀಚಕ್ರವೆಂಬ ಹೆಸರಿನ ರಥವು ಇದೆ. ಇದು ಒಂಬತ್ತು ಪ್ರಾಕಾರಗಳಿಂದ ಕೂಡಿ ನಾಲ್ಕು ಯೋಜನಗಳಷ್ಟು ಸುತ್ತಳತೆಯ ಪರಿಮಿತಿಯಿದ್ದು ಹತ್ತು ಯೋಜನಗಳಷ್ಟು ಎತ್ತರವಿದೆ. ಇದು ವೇದಗಳನ್ನು ಚಕ್ರಗಳನ್ನಾಗಿ ಪುರುಷಾರ್ಥಗಳನ್ನು ಕುದುರೆಗಳನ್ನಾಗಿ ಹೊಂದಿದ್ದು ಅನೇಕ ಕಿಂಕಿಣಿಗಳುಳ್ಳ ಧ್ವಜಗಳು ಹಾಗೂ ಮುತ್ತುಗಳ ಕೊಡೆಯನ್ನು ಹೊಂದಿರುತ್ತದೆ. ವಾಯವ್ಯಭಾಗದಲ್ಲಿ ಮಂತ್ರಿಣಿಯಾದ ಶ್ಯಾಮಲಾದೇವಿಗೆ ಯೋಗ್ಯವಾದ ಗೇಯಚಕ್ರ ಎಂಬ ರಥವು ಏಳು ಅಂತಸ್ತುಗಳಿಂದ ಕೂಡಿ ಏಳು ಯೋಜನಗಳಷ್ಟು ಉನ್ನತವಾಗಿದೆ. ಈಶಾನ್ಯ ಭಾಗದಲ್ಲಿ ದಂಡಿನೀ ಮತ್ತು ವಾರಾಹದೇವಿಯರಿಗೆ ಅರ್ಹವಾದ ಕಿರಿಚಕ್ರ ಎಂಬ ರಥವು ಐದುಕೋಟೆಗಳಿಂದ ಕೂಡಿದ್ದು ಆರು ಯೋಜನಗಳಷ್ಟು ಎತ್ತರವಾಗಿರುವುದು. ಮಂತ್ರಿಣೀ ಮೊದಲಾದ ಎಲ್ಲ ದೇವತೆಗಳ ನಿವಾಸಗಳು ನಾಲ್ಕು ಭಾಗಗಳಲ್ಲಿ ಸಾಲಾಗಿ ಇವೆ.

18 b/1 ಶ್ರೀದೇವಿಯು ಆರೋಹಣವನ್ನು ಮಾಡಲು ತಕ್ಕುದಾದ ಶ್ರೀಚಕ್ರ ಎಂಬ ರಥಕ್ಕೆ ಇರಾತ್ರಿಪುರಭೈರವಿ, ಚಾಮುಂಡಾ, ಸಂಹಾರಭೈರವಿ, ರಕ್ತಯೋಗಿನಿ, ವಲ್ಲಭಾ, ಸಾರಸಾ ಎಂಬ ಆರು ಸಾರಥಿಗಳು. ಮಂತ್ರಿಣಿಯ ಗೇಯಚಕ್ರರಥದ ಸಾರಥಿಯು ಹಸಂತಿ ಎಂಬವಳು. ದಂಡಿನಿಯ ಕಿರಿಚಕ್ರವೆಂಬ ರಥದ ಸಾರಥಿಯು ಸ್ತಂಭಿನಿಯೆಂಬವಳು.

19 a

ಚಿಂತಾಮಣಿಗೃಹದ ಗೋಡೆಯ ಸುತ್ತಲೂ ಚತುರಾಮ್ನಾಯ ರೂಪವುಳ್ಳ ನದೀಧ್ಯಾನ, ಲಲಿತೋಪಾಖ್ಯಾನದಲ್ಲಿ

ಎಲೈ ಮಹಾಮುನಿಯೆ, ಇನ್ನು ಚಿಂತಾಮಣಿ ಗೃಹವನ್ನು ಹೇಳುವೆನು ಕೇಳು. ಅದು ಶ್ರೀಪಟ್ಟಣದ ಮಧ್ಯದಲ್ಲಿದ್ದು ಎರಡು ಯೋಜನಗಳಷ್ಟು ವಿಸ್ತಾರವಾಗಿದೆ. ಚಿಂತಾಮಣಿಗಳಿಂದ ನಿರ್ಮಿತವಾದ ಅದರ ಗೋಡೆಯು ಒಂದು ಕ್ರೋಶದಷ್ಟು ವಿಸ್ತಾರವಾಗಿದೆ. ಅದರ ಮೇಲ್ಭಾಗವು ಚಿಂತಾಮಣಿ ಶಿಲೆಗಳಿಂದ ಮುಚ್ಚಲಾಗಿದೆ. ಅಲ್ಲಿರುವ ಆ ಗೋಡೆಯು ಕೋನಾಕಾರವಾಗಿ ಮುಚ್ಚಲ್ಪಟ್ಟು ಎತ್ತರವಾಗಿದೆ. ಗೃಹದ ಭಿತ್ತಿ (ಗೋಡೆ)ಯು ನಾಲ್ಕು ಯೋಜನಗಳಷ್ಟು ಬಾಗಿಕೊಂಡಿದೆ. ಈಗ ಅದರ ಗಾತ್ರವನ್ನು ಹೇಳುವೆನು. ಮೇಲು ಮೇಲಕ್ಕೆ ಹ್ರಾಸವನ್ನು ಹೊಂದುವ ಆ ಗಾತ್ರವು ಮೂರು ಮುಕುಟಗಳಿಂದ ಪ್ರಕಾಶಿಸುತ್ತದೆ. ಆ ಮುಕುಟಗಳು ಇಚ್ಛಾ, ಕ್ರಿಯಾ, ಜ್ಞಾನ ರೂಪವಾದುವೆಂಬುದು ಅಚ್ಚರಿಯ ವಿಷಯ. ಚಿಂತಾಮಣಿ ಗೃಹದಲ್ಲಿ ಎಲ್ಲವೂ ಚಿಂತಾಮಣಿಗಳಿಂದ ತುಂಬಿದೆಯೆಂದು ಹೇಳಲಾಗಿದೆ. ಅದರ ನಾಲ್ಕು ದ್ವಾರಗಳು ಅರ್ಧಕ್ರೋಶದಷ್ಟು ಉದ್ದವಾಗಿವೆ. ಎಲೈ ಮುನಿಯೆ, ಬಾಗಿಲುಗಳ ವಿಸ್ತಾರವು ನಾಲ್ಕನೆಯ ಒಂದು ಕ್ರೋಶದಷ್ಟು ಆಗಿದೆ. ಚಿಂತಾಮಣಿ ಗೃಹದ ಒಳಗಿನ ಎಲ್ಲ ದ್ವಾರಗಳಲ್ಲೂ ಲಲಿತಾದೇವಿಯ ದೇಹದ ಕೆಂಬಣ್ಣದ ಕಾಂತಿಯ ಸಾಗರಗಳು ಪಿಂಡೀಭೂತ (ಮುದ್ದೆ)ವಾಗಿವೆ. ಮಹಾಮುನಿಯೆ, ಸಾವಿರ ಸಂಖ್ಯೆಯ ಬಾಲಸೂರ್ಯರ ಕಾಂತಿಯನ್ನು ಹೊಂದಿದ ಚಂದ್ರನಂತೆ ತಂಪಾಗಿರುವ ಅವುಗಳು (ದೇಹರಕ್ತಿಮೆಯ ಸಾಗರಗಳು) ಪದೇ ಪದೇ ಪ್ರವಾಹ ರೂಪವಾಗಿ ಹರಿಯುತ್ತಿವೆ. ಪೂರ್ವದ್ವಾರವು ಪೂರ್ವಾಮ್ನಾಯ ರೂಪವಾಗಿರುವುದೆಂದು ಹೇಳಲಾಗಿದೆ. ದಕ್ಷಿಣದ್ವಾರದೇಶವು ದಕ್ಷಿಣಾಮ್ನಾಯಲಕ್ಷಣವುಳ್ಳದ್ದಾಗಿದೆ. ಪಶ್ಚಿಮದ್ವಾರದೇಶವು ಪಶ್ಚಿಮಾಮ್ನಾಯಲಕ್ಷಣವುಳ್ಳದ್ದಾಗಿದೆ. ಉತ್ತರದ್ವಾರದೇಶವು ಉತ್ತರಾಮ್ನಾಯಲಕ್ಷಣವುಳ್ಳದ್ದಾಗಿದೆ. ಮಹಾಗೃಹದ ಒಳಭಾಗದ ಗೋಡೆಯ ಮೇಲೆ ದಂಡ(ದೀಪದಂಡ) ರೂಪವಾಗಿ ಕೆತ್ತಲಾದ ಹೊಳೆಯುವ ಮಹಾರತ್ನದೀಪಗಳು ಕೋಟಿಸಂಖ್ಯೆಯ ಸೂರ್ಯರಿಗೆ ಸಮಾನವಾದ ಕಾಂತಿಯಿಂದ ಕೂಡಿವೆ. ಅವುಗಳು ಅಲ್ಲಿ ಗೃಹದ ಒಳಭಾಗವನ್ನು ಸುತ್ತಲೂ ಬೆಳಗಿಸುತ್ತಿವೆ. ಈ ಚಿಂತಾಮಣಿಗೃಹದ ವಿಸ್ತಾರವಾದ ಮಧ್ಯಭಾಗದಲ್ಲಿ ಪರಮೋಚ್ಚವಾದ ವೇದಿಕೆ(ಪೀಠ)ಯ

ಭಾಗದಲ್ಲಿ ಮಹಾಬಿಂದುಚಕ್ರವು ಇದೆ. ಚಿಂತಾಮಣಿಗೃಹದ ಎತ್ತರವಾದ ಗೋಡೆಯ ಹಾಗೂ ಬಿಂದುವಿನ ಮಧ್ಯ ಭೂಭಾಗವು ಭಿತ್ತಿಯಾಗಿದೆ. ಅದು ಒಂದು ಕ್ರೋಶದ ದೂರದಲ್ಲಿ ಮೂರುಕ್ರೋಶದಷ್ಟಿದೆಯೆಂದು ಹೇಳಲಾಗಿದೆ. ಅಲ್ಲಿನ ಅಣಿಮಾ ಮೊದಲಾದ ಮೂರು ಕ್ರೋಶಗಳ ಸ್ಥಾನವು ಸ್ವಪ್ರಕಾಶಪೂರ್ಣವಾಗಿದೆ. ಈ ಚಿಂತಾಮಣಿಗೃಹದ ನಾಲ್ಕು
19a/1 ದ್ವಾರಗಳಲ್ಲಿ ಆಮ್ನಾಯ ರೂಪಿಗಳಾದ ನಾಲ್ಕು ನದಿಗಳಿವೆ. 347-360

ಹೀಗೆ ಚಿಂತಾಮಣಿ ಗೃಹದ ನಾಲ್ಕು ದ್ವಾರಗಳು.

ಒಂಬತ್ತನೆ ಆವರಣದಲ್ಲಿರುವ ದೇವತೆ ಮೊದಲಾದವರ ಸಮಷ್ಟಿಶ್ಲೋಕಗಳು, ಲಲಿತೋಪಾಖ್ಯಾನದಲ್ಲಿ ಹಾಗೂ ಲಲಿತಾರ್ಚನಮಂಜರಿಯಲ್ಲಿ

19 b **ಅಗಸ್ತ್ಯ** :- ಎಲೈ ಹಯಮುಖನೇ/ಹಯಗ್ರೀವನೇ, ಚಿಂತಾಮಣಿಗೃಹವೆಂಬುದು ಯಾವ ತೆರನಾಗಿದೆ. ಅಲ್ಲದೆ ಅದಕ್ಕೆ ಆವರಣಗಳೆಷ್ಟು? ಚಿಂತಾಮಣಿ ಮಹಾಗೃಹದ ಆವರಣ ದೇವತೆಗಳು ಯಾರು ? ಆವರಣಗಳ ಹೆಸರುಗಳನ್ನು ರಥಗಳ ಹಾಗೂ ಆವರಣಗಳ ಪಾಲಿಕೆಯರ ಹೆಸರುಗಳನ್ನು, ಅವರ ರೂಪಗಳನ್ನು ಹಾಗೂ ಆಯುಧಗಳನ್ನು ಹೇಳು.

ಹಯಗ್ರೀವ :- ಚಕ್ರರಾಜನ ಮಹಾನಿವಾಸವು ಚಿಂತಾಮಣಿಗೃಹವೆಂಬುದು. ಇದು ಒಂಬತ್ತು ಆವರಣಗಳನ್ನು ಹೊಂದಿದ್ದು ಚಕ್ರರಾಜನ ರಥದಂತಿದೆ. ಒಂಬತ್ತು ಹಂತಗಳಲ್ಲಿರುವ ನವಾವರಣದೇವತೆಗಳ ಹೆಸರುಗಳನ್ನು ಶ್ರವಣ ಮಾಡು. ನಿನಗೆ ಅವುಗಳನ್ನು ಹೇಳುತ್ತೇನೆ. ಸ್ವರ(ಏಳು) ಪತ್ರ ಕಮಲವುಳ್ಳ, ಎಂಟು ಅರಗಳುಳ್ಳ, ಹದಿನಾಲ್ಕು ಅಶ್ರಗಳುಳ್ಳ, ಹತ್ತುಅರಗಳುಳ್ಳ ಪದ್ಮಗಳೆರಡು, ಎಂಟು ಅರಗಳುಳ್ಳ ಒಂದು ಪದ್ಮ, ಮೂರು ಅಶ್ರಗಳನ್ನುಳ್ಳ ಮಧ್ಯವನ್ನು ಹೊಂದಿರುವ ಭೂಗ್ರಹವು? ತ್ರೈಲೋಕ್ಯಮೋಹನಚಕ್ರ, ಸರ್ವಾಶಾಪರಿಪೂರಕಚಕ್ರ, ಸರ್ವಸಂಕ್ಷೋಭಣಚಕ್ರ, ಸರ್ವಸೌಭಾಗ್ಯದಾಯಕಚಕ್ರ, ಸರ್ವಾರ್ಥಸಾಧಕಚಕ್ರ, ಸರ್ವರಕ್ಷಾಕರಚಕ್ರ, ಸರ್ವರೋಗಹರ ಚಕ್ರ, ಸರ್ವಸಿದ್ಧಿಪ್ರದಾಯಕಚಕ್ರ, ಸರ್ವಾನಂದಮಯ ಚಕ್ರವೆಂಬ ಒಂಬತ್ತನೆಯ ಚಕ್ರವು ಚಕ್ರಗಳಿಗೆಲ್ಲ ನಾಯಕ. (ಚಕ್ರಶ್ರೇಷ್ಠ). ಈ ಒಂಬತ್ತು ವಿಧವಾದ ಚಕ್ರಚಿಹ್ನೆಗಳನ್ನು ತಿಳಿದವನು ಪೂಜಕನೆನಿಸಿಕೊಳ್ಳುವನು. ಪ್ರಕಟಾ, ಗುಪ್ತಾ, ಗುಪ್ತತರಾ, ಸಂಪ್ರದಾಯಾ, ಕುಲೋತ್ತೀರ್ಣಾ, ನಿಗರ್ಭಾ, ರಹಸ್ಯಕಾ, ಪರಾಪರರಹಸ್ಯಾ, ಅತಿಪೂರ್ವರಹಸಾಬ ಒಂಬತ್ತು ಆವರಣಗಳ ಯೋಗಿನಿಯರು. ಈಗ ಚಕ್ರಿಣಿಯರನ್ನು ಶ್ರವಣಮಾಡು. ತ್ರಿಪುರಾ, ತ್ರಿಪುರೇಶೀ, ಸುಂದರೀ, ಪುರವಾಸಿನೀ, ಶ್ರೀ, ಮಾಲಿನೀ, ಸಿದ್ಧಾ, ಅಂಬಾ, ಮಹಾತ್ರಿಪುರಸುಂದರೀ ಈ ಒಂಭತ್ತರ ಸಮೂಹವು ಮಹಾಕಷ್ಟಗಳನ್ನು ನಿವಾರಿಸುವುದು. ಇದು ವಿದ್ಯಾಸಂಕೇತದ ಸಂಜ್ಞಾರೂಪವಾಗಿದೆ. ಇದು ದೇವೀ ಸಂಪ್ರದಾಯಾನುಸಾರವಾಗಿ ಸಂಶೋಧಿಸಬೇಕಾದುದು. ಇದು ಭೋಗವನ್ನೂ ಮುಕ್ತಿಯನ್ನೂ ನೀಡುವುದು. ಮೂರು ಅಂತರಗಳಿದ್ದು ಮೊದಲು ತ್ರೈಲೋಕ್ಯಮೋಹನಚಕ್ರವಾಗಿದೆ. ಇದರಲ್ಲಿರುವ ಶಕ್ತಿಗಳು 'ಪ್ರಕಟ' ಎಂಬ ಹೆಸರುಳ್ಳವುಗಳು. ಈ ಶಕ್ತಿಗಳ ಪ್ರಮುಖ ಸ್ಥಾನದಲ್ಲಿರುವವಳು ಚಕ್ರನಾಯಿಕೆಯಾದ 'ತ್ರಿಪುರಾ' ಎಂಬುವಳು. ಆ ಚಕ್ರವನ್ನು ಪಾಲಿಸುವ ಮುದ್ರೆಯು ಸಂಕ್ಷೋಭಣಾ ಎಂಬುದು. ಈ ಪ್ರಥಮಾವರಣದ ಪ್ರಥಮ ಫಲಕ(ಆಸನ, ಹಂತ)ವನ್ನು ಹತ್ತು ಸಿದ್ಧಿದೇವಿಯರು ಆಶ್ರಯಿಸಿದ್ದಾರೆ. ಅವರುಗಳ ಹೆಸರುಗಳನ್ನು ನನ್ನಿಂದ ಶ್ರವಣಮಾಡು. ಅಣಿಮಾ, ಮಹಿಮಾ, ಗರಿಮಾ, ಲಘಿಮಾ, ಈಶಿತಾ, ವಶಿತಾ, ಪ್ರಾಪ್ತಿ, ಸಿದ್ಧಿ, ಪ್ರಾಕಾಮ್ಯಾ, ಸಿದ್ಧಿಕಾ, ಭುಕ್ತಿಸಿದ್ಧಿ, ಸರ್ವಸಿದ್ಧಿ ಎಂಬ ಹತ್ತು ಉತ್ತಮವಾದ ಸಿದ್ಧಿಗಳು. ರಸಸಿದ್ಧಿ, ಮೋಕ್ಷಸಿದ್ಧಿ, ಬಲಸಿದ್ಧಿ, ಖಡ್ಗಸಿದ್ಧಿ, ಪಾದುಕಾಸಿದ್ಧಿ, ಅಂಜನಸಿದ್ಧಿ, ವಾಕ್‌ಸಿದ್ಧಿ, ಲೋಹಸಿದ್ಧಿ, ದೇಹಸಿದ್ಧಿ ಮತ್ತು ಮಂತ್ರಸಿದ್ಧಿ ಈ ರೀತಿಯಾಗಿ ಹತ್ತು ಉಪಸಿದ್ಧಿಗಳು. ಯೋಗಿಗಳಿಗೆ ಸಮ್ಮತವಾದ ಇಂತಹ ಅನೇಕ ಇತರ ಸಿದ್ಧಿಗಳಿವೆ. ಈ ದೇವಿಯರು ಚತುರ್ಬಾಹುಗಳುಳ್ಳವರು.

ಜಪಾ(ದಾಸವಾಳ) ಕುಸುಮದಂತೆ ಕಾಂತಿಯುಕ್ತರು. ಚಿಂತಾಮಣಿ, ಕಪಾಲ, ತ್ರಿಶೂಲ, ಸಿದ್ಧಕಜ್ಜಲ(ಕಾಡಿಗೆ)ವನ್ನು ಕೈಗಳಿಂದ ಧರಿಸಿಕೊಂಡು ದಯಾಪೂರ್ಣೆಯರಾಗಿದ್ದಾರೆ. ಯೋಗಿಗಳು ಇವರ ಸೇವೆಯನ್ನು ಮಾಡುವರು. 361-380

ಹೀಗೆ ಮೊದಲನೆ ಆವರಣದ ಪ್ರಥಮಫಲಕ (ಹಂತ).

ಮೂರು ಫಲಕಗಳಿರುವ ಭೂಪುರವೆಂಬ ತ್ರೈಲೋಕ್ಯಮೋಹನಚಕ್ರದ ಮೊದಲ ಆವರಣದಲ್ಲಿ 'ತ್ರಿಪುರಾ' ಎಂಬ ನಾಯಿಕೆಯು ಸಂಕ್ಷೋಭಿಣಿ ಎಂಬ ಮುದ್ರೆಯೊಂದಿಗೆ ಇರುವಳು. ಈ ಮೂರು ಫಲಕಗಳಲ್ಲಿ ಇರುವ ದೇವತೆಗಳಿಗೆ ಪ್ರಕಟಯೋಗಿನಿಯರೆಂದು ಹೆಸರು. ಇಲ್ಲಿ ಮೊದಲ ಫಲಕದಲ್ಲಿ ಅಣಿಮಾದಿ ಹತ್ತು ಸಿದ್ಧಿದೇವತೆಗಳು, ರಸಸಿದ್ಧಿ
20 a/1 ಮೊದಲಾದವರು ಹತ್ತು ಹಾಗೂ ಅನೇಕ ಉಪಸಿದ್ಧಿಗಳೂ, ಸಿದ್ಧಿದೇವತೆಗಳೂ ಇವೆ. ಈ ಅಣಿಮಾ ಮೊದಲಾದ ದೇವತೆಗಳಲ್ಲಿ ಒಂದರ(ಒಂದು ದೇವತೆಯ)ಚಿತ್ರವನ್ನು ಲಕ್ಷಣಕ್ಕಾಗಿ ಬರೆದಿದೆ.

ಮೊದಲನೆ ಆವರಣದ ಎರಡನೇ ಫಲಕದಲ್ಲಿರುವ ದೇವತೆಗಳು,
ಲಲಿತೋಪಾಖ್ಯಾನದಲ್ಲಿ

ಆ ಪರ್ವ(ಹಂತ/ಫಲಕ) ಮೇಲ್ಭಾಗದಲ್ಲಿ ಬ್ರಾಹ್ಮೀ ಮೊದಲಾದ ಅಷ್ಟಸಿದ್ಧಿಗಳಿರುವರು. ಬ್ರಾಹ್ಮೀ, ಮಾಹೇಶ್ವರೀ,
20 b/1 ಕೌಮಾರೀ, ವೈಷ್ಣವೀ, ವಾರಾಹೀ, ಮಾಹೇಂದ್ರೀ , ಚಾಮುಂಡಾ (ಏಳನೆಯವಳು). ಮಹಾಲಕ್ಷ್ಮೀ (ಎಂಟನೆಯವಳು). ಇವರು ದ್ವಿಭುಜರು ಹಾಗೂ ಕೆಂಬಣ್ಣದ ಶರೀರದವರು. ಕಪಾಲವನ್ನು ಕಮಲವನ್ನು ಧರಿಸಿರುವ ಇವರು ಕೆಂಬಣ್ಣದ ವಸ್ತ್ರವನ್ನು ಉಟ್ಟಿರುತ್ತಾರೆ. ಅಥವಾ ಕೆಲವರು ಬೇರೊಂದು ಪ್ರಕಾರದಿಂದ ಧ್ಯಾನವನ್ನು ಹೇಳುವರು. ಬ್ರಹ್ಮನೇ ಮೊದಲಾದವರ ರೀತಿಯ ದೇಹವುಳ್ಳವರು, ಬ್ರಹ್ಮನೇ ಮೊದಲಾದವರ ರೀತಿಯಲ್ಲಿ ಆಯುಧವುಳ್ಳವರು, ಅವರೇ ಬ್ರಹ್ಮನೇ ಮೊದಲಾದವರ ಶ್ರೇಷ್ಠವಾದ ಲಕ್ಷಣವನ್ನು ಧರಿಸುವವರೆಂದು ಹೇಳಲಾಗಿದೆ. ಬ್ರಹ್ಮಾದಿಗಳ ಸದೃಶವಾದ ಧ್ಯಾನವು 'ನೃಸಿಂಹಪ್ರಾಸಾದ' ದನುಗುಣವಾಗಿಯೂ ಮಹಾಲಕ್ಷ್ಮೀ ಧ್ಯಾನವು ಚಂಡೀ ಕಲ್ಪದಲ್ಲಿ ಹೇಳಿರುವ ರೀತಿ ಯಿಂದಲೂ ಇರುತ್ತದೆ. 381-384

ಹೀಗೆ ಮೊದಲ ಆವರಣದ ಎರಡನೆ ಫಲಕ.

ಬ್ರಾಹ್ಮೀ ಮೊದಲಾಗಿ ಈ ಮಹಾಲಕ್ಷ್ಮೀ ಸಮೇತರಾದ ಎಂಟು ಸಿದ್ಧಿಗಳ ಧ್ಯಾನವು ಲಲಿತೋಪಾಖ್ಯಾನದ ರೀತಿಯಾಗಿ ಒಂದೇ ವಿಧವಾಗಿದೆ. ನೃಸಿಂಹಪ್ರಾಸಾದ ಮತ್ತು ಚಂಡೀಕಲ್ಪದಲ್ಲಿ ಹೇಳಿರುವಂತೆ ಇನ್ನೊಂದು ಪ್ರಕಾರದ ಧ್ಯಾನವನ್ನೂ ಬರೆಯಲಾಗಿದೆ. ಇಲ್ಲಿ ಲಲಿತೋಪಾಖ್ಯಾನಧ್ಯಾನದ ರೀತಿಯಲ್ಲಿ ಒಂದು ಪ್ರತಿಮೆ(ಚಿತ್ರ)ಯನ್ನು ಬರೆಯಲಾಗಿದೆ.

ಮೊದಲನೆ ಆವರಣದಲ್ಲಿ ಮೂರನೆಯ ಫಲಕದಲ್ಲಿರುವ ಹತ್ತು
ಮುದ್ರಾದೇವತೆಗಳು, ಲಲಿತೋಪಾಖ್ಯಾನದಲ್ಲಿ

ಅದರ (ಪ್ರಥಮಾವರಣ) ಎತ್ತರದ ಸ್ಥಾನದಲ್ಲಿ ಮಹತ್ವವನ್ನು ಹೊಂದಿದ ಮುದ್ರಾದೇವಿಯರು ಇರುವರು. ಕಮಲದಂತೆ ಕಾಂತಿಯುಳ್ಳ ಹಸ್ತಗಳಿಂದ ಅವರು ಮುದ್ರೆಗಳನ್ನು ಕಲ್ಪಿಸುತ್ತಿದ್ದಾರೆ. ದಾಳಿಂಬದ ಹೂವಿನಂತೆ ಅವರ ವರ್ಣ.

ಪೀತಾಂಬರಗಳಿಂದ ಚಿತ್ತಾಕರ್ಷಕರಾಗಿದ್ದಾರೆ. ಅವರು ಚತುರ್ಭುಜರು. ಎರಡು ಹಸ್ತಗಳಲ್ಲಿ ಚಕ್ರ ಮತ್ತು ಚಾಕುವನ್ನು ಧರಿಸಿದ್ದಾರೆ. ಮದದಿಂದಾಗಿ ಕೆಂಬಣ್ಣದಿಂದ ಕೂಡಿದ ಅವರು ಚಂಚಲಾಕ್ಷಿಯರು. ನೀನು ನನ್ನಿಂದ ಅವರ ಹೆಸರುಗಳನ್ನು
20 b ಶ್ರವಣ ಮಾಡು. ಸರ್ವಸಂಕ್ಷೋಭಿಣೀ, ಸರ್ವವಿದ್ರಾವಿಣೀ, ಸರ್ವಾಕರ್ಷಣೀ, ಸರ್ವವಶಂಕರೀ, ಸರ್ವೋನ್ಮಾದಿನೀ, ಸರ್ವಮಹಾಂಕುಶಾ, ಸರ್ವಖೇಚರೀ, ಸರ್ವಬೀಜಾ, ಸರ್ವಯೋನಿ, ಸರ್ವತ್ರಿಖಂಡಿಕಾ, ಎಲೈ ವಿಪ್ರನೇ, ಹೀಗೆ ಹತ್ತು ಮುದ್ರಾದಿ ದೇವತೆಗಳನ್ನು ಹೇಳಿರುವೆನು. 385-389

ಹೀಗೆ ಮೊದಲನೆ ಆವರಣದ ಮೂರನೆ ಫಲಕ.

ಸರ್ವಸಂಕ್ಷೋಭಿಣಿ ಮೊದಲಾದ ಈ ಹತ್ತು ಮುದ್ರಾದೇವತೆಗಳು. ಮುದ್ರಾದೇವಿಯರು ಈ ಭೂವಾಸದ ಮೂರು ಹಂತಗಳಿರುವ ತ್ರೈಲೋಕ್ಯಮೋಹನಚಕ್ರದ ಪ್ರಥಮಾವರಣದ ಮೂರನೆ ಫಲಕದಲ್ಲಿರುತ್ತಾರೆ. ಹತ್ತು ಮುದ್ರಾದೇವಿಯರಲ್ಲಿ ಒಂದು ಮುದ್ರಾದೇವಿಯ ಪ್ರತಿಮೆಯನ್ನು ಮಾತ್ರ ಬರೆಯಲಾಗಿದೆ.

ಈ ತ್ರೈಲೋಕ್ಯಮೋಹನ ಚಕ್ರದ ಒಳಭಾಗದಲ್ಲಿ ಅಣಿಮಾದಿಗಳು ಪೂರ್ವ ಮೊದಲಾದ ದಿಕ್ಕುಗಳಲ್ಲಿ ಮಂದಿರಗಳನ್ನು ನಿರ್ಮಿಸಿಕೊಂಡಿರುವರು. ಅವರು ಸಿದ್ಧಿ, ಬ್ರಾಹ್ಮಿ ಮೊದಲಾದ ಮುದ್ರೆಗಳನ್ನು ಹೊಂದಿರುವರು. ಇವರುಗಳನ್ನು ಪ್ರಕಟ ಶಕ್ತಿಗಳೆಂದು ಹೇಳುವರು. 390

21 a ಈ ಮೂರನೆಯ ಫಲಕ(ಪೀಠ)ದಲ್ಲಿರುವ ರೂಪ ದೇವತೆಗಳು ಪ್ರಕಟಯೋಗಿನಿಗಳೆಂದು ಹೆಸರುಳ್ಳವರು. ಈ ಮೂರು ಫಲಕಗಳನ್ನು ಹೊಂದಿರುವ ತ್ರೈಲೋಕ್ಯಮೋಹನಚಕ್ರವು ಪ್ರಥಮಾವರಣದಲ್ಲಿದೆ. ಈ ಚಕ್ರದ ಹಾಗೂ ಎರಡನೇ ಆವರಣರೂಪವಾದ 'ಸರ್ವಾಶಾಪರಿಪೂರಕ' ಎಂಬ ಹೆಸರಿನ ಚಕ್ರದ ನಡುವಿನ 'ವೃತ್ತತ್ರಯ' ಎಂಬ ಹೆಸರಿನ ಮೂರು ರೇಖೆಗಳು ಮೆಟ್ಟಿಲುಗಳಂತೆ ಇವೆ. ಇದು ರೇಖಾಕ್ರಮದಲ್ಲೇ ಅಂತರ್ಭಾವವನ್ನು ಹೊಂದುವುದು. ಒಂಬತ್ತು ಪರ್ವ(ಗಂಟು, ಹಂತ)ದ ಚಕ್ರಾವರಣಸಂಖ್ಯೆಯಲ್ಲಿ ಅಂತರ್ಭಾವವನ್ನು ಹೊಂದುವುದಿಲ್ಲ. ಅಲ್ಲಿ ದೇವತೆಗಳೂ ಇರುವುದಿಲ್ಲ. ಚಕ್ರಸ್ಥಾಪನಾಕ್ರಮದಲ್ಲಿಯೂ ನ್ಯಾಸಕ್ರಮದಲ್ಲಿಯೂ ಈ ಮೂರುವೃತ್ತಗಳು ಅಂತರ್ಭಾವವನ್ನು ಹೊಂದುವುವು.

ಎರಡನೆ ಆವರಣದಲ್ಲಿರುವ ದೇವತೆಗಳು, ಲಲಿತೋಪಾಖ್ಯಾನದಲ್ಲಿ

ಇನ್ನೊಂದು ಮುದ್ರೆಯ ಮೇಲ್ಭಾಗದಲ್ಲಿ 'ಸರ್ವಾಶಾಪೂರಕ' ಎಂಬ ಹೆಸರನ್ನುಳ್ಳ ನಿತ್ಯಾಕಲಾಚಕ್ರವು ಇದೆ. ಇಲ್ಲಿ ತ್ರಿಪುರೇಶಿ (ತ್ರಿಪುರಸುಂದರಿ) ಚಕ್ರಿಣಿ (ಈ ಚಕ್ರದ ನಾಯಿಕೆ). ಈ ಚಕ್ರದ ಪಾಲನೆಯನ್ನು ಮಾಡುವವಳು 'ಮುದ್ರಾದ್ರಾವಿಣಿಕಾ' ಎಂಬುವಳು. ಎರಡನೆಯ ಆವರಣದಲ್ಲಿರುವ ಇವರು 'ಗುಪ್ತಾ' ಎಂಬ ಹೆಸರುಗಳಿಂದ ನಿರ್ದಿಷ್ಟರಾಗಿರುವರು. 'ಗುಪ್ತಾ' ಎಂಬ ಹೆಸರಿನಿಂದ ಹಿಂದೆ ಹೇಳಿದವರ ಹೆಸರುಗಳನ್ನು ಶ್ರವಣಮಾಡು.

ಕಾಮಾಕರ್ಷಣಿಕಾ, ಬುದ್ಧ್ಯಾಕರ್ಷಣಿಕಾ (ಕಲಾ), ಅಹಂಕಾರಾಕರ್ಷಣಿಕಾ, ಶಬ್ದಾಕರ್ಷಣಿಕಾ (ಕಲಾ), *(ಸ್ಪರ್ಶಾಕರ್ಷಣಿಕಾ, ರೂಪಾಕರ್ಷಿಣಿಕಾ) ರಸಾಕರ್ಷಣಿಕಾ ನಿತ್ಯಾ, ಗಂಧಾಕರ್ಷಣಿಕಾ (ಕಲಾ) - ಚಿತ್ತಾಕರ್ಷಣಿಕಾ(ನಿತ್ಯಾ), ಧೈರ್ಯಾಕರ್ಷಣಿಕಾ(ಕಲಾ), ಸ್ಮೃತ್ಯಾಕರ್ಷಣಿಕಾ(ನಿತ್ಯಾ), ನಾಮಾಕರ್ಷಣಿಕಾ (ಕಲಾ), ಬೀಜಾಕರ್ಷಣಿಕಾ(ನಿತ್ಯಾ),

* ಲಲಿತೋಪಾಖ್ಯಾನದ ಪ್ರಕಾರ ಮುಂದಿನ ಈ ಎರಡು ಹೆಸರುಗಳನ್ನು ಸೇರಿಸಲಾಗಿದೆ.

ಆತ್ಮಾಕರ್ಷಣಿಕಾ(ಕಲಾ), ಅಮೃತಾಕರ್ಷಣಿ(ನಿತ್ಯಾ), ಶರೀರಾಕರ್ಷಣೀ ಹೀಗೆ ಹದಿನಾರು ಚಂದ್ರಕಲಾಸ್ವರೂಪಿಣಿಯರಾದವರು ಶಕ್ತಿಗಳೆಂದು ಹೆಸರಿಸಲಾಗಿದೆ. ಪ್ರವಾಳದ ಬಳ್ಳಿಯಂತೆ (ಕೆಂಬಣ್ಣದ ರತ್ನಲತಾ) ಇರುವ ಇವರು ಮತ್ತಿನಿಂದ ನಗುಮೊಗದವರಾಗಿದ್ದಾರೆ. ಚತುರ್ಭುಜಗಳನ್ನು ಮೂರು ಕಣ್ಣುಗಳನ್ನು ಪಡೆದಿದ್ದು ಕಿರೀಟದ ಮೇಲೆ ಅರ್ಧಚಂದ್ರಾಕೃತಿಯನ್ನು ಧರಿಸಿ ಬೆಳಗುತ್ತಿದ್ದಾರೆ. ದಿವ್ಯವಾದ ಕಾಂತಿಯನ್ನುಳ್ಳ ಈ ಶಕ್ತಿಗಳು ಬಿಲ್ಲು, ಬಾಣ, ಗುರಾಣಿ ಹಾಗೂ ಖಡ್ಗಗಳನ್ನು ಧರಿಸಿರುವರು. 391-398

ಹೀಗೆ ಎರಡನೆ ಆವರಣ.

21 a/1 ಸರ್ವಾಶಾಪರಿಪೂರಕವೆಂಬ ಎರಡನೆ ಆವರಣದ ನಿತ್ಯಕಲಾಂತರದ ಷೋಡಶಾರದಲ್ಲಿ (ಹದಿನಾರು ಪಟ್ಟಿಗಳಿರುವ ಚಕ್ರ) ತ್ರಿಪುರೇಶಿಯೆಂಬ ಚಕ್ರನಾಯಿಕೆಯು 'ದ್ರಾವಿಣಿ' ಎಂಬ ಮುದ್ರೆಯೊಡಗೂಡಿರುವಳು. ಈ ಹದಿನಾರು ಆವರಣ ದೇವತೆಗಳು ಕೂಡಾ ಗುಪ್ತಯೋಗಿನಿಗಳೆಂಬ ಹೆಸರುಗಳನ್ನು ಹೊಂದಿರುವರು. ಎಲ್ಲರೂ ಒಂದೇ ರೂಪವನ್ನು ಪಡೆದವರೆಂದು ಒಂದು ಪ್ರತಿಮೆಯನ್ನು ಮಾತ್ರ ಬರೆಯಲಾಗಿದೆ.

ಮೂರನೆ ಆವರಣದಲ್ಲಿರುವ ದೇವತೆಗಳು, ಲಲಿತೋಪಾಖ್ಯಾನದಲ್ಲಿ

21 b ನಿತ್ಯಾಕಲಾಂತರದ ಮೇಲ್ಭಾಗದಲ್ಲಿ 'ಸರ್ವಸಂಕ್ಷೋಭಣ' ಎಂಬ ಚಕ್ರವಿದೆ. ಆ ಚಕ್ರವನ್ನು ಪಾಲನೆ ಮಾಡುವ ಮುದ್ರಾದೇವಿಯು 'ಆಕರ್ಷಣಿಕಾ' ಎಂಬುವಳು. ಚಕ್ರದ ಅಧಿಷ್ಠಾನ ದೇವತೆಯು ಸುಂದರಿಯೆಂಬುದಾಗಿ ತಿಳಿಯಬೇಕು. ಸಂಧ್ಯಾಕಾಲದಲ್ಲಿ ಉರಿಯುವ ದೀಪದಂತಿರುವ (ಅಂಥ ಪ್ರಕಾಶವುಳ್ಳ) ಚಕ್ರಗೃಹದ ಮೂರನೆ ಹಂತದಲ್ಲಿ ವಾಸಮಾಡುವವಳು 'ಗುಪ್ತತರಾ' ಎಂಬ ಹೆಸರುಳ್ಳವಳು. ಇಲ್ಲಿ ಎಂಟು ಅನಂಗಶಕ್ತಿಗಳಿವೆ. ಅವುಗಳ ಹೆಸರುಗಳನ್ನು ನನ್ನಿಂದ
21 b/1 ಶ್ರವಣಮಾಡು. ಅನಂಗಕುಸುಮಾ, ಅನಂಗಮೇಖಲಾ, ಅನಂಗಮದನಾ, ಮದನಾತುರಾ, ಅನಂಗರೇಖಾ, ಅನಂಗವೇಗಾ, ಅನಂಗಾಂಕುಶಾ, ಅನಂಗಮಾಲಿನೀ ಎಂಬ ಈ ಎಂಟು ದೇವಿಯರು ದಾಸವಾಳದ ವರ್ಣಕಾಂತಿಯನ್ನು ಹೊಂದಿರುವರು. ಇವರು ಕಬ್ಬಿನಬಿಲ್ಲು, ಹೂಬಾಣ, ಹೂವಿನ ಈಟಿ ಹಾಗೂ ಕಮಲವನ್ನು ಧರಿಸಿಕೊಂಡಿದ್ದು ಲಲಿತಾದೇವಿಯ ಆಜ್ಞಾಪ್ರಕಾರವಾಗಿ ಮಹಾಪರಾಕ್ರಮಶಾಲಿನಿಯರಾಗಿದ್ದಾರೆ. 399-404

ಹೀಗೆ ಮೂರನೆ ಆವರಣ.

'ಸರ್ವಸಂಕ್ಷೋಭಿಣಿ' ಎಂಬ ಈ ಮೂರನೆ ಆವರಣಚಕ್ರದ ನಾಗದಳದಲ್ಲಿ ತ್ರಿಪುರಸುಂದರಿಯೆಂಬ ಚಕ್ರನಾಯಿಕೆಯು 'ಸರ್ವಾಕರ್ಷಿಣಿ' ಎಂಬ ಮುದ್ರೆಯೊಡಗೂಡಿ ಇರುವಳು. ಈ ಅನಂಗಾ ಮೊದಲಾದ ದೇವತೆಗಳು 'ಗುಪ್ತತರಾ' ಎಂಬ ಹೆಸರುಗಳನ್ನು ಪಡೆಯುತ್ತಾರೆ. ಎಂಟು ಮೂರ್ತಿಗಳಲ್ಲಿ ಒಂದನ್ನು ಮಾತ್ರ ಲಕ್ಷಣಕ್ಕಾಗಿ ಬರೆಯಲಾಗಿದೆ.

ನಾಲ್ಕನೆ ಆವರಣದಲ್ಲಿರುವ ದೇವತೆಗಳು, ಲಲಿತೋಪಾಖ್ಯಾನದಲ್ಲಿ

ಅನಂಗಶಕ್ತ್ಯಂತರದ ಮೇಲ್ಭಾಗದಲ್ಲಿ 'ಸೌಭಾಗ್ಯದಾಯಕ' ಚಕ್ರವಿದೆ. ಈ ಪುರದಲ್ಲಿ ವಾಸಮಾಡುವ ಚಕ್ರಿಣಿಯು (ಚಕ್ರಪಾಲಿಕೆ) 'ಸರ್ವವಶ್ಯಾ' ಎಂಬ ಮುದ್ರಾದೇವಿ. ಚಿಂತಾಮಣಿ ಮಹಾಗೃಹದ ನಾಲ್ಕನೆಯ ಆವರಣದಲ್ಲಿ ಇರುವ

'ಸರ್ವಸಂಕ್ಷೋಭಿಣಿ' ಮೊದಲಾದ ಹದಿನಾಲ್ಕು ದೇವಿಯರು ಸಂಪ್ರದಾಯ ಎಂಬ ಹೆಸರನ್ನು ಹೊಂದಿದವರಾಗಿ ವಾಸಿಸುತ್ತಾರೆ. ಅವರುಗಳ ಹೆಸರುಗಳನ್ನು ನನ್ನಿಂದ ಶ್ರವಣ ಮಾಡು. ಸರ್ವಸಂಕ್ಷೋಭಿಣೀ, ಸರ್ವವಿದ್ರಾವಿಣೀ, ಸರ್ವಾಕರ್ಷಣಿಕಾ,
22 a ಸರ್ವಾಹ್ಲಾದಿನಿಕಾ, ಸರ್ವಸಂಮೋಹಿನೀ, ಸರ್ವಸ್ತಂಭನೀ, ಸರ್ವಜೃಂಭಿಣೀ, ಸರ್ವವಶಂಕರೀ, ಸರ್ವರಂಜನೀ, ಸರ್ವೋನ್ಮಾದಿನೀ, ಸರ್ವಾರ್ಥಸಾಧಿಕಾ, ಸರ್ವಸಂಪತ್ತ್ರಪೂರಿಣೀ, ಸರ್ವಮಂತ್ರಮಯೀ ಮತ್ತು ಸರ್ವದ್ವಂದ್ವಕ್ಷಯಂಕರೀ.

22 a/1 ಈ ರೀತಿಯಾಗಿ ಸಂಪ್ರದಾಯಗಳ ಹೆಸರುಗಳನ್ನು ಹೇಳಲಾಗಿದೆ. ಕೂದಲ ರಾಶಿಯನ್ನು ಜಡೆಯಂತೆ ಮಾರ್ಪಡಿಸಿ ಕುಂಕುಮದ ತಿಲಕಗಳಿಂದ ಹೊಳೆಯುವ ಇವರು ಅತಿತೀವ್ರವಾದ ಸ್ವಭಾವದವರು. ಕಲ್ಪಾಂತದ ಅಗ್ನಿಯಂತೆ ಪ್ರಕಾಶಿಸುವರು. ಹೊಳೆಯುವ ದೇಹವುಳ್ಳ ಇವರು ಅಗ್ನಿಧನುಸ್ಸನ್ನು, ಅಗ್ನಿಬಾಣವನ್ನು, ಅಗ್ನಿರೂಪವಾದ ಖಡ್ಗವನ್ನು ಮತ್ತು 'ವಹ್ನಿಚಕ್ರ' ಎಂಬ ಹೆಸರುಳ್ಳ ಗುರಾಣಿಯನ್ನು ಧರಿಸುವರು. 405-412

ಹೀಗೆ ನಾಲ್ಕನೆ ಆವರಣ.

ಈ ಸೌಭಾಗ್ಯಚಕ್ರವೆಂಬ ಹದಿನಾಲ್ಕು ಅಡಿಗಳುಳ್ಳ ನಾಲ್ಕನೆಯ ಆವರಣದಲ್ಲಿ ತ್ರಿಪುರವಾಸಿನಿ ಎಂಬ ಚಕ್ರನಾಯಿಕೆಯು ಸರ್ವವಶ್ಯಾ ಎಂಬ ಮುದ್ರೆಯೊಡಗೂಡಿ ಇರುವಳು. ಇಲ್ಲಿರುವ ಹದಿನಾಲ್ಕು ಆವರಣದೇವತೆಗಳು ಕೂಡಾ 'ಸಂಪ್ರದಾಯಯೋಗಿನಿ'ಯರು ಎಂಬ ಹೆಸರುಗಳನ್ನು ಪಡೆದಿದ್ದಾರೆ. ಈ ಹದಿನಾಲ್ಕುದೇವತೆಗಳ ರೂಪವು ಭೇದ ರಹಿತವಾದುದೆಂದು ಒಂದೇ ಲಕ್ಷಣ ಪ್ರತಿಮೆಯನ್ನು ಬರೆಯಲಾಗಿದೆ.

ಐದನೆ ಆವರಣದಲ್ಲಿರುವ ದೇವತೆಗಳು, ಲಲಿತೋಪಾಖ್ಯಾನದಲ್ಲಿ

ಅಗಸ್ತ್ಯನೆ, ಸಂಕ್ಷೋಭಿಣಿಯ ಆದಿಯಲ್ಲಿ ಮಧ್ಯದ ಮೇಲುಭಾಗದಲ್ಲಿ ಚಕ್ರಿಣಿಯು 'ಶ್ರೀ' ಎಂಬುವಳಾಗಿದ್ದಾಳೆ. ಇದು ಸರ್ವಾರ್ಥಸಾಧನಚಕ್ರ. ಈ ಚಕ್ರದ ಪರಿಪಾಲಿಕೆಯಾಗಿ ಸರ್ವೋನ್ಮಾದನಮುದ್ರೆಯಿರುವಳು. ಐದನೆಯ ಆವರಣದಲ್ಲಿರುವವರು ಕುಲೋತ್ತೀರ್ಣೆಯರೆಂದು ಹೇಳಲಾಗಿದೆ. ಸರ್ವಸಿದ್ಧಿಪ್ರದಾ, ಸರ್ವಸಂಪತ್ಪ್ರದಾ, ಸರ್ವಪ್ರಿಯಂಕರೀ, ಸರ್ವ ಮಂಗಲಕಾರಿಣೀ, ಸರ್ವಕಾಮಪ್ರದಾ, ಸರ್ವದುಃಖವಿಮೋಚಿನೀ, ಸರ್ವಮೃತ್ಯುಪ್ರಶಮನೀ, ಸರ್ವವಿಘ್ನನಿವಾರಿಣೀ, ಸರ್ವಾಂಗಸುಂದರೀ, ಸರ್ವಸೌಭಾಗ್ಯದಾಯಿನೀ ಈ ರೀತಿಯಾಗಿ ಹೇಳಲಾಗಿರುವ ಹತ್ತುದೇವಿಯರು ದಯಾಪೂರ್ಣರಾಗಿದ್ದಾರೆ. ಸ್ಫಟಿಕದಂತೆ ಇರುವ ಇವರು ಕೊಡಲಿ, ಪಾಶ, ಗದೆ, ಘಂಟಾಮಣಿ ಇವುಗಳನ್ನು ಹಿಡಿದುಕೊಂಡಿರುವರು. ಇವರ ದೇಹವು ಉಜ್ವಲವಾಗಿದೆ. ದೇವವೈರಿಯನ್ನು ಉದ್ದೇಶಿಸಿ ಹುಬ್ಬು ಗಂಟಿಕ್ಕಿದ ಮೊಗವುಳ್ಳವರಾಗಿದ್ದಾರೆ. ಈ ದೇವಿಯರು ಕುಲೋತ್ತೀರ್ಣಯೋಗಿನಿಯರೆಂಬ ಹೆಸರುಗಳಿಂದ ನಿರೂಪಿತರಾಗಿದ್ದಾರೆ.
413-419

ಹೀಗೆ ಐದನೆಯ ಆವರಣದಲ್ಲಿ, ಬಹಿರ್ದಶಾರ.

22 b 'ಸರ್ವಾರ್ಥಸಾಧಕ' ಎಂಬ ಈ ಪಂಚಮ ಆವರಣದ ಚಕ್ರಕ್ಕೆ ಹೊರಭಾಗದಲ್ಲಿ ಹತ್ತು ಅರಗಳಿವೆ. ಇಲ್ಲಿ 'ತ್ರಿಪುರಶ್ರೀ' ಎಂಬ ಹೆಸರಿನ ಚಕ್ರನಾಯಿಕೆಯು ಸರ್ವೋನ್ಮಾದಿನಿ ಎಂಬ ಮುದ್ರೆಯೊಡಗೂಡಿ ಇರುವಳು. ಈ ಹತ್ತು ಆವರಣ ದೇವತೆಗಳು, "ಕುಲೋತ್ತೀರ್ಣ ಯೋಗಿನಿಯರು" ಎಂಬ ಹೆಸರುಗಳನ್ನು ಪಡೆದಿದ್ದಾರೆ. ಹತ್ತು ಯೋಗಿನಿಯರ ರೂಪದಲ್ಲಿ ಭೇದವಿಲ್ಲವಾದುದರಿಂದ ಒಂದೇ ಲಕ್ಷಣಪ್ರತಿಮೆಯು ಬರೆಯಲಾಗಿದೆ.

ಆರನೆ ಆವರಣದಲ್ಲಿರುವ ದೇವತೆಗಳು, ಲಲಿತೋಪಾಖ್ಯಾನದಲ್ಲಿ

22 b/1 ಸರ್ವಾರ್ಥಚಕ್ರದ ಅನಂತರದಲ್ಲಿ ಸರ್ವರಕ್ಷಾಕರ ಎಂಬ ಹೆಸರಿನ ಇನ್ನೊಂದು ಚಕ್ರವಿದೆ. ಅಲ್ಲಿ ಮಾಲಿನಿ ಎಂಬವಳು ಚಕ್ರದೇವತೆ. ಅವಳು ಸರ್ವಮಹಾಂಕುಶಮುದ್ರೆಯೊಂದಿಗೆ ಇರುವಳು. ಆರನೇ ಆವರಣದಲ್ಲಿವ ಹತ್ತು ದೇವತೆಗಳು ನಿಗರ್ಭಯರೆಂದು ಪ್ರಸಿದ್ಧರಾಗಿದ್ದಾರೆ. ಸರ್ವಜ್ಞಾ, ಸರ್ವಶಕ್ತಿ, ಸರ್ವೈಶ್ವರ್ಯಪ್ರದಾಯಿನಿ, ಸರ್ವಜ್ಞಾನಮಯೀ, ಸರ್ವವ್ಯಾಧಿವಿನಾಶಿನೀ, ಸರ್ವಾಧಾರಸ್ವರೂಪಾ, ಸರ್ವಪಾಪಹರಾ, ಸರ್ವಾನಂದಮಯೀ, ಸರ್ವರಕ್ಷಾಸ್ವರೂಪಿಣೀ ಹಾಗೂ ಹತ್ತನೆಯವಳು ಸರ್ವೇಪ್ಸಿತಫಲಪ್ರದಾ ಎಂಬ ದೇವತೆಯೆಂದು ತಿಳಿಯಬೇಕು. ಇವರು ಚತುರ್ಭುಜ ದೇವತೆಗಳು. ವಜ್ರ, ಶಕ್ತಿ, ತೋಮರ ಹಾಗೂ ಚಕ್ರಗಳನ್ನು ಧರಿಸಿಕೊಂಡಿರುವ ಇವರು ಮುತ್ತುಗಳಂತೆ ಗೌರವರ್ಣಕಾಂತಿಯನ್ನು ಹೊಂದಿರುವರು. ಈ ಎಲ್ಲ ಯೋಗಿನಿಯರೂ ಭಂಡಾಸುರಸಂಹಾರಕ್ಕಾಗಿ ಸಿದ್ಧರಾಗಿದ್ದಾರೆ. 420-424

ಈ ರೀತಿಯಾಗಿ ಆರನೆ ಆವರಣದಲ್ಲಿ ಅಂತರ್ದಶಾರ (ಚಕ್ರ).

ಈ ಹತ್ತುಅರಗಳಿರುವ ಸರ್ವರಕ್ಷಾಕರವೆಂಬ ಆರನೆಯ ಆವರಣದಲ್ಲಿ ತ್ರಿಪುರಮಾಲಿನೀ ಎಂಬ ಹೆಸರಿನ ಚಕ್ರನಾಯಿಕೆಯು ಸರ್ವಮಹಾಂಕುಶವೆಂಬ ಮುದ್ರೆಯೊಂದಿಗೆ ಇರುವಳು. ಈ ಹತ್ತುಆವರಣದೇವತೆಗಳು ಕೂಡಾ 'ನಿಗರ್ಭಯೋಗಿನಿ' ಯರೆಂಬ ಹೆಸರುಗಳನ್ನು ಹೊಂದುವರು. ಹತ್ತು ಯೋಗಿನಿಯರ ರೂಪದಲ್ಲೂ ಭೇದವಿಲ್ಲದ ಕಾರಣ ಒಂದೇ ಲಕ್ಷಣಪ್ರತಿಮೆಯನ್ನು ಬರೆಯಲಾಗಿದೆ.

ಏಳನೆ ಆವರಣದಲ್ಲಿರುವ ದೇವತೆಗಳು, ಲಲಿತೋಪಾಖ್ಯಾನದಲ್ಲಿ

23 a/1 ಕುಂಭಸಂಭವನೆ(ಅಗಸ್ತ್ಯ) ಸರ್ವರಕ್ಷಾಕರದ ಮೇಲ್ಗಡೆಯಲ್ಲಿ 'ಸರ್ವರೋಗಹರ' ಎಂಬ ಹೆಸರುಳ್ಳ ಪ್ರಸಿದ್ಧವಾದ
23 a ಚಕ್ರವಿದೆ. ಆ ಚಕ್ರನಾಯಿಕೆಯು 'ಸಿದ್ಧಾ' ಎಂಬ ಹೆಸರಿನಿಂದ ಪ್ರಸಿದ್ಧಳಾಗಿದ್ದಾಳೆ. 'ಸರ್ವಖೇಚರಿ' ಎಂಬುದು ಈ ಚಕ್ರದ ಮುದ್ರೆ. ಚಿಂತಾಮಣಿಮಹಾಗೃಹದ ಏಳನೆಯ ಆವರಣದಲ್ಲಿರುವ 'ರಹಸ್ಯಯೋಗಿನಿ'ಯರೆಂಬ ಹೆಸರಿನಿಂದ ಪ್ರಖ್ಯಾತ ರಾದ ಇವರು ವಾಗಧೀಶ್ವರೆಯರು. ವಶಿನಿ ಮೊದಲಾದ ದೇವಿಯರು ಅಲ್ಲಿ ಪೂರ್ವ ಮೊದಲಾದ ದಿಕ್ಕುಗಳ ಕ್ರಮದಿಂದ ಇರುವರು. ಸ್ವರಗಳಿಂದ ಕೂಡಿರುವ 'ವಶಿನೀಶ್ವರಿ' ಮೊದಲನೆಯವಳು. 'ಕ'ವರ್ಗದೊಂದಿಗಿರುವ ವಾಙ್ಮಯೀ ದೇವಿಯು ಕಾಮೇಶಿ ಎಂಬವಳು, ಎರಡನೆಯವಳು, ಚವರ್ಗದೊಂದಿಗಿರುವ ವಾಗೀಶೀ ದೇವಿಯು ಮೇದಿನಿ ಎಂಬ ಹೆಸರಿನ ಮೂರನೆಯವಳು. 'ಟ' ವರ್ಗದೊಂದಿಗಿರುವ ಸರಸ್ವತಿದೇವಿಯು 'ವಿಮಲಾ' ಎಂಬುವಳು, ನಾಲ್ಕನೆಯವಳು. 'ತ' ವರ್ಗದೊಂದಿಗಿರುವ ಐದನೆಯ ವಾಗ್ದೇವಿಯು 'ಅರುಣಾ' ಎಂಬವಳು. 'ಪ' ವರ್ಗದೊಂದಿಗೆ ಅತಿಯಾಗಿ ಪುಷ್ಟಿಯನ್ನು ಹೊಂದಿದ ಆರನೆಯವಳು 'ಜಯಿನೀ'. 'ಯ' ಮೊದಲಾದ ನಾಲ್ಕು ವರ್ಣಗಳಿಂದ ಕೂಡಿರುವವಳು 'ಸರ್ವೇಶ್ವರೀ' ಎಂಬ ವಾಗ್ದೇವಿ. 'ಶ'ಮೊದಲಾದ ಆರು ಅಕ್ಷರಗಳಿಂದ ಕೂಡಿರುವ ಎಂಟನೆಯ ವಾಗ್ದೇವಿ ಕೌಲಿನೀ ಎಂಬುವಳು. ಈ ಎಂಟು ರಹಸ್ಯದೇವಿಯರು ಕೆಂಪು ಅಶೋಕ ಪುಷ್ಪಗಳ ಕಾಂತಿಯನ್ನು ಪಡೆದಿರುವರು. ಬಾಣವನ್ನೂ, ಬಿಲ್ಲನ್ನೂ, ಕೈಯಲ್ಲಿ ಧರಿಸಿರುವರು. ಮುತ್ತುಗಳ ಆಭರಣಗಳಿಂದ ಶೋಭಿಸುತ್ತಿರುವರು. ಇವರ ಸರ್ವಾಂಗಗಳೂ ಕವಚಗಳಿಂದ ಮುಚ್ಚಿರುವುದು. ವೀಣೆ ಮತ್ತು ಪುಸ್ತಕಗಳಿಂದ ಶೋಭಿಸುವರು. ಈ ದೇವಿಯರು ಭಂಡಾಸುರ ಮದವನ್ನು ಕಳೆದರೆಂಬುದಾಗಿ ಪ್ರಸಿದ್ಧರಾಗಿದ್ದಾರೆ.
425-433

ಈ ರೀತಿಯಾಗಿ ಏಳನೆ ಆವರಣ.

'ಸರ್ವರೋಗಹರಚಕ್ರ' ಎಂಬ ಹೆಸರಿನ ಎಂಟುಕೋನಗಳಿರುವ ಏಳನೆಯ ಆವರಣದಲ್ಲಿ 'ತ್ರಿಪುರಸಿದ್ಧಾ' ಎಂಬ ಚಕ್ರನಾಯಿಕೆಯು 'ಸರ್ವಖೇಚರೀ' ಎಂಬ ಮುದ್ರೆಯೊಂದಿಗೆ ಇರುವಳು. ಎಂಟನೆಯ ಆವರಣದೇವತೆಯರಾದ ಈ ಎಲ್ಲರೂ 'ರಹಸ್ಯಯೋಗಿನಿಯರು' ಎಂಬ ಹೆಸರುಗಳನ್ನು ಪಡೆಯುತ್ತಾರೆ. ಎಂಟೂ ಯೋಗಿನಿಯರ ರೂಪವು ಅಭಿನ್ನವಾಗಿದೆ. ಅದಕ್ಕಾಗಿ ಒಂದೇ ಲಕ್ಷಣಪ್ರತಿಮೆಯನ್ನು ಬರೆಯಲಾಗಿದೆ.

23 b/1 **ಅಸ್ತ್ರಶಾಲೆಯಲ್ಲಿರುವ ಆಯುಧಗಳನ್ನು ಕುರಿತು ಹೇಳುವೆನು, ಲಲಿತೋಪಾಖ್ಯಾನದಲ್ಲಿ**

ಎಲೈ ವಿಂಧ್ಯಪರ್ವತದ ಗರ್ವನಾಶಕನೆ, ವಶಿನಿ ಮೊದಲಾದವರಿರುವ ಅಂಕಣದ ಮೇಲ್ಭಾಗದಲ್ಲಿ ಅಸ್ತ್ರಾಗಾರವು ಇರುವುದೆಂದು ತಿಳಿಯಬೇಕು. ಅಲ್ಲಿ ಬಾಣ ಮೊದಲಾದ ದೇವತೆಗಳಿರುವರು. ಕಾಮೇಶ್ವರಿಯ ಐದು ಬಾಣಗಳು, ಆದಿಸ್ತ್ರೀಪುರುಷರ ಮಿರುಗುವ ಎರಡು ಅಂಕುಶಗಳು, ಪುಂಡ್ರೇಕ್ಷು (ಕಬ್ಬಿನ ಒಂದು ಪ್ರಭೇದ) ವಿನಿಂದ ನಿರ್ಮಿಸಿದ ಎರಡು ಬಿಲ್ಲುಗಳು, ಹಾಗೂ ಹೊಳೆಯುವ ಎರಡು ಪಾಶಗಳು ಮತ್ತು ನಾಲ್ಕು ಅಸ್ತ್ರಗಳೂ ಇವೆ. ಕಾಮೇಶ್ವರಿಯ ನಾಲ್ಕು ಅಸ್ತ್ರಗಳು ಮತ್ತು ಶ್ರೀಮಹೇಶನ ನಾಲ್ಕು ಅಸ್ತ್ರಗಳು, ಒಟ್ಟಿನಲ್ಲಿ ಉರಿಯುವ ಹೊಳಪನ್ನು ಹೊಂದಿದ ಎಂಟು ಅಸ್ತ್ರಗಳು ಅಲ್ಲಿವೆ. ಭಂಡಾಸುರನೊಂದಿಗೆ ನಡೆದ ಕಾಳಗದಲ್ಲಿ ದುಷ್ಟರಾದ ದಾನವರ ರಕ್ತವನ್ನು ಕುಡಿದು ತುಂಬ ತೃಪ್ತಿಯನ್ನು ಹೊಂದಿದ ದಿವ್ಯಾಸ್ತ್ರಗಳು ಇಲ್ಲಿ ಸಿದ್ಧವಾಗಿವೆ. ಈ ಆಯುಧಗಳ ಪರಿವಾರ ಆಯುಧಗಳು ಸಾಕಷ್ಟು ಇವೆ. ಅಸ್ತ್ರಾಂತರದಲ್ಲಿ (ಅಸ್ತ್ರಾಂತರಚಕ್ರ) ಆ ಆಯುಧಗಳ ಸಂಖ್ಯೆಯು ಕೋಟಿ ಲೆಕ್ಕದಲ್ಲಿದೆ. ವಜ್ರ, ಶಕ್ತಿ, ಶತಘ್ನೀ,ಮು(ಭು)ಸುಂಡಿ, ಮುಸಲ, ಕಣಯ, ಪಟ್ಟಸ, ಮುದ್ಗರ, ಭಿಂಡಿವಾಳ ಇವೇ ಮೊದಲಾದ ಕೋಟಿಗಟ್ಟಳೆ ಶಸ್ತ್ರಗಳು ಅಷ್ಟಾಯುಧಮಹಾಶಕ್ತಿಗಳನ್ನು ಮದಪೂರ್ಣರಾಗಿ ಸೇವೆಗೈಯುವರು. 434-441

ಹೀಗೆ ಅಸ್ತ್ರಾಗಾರದ ವರ್ಣನೆ.

24 a/1 ವಶಿನೀ ಮೊದಲಾದ ದೇವಿಯರ ನಿವಾಸವಾದ ಈ ಸರ್ವರೋಗಹರಚಕ್ರದ ಮುಂಭಾಗದ ಹಾಗೂ ಸರ್ವಸಿದ್ಧಿ ಪ್ರದಾಯಕವೆಂಬ ಚಕ್ರದ ಮಧ್ಯಭಾಗದಲ್ಲಿರುವ ಈ ಅಸ್ತ್ರಶಾಲೆಯಲ್ಲಿ ಆದಿದಂಪತಿಗಳು ಧರಿಸುವಂಥ ಎರಡು ಪುಷ್ಪಬಾಣಗಳು, ಎರಡು ಕಬ್ಬಿನಬಿಲ್ಲುಗಳು, ಎರಡು ಪಾಶಗಳು, ಎರಡು ಅಂಕುಶಗಳು ಹಾಗೂ ಅನೇಕ ವಿಧದ ಆಯುಧಗಳು ಕೂಡಾ ಇವೆ.

ಎಂಟನೆ ಆವರಣದಲ್ಲಿರುವ ದೇವತೆಗಳು, ಲಲಿತೋಪಾಖ್ಯಾನದಲ್ಲಿ

ಅಸ್ತ್ರಸ್ಥಾನದ ಮೇಲ್ಭಾಗದಲ್ಲಿ ಸರ್ವಸಿದ್ಧಿಪ್ರದಾಯಕ ಚಕ್ರವಿದೆ. ಇಲ್ಲಿನ ಚಕ್ರದೇವತೆಯು ತ್ರಿಪುರಾಂಬಾ. ಇಲ್ಲಿಯ ಮುದ್ರಿಕೆಯು(ಮುದ್ರೆ) ಪರ್ವಬೀಜಾ ಎಂಬುದಾಗಿದೆ. ಚಿಂತಾಮಣಿಮಹಾಗೃಹದ ಎಂಟನೆಯ ಆವರಣದಲ್ಲಿರುವ ಮೂವರು ದೇವಿಯರು ಮೂರು ಪೀಠಗಳಲ್ಲಿ ನೆಲೆಸಿರುವರು. ಅವರುಗಳ ಹೆಸರುಗಳು ಅತಿರಹಸ್ಯೆಯರೆಂಬುದಾಗಿದೆ. ಕಾಮೇಶೀ, ವಜ್ರೇಶೀ, ಹಾಗೂ ಭಗಮಾಲಿನೀ ಈ ಮೂರು ದೇವಿಯರು ಎಂಟೆಂಟು ಬಾಹುಗಳನ್ನು ಹೊಂದಿರುವವರೆಂದು ಪ್ರಸಿದ್ಧರಾಗಿದ್ದಾರೆ. ಬಿಲ್ಲು, ಬಾಣ, ಮದಿರಾಪಾತ್ರ, ಮಾದಳ, ಸಣ್ಣ ಬಾಕು, ಗುರಾಣಿ, ನಾಗಪಾಶ ಮತ್ತು ಭಾರೀಸ್ವರದ ಘಂಟೆಯನ್ನು ಧರಿಸಿರುವ ಈ ದೇವಿಯರು ಮದ್ಯಪಾನೋನ್ಮತ್ತರಾಗಿದ್ದಾರೆ. ಭಂಡಾಸುರನೊಂದಿಗೆ ಕಾಳಗವನ್ನು ನಡೆಸುತ್ತಿದ್ದಾರೆ. ಇವರು ಲಲಿತಾದೇವಿಗೆ ಸಮಾನವಾದ ಮಾಹಾತ್ಮ್ಯವನ್ನೂ ತೇಜಸ್ಸನ್ನೂ ಪಡೆದಿರುವರು. ಇವರು ಶ್ರೀದೇವಿಯ ನಿತ್ಯಅಂತರಂಗೆಯರೆಂದು ಪ್ರಸಿದ್ಧರಾಗಿದ್ದಾರೆ. 442-446

ಹೀಗೆ ಎಂಟನೆ ಆವರಣ.

24 a/2 ಸರ್ವಸಿದ್ಧಿಪ್ರದಾಯಕವೆಂಬ ಈ ಎಂಟನೆ ಆವರಣದ ತ್ರಿಕೋಣದಲ್ಲಿ ತ್ರಿಪುರಾಂಬಾ ಎಂಬ ಚಕ್ರನಾಯಿಕೆಯು 'ಸರ್ವಬೀಜಾ' ಎಂಬ ಮುದ್ರೆಯೊಡಗೂಡಿ ಇರುವಳು. ಈ ಮೂರು ಆವರಣದೇವತೆಗಳು ಸಹ 'ಅತಿರಹಸ್ಯಯೋಗಿನಿ'ಯರೆಂಬ ಹೆಸರುಗಳನ್ನು ಹೊಂದಿರುವರು. ಮೂವರ ಆಕೃತಿಯು ಭೇದರಹಿತವಾದುದೆಂಬುದಕ್ಕಾಗಿ ಒಂದೇ ಲಕ್ಷಣಪ್ರತಿಮೆಯನ್ನು ಬರೆಯಲಾಗಿದೆ.

ನಾಥಾಂತರ, ಲಲಿತೋಪಾಖ್ಯಾನದಲ್ಲಿ .

24 b ತ್ರಿಕೋಣದ ಊರ್ಧ್ವಭಾಗದಲ್ಲಿ 'ನಾಥಾಂತರ'ವೆಂಬ ಸ್ಥಾನವಿದೆ. ಯೋಗಶಾಸ್ತ್ರಪ್ರವರ್ತಕರಾದ ಮಹಾದೇವಿಯ ನಾಥರು ಇರುತ್ತಾರೆ. ಅವರು ಎಲ್ಲರಿಗೂ ಮಂತ್ರಗುರುಗಳಾಗಿರುವರು. ಅವರು ಸರ್ವವಿದ್ಯಾಮಹಾಸಾಗರರಾಗಿದ್ದಾರೆ.
24 b/1 ನಾಲ್ವರು ಯುಗನಾಥರು ಇಲ್ಲಿರುವರು. ಅವರ ಹೆಸರುಗಳನ್ನು ನನ್ನಿಂದ ಶ್ರವಣಮಾಡು. ಕುಂಭಸಂಜಾತನೆ, ಮಿತ್ರೇಶ, ಉಡ್ಡೀಶ, ಷಷ್ಠೀಶ, ಚರ್ಯ ಎಂಬುದಾಗಿ ಅವರ ಹೆಸರುಗಳು. ಅವರು ಲೋಕರಕ್ಷಣೆಗಾಗಿ ಪಾದುಕಾಕಾರದಲ್ಲಿ ಅನೇಕರನ್ನು ಸೃಷ್ಟಿಸಿರುವರು. ಸಾಲೋಕ್ಯ, ಸಾರೂಪ್ಯ, ಸಾಯುಜ್ಯ ಮೊದಲಾದ ಸಿದ್ಧಿಗಳನ್ನು ಪಡೆದ ದಿವ್ಯ, ಮಾನವ, ಸಿದ್ಧ, ಸುರ, ತಾಪಸ ಸಮೂಹರಾಗಿರುವ ಇವರು ಮಹಾಗುರುಗಳು. ಈ ಮಹಾಗುರುಗಳು ನಾಲ್ವರುಯುಗನಾಥರಾದ ಗುರುಗಳ ಸೇವೈಗೈಯುವರು. 447-450

ಈ ಪ್ರಕಾರವಾಗಿ ನಾಥಾಂತರ.

ತ್ರಿಕೋಣದ ಮೇಲ್ಭಾಗದಲ್ಲಿರುವ ನಾಥಾಂತರದಲ್ಲಿ ಮಿತ್ರೇಶ ಮೊದಲಾದ ಯೋಗ ಶಾಸ್ತ್ರಪ್ರವರ್ತಕರಾದ ನಾಲ್ವರು ಗುರುಗಳು ಲೋಕರಕ್ಷಣೆಗಾಗಿ ತಾವು ಸೃಷ್ಟಿಮಾಡಿದ ಪಾದುಕಾಸ್ವರೂಪರಾದ ದಿವ್ಯೌಘ, ಮಾನವೌಘ, ಸಿದ್ಧೌಘ, ಸುರ, ತಾಪಸರುಗಳ ಸೇವೆಯನ್ನು, ಹೊಂದಿಕೊಂಡಿರುತ್ತಾರೆ. ಈ ನಾಲ್ವರೂ ಅಭಿನ್ನರೂಪವುಳ್ಳವರಾದುದರಿದ ಒಬ್ಬರ ಲಕ್ಷಣಪ್ರತಿಮೆಯನ್ನು ಮಾತ್ರ ಬರೆಯಲಾಗಿದೆ.

ನಿತ್ಯಾಂತರಸ್ಥದೇವತೆಗಳು, ಲಲಿತೋಪಾಖ್ಯಾನದಲ್ಲಿ

24 b ನಾಥಾಂತರದ ಮೇಲ್ಭಾಗದಲ್ಲಿ ಉತ್ತಮವಾದ ಒಂದು ಗೃಹವಿದೆ. ಅದನ್ನು ನಿತ್ಯಾಂತರವೆಂದು ಹೇಳಲಾಗಿದೆ. ಅದರ ಮುದ್ರೆಯು ಸರ್ವಯೋನಿ. ಈ ಗೃಹದ ಚಕ್ರಿಣೀ ದೇವತೆಯು ಮಹಾತ್ರಿಪುರಸುಂದರಿಯೆಂದು ತಿಳಿಯಬೇಕು. ನಿತ್ಯಾದೇವತೆಗಳು ಹದಿನೈದು. ಅವರುಗಳ ಹೆಸರುಗಳನ್ನು ಶ್ರವಣ ಮಾಡು. ಕಾಮೇಶೀ, ಭಗಮಾಲಾ, ನಿತ್ಯಕ್ಲಿನ್ನಾ, ಭೇರುಂಡಾ, ವಹ್ನಿವಾಸಿನೀ, ಮಹಾವಜ್ರೇಶ್ವರೀ, ದೂತೀ, ತ್ವರಿತಾ, ಕುಲಸುಂದರೀ, ನಿತ್ಯಾ, ನೀಲಪತಾಕಾ, ವಿಜಯಾ, ಸರ್ವಮಂಗಲಾ, ಜ್ವಾಲಾಮಾಲಾ ಮತ್ತು ಚಿತ್ರಾ ಎಂಬವರು ಎಂದು ಹೇಳಲಾಗಿದೆ. ಇವರು ತಿಥಿಗಳಂತೆ ನಿತ್ಯೆಯರಾಗಿ ಕಾಲಸ್ವರೂಪದಿಂದ ವಿಶ್ವವನ್ನು ವ್ಯಾಪಿಸಿ ತಕ್ಕ ಸ್ಥಳಗಳಲ್ಲಿರುತ್ತಾರೆ. ಇವರ ಆಕಾರವು ದೇವಿಯ ಆಕಾರದಂತೆಯೂ ಆಯುಧಗಳು ದೇವಿಯ
25 a ಆಯುಧಗಳಂತೆಯೂ ಇವೆ. ಪ್ರತಿಯೊಂದು ಯುಗದಲ್ಲೂ ಇವರು ಜಗದುಪಕಾರಕ್ಕಾಗಿ ಇರುತ್ತಾರೆ. ಇವರು ತಮ್ಮ ನಿವಾಸಗಳನ್ನು ಆನಂದಮಯ ಪೀಠದ ಸುತ್ತಲೂ ರಚಿಸಿಕೊಂಡಿರುತ್ತಾರೆ. 451-456

ಈ ಪ್ರಕಾರವಾಗಿ ನಿತ್ಯಾಂತರ.

ನಾಥಾಂತರದ ಮೇಲ್ಭಾಗದಲ್ಲಿರುವ ನಿತ್ಯಾಂತರ ಎಂಬ ಹೆಸರಿನ ಈ ಗೃಹಗಳಲ್ಲಿ ಮಹಾತ್ರಿಪುರಸುಂದರಿ ಎಂಬ ಚಕ್ರನಾಯಿಕೆಯು ಸರ್ವಯೋನಿಯೆಂಬ ಮುದ್ರೆಯೊಂದಿಗಿರುವಳು. ಈ ನಾಥಾಂತರದ ಹದಿನೈದು ದೇವತೆಗಳು ಕೂಡ ನಿತ್ಯಕ್ಲಿನ್ನೆಯರೆಂಬ ಹೆಸರುಗಳನ್ನು ಹೊಂದಿರುವರು. ಲಲಿತೋಪಾಖ್ಯಾನದ ಪ್ರಕಾರ ನಿತ್ಯಕ್ಲಿನ್ನಾ ಮೊದಲಾದ ಈ ದೇವತೆಗಳು ದೇವಿಗೆ ಸಮನಾದ ತಮ್ಮ ಆಕೃತಿಗಳನ್ನುಳ್ಳವರು. ಆದ್ದರಿಂದ ಮೇಲೆ ಬರೆದ ಧ್ಯಾನವನ್ನಲ್ಲದೇ ಶರಭತಂತ್ರದ ಪ್ರಕಾರವಾಗಿ ಹದಿನಾಲ್ಕು ದೇವತೆಗಳ ಪ್ರತ್ಯೇಕವಾದ ವಿಭಿನ್ನರೂಪ ಹಾಗೂ ಧ್ಯಾನವನ್ನು ಬರೆದಿದೆ. ಭೇರುಂಡಾದೇವಿಯ
25 a/1 ಧ್ಯಾನರೀತಿಯನ್ನು ಚಂದ್ರಜ್ಞಾನವಿದ್ಯಾ ಎಂಬ ಗ್ರಂಥದಲ್ಲಿ ಹೇಳಿರುವಂತೆ ಬರೆಯಲಾಗಿದೆ. ಲಲಿತೋಪಾಖ್ಯಾನದ ರೀತಿಯಿಂದ ಹದಿನೈದೂ ನಿತ್ಯಕ್ಲಿನ್ನೆಯರ ಒಂದೇ ಪ್ರತಿಮೆಯನ್ನು ಲಕ್ಷಣಕ್ಕಾಗಿ ಬರೆಯಲಾಗಿದೆ.

25 a/2 ಇನ್ನು ಭೇರುಂಡದೇವತೆಯನ್ನು ಬಿಟ್ಟು ಮೊದಲು ಹೇಳಿದ ಕಾಮೇಶಿ ಮೊದಲಾದ ಹದಿನೈದು ನಿತ್ಯಕ್ಲಿನ್ನಾದೇವತೆಗಳ ಇನ್ನೊಂದು ವಿಧದ ಧ್ಯಾನವನ್ನು ಶರಭತಂತ್ರದ ಪ್ರಕಾರದಿಂದ, ಹಾಗೂ ಚಂದ್ರಜ್ಞಾನವಿದ್ಯಾಗ್ರಂಥದ ರೀತಿಯಿಂದ ಭೇರುಂಡಾ ದೇವತೆಯರ ರೂಪಾಂತರ ಧ್ಯಾನಗಳನ್ನು ಬರೆಲಾಗುವುದು.

ಕಾಮೇಶೀ ಧ್ಯಾನ, ಶರಭತಂತ್ರದಲ್ಲಿ

ನಾನು ಅನುದಿನವೂ ಪಾಶ, ಕಬ್ಬಿನ ಬಿಲ್ಲು, ಮದ್ಯಪೂರ್ಣಪಾತ್ರ, ದೊಡ್ಡ ಅಂಕುಶ, ಹೂವಿನಬಾಣ, ವರಮುದ್ರೆ ಇವುಗಳನ್ನು ಕೈಗಳಿಂದ ಧರಿಸಿದ ಮೂರು ನೇತ್ರಗಳನ್ನುಳ್ಳ, ಕೆಂಬಣ್ಣದ, ಕಾಮೇಶ್ವರಿಯ ಸೇವೆಗೈಯುವೆನು (ಅರುಣವರ್ಣ). 457

25 b/1 ಭಗಮಾಲಾಧ್ಯಾನ, ಶರಭತಂತ್ರದಲ್ಲಿ

ಬಿಳಿಯತಾವರೆ (ಸಂಜೆ ಅರಳುವುದು) ತಾವರೆ, ಪಾಶ, ಅಂಕುಶ, ಕಬ್ಬಿನ ಬಿಲ್ಲು, ಹೂಬಾಣ, ಇವುಗಳನ್ನು ತನ್ನ ಆರು ಬಾಹುಗಳಲ್ಲಿ ಧರಿಸಿರುವ, ಬಂಧೂಕ (ಕೆಂಪುದಾಸವಾಳ) ಹೂವಿನ ಕಾಂತಿಯುಳ್ಳ ಅತಿಸುಂದರ ಶರೀರವುಳ್ಳ ಆ ಭಗಮಾಲಿನಿ ಮಾತೆಯನ್ನು ಹೃದಯದಲ್ಲಿ ಸೇವೆಗೈಯುವೆನು (ರಕ್ತವರ್ಣಗಳನ್ನು ಹೊಂದಿರುವವಳು). 458

25 b/2 ನಿತ್ಯಕ್ಲಿನ್ನೆಯರ ಧ್ಯಾನ, ಶರಭತಂತ್ರದಲ್ಲಿ

ನಾನು ಅನುದಿನವೂ ನಿತ್ಯಕ್ಲಿನ್ನಾ ದೇವಿಯನ್ನು ಹೃದಯದಲ್ಲಿ ಧ್ಯಾನಿಸುತ್ತೇನೆ. ಆಕೆಯು ಉದಯಿಸುವ ಸೂರ್ಯನ ಕೆಂಗಿರಣಗಳ ವರ್ಣವನ್ನು ಹೊಂದಿರುವಳು. ಆಕೆಗೆ ಮೂರು ನೇತ್ರಗಳಿವೆ. ಚಂದ್ರಕಲೆಯನ್ನು ಅಲಂಕರಿಸಿಕೊಂಡಿರುವಳು. ಒಡ್ಯಾಣದಲ್ಲಿ ಶ್ರೇಷ್ಠರತ್ನಗಳಿಂದ ನಿರ್ಮಿಸಿದ ಭೂಷಣಗಳಿಂದಲೂ ಆಕೆಯ ಅಂಗಗಳು ಶೋಭಿಸಿದೆ. ಆಕೆಯು ಹಸ್ತಗಳಲ್ಲಿ ಪಾಶ, ಶ್ರೇಷ್ಠವಾದ ಅಂಕುಶ, ಅಭಯಮುದ್ರೆ, ಪಾನಪಾತ್ರಗಳನ್ನು ಧರಿಸಿರುವಳು. (ರಕ್ತವರ್ಣ). 459

25 b/3 ಭೇರುಂಡಾಧ್ಯಾನ, ಚಂದ್ರಜ್ಞಾನವಿದ್ಯೆಯಲ್ಲಿ

ಮುತ್ತುಗಳು ಮತ್ತು ಕುಂದಪುಷ್ಪಗಳಂತೆ ಬೆಳ್ಳಗಿರುವ, ಮಣಿಖಚಿತವಾದ ಕಿರೀಟವುಳ್ಳ, ರತ್ನನಿರ್ಮಿತವಾದ ತಾಟಂಕಾಭರಣದಿಂದ ಕೂಡಿದ, ಅಕ್ಷಮಾಲೆ, ಪುಷ್ಪ, ಅಭಯಮುದ್ರಾ ಮತ್ತು ವರದಮುದ್ರೆಯನ್ನು ಕೈಗಳಲ್ಲಿ ಧರಿಸಿರುವ,

ಚಂದ್ರನನ್ನು ಶಿರಸ್ಸಿನಲ್ಲಿ ಧರಿಸಿದ, ಮೂರು ಕಣ್ಣುಗಳುಳ್ಳ, ಗುಲಗುಂಜಿಯ ಮಾಲೆಯಿಂದ ಶೋಭಿಸುವ ಸ್ತನಭಾರದಿಂದ ಬಗ್ಗಿದ ನಡುವುಳ್ಳ, ತಾವರೆಯ ಮೇಲೆ ಕುಳಿತಿರುವ, ನಾನಾ ಅಲಂಕಾರಗಳಿಂದ ಕೂಡಿದ, ದೇವತೆಗಳ ಕಿರೀಟಗಳ ಮಣಿಗಳಿಂದ ಹೊಳೆಯುತ್ತಿರುವ ಸ್ವರ್ಣಪೀಠವುಳ್ಳ, ಬಿಚ್ಚಿದ ಕೂದಲಿನ, ಮೂಲೋಕಗಳ ಜನನಿಯಾದ ಭೇರುಂಡಾದೇವಿಯನ್ನು ಹೃದಯದಲ್ಲಿ ಧ್ಯಾನಿಸುತ್ತೇನೆ. (ಗುರುಗುಂಜೀ ಮಾಲೆ, ಬಿಳಿಬಣ್ಣ) 460

25 b/4

ವಹ್ನಿವಾಸಿನೀಧ್ಯಾನ, ಶರಭತಂತ್ರದಲ್ಲಿ

ಎಡಗೈಗಳಿಂದ ತಾವರೆ, ಶಂಖ, ಕಬ್ಬಿನಬಿಲ್ಲು ಹಾಗೂ ಚಂದ್ರನನ್ನು, ಬಲಗೈಗಳಿಂದ ಕಲ್ಹಾರ, ಚಿನ್ನದ ಕೊಂಬು, ಹೂಬಾಣ ಹಾಗೂ ಮಾದಳ ಹಣ್ಣನ್ನು ಧರಿಸಿರುವ, ಕಾದಚಿನ್ನದ ಬಣ್ಣವಿರುವ ಮಣಿನಿರ್ಮಿತವಾದ ಕಿರೀಟವಿರುವ, ಎಂಟು ಕೈಗಳೂ, ಮೂರು ಕಣ್ಣುಗಳೂ ಇರುವ 'ವಹ್ನಿವಾಸಿನಿ' ದೇವಿಯನ್ನು ಸತತವಾಗಿ ನಾನು ಹೃದಯಕಮಲದಲ್ಲಿ ನೆನೆಯುತ್ತೇನೆ. (ಚಿನ್ನದ ಬಣ್ಣ). 461

26 a/1

ಮಹಾವಜ್ರೇಶ್ವರೀ ಧ್ಯಾನ, ಶರಭತಂತ್ರದಲ್ಲಿ

ಕೆಂಪುಸಮುದ್ರದಲ್ಲಿರುವ ದೋಣಿಯ ಮೇಲೆ ಒಂಭತ್ತುಮಣಿಗಳಿಂದ ರಾಜಿಸುವ ಪದ್ಮಪೀಠದ ಮೇಲೆ ಕುಳಿತಿರುವ, ಪಾಶ, ಕಬ್ಬಿನ ಕೋದಂಡ (ಶಿರಸ್ಸಿನವರೆಗೂ ಬರುವ ಬಿಲ್ಲು) ಅಂಕುಶ, ದಾಳಿಂಬಹಣ್ಣು ಇವುಗಳನ್ನು ಧರಿಸಿದ ರಕ್ತವರ್ಣದವಳಾದ, ಮೂರು ಕಣ್ಣುಗಳಿಂದಲೂ ಆದರಪೂರ್ವಕವಾಗಿ ನೋಟಬೀರುವ ದೇವತೆಗಳು ಹಾಗೂ ಮುನಿಗಳಿಂದ ಸ್ತೋತ್ರಮಾಡಲ್ಪಡುತ್ತಿರುವ 'ವಜ್ರೇಶಿ' ಎಂಬ ನಾಮಾಂತಕಳಾದ ಭವಾನಿಯನ್ನು ನಾನು ಭಜಿಸುತ್ತೇನೆ. (ರಕ್ತವರ್ಣ) 462

26 a/2

ಶಿವದೂತೀಧ್ಯಾನ, ಶರಭತಂತ್ರದಲ್ಲಿ

ಎಡಭಾಗದಲ್ಲಿ (ಹಸ್ತಗಳಲ್ಲಿ) ಅಧೋಭಾಗದಿಂದಾರಂಭಿಸಿ ರತ್ನಪಾತ್ರ, ಅದರ ಮೇಲ್ಗಡೆಗೆ ಗದೆ, ಗುರಾಣಿ, ಪಾಶ ಗಳನ್ನು, ಬಲಕೈಗಳಲ್ಲಿ ಪದ್ಮ, ಕೊಡಲಿ, ಅದರ ಮೇಲ್ಗಡೆಗೆ ಮಹಾಖಡ್ಗ ಹಾಗೂ ಅಂಕುಶವನ್ನು ಧರಿಸಿರುವ ಮಧ್ಯಾಹ್ನದ ಸೂರ್ಯನ ಪ್ರಭೆಯಂತೆ ಹೊಳೆಯುವ, ನವಮಣಿಗಳಿಂದ ಶೋಭಿಸುವ ಆಭೂಷಣಗಳನ್ನು ಧರಿಸಿದ ಎಂಟು ಬಾಹುಗಳಿರುವ ತ್ರಿನೇತ್ರಗಳುಳ್ಳ, ದೇವಸಮೂಹ ಮತ್ತು ಮುನಿಗಳಿಂದ ಸ್ತೋತ್ರ ಮಾಡಲ್ಪಡುತ್ತಿರುವ 'ನಿತ್ಯಾದೂತಿ'ಯನ್ನು ನಾನು ಭಜಿಸುವೆನು. (ಕೆಂಬಣ್ಣ) 463

26 a/3

ತ್ವರಿತಾಧ್ಯಾನ, ಶರಭತಂತ್ರದಲ್ಲಿ

ಸರ್ಪಗಳು ಭೂಷಣವಾಗಿರುವ, ಮೂರು ಕಣ್ಣುಗಳಿರುವ, ಗುಲಗುಂಜಿಯ ಮಾಲೆಯು ಆಭರಣವಾಗಿರುವ ವಿಶಿಷ್ಟ ಸ್ತ್ರೀಲಕ್ಷಣಗಳನ್ನುಳ್ಳ, ಪಾಶ, ವರದಮುದ್ರೆ, ಅಂಕುಶ, ಅಭಯಮುದ್ರೆಗಳನ್ನು ಹಸ್ತಗಳಲ್ಲಿ ಧರಿಸಿರುವ, ಯುವತಿಯಾದ, ಪೀತವರ್ಣದವಳಾದ ಚಿಗುರೆಲೆಗಳ ಮೇಲೆ ವಾಸವಾಗಿರುವ, ಮಯೂರಪಿಚ್ಛದ ಶಿರೋಲಂಕಾರದಿಂದ ಹೊಳೆಯುತ್ತಿರುವ ಕರಡಿ ಮತ್ತು ಸಿಂಹಗಳೊಂದಿಗೆ ಪೀಠದಲ್ಲಿರುವ ಸುಂದರಿ(ತ್ವರಿತಾ)ಯನ್ನು ನಾನು ಸತತವಾಗಿ ಧ್ಯಾನಿಸುವೆನು. (ಪೀತವರ್ಣ) 464

26 a/4

ಕುಲಸುಂದರೀಧ್ಯಾನ, ಶರಭತಂತ್ರದಲ್ಲಿ

ಉದಯಿಸುವ ಸೂರ್ಯನಂತೆ ಕೆಂಪಾಗಿರುವ, ಮೂರುಕಣ್ಣುಗಳಿರುವ, ಬಾಲಚಂದ್ರನನ್ನು ಶಿರಸ್ಸಿನಲ್ಲಿ ಧರಿಸಿರುವ ಮದ್ಯಗಂಧದಿಂದ ಕೂಡಿದ, ಅತಿಮೃದುವಾದ ತುಟಿಯಿರುವ, ಶೃಂಗಾರಲೀಲೆಗಳಿಂದ ಕೂಡಿರುವ, ಸುಂದರವಾದ ಮುಗಳ್ನಗೆಯುಳ್ಳ, ಬಾಹುಗಳಿಂದ ಅಕ್ಷಮಾಲೆ, ಪುಸ್ತಕ, ವರದಮುದ್ರೆ, ಅಭಯಮುದ್ರೆಗಳನ್ನು ಧರಿಸಿರುವ, ಉತ್ತಮವಾದ ಸಿದ್ಧಿಯನ್ನು ನೀಡುವ, ಸಮಸ್ತ ಅಂಗಗಳಲ್ಲಿ ಭೂಷಣಗಳನ್ನು ಧರಿಸಿರುವ ಆ ಬಾಲೆ(ಸುಂದರಿ)ಯನ್ನು ಧ್ಯಾನಮಾಡುವೆನು. (ಅರುಣವರ್ಣ) 465

26 b/1

ನಿತ್ಯಾಧ್ಯಾನ, ಶರಭತಂತ್ರದಲ್ಲಿ

ಉದಯಸೂರ್ಯನಿಗೆ ಸಮಾನವಾದ ಕಾಂತಿಯುಳ್ಳ ರಸ (ಆರು) ಮುಖಗಳನ್ನುಳ್ಳ, ಎಡಭಾಗದ ಆರು ಹಸ್ತಗಳಿಂದ ಪಾಶ, ಅಕ್ಷಮಾಲೆ, ಬಿಲ್ಲು, ಗುರಾಣಿ, ಶೂಲ, ವರದಮುದ್ರೆಗಳನ್ನು, ಬಲಭಾಗದ ಆರು ಹಸ್ತಗಳಿಂದ ಅಂಕುಶ, ಪುಸ್ತಕ, ಹೂಬಾಣ, ಖಡ್ಗ, ಕಪಾಲ, ಅಭಯಮುದ್ರೆಗಳನ್ನು ಧರಿಸಿರುವ ಮಾಣಿಕ್ಯಗಳ ಆಭರಣಗಳಿಂದ ಪ್ರಕಾಶಿಸುತ್ತಿರುವ, ಮೂರು ಕಣ್ಣುಗಳನ್ನುಳ್ಳ 'ನಿತ್ಯಾ' ಎಂಬ ಭವಾನಿಯನ್ನು ಭಜಿಸುವೆನು. (ಕೆಂಬಣ್ಣ) 466

26 b/2

ನೀಲಪತಾಕಾಧ್ಯಾನ, ಶರಭತಂತ್ರದಲ್ಲಿ

ಶ್ಯಾಮಲಕಾಂತಿಯ ರಕ್ತವಸ್ತ್ರವನ್ನು ಧರಿಸಿದ, ಮೂರು ಕಣ್ಣುಗಳುಳ್ಳ, ಐದು ಮುಖಗಳಿರುವ ಸುಂದರ ಮಂದಹಾಸವನ್ನು ಬೀರುವ, ಎಡಭಾಗದ ಬಾಹುಗಳಲ್ಲಿ ಪಾಶ, ಪತಾಕೆ, ಕಮಲ, ಹೊಳೆಯುವ ಬಿಲ್ಲು ಮತ್ತು ವರದಮುದ್ರೆಯನ್ನು, ಬಲಭಾಗದ ಬಾಹುಗಳಲ್ಲಿ ಅಂಕುಶ, ಖಡ್ಗ, ಶಕ್ತಿ, ಶಕ್ತಿಯುತವಾದ ಮಹಾಬಾಣ ಮತ್ತು ಅಭಯಮುದ್ರೆಯನ್ನು ಧರಿಸಿರುವ, ಪದ್ಮದ ಮೇಲೆ ಕುಳಿತಿರುವ, ಮಣಿ ಮತ್ತು ಮುತ್ತುಗಳ ಹಾರಗಳಿಂದ ಸುತ್ತುವರೆದ ಕುಚಗಳಿರುವ 'ನೀಲಧ್ವಜಾ' ದೇವಿಯನ್ನು ಆಶ್ರಯಿಸುವೆನು. (ನೀಲವರ್ಣ) 467

26 b/3

ವಿಜಯಾಧ್ಯಾನ, ಶರಭತಂತ್ರದಲ್ಲಿ

ಶಂಖ, ಚಕ್ರ, ಪಾಶ, ಅಂಕುಶ, ದೊಡ್ಡದಾದ ಗುರಾಣಿ, ಖಡ್ಗ, ಸುಂದರವಾದ ಬಿಲ್ಲು, ಬಾಣ, ಕಲ್ಹಾರದ ಹೂವು. ಮಾದಳದ ಹಣ್ಣನ್ನು ಕೈಯಲ್ಲಿ ಧರಿಸಿರುವ ಉದಯಸೂರ್ಯನ ವರ್ಣವುಳ್ಳ ಮೂರುಲೋಕಗಳನ್ನು ಜಯಿಸುವವಳಾದ, ಐದು ಮೊಗಗಳೂ ಮೂರು ಕಣ್ಣುಗಳೂ ಇರುವ, ಪೀತಾಂಬರದಿಂದ ಶ್ರೀಮತ್ತ್ವವನ್ನು ಹೊಂದಿದ, ಸ್ತನಭಾರದಿಂದ ನಮ್ರಳಾಗಿರುವ ವಿಜಯಾ ದೇವಿಯನ್ನು ನಿರಂತರವಾಗಿ ಧ್ಯಾನಿಸುತ್ತೇನೆ. (ರಕ್ತವರ್ಣ) 468

26 b/4

ಸರ್ವಮಂಗಲಾಧ್ಯಾನ, ಶರಭತಂತ್ರದಲ್ಲಿ

ಸುವರ್ಣದ ಕಾಂತಿಯುಳ್ಳ, ದಯಾಪೂರ್ಣವಾಗಿರುವ ಕಣ್ಣುಗಳುಳ್ಳ, ಮಾಣಿಕ್ಯದ ಆಭೂಷಣಗಳಿಂದ ಹೊಳೆಯುವ, ಮೂವತ್ತೆರಡುದಳಗಳ ಅಥವಾ ಹದಿನಾರು ದಳಗಳ ಅಥವಾ ಎಂಟು ದಳಗಳ(ಇಪ್ಪತ್ತನಾಲ್ಕು ದಳಗಳ?) ಪದ್ಮದಲ್ಲಿ

ಕುಳಿತಿರುವ, ಮಂದಹಾಸದಿಂದ ಕೂಡಿದ, ಎಡಗೈಗಳಿಂದ ಭಕ್ತರುಗಳಿಗೆ ಧನವನ್ನು ಕೊಡುತ್ತ, ವರದಮುದ್ರೆಯನ್ನು, ಬಲಗೈಗಳಿಂದ ಅಭಯಮುದ್ರೆ ಮತ್ತು ಮಾದಳದ ಸುಂದರವಾದ ಹಣ್ಣನ್ನು ಧರಿಸಿರುವ ಶ್ರೀಮಂಗಲಾದೇವಿಯನ್ನು ಧ್ಯಾನಿಸುವೆನು. (ಕನಕವರ್ಣ) 469

27 a/1

ಜ್ವಾಲಾಮಾಲಿನೀಧ್ಯಾನ, ಶರಭತಂತ್ರದಲ್ಲಿ

ಮಹಾಪ್ರಳಯಕಾಲದ ಅಗ್ನಿಗೆ ಸಮಾನವಾದ ಕಾಂತಿಯುಳ್ಳ, ಮುಗುಳುನಗುವಿನಿಂದ ಕೂಡಿದ ಆರುಮೊಗಗಳನ್ನುಳ್ಳ, ಹನ್ನೆರಡು ಭುಜಗಳಿಂದ ಕೂಡಿದ, ವಾಮಭಾಗದ ಹಸ್ತಗಳಲ್ಲಿ ಪಾಶ, ಅಂದದ ಗುರಾಣಿ, ಕಮಲ, ಸುಖದ, ಶೂಲ, ವರದ ಮುದ್ರೆ ಇವುಗಳನ್ನು ದಕ್ಷಿಣಭಾಗದ ಹಸ್ತಗಳಲ್ಲಿ ಅಂಕುಶ, ಖಡ್ಗ, ಶಕ್ತಿ, ಬಾಣ, ಬಿಲ್ಲು ಮತ್ತು ಅಭಯಮುದ್ರೆ ಇವುಗಳನ್ನು ಧರಿಸಿರುವ ಮಣಿನಿರ್ಮಿತವಾದ ಆಭರಣಗಳಿಂದ ಕೂಡಿರುವ 'ಜ್ವಾಲಾಮಾಲಿನಿ' ಎಂಬ ಹೆಸರುಳ್ಳ ದೇವಿಯನ್ನು ಆಶ್ರಯಿಸುವೆವು. (ರಕ್ತವರ್ಣ) 470

27 a/2

ಚಿತ್ರಾಸ್ವರೂಪ, ಶರಭತಂತ್ರದಲ್ಲಿ

ಉದಯಸೂರ್ಯನ ಕಾಂತಿಯವಳಾಗಿದ್ದು ಚಂದ್ರನಿಗೆ ಕಳಂಕವುಂಟಾಗುವಂಥ ಮುಖಸೌಂದರ್ಯವುಳ್ಳ, ಪಾಶ, ಅಂಕುಶ, ವರ ಮತ್ತು ಅಭಯಮುದ್ರೆಗಳನ್ನು ಧರಿಸಿರುವ ಚಿತ್ರವಿಚಿತ್ರವಾದ ವಸ್ತ್ರಗಳನ್ನು ಉಟ್ಟಿರುವ ನವರತ್ನಗಳಿಂದ ಸಿಂಗರಿಸಲ್ಪಟ್ಟ ಅಂಗಗಳುಳ್ಳ ಮೂರು ಕಣ್ಣುಗಳನ್ನುಳ್ಳ 'ಚಿತ್ರಾಂಬಿಕಾ' ದೇವಿಯನ್ನು ಮನಸ್ಸಿನಲ್ಲಿ ಧ್ಯಾನಿಸುವೆನು. (ರಕ್ತವರ್ಣ) 471

27 a/3

ಒಂಬತ್ತು ಚಕ್ರೇಶ್ವರಿಗಳ ಧ್ಯಾನಗಳು, ಲಲಿತೋಪಾಖ್ಯಾನದಲ್ಲಿ

ಚಕ್ರೇಶ್ವರಿಯನ್ನು ರಾಜರಾಜೇಶ್ವರಿಯ ಮಾದರಿಯಲ್ಲೇ ಪಾಶ, ಅಂಕುಶ, ಕಬ್ಬಿನಬಿಲ್ಲು, ಮತ್ತು ಹೂಬಾಣಗಳನ್ನು ಕೈಯಲ್ಲಿ ಧರಿಸಿಕೊಂಡವಳಾಗಿ ಕೆಂಬಣ್ಣ ಉಳ್ಳವಳಾಗಿರುವಂತೆ ರಚಿಸಬೇಕು. ತ್ರೈಲೋಕ್ಯಮೋಹನಚಕ್ರವನ್ನು ಆರಂಭಿಸಿ ನಿತ್ಯಾಂತರದವರೆಗೆ ಇರುವ ಒಂಬತ್ತು ಚಕ್ರೇಶ್ವರಿಗಳ ಸ್ವರೂಪವು ಅಭಿನ್ನವಾದುದು. ಆದ್ದರಿಂದ ಲಕ್ಷಣಕ್ಕಾಗಿ ಒಂದೇ ಪ್ರತಿಮೆಯನ್ನು ಬರೆಯಲಾಗಿದೆ.

ತ್ರಿಪುರಾ, ತ್ರಿಪುರೇಶೀ, ತ್ರಿಪುರಸುಂದರಿ, ತ್ರಿಪುರವಾಸಿನಿ, ತ್ರಿಪುರಾಶ್ರೀ, ತ್ರಿಪುರಮಾಲಿನಿ, ತ್ರಿಪುರಸಿದ್ಧಾ, ತ್ರಿಪುರಾಂಬಾ, ಮಹಾತ್ರಿಪುರಸುಂದರೀ. (ಒಂಬತ್ತು ಚಕ್ರೇಶ್ವರಿಗಳು)

27 b

ಅಂಗದೇವತಾಧ್ಯಾನ, ಲಲಿತೋಪಾಖ್ಯಾನದಲ್ಲಿ

ಎಲೈ ಕುಂಭಜನ್ಮನಾದ ಅಗಸ್ತ್ಯನೇ, ನಿತ್ಯಾಂತರಾಲದ ಮೇಲ್ಗಡೆಯಲ್ಲಿ 'ಅಂಗದೇವ್ಯಂತರ' ಇದೆ ಎಂದು ಹೇಳಲಾಗಿದೆ. ಆ ಅಂಗದೇವಿಯರ ಹೆಸರುಗಳನ್ನು ಶ್ರವಣ ಮಾಡು.

ಅಲ್ಲಿ ಹೃದ್ದೇವೀ, ಶಿರೋದೇವೀ, ಶಿಖಾದೇವೀ, ವರ್ಮದೇವೀ, ದೃಷ್ಟಿದೇವೀ, ಹಾಗೆಯೇ ಅಸ್ತ್ರದೇವೀ ಎಂಬುದಾಗಿ ಆರುದೇವಿಯರು ಉಕ್ತರಾಗಿದ್ದಾರೆ.

ಶ್ರೀಕಾಮೇಶ್ವರನ ದೇವಿಗೆ ಇವರು ತುಂಬ ಸನ್ನಿಹಿತರು. ನೂತನಲಾವಣ್ಯಪೂರ್ಣವಾದ ಶರೀರವುಳ್ಳ ಇವರು ಆಯುಧಗಳನ್ನು ಧರಿಸಿಕೊಂಡು ಎಚ್ಚರಿಕೆಯಿಂದ ಬಿಂದುಪೀಠದ ಸುತ್ತಲೂ ತಿರುಗುತ್ತಿದ್ದಾರೆ. ಇವರ ಶರೀರವು ಹೊಳೆಯುತ್ತದೆ. ಜಿತೇಂದ್ರಿಯಾಗ್ರಗಣ್ಯನೆ, ಈ ದೇವಿಯರು ಲಲಿತಾಂಬಾ ಅಂಗರಕ್ಷಣೆಯನ್ನು ಮಾಡುವವರಾಗಿದ್ದಾರೆ 472-475

27 b/1

ಅಂಗದೇವ್ಯಂತರ

'ನಿತ್ಯಾಂತರ'ದ ಮುಂಭಾಗದ ಅಂಗದೇವ್ಯಂತರದಲ್ಲಿ ಹೃದ್ದೇವೀ ಮೊದಲಾದ ಆರು ಅಂಗದೇವತೆಗಳು ಶ್ರೀದೇವಿಯ ಪರಮಾಂತರಂಗದೇವಿಯರಾಗಿ ಲಾವಣ್ಯಪೂರ್ಣವಾದ ಶರೀರಗಳನ್ನು ಹೊಂದಿದವರಾಗಿ ಬಿಂದುಪೀಠದ ಸುತ್ತಲೂ ಎಚ್ಚರಿಕೆಯಿಂದ, ಆಯುಧಗಳನ್ನು ಧರಿಸಿಕೊಂಡು ಶ್ರೀದೇವಿಯ ಅಂಗರಕ್ಷಣೆಯಲ್ಲಿ ನಿಷ್ಠರಾಗಿ ಇರುತ್ತಾರೆ. ಆರು ದೇವಿಯರ ರೂಪವು ಅಭಿನ್ನವಾದುದರಿಂದ ಲಕ್ಷಣಕ್ಕಾಗಿ ಒಂದೇ ಪ್ರತಿಮೆಯನ್ನು ಬರೆಯಲಾಗಿದೆ.

ಹೃದಯದೇವೀ, ಶಿರೋದೇವೀ, ಶಿಖಾದೇವೀ, ವರ್ಮದೇವೀ, ನೇತ್ರದೇವೀ, ಅಸ್ತ್ರದೇವೀ(ಅಂಗದೇವತೆಗಳು).

27 b

ಒಂಬತ್ತನೆ ಆವರಣದಲ್ಲಿ ಬಿಂದುಪೀಠದಲ್ಲಿರುವ ಲಲಿತಾಧ್ಯಾನ, ಲಲಿತೋಪಾಖ್ಯಾನದಲ್ಲಿ

'ಅಂಗದೇವ್ಯಂತರಾಲ'ದ ಮೇಲ್ಭಾಗದಲ್ಲಿ ಮಂಡಲಾಕಾರದ ಬಿಂದುಪೀಠವಿದೆಯೆಂದು ತಿಳಿಯಬೇಕು. ಅದನ್ನು 'ಶ್ರೀಪೀಠ' ವೆಂದೂ ಘೋಷಿಸಲಾಗಿದೆ. ಮಹಾಪೀಠವೆಂದು ತಿಳಿಯಲಾದ ಪೀಠವನ್ನು ವಿದ್ಯಾಪೀಠವೆಂದೂ ಕರೆಯಲಾಗಿದೆ. ಐವತ್ತು ಪೀಠರೂಪಗಳನ್ನು ಪಡೆದ ಆನಂದಪೀಠವೂ ಅಲ್ಲಿದೆ. ಇದನ್ನು ಮೊದಲನೇ ಸರ್ವಾನಂದಮಯಚಕ್ರವೆಂದು ಹೇಳಲಾಗಿದೆ. ಈ ಆನಂದಪೀಠದ ಮುದ್ರೆಯು ತ್ರಿಖಂಡಿಕಾ ಸ್ವರೂಪದ್ದಾಗಿದೆ. ಅಲ್ಲಿ ಶ್ರೀಲಲಿತಾದೇವಿಯ ಪಂಚಬ್ರಹ್ಮಮಯವಾದ ಮಹಾಪಂಚರತ್ನವು ಇದೆ. ಅದು ಮೂರು ಲೋಕಗಳ ಮೌಲ್ಯವನ್ನು ಹೊಂದಿದೆ. ಆ ಮಂಚಕ್ಕೆ
28 a ನಾಲ್ಕು ಪಾದಗಳಿವೆ. ಸತತವಾಗಿ ಶ್ರೀಧ್ಯಾನಸಂಬಂಧದಿಂದ ಶ್ರೀಶಕ್ತಿಭಾವವನ್ನು ಹೊಂದಿದ ಬ್ರಹ್ಮ, ವಿಷ್ಣು, ಮಹೇಶಾನ, ಈಶ್ವರ ರೂಪವನ್ನು ಈ ನಾಲ್ಕುಪಾದಗಳು ಹೊಂದಿವೆ. ಮಂಚದ ಒಂದು ಪಾದವು ಜಪಾಕುಸುಮ (ದಾಸವಾಳ) ದ ಬಣ್ಣವನ್ನು ಹೊಂದಿದೆ. ಅದು ಆಗ್ನೇಯದಿಗ್ಭಾಗದಲ್ಲಿದ್ದು ಬ್ರಹ್ಮಸ್ವರೂಪವನ್ನು ಪಡೆದಿದೆಯೆಂದು ತಿಳಿಯಬೇಕು. ಮಂಚದ ಎರಡನೇ ಪಾದವು ಕನ್ನೈದಿಲೆಯ ಬಣ್ಣವನ್ನು ಹೊಂದಿ ನೈಋತ್ಯ ದಿಗ್ಭಾಗದಲ್ಲಿದ್ದು ವಿಷ್ಣುಸ್ವರೂಪವನ್ನು ಪಡೆದಿದೆಯೆಂದು ತಿಳಿಯಬೇಕು. ಮಂಚದ ಮೂರನೆಯ ಪಾದವು ಶುದ್ಧವಾದ ಸ್ಫಟಿಕದಂತೆ ಶುಭ್ರವಾದುದು. ಅದು ರುದ್ರಾತ್ಮಕವಾಗಿದ್ದು ವಾಯವ್ಯದಿಕ್ಕಿನಲ್ಲಿರುವುದು. ಮಂಚದ ನಾಲ್ಕನೆಯ ಪಾದವು ಕರ್ಣಿಕಾರ ಹೂವಿನ ಬಣ್ಣದಂತೆ ಕಪಿಲವರ್ಣವಾದುದು. ಇದು ಈಶ್ವರಾತ್ಮಕವಾಗಿದ್ದು ಈಶಾನ್ಯದಿಕ್ಕಿನಲ್ಲಿರುವುದು.

ಈ ಎಲ್ಲ ಪಾದಗಳು ಆಯುಧಧಾರಿಗಳಾಗಿ, ಸಮಸ್ತ ಅಲಂಕಾರಗಳಿಂದ ಶೋಭಿಸುತ್ತಿವೆ. ಮೇಲೆ ಮತ್ತು ಕೆಳಗೆ ಸ್ತಂಭರೂಪವಾಗಿ ಮಧ್ಯಭಾಗದಲ್ಲಿ ಪುರುಷಾಕೃತಿಯಾಗಿದ್ದು ಶ್ರೀ ಲಲಿತಾಂಬಾಧ್ಯಾನವನ್ನು ಮಾಡುತ್ತ ಕಣ್ಣುಮುಚ್ಚಿ ಕೊಂಡಿರುತ್ತವೆ. ಶ್ರೀಧ್ಯಾನದಲ್ಲಿ ಇವುಗಳ ಅಂಗಗಳು ನಿಶ್ಚಲವಾಗಿವೆ. ಇವುಗಳ ಮೇಲೆ ಮಂಚದ ಫಲಕ (ಹಲಗೆ) ವಾಗಿ ಸದಾಶಿವನಿರುವನು. ಈ ಫಲಕದ ಮೈಕಾಂತಿಯು ಬಿಡಿಸಿದ ದಾಳಿಂಬದಂತೆ ಇದ್ದು ವಿಸ್ತಾರವು ನಾಲ್ಕು ನಲ್ವಗಳಷ್ಟಿವೆ. ಆರು

ನಲ್ವಗಳು ಇದರ ಉದ್ದ. ಈ ಫಲಕಸ್ಥಾನದಲ್ಲಿರುವ ಸದಾಶಿವನು ಹೊಳೆಯುವ ಶರೀರವುಳ್ಳ [illegible] ತಪಸ್ವಿಯೇ, ಅಂಗದೇವ್ಯಂತರವನ್ನು ಮೊದಲ್ಗೊಂಡು ಮಂಚದ ಫಲಕದವರೆಗೆ ಚಿಂತಾಮಣಿಮಯವಾದ ಲಿಂಗಗಳ ಮೆಟ್ಟಿಲುಗಳು, ಶೋಭಿಸುತ್ತಿವೆ. ಈ ಮೆಟ್ಟಿಲುಗಳ ನಿವೇಶನಗಳು ಮೂವತ್ತಾರು. ಈ ಮೆಟ್ಟಿಲುಗಳನ್ನು ಆರೋಹ ಕ್ರಮದಿಂದ ಹೆಸರಿಸುತ್ತೇವೆ. ಭೂಮಿ, ಆಪಸ್ (ನೀರು), ಅನಿಲ (ಅಗ್ನಿ), ವಾಯು (ಅನಲ), ಆಕಾಶ, ಗಂಧ, ರಸ, ರೂಪ, ಸ್ಪರ್ಶ, ಶಬ್ದ, ಉಪಸ್ಥ, ಪಾಯು (ಗುದ), ಪಾದ, ಪಾಣಿ (ಹಸ್ತ), ವಾಕ್ (ಮಾತು), ಘ್ರಾಣ (ಮೂಗು), ಜಿಹ್ವಾ (ನಾಲಗೆ), ಚಕ್ಷುಷ್ (ಕಣ್ಣು), ತ್ವಕ್ (ಚರ್ಮ), ಶ್ರೋತ್ರ (ಕಿವಿ), ಅಹಂಕಾರ, ಬುದ್ಧಿ, ಮನಸ್, ಪ್ರಕೃತಿ, ಪುರುಷ, ನಿಯತಿ, ಕಾಲ, ರಾಗ, ಕಲಾ, ವಿದ್ಯಾ, ಮಾಯಾ, ಶುದ್ಧಶಕ್ತಿ, ವಿದ್ಯಾಶಕ್ತಿ, ಈಶ್ವರಶಕ್ತಿ, ಸದಾಶಿವಶಕ್ತಿ, ಶಿವಶಕ್ತಿ. ಈ ಮೂವತ್ತಆರುತತ್ತ್ವಸೋಪಾನ (ಮೆಟ್ಟಿಲು) ಗಳ ಸಾಲುಗಳು ಎಂದು ಹೇಳಲಾಗಿದೆ. ಇವುಗಳು ಮಂಚದ ಮೆಟ್ಟಿಲುಗಳಾಗಿರುವುವು. ಮಂಚದ ಮೇಲ್ಭಾಗದಲ್ಲಿ ಹಂಸತೂಲಿಕ (ಹಂಸದ ತುಪ್ಪಟ) ದ ತಲ್ಪ (ಹಾಸಿಗೆ) ಯಿದೆ. ಇದು ಒಂದು ಹಸ್ತ (ಒಂದು ಮೊಳ) ಪ್ರಮಾಣದಷ್ಟು ಎತ್ತರವಿದೆ. ನಾಲ್ಕು ನಲ್ವಗಳಷ್ಟು ವಿಸ್ತಾರವಾಗಿದೆ. ಈ ಹಾಸಿಗೆಯು ತಲೆದಿಂಬು ಮತ್ತು ಕಾಲುದಿಂಬಿನಿಂದ ಶೋಭಿಸುತ್ತಿದೆ. ಕೆಂಬಣ್ಣದ ಕಾಂತಿಯುಳ್ಳ ನಾಲ್ಕು ಕುಂಭಗಳು ಅದರಲ್ಲಿ ಶೋಭಿಸುತ್ತಿವೆ. ಅದರ ಮೇಲ್ಭಾಗದಲ್ಲಿ ಶುಚಿಯಾದ, ಮೃದುವಾದ, ಪದ್ಮರಾಗ ಮಣಿಯ ಕಾಂತಿಯಿರುವ ಕೌಸುಂಭ (ಕುಸುಂಭ-ಕುಸುಬೆಹೂ) ವರ್ಣದ ಮೇಲುಹೊದಿಕೆಯಿದೆ. ಅದರ ಮೇಲೆ ಪೂರ್ವದಿಙ್ಮುಖನಾಗಿರುವ, ಶೃಂಗಾರವೇಷದಿಂದ ಕಂಗೊಳಿಸುವ, ಸಾಮಾನ್ಯ ಹದಿನಾರುವರ್ಷದ, ಉದಯಸೂರ್ಯಬಿಂಬದ ಕಾಂತಿಯುಳ್ಳ, ನಾಲ್ಕು ಹಸ್ತಗಳನ್ನೂ, ಮೂರು ಕಣ್ಣುಗಳನ್ನೂ ಪಡೆದಿರುವ, ಹಾರ, ಭುಜಾಭರಣ, ಕಿರೀಟ, ಕಡಗ, ಮೊದಲಾದುವುಗಳಿಂದ ಅಲಂಕಾರಗೊಂಡ ಸುಂದರನಾದ, ಮುಗುಳ್ನಗೆಯೆಂಬ ಬೆಳದಿಂಗಳಿಂದ ತುಂಬಿದ ಕಪೋಲ ಪ್ರದೇಶವುಳ್ಳ, ಭಗವಾನ್ ಆದಿದೇವಕಾಮೇಶ್ವರಶಿವನು ಇರುವನು.

ಅವನ ತೊಡೆಯ ಮೇಲೆ ಬಾಲಸೂರ್ಯನಂತೆ ರಕ್ತವರ್ಣದ, ನಿತ್ಯಷೋಡಶ (ಹದಿನಾರು) ವರ್ಷದ, ಏರು ಯೌವನಮದದಿಂದ ಕೂಡಿದ, ಉಜ್ಜಿದ ಪದ್ಮರಾಗದಂತಿರುವ ಪಾದಕಮಲಗಳ ಕಾಂತಿಯುಳ್ಳ ಉಗುರುಗಳಿರುವ, ಅರ್ಧ ಒಡ್ಡೆಯಾದ ಯವಧಾನ್ಯದ ಕಾಂತಿಯನ್ನು ತಿರಸ್ಕರಿಸುವಂಥ ಕೆಂಪು ಬಣ್ಣವನ್ನು ಪಾದಗಳಿಂದ ಪಸರಿಸುತ್ತಿರುವ, ಮಧುರವಾದ ಧ್ವನಿಯ ಗೆಜ್ಜೆಗಳುಳ್ಳ, ಪಾದಕಮಲಗಳಿಂದ ಚಿತ್ತಾಕರ್ಷಕಳಾದ, ವೀರನಾದ ಕಾಮನ ಬತ್ತಳಿಕೆಯ ಅಹಂಕಾರವನ್ನು ನಿರ್ಮಥನ ಮಾಡುವಂಥ ಕಿರುದೊಡೆಗಳುಳ್ಳ, ಆನೆಯ ಸೊಂಡಿಲು ಮತ್ತು ಬಾಳೆಯ ದಿಂಡುಗಳಿಗೆ ಸಮಾನವಾದ
28 b ತೊಡೆಗಳಿಂದ ಶೋಭಿಸುವ, ಅರುಣವರ್ಣದ, ಮೃದುವಾದ, ತೆಳುವಾದ, ಪಟ್ಟವಸ್ತ್ರದಿಂದ ಅಲಂಕೃತವಾದ ನಿತಂಬ ಭಾರವುಳ್ಳ, ವಿಸ್ತಾರವಾದ ಜಘನದಿಂದ ಶೋಭಿಸುವ ಅರ್ಧೋರು (ಕಟಿಭಾಗದಿಂದ ತೊಡೆಗಳ ಅರ್ಧಭಾಗ ಮುಚ್ಚುವಷ್ಟು ಇರುವ ಉಡಿಗೆ) ವನ್ನು ಕಟ್ಟಿಕೊಂಡ, ರತ್ನನಿರ್ಮಿತವಾದ ಡಾಬಿನಿಂದ ಶೋಭಿಸುವ ಆಳವಾದ ನಾಭಿಯ ಸುಳಿಯುಳ್ಳ, ತ್ರಿವಳಿ (ಹೊಟ್ಟೆಯ ಮೇಲೆ ಕಾಣಿಸುವ ಮೂರುಗೆರೆಗಳು) ಗಳೆಂಬ ಅಲೆಗಳ ಪ್ರಭಾಪ್ರವಾಹವುಳ್ಳ, ಸ್ತನಗಳೆಂಬ ಮೊಗ್ಗುಗಳ ಮೇಲೆ ಉಯ್ಯಾಲೆಯಾಡುವ ಮುತ್ತುಗಳ ನೂರಾರು ಹಾರಗಳಿರುವ, ಅತಿ ಗಾತ್ರವುಳ್ಳ ಸ್ತನಗಳ ಭಾರದಿಂದ ಬಗ್ಗಿದಂಥ ನಡುಪ್ರದೇಶವುಳ್ಳ, ಶಿರೀಷ ಪುಷ್ಪಹಾರದಷ್ಟು ಕೋಮಲವಾಗಿ ಶೋಭಿಸುವ ಕೇಯೂರ, (ಭುಜಾಭರಣ) ಕಂಕಣ (ವಲಯ/ಬಳೆ) ಸಮೂಹಗಳಿಂದ ಅಲಂಕೃತವಾದ ಉಂಗುರಗಳಿಂದ ಕೂಡಿದ ನಾಲ್ಕು ಭುಜಗಳುಳ್ಳ, ಹೊಳಪುಳ್ಳ ಶಂಖದಷ್ಟು ಸುಂದರವಾದ ಕಂಠವುಳ್ಳ, ಮುಖವೆಂಬ ಕನ್ನಡಿಗೆ ತೊಟ್ಟಿನಂತಿರುವ ಚಿಬುಕ (ಅಧರೋಷ್ಠದ ಕೆಳಭಾಗ) ವುಳ್ಳ ಕೆಂಬಣ್ಣದ ತುಟಿಯುಳ್ಳ, ಬೆಳ್ಳಗಿರುವ, ಸಮಾನವಾದ ಪಂಜ್ತಿಯುಳ್ಳ, ವಿದ್ಯೆಗಳ ಸ್ವರೂಪ ಹೊಂದಿದ, ಹೊಳಪುಳ್ಳ, ಕುಂದ ಪುಷ್ಪದ ಮೊಗ್ಗುಗಳಂತಿರುವ, ಹಲ್ಲುಗಳಿಂದ ಬೆಳದಿಂಗಳನ್ನು ತೋರುವ, ದೊಡ್ಡದಾದ ಮುತ್ತುಗಳಿಂದ

ಜೋಡಿಸಲ್ಪಟ್ಟ ಮೂಗುತಿಯಿಂದ ಶೋಭಿಸುವ, ಕೇದಗೆಯ ಒಳಭಾಗದ ದೋಣಿಯಾಕಾರದಂತೆ ಉದ್ದುದ್ದವಾದ ಚೆಲುಗಣ್ಣುಗಳುಳ್ಳ, ಅರ್ಧಚಂದ್ರನಂತೆ ಇರುವ ಹಣೆಯ ಪ್ರದೇಶದಲ್ಲಿ ಓರಣವಾಗಿ ಸ್ಥಾಪಿತವಾದ ಮುಂಗುರುಳುಗಳ ಕಾಂತಿಯುಳ್ಳ, ಕರ್ಣಪಾಲಿಯಲ್ಲಿ ಮಾಣಿಕ್ಯದ ಅಭರಣವುಳ್ಳ, ಕಿವಿಗಳಲ್ಲಿ ಕುಂಡಲಗಳನ್ನು ಧರಿಸಿರುವ, ಕರ್ಪೂರ, ಕಸ್ತೂರಿಗಳಿಂದ ಕೂಡಿದ ಸುಂಗಧಿತವಾದ ಹಚ್ಚಹೊಸತಾದ ತಾಂಬೂಲವನ್ನು ಮೆಲ್ಲುವ, ಶರದೃತುವಿನ ಚಂದಿರನ ಪೂರ್ಣಮಂಡಲದಂತೆ ಸೊಬಗಿನ ಮುಖವುಳ್ಳ, ಶ್ರೇಷ್ಠವಾದ ಚಿಂತಾಮಣಿಗಳಿಂದ ಜೋಡಿಸಲ್ಪಟ್ಟ ಅಂದದ ಕಿರೀಟವುಳ್ಳ, ಹೊಳೆಯುವ ತಿಲಕರತ್ನದಂತಿರುವ ಹಣೆಗಣ್ಣಿನಿಂದ ಶೋಭಿತಳಾದ, ಕಾರ್ಗತ್ತಲೆಯ ನಿಬಿಡವಾದ ಕಪ್ಪಿನಂತಿರುವ ಕೂದಲರಾಶಿಯುಳ್ಳ, ಬೈತಲೆಯ ರೇಖೆಯಲ್ಲಿ ಇಟ್ಟ ಸಿಂದೂರದ ಸಾಲಿನಿಂದ ಕಂಗೊಳಿಸುವ, ದೇದೀಪ್ಯಮಾನವಾದ ಚಂದಿರನ ಕಲೆಯನ್ನೇ ಶಿರಸ್ಸಿನಲ್ಲಿ ಧರಿಸಿದ, ಮದದಿಂದ ಚಂಚಲತೆಯನ್ನು ಪಡೆದ ಅಂದವಾದ ಕಣ್ಣುಗಳುಳ್ಳ, ಸಮಸ್ತ ಶೃಂಗಾರವೇಷದಿಂದ ಪೂರ್ಣಳಾದ, ಸಮಸ್ತಆಭರಣಗಳಿಂದ ಅಲಂಕೃತಳಾದ, ಸರ್ವಲೋಕಗಳಿಗೂ ತಾಯಿಯಾದ, ಸತತವಾಗಿ ಆನಂದವನ್ನು ಹೆಚ್ಚಿಸುತ್ತಿರುವ, ಕುಡಿನೋಟದಲ್ಲಿ ಕುಣಿಯುವ ಕರುಣಾಪ್ರವಾಹದಿಂದ ಸಮಸ್ತರನ್ನೂ ತೃಪ್ತಿಪಡಿಸುತ್ತ ಪಾಪಗಳನ್ನು ನಾಶಮಾಡುವ ಭಗವತೀ ಲಲಿತಾಂಬಿಕೆಯು ಶೋಭಿಸುವಳು. ಆಕೆಯನ್ನು ಪೂಜಿಸಿದರೆ ಇತರ ದೇವತೆಗಳನ್ನು ಪೂಜಿಸುದುದರ ಫಲವು ಲಭಿಸುವುದೆಂದು ತಿಳಿದಿರುವರು. ಲಲಿತಾಂಬಿಕೆಯನ್ನು ಪೂಜಿಸುವುದೇ ಈಕೆಯ ಪೂಜಾಫಲ. ಲಲಿತಾದೇವಿಯ ಶರೀರಸೌಂದರ್ಯವನ್ನು ನಾನೆಂತು ಬಣ್ಣಿಸಲಿ. ಸಾವಿರ ಕೋಟಿ ವರ್ಷಗಳಲ್ಲಿ ಆ ಸೌಂದರ್ಯದ ಒಂದಂಶವನ್ನು ಬಣ್ಣಿಸಲು ಸಾಧ್ಯವಾಗದು. ವರ್ಣನೆಯೆಂದರೆ ಅದು ಮಾತುಗಳ ರೂಪದಲ್ಲಿರುತ್ತದೆ. ಆದರೆ ಆಕೆಯಲ್ಲಿ ಮಾತುಗಳಿಗೆ ದಾರಿಯಿಲ್ಲ (ವಾಚಾಮಗೋಚರಗಳು). ನಮ್ಮ ಮಾತುಗಳು ಅವಳನ್ನು ಮುಟ್ಟದೆಯೇ ಮನಸ್ಸಿನೊಂದಿಗೆ ಹಿಂದಿರುಗುವುವು (ಮನಸ್ಸೂ, ಮಾತೂ ಒಂದೂ ಅವಳನ್ನು ತಲುಪದು).

ಈ ವಿಚಾರದಲ್ಲಿ ಹೆಚ್ಚಿಗೆ ಹೇಳಿ ಏನು ಪ್ರಯೋಜನ. ತಾತ್ತ್ವಿಕವಾಗಿರುವುದನ್ನು ಶ್ರವಣ ಮಾಡು. ನಾನು ಪಕ್ಷಪಾತದಿಂದಾಗಲಿ, ಸ್ನೇಹದಿಂದಾಗಲಿ, ಅಜ್ಞಾನದಿಂದಾಗಲಿ ಹೇಳುತ್ತಿಲ್ಲ. ಎಲೈ ತಪೋನಿಧಿಯೆ, ಕಲ್ಪವೃಕ್ಷದ ಕೊಂಬೆಗಳೆಲ್ಲ ಲೇಖನಿಗಳಾಗಲಿ, ಸಮಸ್ತಸಪ್ತಮಹಾಸಮುದ್ರಗಳು ಶಾಯಿಯ ಪಾತ್ರೆಗಳಾಗಲಿ. ಐವತ್ತು ಕೋಟಿ ವಿಸ್ತೀರ್ಣವಾದ ಭೂಮಿಯು ಬರೆಯುವ ಆಧಾರದ ಪತ್ರವಾಗಲಿ, ಗುಣಗಳನ್ನು ಬರೆಯಬೇಕಾದ ಅವಧಿಯು ಪರಾರ್ಧಕ್ಕಿಂತಲು ಹೆಚ್ಚು ಕಾಲವಿರಲಿ (100000000000000000 ವರ್ಷ), ಎಲ್ಲ ಲೋಕಗಳು ಪ್ರತ್ಯೇಕವಾಗಿ ಕೋಟಿ ಬಾಹುಗಳಿಂದ ಬರೆಯಲಿ, ಬರವಣಿಗೆಯನ್ನು ಹೇಳುವವರು ಬೃಹಸ್ಪತಿಗೆ ಸಮಾನರಾಗಿರಲಿ, ಎಲೈ ಕುಂಭಸಂಭವ ಅಗಸ್ತ್ಯನೆ, ಇಂತಿದ್ದರೂ ಆ ದೇವಿಯ ಚರಣಕಮಲದ ಒಂದುಬೆರಳಿನ ಕಾಂತಿಯ ಸಾವಿರಪಾಲಿನಲ್ಲಿ ಒಂದಂಶದ ವರ್ಣನೆಯು ಕೂಡಾ ಅಸಾಧ್ಯವಾದುದು.

ಆದ್ದರಿಂದ ಅವಳ ಗುಣಸ್ತುತಿಯನ್ನು ಮಾಡಲು ಎಲ್ಲರೀತಿಯ ಮಾತುಗಾರಿಕೆಯ ಪ್ರಭೇದಗಳು ನಿಷ್ಫಲವಾಗುವುವು. ಮಾನಸಿಕದೂರವನ್ನು ಹೊಂದಿದ ಅವಳ ಸೌಭಾಗ್ಯವನ್ನು ವರ್ಣಿಸಲು ಯಾರು ಶಕ್ತರು? ಬಿಂದುಪೀಠದ ಸುತ್ತ ಚೌಕಾಕಾರವಾಗಿ ಶ್ಯಾಮಲಪ್ರಭೆಯನ್ನುಳ್ಳ ಮಹಾಮಾಯಾಸ್ವರೂಪವಾದ ಪರದೆಯು ಜೋತಾಡುವುದು. ದೇವಿಯ ಮೇಲ್ಭಾಗದಲ್ಲಿ ನಲ್ವತ್ತುಹಸ್ತಗಳ ಪ್ರಮಾಣದಲ್ಲಿ ಮೂರುಲೋಕಗಳಲ್ಲೂ ದುರ್ಲಭವಾದ 'ಇಂದ್ರಗೋಪ'ವೆಂಬ ವಿಮಾನವು ಸುಬದ್ಧವಾಗಿದೆ. ಅಲ್ಲಿರುವ ಅಲಂಕಾರವಸ್ತುಸಮೂಹವು ಇನ್ನೆಲ್ಲೂ ದೊರಕದು. ನಾನಾ ವೃಕ್ಷಗಳಿಂದ ಕೂಡಿದ ಮಹೋದ್ಯಾನವನ್ನು ಮೊದಲ್ಗೊಂಡು ಕ್ರಮವಾಗಿ ಶ್ರೀಪುರದ ಕಥೆಯನ್ನು ಹೇಳುವವರು ಮೋಕ್ಷವನ್ನು ಪಡೆಯುವರು. ಶ್ರೀಪುರದ ಪ್ರಕಾರದಂತೆ ವಿಭಿನ್ನವಾದ ಆಯಾ ಕೋಟೆಗಳನ್ನು ಶಿಲ್ಪಿಗಳಿಂದ ಮಾಡಿಸಿ ದೇವಿಯ ವಿಶಾಲವಾದ ಆಯತನ (ಗೃಹ)

ರಚಿಸುವ ಭಕ್ತರು ಪರಮಗತಿಯನ್ನು (ಮುಕ್ತಿಯನ್ನು) ಪಡೆಯುವರು. ದೇವಿಯ ಕಥೆಯನ್ನು ಕೇಳುವವರು, ದೇವಿಯನ್ನು ಕುರಿತಾಗಿ ಪ್ರಶ್ನಿಸುವವರು, ದೇವಿಯನ್ನು ವಿವೇಚಿಸುವವರು ಅಥವಾ ದೇವಿಯ ಮಹಿಮೆಯನ್ನು ಪುಸ್ತಕ ರೂಪವಾಗಿ ರಚಿಸಿದವರೆಲ್ಲರೂ ಮೋಕ್ಷಪದವಿಯನ್ನು ಹೊಂದುವರು. 476-531

ಹೀಗೆ ಒಂಬತ್ತನೆ ಆವರಣ.

ಅಂಗದೇವ್ಯಂತರದ ಮೇಲ್ಭಾಗದಲ್ಲಿ, ಸರ್ವಾನಂದಮಯವೆಂಬ ಹೆಸರಿನ ಒಂಬತ್ತನೆ ಆವರಣವಾದ ಬಿಂದುಪೀಠದಲ್ಲಿ ಶೋಭಿಸುತ್ತಿರುವ ಕಾಮೇಶ್ವರಿಯ ಸ್ತುತಿ. ಮಂಗಳಮಯವಾದ ಪ್ರಾದುರ್ಭಾವದ ವರ್ಣನೆ.

29 a ಶ್ರೀ ಚಾಮುಂಡಿಕಾ ತಾಯಿಗೆ ನಮಸ್ಕಾರ. ಜಗನ್ಮಾತೆ ನೀನು ಜಯಶೀಲಳಾಗು. ಅತ್ಯಂತ ಉತ್ಕೃಷ್ಟಳಾದವಳೆ ಜಯಶೀಲಳಾಗು. ಮಂಗಳಗಳಿಗೆ ವಾಸಸ್ಥಾನವಾಗಿರುವವಳೆ, ನೀನು ಜಯ ಹೊಂದು. ಕಾಮಕಲಾಸ್ವರೂಪಳೆ ಜಯವನ್ನು ಹೊಂದು. ಶಂಕರನ ಕಾಮಾಕ್ಷಿಯೆ/ವಾಮಾಕ್ಷಿಯೆ (ಸುಂದರವಾದ ಕಣ್ಣುಳ್ಳವಳು), ನಂದಿನಿಯೆ, ಸಮಸ್ತ ದೇವತೆಗಳಿಂದ ಪೂಜಿತಳೆ, ಕಾಮೇಶನ ಇಷ್ಟಾರ್ಥವನ್ನು ಪೂರೈಸುವವಳೆ, ಬ್ರಹ್ಮಮಯಳಾದ ದೇವಿಯೆ, ಬ್ರಹ್ಮಾನಂದರಸಸ್ವರೂಪಳೆ, ನಾರಾಯಣಿಯ ಪರವಾಗಿರುವವಳೆ, ಸಮಸ್ತ ಜಗತ್ತಿಗೆ ಆನಂದವನ್ನೀಯುವವಳೆ, ಶ್ರೀಕಂಠನ ಪ್ರಿಯಳೆ, ಶ್ರೀ ಲಲಿತಾಂಬಿಕೆಯೆ, ಶ್ರೀ ವಿಜಯಾದೇವಿಯೆ, ವಿಜಯೈಶ್ವರ್ಯಸಮೃದ್ಧಿಯನ್ನು ನೀಡುವವಳೆ, ನೀನು ಜಯಶೀಲಳಾಗು. ಜನ್ಮಪಡೆದವನ, ಜನ್ಮಪಡೆಯಲಿರುವವನ, ಮತ್ತು ಇಷ್ಟಾಪೂರ್ತವನ್ನು (ಯಜ್ಞ ಹಾಗೂ ಧರ್ಮಕಾರ್ಯ) ನಡೆಸಲು ಲಲಿತಾದೇವಿಗೆ ನಮಸ್ಕಾರವನ್ನು ಸಲ್ಲಿಸುವೆನು. ಮೂಲೋಕಗಳನ್ನು ಕಾಪಾಡುವವಳೆ, ಅತ್ಯಂತ ಶ್ರೇಷ್ಠಳಾದವಳೆ, ಕಲಾ, ಮುಹೂರ್ತ, ಕಾಷ್ಠಾ, ಅಹಸ್ಸು, ಮಾಸ ಮತ್ತು ಸಂವತ್ಸರಗಳನ್ನೊಳಗೊಂಡವಳೆ, ಸಹಸ್ರಶಿರಸ್ಸುಗಳುಳ್ಳ ಸಹಸ್ರಮುಖಗಳು ಮತ್ತು ಸಹಸ್ರನಯನಗಳುಳ್ಳ ನಿನಗೆ ನಮಸ್ಕಾರವನ್ನು ಸಲ್ಲಿಸುವೆನು. ಸಹಸ್ರಕರಕಮಲಗಳಿಂದ ಸಹಸ್ರಚರಣಕಮಲಗಳಿಂದ ಶೋಭಿತಳೆ, ಅಣುವಿಗಿಂತಲೂ ಅಣುವಾಗಿರುವ, ಮಹತ್ತಿಗಿಂತಲೂ ಮಹತ್ತನ್ನು ಹೊಂದಿರುವ ದೇವಿಯೆ, ಶ್ರೇಷ್ಠವಾದುದಕ್ಕಿಂತಲೂ ಅತಿ ಶ್ರೇಷ್ಠಳಾದವಳೆ, ತಾಯಿ, ನೀನು ತೇಜಸ್ಸುಗಳಿಗೂ ತೇಜೋರೂಪಿಣಿ. ನಿನ್ನ ಪಾದಗಳು ಅತಲ, ನಿನ್ನ ಮೊಣಕಾಲುಗಳು ವಿತಲ, ಕಟಿಪ್ರದೇಶವು ರಸಾತಲ. ನಿನ್ನ ಉದರವು ಭೂಮಿಯಾಗಿದೆ. ನಿನ್ನ ಹೃದಯವು ಭುವರ್ಲೋಕ. ನಿನ್ನ ಮುಖವು ಸ್ವರ್ಲೋಕವೆಂದು ಹೇಳಲಾಗಿದೆ. ನಿನ್ನ ಕಣ್ಣುಗಳು ಚಂದ್ರ, ಸೂರ್ಯ, ಅಗ್ನಿಗಳು. ಜನನಿ, ನಿನ್ನ ಬಾಹುಗಳು ದಿಕ್ಕುಗಳು, ನಿನ್ನ ಉಸಿರು ವಾಯು, ಎಲ್ಲ ವೇದಗಳು ನಿನ್ನ ಮಾತುಗಳು. ಲೋಕರಚನೆಯು ನಿನ್ನ ಆಟ. ಚಿನ್ಮಯ (ಜ್ಞಾನರೂಪ) ಶಿವನು ನಿನ್ನ ಗೆಳೆಯ. ಸತತಾನಂದ ನಿನ್ನ ಆಹಾರ. ಸಜ್ಜನರ ಹೃದಯವು ನಿನ್ನ ವಾಸಸ್ಥಳ. ಕಾಣುವ ಮತ್ತು ಕಾಣದಿರುವ ರೂಪಗಳನ್ನುಳ್ಳ ಭುವನಗಳು ನಿನ್ನ ರೂಪಗಳು. ಆಕಾಶವು ನಿನ್ನ ಕೇಶಗಳು. ನಕ್ಷತ್ರಗಳು ನಿನ್ನ ಹೂಗಳು. ಧರ್ಮಾದಿಗಳು ನಿನ್ನ ಬಾಹುಗಳು. ಅಧರ್ಮಾದಿಗಳು ನಿನ್ನ ಆಯುಧಗಳಾಗಿವೆ. ಯಮಗಳು ಹಾಗೂ ನಿಯಮಗಳು ನಿನ್ನ ಕೈಗಳು ಮತ್ತು ಕಾಲುಗಳ ಉಗುರುಗಳು. ಸ್ವಾಹಾ ಮತ್ತು ಸ್ವಧಾ ನಿನ್ನ ಸ್ತನಗಳಾಗಿದ್ದು ಜನರ ಜೀವನಕ್ಕೆ ಕಾರಣವಾಗಿವೆ. ಪ್ರಾಣಾಯಾಮವು ನಿನ್ನ ಮೂಗು. ಸರಸ್ವತಿಯು ನಿನ್ನ ನಾಲಗೆ. ಪ್ರತ್ಯಾಹಾರವು ನಿನ್ನ ಇಂದ್ರಿಯಗಳು. ಎಲೈ ಸಜ್ಜನನೇ (ಅಗಸ್ತ್ಯನೇ) ಧ್ಯಾನವೇ ನಿನ್ನ ಬುದ್ಧಿ. ಧಾರಣಾಶಕ್ತಿಯು ನಿನ್ನ ಮನಸ್ಸು. ಸಮಾಧಿಯು ನಿನ್ನ ಹೃದಯ. ವೃಕ್ಷಗಳು ನಿನ್ನ ರೋಮಗಳಾಗಿವೆ. ನಿನ್ನ ಆಕಾರವು ಭೂತ, ಭವ್ಯ (ವರ್ತಮಾನ) ಮತ್ತು ಭವಿಷ್ಯ ಹಾಗೂ ನಿತ್ಯವಾಗಿದೆ.

ಯಜ್ಞಸ್ವರೂಪಳಾದ, ಜಗನ್ಮಾತೆಯಾದ, ವಿಶ್ವರೂಪವನ್ನು ಹೊಂದಿದ, ಪವಿತ್ರಳಾದ ನೀನು ದಯಾಮಯಳಾಗಿ ಆದಿಕಾಲದಲ್ಲಿ ಸಮಸ್ತ ಪ್ರಜೆಗಳನ್ನು ಸೃಷ್ಟಿಮಾಡಿದೆ. ಲಲಿತಾದೇವಿಯು ಜನರ ಹೃದಯದಲ್ಲಿದ್ದರೂ ಮೋಹಕಳಾಗಿ ಹಾಗೂ ಅದೃಶ್ಯಳಾಗಿ ತನ್ನ ಲೀಲೆಯಿಂದ ನಾಮ, ರೂಪಗಳ ವಿಭಾಗವನ್ನು ಮಾಡುವಳು. ಲೋಕಗಳಲ್ಲಿದ್ದುಕೊಂಡು ಅವುಗಳಿಗೆ ಅಂಟಿಕೊಳ್ಳದ ಆಕೆಯು ಅರ್ಥಕಾಮಗಳನ್ನು ನೀಡುವಳು. ಮಹಾದೇವಿ, ಸರ್ವಶಕ್ತಿ ಸ್ವರೂಪಳಿಗೆ ನಮಸ್ಕಾರವನ್ನು ಸಲ್ಲಿಸುವೆನು. ದೇವಿಯು ಪರಮಶಕ್ತಿ ಸ್ವರೂಪಳು ಪರಬ್ರಹ್ಮ ನಾಮಾಂಕಿತಳೂ ಆಗಿದ್ದಾಳೆ. ಬ್ರಹ್ಮಾನಂದ ನಾಮಾಂಕಿತಳೂ ಆದ ಅವಳಿಗೆ ನಮಸ್ಕಾರಗಳನ್ನು ಸಲ್ಲಿಸುವೆನು. ಅಗ್ನಿ, ಸೂರ್ಯ, ಮರುತ್ತುಗಳು ಮತ್ತು ಪೃಥಿವಿ ಮೊದಲಾದ ಪಂಚ ಭೂತಗಳು ಈಕೆಯ ಆಜ್ಞೆಯಿಂದ ಕಾರ್ಯಪ್ರವೃತ್ತರಾಗುವುವು. ಆ ದೇವಿಗೆ ನನ್ನ ನಮಸ್ಕಾರಗಳು. ಸೃಷ್ಟಿಯ ಆದಿಯಲ್ಲಿ ದೇವಿಯು ಆದಿಬ್ರಹ್ಮನನ್ನು ಸೃಷ್ಟಿಸಿ ಜಲಪೂರ್ಣವಾದ ಬ್ರಹ್ಮಾಂಡವನ್ನು ತಾನು ಏಕಾಂಗಿನಿಯಾಗಿ ಧರಿಸಿಕೊಂಡಳು. ಆ ದೇವಿಗೆ ನನ್ನ ನಮಸ್ಕಾರಗಳು.

ಅಪ್ರಮೇಯಳಾದ ಲಲಿತಾಂಬೆಯು ಭೂಮಿಯನ್ನು ಮತ್ತು ಆಕಾಶವನ್ನು ಧರಿಸಿಕೊಂಡಿರುವಳು. ಸೂರ್ಯನು ಆಕೆಯ ಆಧಾರದಲ್ಲೇ ಉದಯಿಸುವನು. ಆ ದೇವಿಗೆ ನನ್ನ ನಮಸ್ಕಾರವು ಸಲ್ಲುವುದು. ಸುರಲೋಕವು ಈಕೆಯ
29 b ಅಂತರಾಲದಲ್ಲಿದೆ. ಪೃಥ್ವಿಯು ಇವಳ ಆಧಾರದಿಂದ ನೆಲೆಗೊಂಡಿದೆ. ಅಖಿಲ ಲೋಕಗಳು ಇವಳಿಂದ ಪೂರ್ಣಗೊಂಡಿವೆ. ಅಂಥ ದೇವಿಗೆ ನಮಸ್ಕಾರವನ್ನು ಸಲ್ಲಿಸುತ್ತೇನೆ. ಈಕೆಯಲ್ಲಿ ಪೂರ್ಣ ವಿಶ್ವವು ಉದಯಿಸುವುದು. ಇವಳಲ್ಲಿ ವಿಶ್ವವು ವಿಶಿಷ್ಟವಾಗಿ ಸ್ಥಾಯಿಯಾಗುವುದು. ಕಾಲಕ್ರಮೇಣ ವಿಶ್ವವು ಇವಳಲ್ಲೇ ನಾಶವನ್ನು ಹೊಂದುವುದು. ಅಂಥ ದೇವಿಗೆ ನನ್ನ ನಮಸ್ಕಾರವು ಸಲ್ಲುವುದು. ರಜೋಗುಣಗಳುಳ್ಳ, ಸೃಷ್ಟಿಕಾರಣಳಾದ ನಿನಗೆ ನಮನ. ಸತ್ತ್ವಗುಣಾಧಿಷ್ಠಿತಳಾದ ನಿನಗೆ ನಮನ. ತಮೋಗುಣಾನ್ವಿತಳಾದ ಸಂಹಾರ ಕಾರಣಳಿಗೆ ನಮನ. ನಿರ್ಗುಣ ಕಾರಣದಿಂದ ಶಿವೆ (ಮಂಗಳವನ್ನು ನೀಡುವವಳು) ಗೆ ನಮನ. ಜಗತ್ತಿನ ಏಕಮಾತ್ರ ಜನನಿಗೆ ನಮನ. ಜಗತ್ತಿನ ಏಕಮಾತ್ರ ಜನಕಸ್ವರೂಪಿಣಿಗೆ ನಮನ. ಸಮಸ್ತಯಂತ್ರಸ್ವರೂಪಿಣಿಗೆ ನಮನ. ಅಖಿಲ ತಂತ್ರಸ್ವರೂಪಿಣಿಗೆ ನಮನ.

ಜಗತ್ತಿನ ಸಮಸ್ತಗುರುಗಳಿಗೆ ಪ್ರಧಾನಳಾಗಿರುವವಳಿಗೆ ನಮನ. ಸಮಸ್ತವಾಗೈಶ್ವರ್ಯದಿಂದ ಕೂಡಿದವಳಿಗೆ ನಮನ. ಜಗತ್ತಿಗೆ ಏಕಮಾತ್ರಳಾಗಿ ಸಂತೋಷವನ್ನು ನೀಡುವ ಲಕ್ಷ್ಮೀಸ್ವರೂಪಳಿಗೆ ನಮನ. ಸಮಸ್ತಶಕ್ತಿಯುತಳಾದ ಶಾಂಭವಿ (ಶಂಭುವಿನ ಪತ್ನಿ) ಗೆ ನಮನ. ಅಮ್ಮಾ, ನಿನ್ನ ಪ್ರಭಾವವು ಆದಿ ಮಧ್ಯಾಂತ ರಹಿತವಾದುದು. ಪಂಚಭೂತ (ಪೃಥಿವೀ, ಅಪ್, ತೇಜಸ್, ವಾಯು, ಆಕಾಶ) ಗಳಿಗೆ ಸಂಬಂಧವಿಲ್ಲದುದು. ಮಾತು ಮತ್ತು ಮನಸ್ಸುಗಳಿಗೆ ನಿಲುಕದೇ ಇರುವಂಥದು. ಊಹೆಗೆ ನಿಲುಕದ ವೈಭವವನ್ನು ಪಡೆದುದು ರೂಪರಹಿತವಾದುದು, ದ್ವಂದ್ವ ವಿಮುಕ್ತವಾದುದು. ಸಾಮಾನ್ಯದೃಷ್ಟಿಗೆ ಕಾಣಿಸದೇ ಇರುವಂಥದು. ಪ್ರಮುಖವಾದುದು, ಅದನ್ನು ನಾನೆಂತು ಬಣ್ಣಿಸಲಿ.

ಪ್ರಪಂಚದ ಯಜಮಾನಿ, ಪ್ರಪಂಚದಿಂದ ವಂದಿತಳೆ, ಸಕಲವಿದ್ಯಾಧೀಶ್ವರಿಯೆ, ವೇದಸ್ವರೂಪಳೆ, ಮಾಯಾಸ್ವರೂಪಳೆ, ಮಂತ್ರಶರೀರಳೆ, ಸಕಲಾಧೀಶ್ವರಿಯೆ, ಸರ್ವಸ್ವರೂಪಳೆ, ಪ್ರಸನ್ನಳಾಗು.

ಇಂದ್ರ ಮೊದಲಾಗಿ ಸಮಸ್ತ ದೇವರುಗಳು ಮಹಾದೇವಿಯನ್ನು ಈ ರೀತಿಯಾಗಿ ಸ್ತೋತ್ರಮಾಡಿ, ಪುನಃ ಪುನಃ ನಮಸ್ಕರಿಸಿ ತತ್‌ಕ್ಷಣದಲ್ಲೇ ಶರಣಾಗತರಾದರು. ಆ ಬಳಿಕ ಪ್ರಸನ್ನಳಾದ (ಸಂತೋಷಗೊಂಡ) ದೇವೇಶ್ವರಿಯು, ನಮಸ್ಕರಿಸಿದಂಥ ಇಂದ್ರನನ್ನು ದೃಷ್ಟಿಸಿ, ಸಮಸ್ತ ಜೀವಿಗಳಿಗೆ ವರವನ್ನು ಕೊಡುವವಳಾಗಿ ವರವನ್ನು ಪ್ರಾರ್ಥಿಸು ಎಂದು ಆತನನ್ನು ಒತ್ತಾಯಪಡಿಸಿದಳು.

ಇಂದ್ರನು ಹೇಳಿದನು. ಹೇ ಕಲ್ಯಾಣರೂಪಿಣಿಯೆ, ನೀನು ಸಂತೋಷಗೊಂಡಿರುವೆ. ದೈತ್ಯರಾಜನಿಂದ ಕಷ್ಟಕ್ಕೊಳಗಾದ ನಾವು ರಕ್ಷಣೆಯನ್ನು ಬಯಸಿ ನಿನ್ನಲ್ಲಿಗೆ ಬಂದಿರುವೆವು. ಬಾಳು ದೊರಕುವುದು ನಮಗೆ ಕಷ್ಟಸಾಧ್ಯವಾಗಿದೆ.

ದೇವಿಯು ನುಡಿದಳು. ಭಂಡನೆಂಬ ದೈತ್ಯರ ರಾಜನನ್ನು ನಾನೇ ಈ ಕ್ಷಣದಲ್ಲಿ ಗೆದ್ದು ನಿನಗೆ ಮೂಲೋಕಗಳ ಸಂಪತ್ತನ್ನು ಪುನಃ ನೀಡುವೆನು. ಸಮಸ್ತದೇವಸಮೂಹವು ಭಯವಿಹೀನವಾಗಿ ಸದಾಕಾಲದಲ್ಲಿ ಸಂತೋಷದಿಂದ ಇರಲಿ. ಈ ಸ್ತೋತ್ರದಿಂದ ಭಕ್ತಿಯಿಂದ ನನ್ನನ್ನು ಸ್ತುತಿಗೈಯುವ ಮನುಷ್ಯರು ನಿರಂತರವಾಗಿ ಧರ್ಮ, ಐಶ್ವರ್ಯ ಮತ್ತು ಕೀರ್ತಿಗೆ ಪಾತ್ರರಾಗುವರು. ಅವರು ನನ್ನ ಅನುಗ್ರಹದಿಂದ ವಿದ್ಯಾವಿನಯಪರಿಪೂರ್ಣರೂ, ರೋಗರಹಿತರೂ, ದೀರ್ಘಾಯುಷಿಗಳೂ, ಸಿರಿವಂತರೂ, ಪುತ್ರಮಿತ್ರಕಲತ್ರಗಳಿಂದ ಕೂಡಿದವರಾಗಿಯೂ ಇರುತ್ತಾರೆ. ದೇವತೆಗಳು ಹಾಗೂ ಮಹಾಬಲಶಾಲಿಯಾದ ದೇವೇಂದ್ರನು ಈ ಪ್ರಕಾರವಾಗಿ ವರವನ್ನು ಪಡೆದು ಪುನಃ ಪುನಃ ದೇವಿಯನ್ನು ನೋಡಿ ಪರಮಾನಂದವನ್ನು ಹೊಂದಿದರು.
532-567

ಈ ರೀತಿಯಾಗಿ ಬ್ರಹ್ಮಾಂಡ ಪುರಾಣದ ಉತ್ತರಖಂಡದ ಲಲಿತೋಪಾಖ್ಯಾನದಲ್ಲಿ ಇಂದ್ರನೇ ಮೊದಲಾದವರು ಮಾಡಿದ ದೇವಿಸ್ತುತಿಯು ಕೊನೆಗೊಂಡಿತು.

ಶ್ರೀದೇವಿಯ ಆವಿರ್ಭಾವ ಮತ್ತು ದೇವಿಕಲ್ಯಾಣದ ಆರಂಭ

ಶ್ರೀಚಾಮುಂಡಾಂಬಿಕೆಗೆ ನಮನಗಳನ್ನು ಸಲ್ಲಿಸುವೆನು.

ಇದೇ ಸಮಯದಲ್ಲಿ ಲೋಕಪಿತಾಮಹ (ಅಜ್ಜ) ಬ್ರಹ್ಮನು ದೇವೇಶಿಯನ್ನು ಸಂದರ್ಶಿಸಲು ಮಹರ್ಷಿಗಳೊಂದಿಗೆ ಬಂದನು. ವಿನತಾಪುತ್ರ (ಗರುಡ) ನನ್ನು ಏರಿಕೊಂಡು ವಿಷ್ಣು ಬಂದನು. ಎತ್ತನ್ನು (ನಂದಿ) ಏರಿಕೊಂಡು ಅಖಿಲೇಶ್ವರಿ (ಲಲಿತಾ) ಯನ್ನು ನೋಡಲು ಶಿವನು ಕೂಡಾ ಅಲ್ಲಿಗೆ ಬಂದನು.

ನಾರದ ಮೊದಲಾದ ದೇವರ್ಷಿಗಳು ಅಪ್ಸರೋಗಣಗಳೂ (ಸಮೂಹ) ವಿಶ್ವಾವಸು ಮೊದಲಾದ ಗಂಧರ್ವರೂ ಯಕ್ಷರೂ ಆ ಮಹಾದೇವಿಯನ್ನು ನೋಡಲು ಅಲ್ಲಿಗೆ ಬಂದರು. ಆ ಬಳಿಕ ಬ್ರಹ್ಮನಿಂದ ನಿರ್ದೇಶನವನ್ನು ಪಡೆದ ಜನನಾಯಕನಾದ ವಿಶ್ವಕರ್ಮನು ದೇವಿಗೋಸ್ಕರ ಅಮರಾವತಿಗೆ ಸದೃಶವಾದ ನಗರವನ್ನು ನಿರ್ಮಿಸಿದನು. ಅನಂತರ ಐಶ್ವರ್ಯಾದಿಗುಣಪೂರ್ಣಳಾದ ಸಮಸ್ತಮಂತ್ರಗಳ ಅಧಿದೇವತೆಯಾದ ದುರ್ಗೆಯು, ವಿದ್ಯಾಧಿದೇವತೆಯೂ ಶ್ಯಾಮಲಾಂಬಿಕೆ (ಲಲಿತಾ) ಯ ಬಳಿಗೆ ಬಂದರು. ತಮ್ಮ ತಮ್ಮ ಭೂತಸಮೂಹದಿಂದ ಕೂಡಿದಂಥ, ಬ್ರಾಹ್ಮೀ ಮೊದಲಾದ ಮಾತೃಕೆಯರು, ಅಣಿಮಾ ಮೊದಲಾದ ಸಿದ್ಧಿ ದೇವತೆಗಳು, ಕೋಟಿ ಸಂಖ್ಯೆಯ ಯೋಗಿನಿಯರೂ, ಭೈರವರು, ಕ್ಷೇತ್ರಪಾಲರು,
30 a . ಮಹಾಶಾಸ್ತವು, ಗಣಗಳ ಮುಂದಾಳಾದ ಮಹಾಗಣೇಶನು, ಸ್ಕಂದ, ವಟುಕ, ವೀರಭದ್ರ ಇವರೆಲ್ಲರೂ ಬಂದು ವಿನಮ್ರರಾಗಿ ಮಹಾದೇವಿಯನ್ನು ಹೊಗಳಿದರು. ಅಲ್ಲಿ ಎಂಟು ಕೋಟೆ ಮತ್ತು ಎಂಟು ಮಹಾದ್ವಾರಗಳಿರುವ, ಆನೆ, ಕುದುರೆ ರಥ, ಕೋಟೆಗಳು ಪ್ರಭೂತವಾಗಿರುವ, ರಾಜಮಾರ್ಗದಿಂದ ಕಂಗೊಳಿಸುವ, ಸಾಮಂತರು, ಮಂತ್ರಿಗಳು, ಸೈನಿಕರು, ಬ್ರಾಹ್ಮಣರು, ಸ್ತುತಿಪಾಠಕರು, ದಾಸರು, ದಾಸಿಯರು, ಇವರ ಮನೋಹರವಾದ ನಿವಾಸಗಳಿವೆ. ಅದರ ನಡುವೆ ದ್ವಾರ ಮತ್ತು ಗೋಪುರಗಳಿಂದ ಕಂಗೊಳಿಸುವ, ಬಹುಶಾಲಾ (ಅಂಕಣ) ಗಳಿಂದ ಕೂಡಿದ, ಸಭಾಭವನಗಳಿಂದ ಶೋಭಿಸುವ, ದಿವ್ಯವಾದ ರಾಜಗೃಹವಿದೆ. ಅಲ್ಲಿ ನವರತ್ನಗಳಿಂದ ಕೂಡಿದ ಮಂಗಳಕರವಾದ ಸಿಂಹಾಸನಸಭೆಯಿದೆ. ಅದರ ನಡುವೆ ಚಿಂತಾಮಣಿಗಳಿಂದ ನಿರ್ಮಿತವಾದ ದಿವ್ಯಸಿಂಹಾಸನವಿದೆ. ಅದು ಸ್ವಯಂ ಪ್ರಕಾಶವುಳ್ಳದ್ದು, ಅದ್ವಿತೀಯವಾದುದು,

ಉದಯ ಸೂರ್ಯನ ಕಾಂತಿಗೆ ಸಮಾನವಾದುದು. ಲೋಕಪಿತಾಮಹನಾದ ಬ್ರಹ್ಮನು ಅದನ್ನು ನೋಡಿ ಇಂತು ಚಿಂತಿಸಿದನು. "ಈ ಸಿಂಹಾಸನವನ್ನು ಏರಿದ ಮಂದಬುದ್ಧಿಯು ಕೂಡಾ ಈ ಪುರದ ಪ್ರಭಾವದಿಂದ ಮೂಲೋಕಗಳಿಗೆ ಅಧಿಪತಿಯಾಗುವನು. ಒಬ್ಬ ಹೆಂಗಸು ರಾಜ್ಯಕ್ಕೆ ಅರ್ಹತೆಯನ್ನು ಪಡೆಯಲಾರಳು. ಹೆಂಗಸಿಲ್ಲದೇ ಕೇವಲಪುರುಷನು ರಾಜ್ಯಕ್ಕೆ ಪಾತ್ರನಾಗಲಾರನು. ಮಂಗಳಾಚಾರಗಳಿಂದ ಕೂಡಿದ, ಮಹಾಪುರುಷರ ಲಕ್ಷಣಗಳನ್ನು ಹೊಂದಿದ ತನ್ನ ರೂಪಕ್ಕೆ ಸಮನಾದ ರೂಪಿನ ಸ್ತ್ರೀಯಿಂದ ಕೂಡಿದವನನ್ನು ರಾಜ್ಯದಲ್ಲಿ ಅಭಿಷೇಕ ಮಾಡಬೇಕೆಂದು ಶ್ರುತಿಯು ಹೇಳುತ್ತದೆ. ಈ ಸ್ತ್ರೀಯು ಸಾಕಾರವಾದ ಶೃಂಗಾರದೇವತೆಯಂತೆ ಶೋಭಿಸುವಳು. ಮೂರುಲೋಕಗಳಲ್ಲಿ ಶಂಕರನ ವಿನಹ ಈಕೆಗೆ ಸರಿಸಮಾನನಾದವನು ಇನ್ನೊಬ್ಬನಿಲ್ಲ. ಜಟಾಯುಕ್ತ, ಮುಂಡಗಳನ್ನು ಧರಿಸಿದವನು, ವಿಷಮ ನೇತ್ರನು (ಅಸಮನೇತ್ರ), ಕಪಾಲವನ್ನು ಧರಿಸಿದವನು. ಕಲಾಪ (ಜನಸಮೂಹ = ಗಣಸಮೂಹ, ಬತ್ತಳಿಕೆ, ಕಾಂಚಿ) ದಿಂದ ಕೂಡಿದವನು, ಭಸ್ಮವನ್ನು ಬಳಿದುಕೊಂಡ ದೇಹವುಳ್ಳವನು, ಶ್ಮಶಾನದಲ್ಲಿರುವವನು, ಭಯಾನಕ ಸ್ವರೂಪನು, ಇಂಥ ಅಮಂಗಳಗಳಿಗೆ ವಾಸಸ್ಥಳವಾಗಿರುವವನು. ಸುಮಂಗಲೆಯಾದ ಆಕೆಯು ವರಿಸಲಾರಳು ಈ ವಿಧವಾಗಿ ಯೋಚಿಸುತ್ತಿದ್ದ ಬ್ರಹ್ಮನ ಮುಂದೆ ಕೋಟಿಮನ್ಮಥರಷ್ಟು ಲಾವಣ್ಯವನ್ನು ಹೊಂದಿರುವ, ದಿವ್ಯಶರೀರವುಳ್ಳ, ದಿವ್ಯವಸ್ತ್ರಧರನಾದ, ಹಾರ ಗಳನ್ನು ಧರಿಸಿದ, ದಿವ್ಯವಾದ ಗಂಧದ ಲೇಪವನ್ನು ಮಾಡಿಕೊಂಡ, ಕಿರೀಟ, ಹಾರ, ಭುಜಾಲಂಕಾರ, ಕುಂಡಲ (ಕರ್ಣಾಲಂಕಾರ) ಮೊದಲಾದುವುಗಳಿಂದ ಅಲಂಕೃತನಾದ ಜಗನ್ಮೋಹನ ರೂಪವನ್ನು ಹೊಂದಿದ ಶಿವನು ಬ್ರಹ್ಮನ ಮುಂದೆ ಕಂಡುಬಂದನು. ಪಿತಾಮಹ (ಬ್ರಹ್ಮ) ನು ಪ್ರೀತಿಯಿಂದ ಆ ಕುಮಾರ (ವರ) ನನ್ನು ಆಲಿಂಗಿಸಿಕೊಂಡು ಸುಂದರಾಂಗನಾದ ಆತನಿಗೆ ಕಾಮೇಶ್ವರನೆಂಬುದಾಗಿ ಹೆಸರಿಟ್ಟನು. ಆ ಶಕ್ತಿಸ್ವರೂಪಿಣಿಗೆ ಈತನು ಅತ್ಯಂತ ಅನುರೂಪನಾದ ವರನೆಂದು ನಿಶ್ಚಯಿಸಿ ಅವನೊಂದಿಗೆ ಆ ಲಲಿತಾಂಬಿಕೆಯ ಬಳಿಗೆ ಬಂದನು. ಬ್ರಹ್ಮಾ, ವಿಷ್ಣು ಮಹೇಶ್ವರರು ಪರಾಶಕ್ತಿಯನ್ನು ಸ್ತೋತ್ರಮಾಡಿದರು. ಕುಮಾರನಾದ ನೀಲಲೋಹಿತ (ಶಿವ) ನು ಮರಿಚಿಗರೆಯ ಕಣ್ಣುಗಳಂತೆ ಕಣ್ಣುಳ್ಳ ಆಕೆಯನ್ನು ನೋಡಿ ಎಲ್ಲ ಕ್ರಿಯೆಗಳನ್ನು ಮರೆತು ಕಾಮಾವಿಷ್ಟನಾದನು. ಕೃಶಾಂಗಿಯಾದ ಆಕೆಯು ಕೂಡಾ ಮೂರ್ತಿವೆತ್ತ ಸ್ಮರನಂತಿರುವ ಅವನನ್ನು ನೋಡಿ ಸರ್ವಾಂಗಗಳಲ್ಲೂ ಕಾಮಾವಿಷ್ಟಳಾಗಿ ಆತನು ತನಗೆ ಯೋಗ್ಯನಾದವನೆಂದು ಭಾವಿಸಿಕೊಂಡಳು. ಕಾಮಪೀಡಿತರಾಗಿ ಅವರಿಬ್ಬರೂ ಪರಸ್ಪರರನ್ನು ನೋಡುವ ಅಭಿಲಾಷೆಯುಳ್ಳವರಾಗಿ, ಸಮಸ್ತ (ಶೃಂಗಾರ) ಭಾವಗಳನ್ನು ಅರಿತವರಾಗಿ, ದೃಢಮನಸ್ಕರಾಗಿ, ಪ್ರಶಸ್ತವಾದ ಮನಸ್ಸುಳ್ಳವರಾಗಿ, ಇತರರಿಂದ ತಮ್ಮ ನಡವಳಿಕೆಯನ್ನು ತಿಳಿಯದವರಾಗಿ, ಕ್ಷಣಮಾತ್ರದಿಂದ ಮನಸ್ಸಿನ ಸ್ತಿಮಿತವನ್ನು ಪಡೆದರು. ಅನಂತರ ಬ್ರಹ್ಮನು ಲೋಕೈಕನಾಯಕಿಯಾದ ಮಹಾದೇವಿಯನ್ನು ಕುರಿತು ಇಂತೆಂದನು.

ಈ ದೇವರುಗಳು, ಋಷಿಗಳು, ಗಂಧರ್ವರು, ಅಪ್ಸರೋಗಣಗಳು, ಪ್ರಿಯನ ಸಹಿತಳಾಗಿ ಪರಮಾಸನದಲ್ಲಿ ಕುಳಿತಿರುವ ನಿನ್ನನ್ನು ನೋಡಲಿಚ್ಛಿಸುವರು. ಹೇ ದೇವಿ, ನಿನಗೆ ಪ್ರಿಯನಾದ, ಪರಮಧನ್ಯನಾದ, ಅನುರೂಪನಾದ ಗಂಡು ಯಾರಾಗಿರಬಹುದು? ಈ ಲೋಕಗಳ ರಕ್ಷಣೆಗಾಗಿ ಅಂಥ ಪುರುಷನನ್ನು ವರನನ್ನಾಗಿ ಸ್ವೀಕರಿಸು. ಮಹಾಮಹಿಮಾನ್ವಿತೆ, ಪಾಪರಹಿತರಾದ (ಪುಣ್ಯಾತ್ಮ) ದೇವರ್ಷಿಗಳಿಂದ ಅಭಿಷೇಕಗೊಂಡು ಈ ನಗರದ ರಾಣಿಯಾಗು. ಪರಮಾಸನದಲ್ಲಿ ಆಸೀನಳಾಗು. ಸಾಮ್ರಾಜ್ಯದ ಲಕ್ಷಣಗಳಿಂದ ಕೂಡಿ, ಸಮಸ್ತಆಭರಣಗಳಿಂದ ಅಲಂಕಾರಗೊಂಡ, ಪ್ರಿಯನೊಡನೆ ಆಸನಾರೂಢಳಾದ ನಿನ್ನನ್ನು ನಾವು ನೋಡಲಿಚ್ಛಿಸುವೆವು. ದೇವಿಯು ಆ ಮಾತನ್ನು ಕೇಳಿ ಮುಗುಳ್ನಗೆಯಿಂದ ಕೂಡಿದ ಮುಖಕಮಲವುಳ್ಳವಳಾಗಿ ಬ್ರಹ್ಮಾ, ವಿಷ್ಣು, ಮಹೇಶ್ವರರಿಗೆ ಈ ಮಾತನ್ನು ಹೇಳಿದಳು.

30 b ಎಲ್ಲೈ ದೇವರುಗಳೆ, ನಾನು ಸ್ವತಂತ್ರೆ. ನನ್ನ ಇಚ್ಛಾನುಸಾರವಾಗಿ ಆಚಾರ ಮತ್ತು ವಿಹಾರಗಳನ್ನು ಕೈಗೊಳ್ಳುವವಳು. ನನ್ನ ಪ್ರಿಯನು ನನಗೆ ಸರಿಸಮನಾದ ನಡವಳಿಕೆಯುಳ್ಳವನಾಗಿರಬೇಕು. ಪಿತಾಮಹಬ್ರಹ್ಮನು ಎಲ್ಲದೇವರುಗಳೊಂದಿಗೆ

ಆ ಅಭಿಪ್ರಾಯವನ್ನು ಒಪ್ಪಿಕೊಂಡು ದೇವಿಯನ್ನು ಉದ್ದೇಶಿಸಿ ಧರ್ಮಾರ್ಥಗಳಿಂದ ಕೂಡಿದ ಹಿತಕರವಾದ ಮಾತನ್ನು ಹೇಳಿದನು. ಕಾಲಕ್ರೀತೆ, ಕ್ರಯಕ್ರೀತೆ, ಪಿತೃದತ್ತೆ ಹಾಗೂ ಸ್ವಯಂವೃತೆ ಈ ರೀತಿಯಾಗಿ ಸ್ತ್ರೀಪುರುಷರ ವಿವಾಹದಲ್ಲಿ ನಾಲ್ಕು ವಿಧವಿದೆ. ಕಾಲಕ್ರೀತೆಯೆಂದರೆ ವೇಶ್ಯೆ. ಕ್ರಯಕ್ರೀತೆಯೆಂದರೆ ದಾಸೀ. ಗಂಧರ್ವಕ್ರಮದಿಂದ ವಿವಾಹಿತಳಾದಳು ಯುಕ್ತಾ (ಸ್ವಯಂವೃತೆ) ತಾಯಿತಂದೆಗಳಿಂದ ಕೊಡಲ್ಪಟ್ಟವಳು ಭಾರ್ಯೆಯೆಂದಾಗುವಳು. ಸಮಾನಧರ್ಮದಿಂದ ಕೂಡಿದವಳು ಯುಕ್ತಾ. ಪತಿಯ ಅಧೀನಳಾಗಿರುವವಳು ಭಾರ್ಯಾ. ಅದ್ವಿತೀಯವಾದ ಪರಬ್ರಹ್ಮ ಸತ್ ಮತ್ತು ಅಸತ್ ಎಂಬ ಭಾವನೆಯಿಲ್ಲದುದಾಗಿದೆ.

ಶುದ್ಧಜ್ಞಾನ ಮತ್ತು ಆನಂದಸ್ವರೂಪವಾದ ಆ ಪರಬ್ರಹ್ಮದಿಂದ ಪ್ರಕೃತಿಯ ನಿರ್ಮಾಣವಾಯಿತು. ಆ ಪರಬ್ರಹ್ಮವೂ ಪ್ರಕೃತಿಯೂ ನೀನೇ ಆಗಿರುವಿ. ನೀನು ಅನಾದಿಯೂ, ಪೂರ್ಣಳೂ, ಕಾರಣ, ಅಕಾರಣಗಳನ್ನೊಳಗೊಂಡವಳೂ ಆಗಿರುವಿ. ಸನಕಾದಿಯೋಗಿಗಳು ನಿನ್ನನ್ನೇ ಅನ್ವೇಷಿಸುವರು. ಅವರು ಸತ್-ಅಸತ್ ಕರ್ಮಸ್ವರೂಪಿಣಿಯಾದ, ವ್ಯಕ್ತ-ಅವ್ಯಕ್ತ ದರ್ಶನವನ್ನು ನೀಡುವ, ಪಂಚ ಬ್ರಹ್ಮ ಸ್ವರೂಪಿಣಿಯಾದ ನಿನ್ನನ್ನೇ ಪ್ರಶಂಸುತ್ತಿರುವರು. ಮಹೇಶ್ವರಿ, ಆದಿಯಲ್ಲಿ ನೀನೇ ವಿಶ್ವವನ್ನು ಸೃಷ್ಟಿಸುವೆ. ನೀನೇ ವಿಶ್ವರಕ್ಷಣೆಯನ್ನು ಮಾಡುವೆ. ಕ್ಷಣಮಾತ್ರದಲ್ಲಿ ಅದನ್ನು ಸಂಹರಿಸುವೆ. ಈ ರೀತಿಯಾಗಿ ಪುನಃ ಸೃಷ್ಟಿಸುವೆ. ಆದ್ದರಿಂದ ಪ್ರಿಯಸಂಗಮಮಾಡಿದ ಮಾತ್ರದಿಂದ ನಿನ್ನ ಸ್ವಾತಂತ್ರ್ಯವು ನಶಿಸಿ ಹೋಗದು. ಲೋಕಾನುಗ್ರಹದ ಕಾಮನೆಯಿಂದ ಯಾವನೊ ಒಬ್ಬ ಪುರುಷನನ್ನು (ಪತಿಯ ರೂಪದಲ್ಲಿ) ಆರಾಧಿಸು/ಹೊಂದು.

ಈ ರೀತಿಯಾಗಿ ಬ್ರಹ್ಮನಿಂದ ಹಾಗೂ ಸಮಸ್ತ ದೇವರುಗಳಿಂದ ಪ್ರಾರ್ಥಿತಳಾದ ದೇವಿಯು ಕೈಯಿಂದ ಹಾರವನ್ನು ಎತ್ತಿ ಆಕಾಶ ಮಧ್ಯಕ್ಕೆ ಎಸೆದಳು. ಅವಳು ಎಸೆದಂಥ ಆ ಮಾಲೆಯು ಆಕಾಶವನ್ನು ಕಾಂತಿಪೂರ್ಣವನ್ನಾಗಿ ಮಾಡುತ್ತ ಕಾಮೇಶ್ವರನ ಕೊರಳಿಗೆ ಬಂದು ಬಿದ್ದಿತು. ಆಗ ಬ್ರಹ್ಮಾವಿಷ್ಣುಹರ ಮೊದಲಾದ ದೇವರುಗಳು ಸಂತೋಷಪಟ್ಟರು. ಮಂದಮಾರುತದಿಂದ ಮೋಡಗಳು ಸಾಗುತ್ತ ಹೂಮಳೆಗರೆದವು. ಆ ಬಳಿಕ ಬ್ರಹ್ಮನು ಭಗವಾನ್ ಜನಾರ್ದನನನ್ನು ಕುರಿತು ಹೇ ಹರಿಯೇ, ಈ ಶಿವಶಿವೆಯರ ವಿವಾಹವನ್ನು ವಿಧಿಪೂರ್ವಕವಾಗಿ ಮಾಡಬೇಕೆಂದು ಹೇಳಿದನು. ಇಂದು ಜಗನ್ಮಂಗಳವನ್ನುಂಟುಮಾಡುವ ಮುಹೂರ್ತವೊದಗಿದೆ. ಮಹಾದೇವಿಯು ನಿನ್ನ ರೂಪದಲ್ಲೇ ಇರುವವಳು. ನೀನು ಕೂಡಾ ಅವಳ ಸಹಜ (ಒಡ ಹುಟ್ಟಿದವನು) ನಾಗಿರುವೆ.

ಆದ್ದರಿಂದ ಮಂಗಳ ಸ್ವರೂಪಿಣಿಯಾದವಳನ್ನು ಕಾಮಶಿವನಿಗೆ ನೀನು ದಾನಮಾಡು. ಅವನ (ಬ್ರಹ್ಮಾ) ಆ ಮಾತನ್ನು ಕೇಳಿ ದೇವೋತ್ತಮನಾದ ತ್ರಿವಿಕ್ರಮನು ವಿಧಿಪೂರ್ವಕವಾಗಿ ಶಂಕರನಿಗೆ ಪ್ರೀತಿಯಿಂದ ಆಕೆಯನ್ನು ದಾನ ಮಾಡಿದನು. ಆದಿಕೇಶವನು ದೇವರ್ಷಿ, ಪಿತೃದೇವತೆ ಮೊದಲಾದ ಎಲ್ಲ ದೇವಜಾತಿಗಳ (ಸಮ್ಮುಖದಲ್ಲಿ) ಶಿವ ಮತ್ತು ಶಿವೆಯರ ಕಲ್ಯಾಣವನ್ನು ನೆರವೇರಿಸಿದನು. ಬ್ರಹ್ಮನೇ ಮೊದಲಾದ ಎಲ್ಲ ದೇವರುಗಳು ಉಡುಗೊರೆಗಳನ್ನು ನೀಡಿದರು. ಬ್ರಹ್ಮನು ವಜ್ರಶಕ್ತಿಯುಳ್ಳ ನಾಶ ರಹಿತವಾದ ಕಬ್ಬಿನ ಬಿಲ್ಲನ್ನು ನೀಡಿದನು. ಹರಿಯು ಅವರಿಗೆ ಬಾಡದೇ ಇರುವ, ನಾಶ ರಹಿತವಾದ ಪುಷ್ಪಾಯುಧವನ್ನು ನೀಡಿದನು. ಜಲಜಂತುಗಳಿಗೆ ಅಧಿಪತಿಯಾದ ವರುಣನು ಆ ದಂಪತಿಗಳಿಗೆ ನಾಗಪಾಶವನ್ನು ನೀಡಿದನು. ಜನಾಧೀಶನಾದ ವಿಶ್ವಕರ್ಮನು ಅವರಿಗೆ ಅಂಕುಶವನ್ನು ನೀಡಿದನು. ಅಗ್ನಿಯು ಕೀರೀಟವನ್ನು ನೀಡಿದನು. ಸೂರ್ಯಚಂದ್ರರು ತಾಟಂಕ (ಕಿವಿಯ ಆಭರಣ) ಗಳನ್ನು ನೀಡಿದರು. ಸಮುದ್ರರಾಜನು ನವರತ್ನಗಳಿಂದ ನಿರ್ಮಿಸಿದ ಅಲಂಕಾರವನ್ನು ಸ್ವತಃ ನೀಡಿದನು. ಸುರಾಧೀಶನಾದ ದೇವೇಂದ್ರನು ಅಕ್ಷಯ ಮಧುಪಾತ್ರೆಯನ್ನು ನೀಡಿದನು. ಕುಬೇರನು ಚಿಂತಾಮಣಿಗಳಿಂದ ನಿರ್ಮಿಸಿದಂತಹ ಮಾಲೆಯನ್ನು ನೀಡಿದನು. ಲಕ್ಷ್ಮೀಪತಿಯಾದ ಶ್ರೀಹರಿಯು ಸಾಮ್ರಾಜ್ಯಸೂಚಕವಾದ ಛತ್ರವನ್ನು ನೀಡಿದನು. ಗಂಗೆ ಮತ್ತು ಯಮುನೆಯರು ಚಂದ್ರನಂತೆ ಹೊಳೆಯುವ ಎರಡು ಚಾಮರಗಳನ್ನು ಅವರಿಗೆ

ನೀಡಿದರು. ಬ್ರಹ್ಮಾಮೊದಲಾದವರು, ವಸುಗಳು (ಎಂಟು), ರುದ್ರರು (ಹನ್ನೊಂದು), ಆದಿತ್ಯರು (ಹನ್ನೆರಡು), ಅಶ್ವಿನಿ ದೇವತೆಗಳು (ಎರಡು), ದಿಕ್ಪಾಲರು (ಎಂಟು), ಮರುತ್ತು (ಏಳು) ಗಳು ಸಾಧ್ಯರು, ಗಂಧರ್ವರು ಮತ್ತು
31 a ಯಕ್ಷರು, ಸಂತೋಷಗೊಂಡು ತಮ್ಮ ತಮ್ಮ ಆಯುಧಗಳನ್ನು ನೀಡಿದರು. ಅಲ್ಲದೆ, ರಥಗಳನ್ನು, ಅತಿಶಯವೇಗ ಮತ್ತು ಮಹಾಬಲಶಾಲಿಗಳಾದ ಮೈತುಂಬಿದ, ರೋಗರಹಿತವಾದ, ದಣಿವಿಲ್ಲದಿರುವ, ಹಸಿವು ನೀರಡಿಕೆ ಇಲ್ಲದ ವಜ್ರಸದೃಶವಾದ ಶಕ್ತಿಯುಳ್ಳ ಕುದುರೆ ಹಾಗೂ ಆನೆಗಳನ್ನು ಆಯುಧಗಳು ಮತ್ತು ಪರಿಕರಗಳ ಸಮೇತವಾಗಿ ಕೊಟ್ಟರು. ಆ ಬಳಿಕ ಸಾಮ್ರಾಜ್ಯದಲ್ಲಿ ಶಿವನ ಹಾಗೂ ಶಿವೆಯ ಅಭಿಷೇಕವನ್ನು ಕಲ್ಪಿಸಿದರು. ಅನಂತರ ಬ್ರಹ್ಮನು ಕುಸುಮಾಕರವೆಂಬ ವಿಮಾನವನ್ನು ಸೃಷ್ಟಿಸಿದನು. ಆ ವಿಮಾನವು ಎಂದಿಗೂ ಬಾಡದೇ ಇರುವ ಮಾಲೆಗಳಿಂದ ಕೂಡಿ, ಯಾವುದೇ ಆಯುಧಗಳಿಂದ ಖಂಡಿಸಲು ಸಾಧ್ಯವಾಗದಂತಿತ್ತು. ಅದು ಆಕಾಶದಲ್ಲಿ, ಭೂಮಿಯಲ್ಲಿ, ಅಂತರಿಕ್ಷದಲ್ಲೂ ಇಚ್ಛಾನುಸಾರವಾಗಿ ಹಾರುತ್ತಿತ್ತು. ಸಕಲಸಮೃದ್ಧಿಗಳಿಂದ ಕೂಡಿತ್ತು. ಆ ವಿಮಾನದ ಗಂಧವನ್ನು ಮೂಸಿದ ಮಾತ್ರದಿಂದ ಆಯಾಸ, ರೋಗ, ಹಸಿವು, ಪೀಡೆಗಳು ತತ್‌ಕ್ಷಣದಲ್ಲಿ ನಾಶವಾಗುತ್ತಿದ್ದವು. ಅದು ಮನಸ್ಸಿಗೆ ಸಂತೋಷವನ್ನು ನೀಡುತ್ತ ಮಂಗಳಕರವಾಗಿತ್ತು. ಲೋಕದಂಪತಿಗಳಾದ ಅವರಿಬ್ಬರು ಆ ವಿಮಾನವನ್ನು ಏರಿದರು. ಚಾಮರ, ಬೀಸಣಿಗೆ, ಮಧ್ಯಭಾಗದಲ್ಲಿ ಸುಂದರವಾದ ದಂಡದಿಂದ ಮನೋಹರವಾದ ಛತ್ರಗಳಿಂದಲೂ ವೀಣೆ, ಕೊಳಲು, ಮೃದಂಗ ಮೊದಲಾದ ನಾನಾವಾದ್ಯಗಳನ್ನು ನುಡಿಸುವುದರಿಂದಲೂ, ಸಮಸ್ತ ದೇವರುಗಳಿಂದ ಸೇವೆಗೊಂಡು ರಾಜಮಂದಿರದಿಂದ ಹೊರಟು ತನ್ನ ಪ್ರಭೆಯಿಂದ ರಾಜವೀಥಿಯನ್ನು ಕಾಂತಿಮಯವನ್ನಾಗಿ ಮಾಡುತ್ತ ವಿಹಾರಪೂರ್ವಕವಾಗಿ ದೇವಿಯೂ ಮುಂದೆಸರಿದಳು. ಪ್ರತಿಯೊಂದು ರಾಜಗೃಹದ ಮಹಡಿಯ ಮೇಲಿದ್ದ ಸಾವಿರಾರು ಅಪ್ಸರಸ್‌ಸ್ತ್ರೀಯರು ಅರಳು, ಅಕ್ಷತೆ, ದೂರ್ವೆ ಹೂವುಗಳಿಂದ ಅವಳಿಗೆ ಮಳೆಗರೆಯುತ್ತಿದ್ದರು. ದೇವಿಯು, ಮಂಗಳಮಯವಾದ ಗಾಥೆ (ವೈಭವಗಳನ್ನು ಕೊಂಡಾಡುವ ಪದ್ಯ)ಗಳನ್ನೂ ವೀಣಾ, ವೇಣು(ಕೊಳಲು)ಮೊದಲಾದುವುಗಳ ಧ್ವನಿಗಳನ್ನು ಕೇಳುತ್ತ ಸಂತೋಷಪಟ್ಟು ಮೆಲ್ಲಮೆಲ್ಲನೆ ಪ್ರತಿಯೊಂದು ವೀಥಿಗೂ ಬಂದಳು. ಅಪ್ಸರಸ್‌ಸ್ತ್ರೀಯರು ಕಲ್ಪಿಸಿದ ಆರತಿಯ ಶಾಸ್ತ್ರವನ್ನು ಅಂಗೀಕರಿಸಿ ಮಹಾವಿಮಾನದಿಂದ ಇಳಿದು ಮಹಾಸಭೆಯನ್ನು ಪ್ರವೇಶಿಸಿದಳು. ಆಕೆಯು ಭಗವಾನ್ ಶಂಭುವಿನೊಡನೆ ಸಿಂಹಾಸನವನ್ನು ಏರಿದಳು. ಅಲ್ಲಿ ಸೇರಿದ್ದ ಮಹಾಜನರು ತಮ್ಮ ಮನಸ್ಸಿನಲ್ಲಿ ಏನೇನನ್ನು ಬಯಸಿದರೋ ಆ ಎಲ್ಲ ಬಯಕೆಗಳನ್ನು ಸರ್ವಜ್ಞೆಯಾದ ದೇವಿಯು ಕಣ್ಣೋಟದಿಂದ ಪೂರೈಸಿದಳು. ದೇವಿಯ ಈ ಕಾರ್ಯವನ್ನು ನೋಡಿದ ಲೋಕಪಿತಾಮಹನಾದ ಬ್ರಹ್ಮನು ಆಗ ಅವಳಿಗೆ 'ಕಾಮಾಕ್ಷೀ' ಮತ್ತು 'ಕಾಮೇಶ್ವರೀ' ಎಂಬ ನಾಮಧೇಯವನ್ನು ನೀಡಿದನು. ಮೋಡಗಳು ಅವಳ ಆಜ್ಞಾಪ್ರಕಾರವಾಗಿ ಆ ನಗರದಲ್ಲಿ ಸೊಗಸಾದ, ಯೋಗ್ಯವಾದ ವಸ್ತ್ರಗಳ ಮತ್ತು ದಿವ್ಯವಾದ ಆಭರಣಗಳ ಮಳೆಗೆರೆದವು. ಚಿಂತಾಮಣಿ, ಕಲ್ಪವೃಕ್ಷ, ಲಕ್ಷ್ಮೀ ಮತ್ತು ಕಾಮಧೇನುಗಳು, ದೇವಿಯ ಆಜ್ಞೆಯಂತೆ ಆ ನಗರದ ಮನೆಮನೆಯಲ್ಲೂ ವಾಸಿಸಿದವು. ಅವಳ ಸೇವೆಯನ್ನು ಮಾಡುವ ಒಂದೇ ಉದ್ದೇಶದಿಂದ ಪ್ರೀತಿರೂಪವನ್ನು ಪಡೆದು, ಇತರ ಎಲ್ಲ ಕ್ರಿಯಾಶೀಲತೆಯನ್ನು ಬಿಟ್ಟು ಸಕಲವಾಂಛಿತಾರ್ಥಗಳಿಂದ ಕೂಡಿ, ಸತತವಾಗಿ ಆನಂದವನ್ನು ಹೊಂದಿದರು.

ಪಿತಾಮಹ (ಬ್ರಹ್ಮಾ), ಹರಿ, ಮಹಾದೇವ, ಇಂದ್ರ, ದಿಕ್ಪಾಲಕರು, ಇತರ ದೇವತಾಸಮೂಹಗಳು, ಬ್ರಹ್ಮರ್ಷಿಗಳು, ನಾರದಾದಿಗಳು, ವಸಿಷ್ಠ ಮೊದಲಾದ ತಪೋಧನರು, ಗಂಧರ್ವರು, ಅಪ್ಸರಸ್‌ಸ್ತ್ರೀಯರು, ಯಕ್ಷರು, ಇತರ ಎಲ್ಲ ದೇವ-ಕುಲೋತ್ಪನ್ನರು ಆಕಾಶ, ಭೂಮಿ ಮತ್ತು ಅಂತರಿಕ್ಷಗಳಲ್ಲಿ ನಿಬಿಡವಾಗಿ ವಾಸಿಸುವವರೆಲ್ಲರೂ ಆ ನಗರದಲ್ಲಿ ವಿಶಾಲ ಪ್ರದೇಶದಲ್ಲಿ ವಾಸಿಸಿದರು. ಅತಿಶಯವಾದ ವಾತ್ಸಲ್ಯವುಳ್ಳ ಈ ದೇವಿಯು ಪರಕೀಯಳಲ್ಲವೆನ್ನುವ ರೀತಿಯಿಂದ ಹೆಚ್ಚಿನ ಅನುರಾಗದಿಂದ ನಿರಂತರವಾಗಿ ಸಮಸ್ತಜನರನ್ನು ಸಂತೋಷಪಡಿಸಿದಳು. ವಿದ್ವಜ್ಜನರ ಸಕಲಕಾಮನೆಗಳನ್ನು ಭೂಲೋಕದಲ್ಲಿ ರಾಜನು ಪೂರೈಸುವನು. ರಾಜ್ಞಿ (ಕಾಮಾಕ್ಷೀ)ಯು ಸಮಸ್ತಲೋಕ ನಿವಾಸಿಗಳ ಇಷ್ಟಾರ್ಥಗಳನ್ನು ಪೂರೈಸಿದಳು.

ತ್ರಿಲೋಕಗಳಲ್ಲಿ ಏಕಮಾತ್ರನಾದ ರಾಜ ಕಾಮೇಶ್ವರ (ಕಾಮಶಂಕರ) ಅಂಬಿಕಾ (ಲಲಿತಾ) ಸಹಿತನಾಗಿದ್ದ ವೇಳೆಯಲ್ಲಿ ಹತ್ತು ಸಾವಿರ ವರ್ಷಗಳು ಒಂದು ಕ್ಷಣವೋ ಎಂಬಂತೆ ಕಳೆದು ಹೋದವು. ಹೀಗಿರಲು ಒಮ್ಮೆ ಭಗವಾನ್ ನಾರದಮಹರ್ಷಿಯು ಬಂದು ಪರಾಶಕ್ತಿಯನ್ನು ನಮಸ್ಕರಿಸಿ ವಿನಯದಿಂದ ಕೂಡಿದವನಾಗಿ ಇಂತೆಂದನು. ಎಲೈ ಪರಮೇಶ್ವರಿ, ನೀನು ಪರಬ್ರಹ್ಮಸ್ವರೂಪಿಣಿ, ಪರಮಧಾಮ(ಮೋಕ್ಷ)ಸ್ವರೂಪಿಣಿ, ಪರಮಪವಿತ್ರೆ, ಸದ್ಭಾವ, ಅಸದ್ಭಾವ, ಸಂಕಲ್ಪ, ಮತ್ತು ವಿಕಲ್ಪಗಳ ಸಂಕಲನಸ್ವರೂಪಿಣಿ. ಮಂಗಳಸ್ವರೂಪಿಣಿಯೆ, ಜಗತ್ತಿನ ಉನ್ನತಿಗಾಗಿ ದೃಶ್ಯಳಾಗಿರುವೆ. ಅಸಜ್ಜನ(ದುಷ್ಟ)ರ ವಿನಾಶಕ್ಕಾಗಿಯೂ ಸಜ್ಜನರ ಕಲ್ಯಾಣಕ್ಕಾಗಿಯೂ, ಸಾಧುಗಳ ರಕ್ಷಣೆಗಾಗಿಯೂ ನೀನು ಸ್ಥಿತಳಾಗಿರುವೆ. ದೇವಿಯೆ ಈ ಭಂಡಾಸುರನು ಮೂಜಗಗಳನ್ನು ಬಾಧಿಸುತ್ತಿರುವನು. ನಿನ್ನೊಬ್ಬಳಿಂದಲೇ ಅವನು ಜಯಿಸಲ್ಪಡಬೇಕು. ಇತರ ದೇವರುಗಳಿಂದ ಅವನು ಅಜೇಯ. ದೇವರುಗಳು ನಿನ್ನ ಸೇವಾಪರರಾಗಿ ಚಿರಕಾಲದಿಂದ ಇಲ್ಲಿ ನೆಲೆಸಿರುವರು. ಶೂನ್ಯವಾದ, ಅಮಂಗಳವಾದ
31/b ತಮ್ಮ ತಮ್ಮ ನಗರಗಳಿಗೆ ಇವರುಗಳು ನಿನ್ನ ಆಜ್ಞೆಯನ್ನು ಪಡೆದು ಈಗ ಹೋಗುವಂತಾಗಲಿ. ಇನ್ನು ಮುಂದೆ ಅವರುಗಳು ಸಮೃದ್ಧಪ್ರಯೋಜನಗಳಿಂದ ತುಂಬಿರಲಿ.

ನಾರದಮಹರ್ಷಿಯಿಂದ ಈ ಪ್ರಕಾರವಾಗಿ ಪ್ರಾರ್ಥನೆ ಮಾಡಲ್ಪಟ್ಟ ಅಖಿಲೇಶ್ವರಿಯಾದ ದೇವಿಯು ದೇವರುಗಳನ್ನು ತಮ್ಮ ತಮ್ಮ ನಿವಾಸಗಳಲ್ಲಿ ವಾಸಿಸಲು ಕಳುಹಿಸಿಕೊಟ್ಟಳು. ಅಂಬಿಕಾದೇವಿಯು, ಬ್ರಹ್ಮಾ, ವಿಷ್ಣು ಮಹೇಶ್ವರ ಹಾಗೂ ಇಂದ್ರನೇ ಮೊದಲಾದ ದಿಕ್ಪಾಲಕರನ್ನು ಉಚಿತವಾಗಿ ಪೂಜಿಸಿ ಕಳುಹಿಸಿದಳು. ಕಳುಹಿಸಲ್ಪಟ್ಟ ಆ ದೇವರುಗಳು ಅಂಬಿಕಾದೇವಿಯನ್ನು ಬಿಟ್ಟಿರಲು ಅಶಕ್ತರಾದರು. ಆದರೂ ಆದಿಪಿತೃಗಳ ಸೇವೆಯನ್ನು ತಮ್ಮ ತಮ್ಮ ಅಂಶಗಳಿಂದ ಕೈಗೊಂಡರು.

ಲಲಿತಾಂಬಿಕೆಯ ಈ ಕಥಾನಕವು ಆಯುಷ್ಕಾರಕವೂ ಸಮಸ್ತಮಂಗಳಕಾರಕವೂ ಆಗಿದೆ. ಮಹಾದೇವಿಯ ಆವಿರ್ಭಾವ ಮತ್ತು ರಾಜ್ಯಾಭಿಷೇಕದ ಕಥಾನಕವನ್ನು ಜ್ಞಾನಿಯು ಪ್ರಾತಃಕಾಲದಲ್ಲಿ ಎದ್ದು ಭಕ್ತಿ ಮತ್ತು ಶ್ರದ್ಧಾಪೂರ್ಣವಾಗಿ ಜಪಿಸಬೇಕು. ಆತನು ಐಶ್ವರ್ಯಸಮೃದ್ಧನೂ ಅಮೃತದಂತಹ(ಮಧುರ) ವಾಗ್ಮಿಯೂ ಆಗುವನು. ಅಂತಹ ಧೀಮಂತನಿಗೆ ಇಹಪರಗಳೆರಡರಲ್ಲೂ ಅಮಂಗಳವಾದುದು ಯಾವುದೂ ಇಲ್ಲ. ಆತನು ಶುದ್ಧವಾದ ಕೀರ್ತಿಯನ್ನು ಪಡೆಯುತ್ತಾನೆ ಹಾಗೂ ಮಾನ ಮತ್ತು ಉತ್ತಮ ಸ್ಥಾನವನ್ನೂ ಪಡೆಯುವನು. ಅವನ ಸಂಪತ್ತು ಸ್ಥಿರವಾಗುವುದು ಹಾಗೂ ಅನುಕ್ಷಣವೂ ಶ್ರೇಯಸ್ಸು ಲಭಿಸುವುದು. ಅವನಿಗೆ ಎಂದೂ ಭಯವಾಗದು. ಆತನು ತೇಜಸ್ವಿಯೂ ಪರಾಕ್ರಮಿಯೂ ಆಗುವನು. ಆತನು ತಾಪತ್ರಯ (ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕ)ಗಳಿಂದ ಮುಕ್ತನಾಗುವನು. ಪುರುಷಾರ್ಥ (ಧರ್ಮ, ಅರ್ಥ, ಕಾಮ, ಮೋಕ್ಷ)ಗಳಿಂದ ಕೂಡುವನು. ಸಿಂಹಾಸನೇಶ್ವರಿಯನ್ನು ಮೂರುಸಂಧ್ಯೆ(ಪ್ರಾತಃ, ಮಧ್ಯಾಹ್ನ, ಸಾಯಂ)ಗಳಲ್ಲೂ ಅನುದಿನ ಜಪಿಸುವವನು ಶ್ರೇಷ್ಠನಾದ ಜಾಪಕ(ಜಪವನ್ನು ಮಾಡುವವನು)ನಾಗಿದ್ದು ಆರು ತಿಂಗಳೊಳಗಾಗಿ ಮಹೈಶ್ವರ್ಯವನ್ನು ಪಡೆಯುತ್ತಾನೆ. 568-659

ಈ ರೀತಿಯಾಗಿ ಶ್ರೀ ಬ್ರಹ್ಮಾಂಡಪುರಾಣದ ಉತ್ತರಖಂಡದಲ್ಲಿ ಕಾಮೇಶ್ವರಿಯ ಆವಿರ್ಭಾವ, ಕಾಮೇಶ್ವರೀಕಾಮೇಶ್ವರವಿವಾಹ, ಹಾಗೂ ಕಾಮೇಶ್ವರೀಪಟ್ಟಾಭಿಷೇಕೋತ್ಸವವೆಂಬ ಲಲಿತೋಪಾಖ್ಯಾನದ ಹದಿನಾಲ್ಕನೆ ಅಧ್ಯಾಯ.

ಮಹಿಷಾಸುರಮರ್ದಿನೀಸ್ತೋತ್ರ

ಹೇ, ಪರ್ವತಪುತ್ರಿ, ಭೂಲೋಕದ ಆನಂದದಾಯಿನಿ, ವಿಶ್ವ(ಪ್ರಪಂಚ ಅಥವಾ ಸಮಸ್ತ) ವಿನೋದದಾಯಿನಿ, ನಂದಿಸ್ತೋತ್ರ ಪಾತ್ರಳೆ, ಪರ್ವತ ಶ್ರೇಷ್ಠವಾದ ವಿಂಧ್ಯ ಶಿಖರಾಧಿವಾಸಿನಿ, ವಿಷ್ಣು (ವ್ಯಾಪಕನಾದವನು, ಶಿವನ ಅರ್ಧಾಂಗ ವ್ಯಾಪ್ತಿಯುಳ್ಳ ವಿಷ್ಣುವಿಗೆ ಮಾನಸಿಕ ಆನಂದವನ್ನು ನೀಡುವವಳು ಅಥವಾ ವಿಷ್ಣುವೆಂಬ ಅಗ್ನಿಯ ವಿಲಾಸವುಳ್ಳವಳು). ವಿಲಾಸಪಾತ್ರಳೆ, ಇಂದ್ರಸ್ತುತೆ, ಐಶ್ವರ್ಯಾನ್ವಿತಳೆ, ಹೇ ಪರಮೇಶ್ವರನ ಧರ್ಮಪತ್ನಿ, ವಿಶ್ವದ ಅಸಂಖ್ಯಕುಟುಂಬ ಸಮೂಹದಿಂದ ಕೂಡಿದವಳೆ, ಐಶ್ವರ್ಯಸಂಪಾದಕಳೆ, ಪರ್ವತಪುತ್ರಿ, ಸುಂದರ ಜಟಾಸಮೂಹಾನ್ವಿತೆ, ಮಹಿಷಾಸುರ ಮರ್ದಿನಿ, ನೀನು ಜಯವನ್ನು ಹೊಂದು ಉತ್ಕರ್ಷವನ್ನು ಹೊಂದು. ||೧||

ಹೇ ಚಂದ್ರ ಕಲಾಭೂಷಿತೆ, ಗಜಾಸುರನ ಮೊಗವನ್ನು ತುಂಡು ಮಾಡಿ ಅದರಿಂದ ಸೊಂಡಿಲನ್ನು ಖಂಡಿಸಿ ಬೇರ್ಪಡಿಸಿದ ಅಂಬಿಕೆ, ಶತ್ರುಗಜಗಳ ಗಂಡಸ್ಥಳಗಳನ್ನು ಭೇದಿಸುವಂಥ ಮಹಾಪರಾಕ್ರಮವುಳ್ಳ ಚಂಡಿ, ಮದಾಧಿಪಳೆ, ತನ್ನ ಭುಜದಂಡಗಳಿಂದ ಚಂಡ ಮತ್ತು ಮುಂಡ ಎಂಬ ರಾಕ್ಷಸರನ್ನು, ಅವರ ಭಟರನ್ನು ನಾಶಮಾಡಿದ ಅಧಿಪತಿ ಸ್ವರೂಪಳೆ, ನೀನು ವಿಜಯವನ್ನು ಪಡೆ. ||೨||

ಹೇ ದೇವಿ, ತನ್ನ ಹುಂಕಾರಮಾತ್ರದಿಂದ ಹೊಗೆಯ ಬಣ್ಣದ ಕಣ್ಣುಗಳುಳ್ಳ ನೂರಾರು ಧೂಮ್ರ ರಾಕ್ಷಸರನ್ನು ಯುದ್ಧದಲ್ಲಿ ಹಿಂದೇಟು ಹಾಕುವಂತೆ ಮಾಡಿದವಳೆ, ಯುದ್ಧದಲ್ಲಿ ರಕ್ತಬೀಜಾಸುರನನ್ನು ಒಣಗಿಹೋಗುವಂತೆ ಮಾಡಿದವಳೆ, ಪ್ರಕಾಶಮಾನವಾದ ವಿಶ್ವದ ರಕ್ತಬೀಜದ ಲತೆಯಂತಿರುವವಳೆ, ಶಿವ, ಶಿವ, ಶುಂಭ ನಿಶುಂಭರೊಂದಿಗೆ ನಡೆದ ಮಹಾಯುದ್ಧದಲ್ಲಿ ಭೂತಗಳನ್ನು ಪಿಶಾಚಿಗಳನ್ನು ಸಂತೋಷಪಡಿಸಿದವಳೆ, ನೀನು ಜಯವನ್ನು ಹೊಂದು. ||೩||

ಎಲೆ, ಜಗಜ್ಜನನಿ, ಬೈನಿಮರದ ಕಾಡುಗಳಲ್ಲಿ ಪ್ರೀತಿಯಿಂದ ವಾಸಿಸುವವಳೆ, ಕಾಂತಿಯುಕ್ತಳೆ, ಹಾಸದಲ್ಲಿ ನಿರತಳಾದವಳೆ, ಪರ್ವತ ಶ್ರೇಷ್ಠಗಳಲ್ಲಿ ಎತ್ತರವಾದ ಹಿಮಾಲಯದಲ್ಲಿನ ಉನ್ನತವಾದ ತನ್ನ ವಾಸಸ್ಥಾನಮಧ್ಯವಾಸಿನಿಯೇ. ಕೈಟಭನನ್ನು ಕೊಂದ ವಿಷ್ಣುವಿನ ಎದೆಯಲ್ಲಿ ವಾಸಿಸುವ ಆಸಕ್ತಿಯುಳ್ಳವಳೆ, ಜಯಿಸು! ಜಯವನ್ನು ಹೊಂದು. ||೪||

ಹೇ ದೇವಿಯೆ, ಪ್ರಶಂಸಾರ್ಹವಾದ ನಿನ್ನ ತೇಜಸ್ಸನ್ನು ಪಡೆಯಲು ಹಾತೊರೆಯುವ ಮನಸ್ಸುಳ್ಳ ಸುಂದರಾಂಗ ಮನ್ಮಥರಾಜನಿಂದ ಸ್ತೋತ್ರಮಾಡಲ್ಪಟ್ಟವಳೆ, ಎಡೆಬಿಡದಂತೆ ಕಪೋಲಗಳಿಂದ ಸುರಿಯುವ ಮದದಿಂದ ಶ್ಯಾಮಲವಾದ ಮದಿಸಿದ ಗಜರಾಜನ ಗಮನವುಳ್ಳವಳೆ, ಮೂರುಲೋಕಗಳನ್ನು ಭೂಷಿಸುವ ಚಂದ್ರಕಲಾರೂಪವನ್ನು ಕೇಶಪಾಶದಲ್ಲಿರಿಸಿ ಕೊಂಡವಳೆ, ಸಮುದ್ರರಾಜನಿಂದ ಸ್ತುತಿಗೊಂಡವಳೆ, ಜಯವನ್ನು ಹೊಂದು. ||೫||

32a ಹೇ ದೇವಿಯೆ, ಯುದ್ಧದುರ್ಮದ(ಮಹಾ ಅಹಂಕಾರಯುಕ್ತ)ನಾದ ಶತ್ರುವಿನ ಮದವನ್ನು ನಾಶಪಡಿಸುವ ಮಹಾದೇವತಾಮಯಶಕ್ತಿಸಂಪನ್ನಳೆ, ಚತುರವಾದ ವಿಚಾರಗಳಲ್ಲಿ ಬುದ್ಧಿವಂತರಾದ ಪ್ರಮಥರನ್ನು ಮಹಾಸಂಗ್ರಾಮದಲ್ಲಿ ದೂತರನ್ನಾಗಿ ನಿರ್ಮಿಸಿದವಳೆ, ಪಾಪಿ, ದುರಂತ, ದುರ್ಭಾವನೆ, ದುರ್ಮದಗಳುಳ್ಳ ದಾನವ ದೂತರಿಗೆ ದುರಂತವನ್ನು ತಂದವಳೆ ಜಯವನ್ನು ಹೊಂದು. ||೬||

ಹೇ ದೇವಿಯೆ, ರಕ್ಷಿಸೆಂದು ಬಂದಂಥ ವೈರಿಸ್ತ್ರೀಯರಿಗೆ ವೀರೋಚಿತವಾದ ವರ ಮತ್ತು ಅಭಯ ಹಸ್ತವನ್ನು ನೀಡಿದವಳೆ ತ್ರಿಭುವನಗಳ(ಜನರ)ತಲೆಯ ಶೂಲೆಯಂತಿರುವ ವಿರೋಧಿಗಳನ್ನು ನಿಯಂತ್ರಿಸುವ ಕೃಪಾಶೀಲವಾದ ಶೂಲವನ್ನು ಧರಿಸಿದವಳೆ, ದೇವತೆಗಳ "ಧುಮಿ ಧುಮಿ ಎನ್ನುವ ದುಂಧುಭಿ ಧ್ವನಿಯಿಂದ ಪುನಃ ಪುನಃ ದಿಕ್ಸಮೂಹವನ್ನು ಪ್ರತಿಧ್ವನಿಸುವಂತೆ ಮಾಡುವವಳೆ, ಜಯವನ್ನು ಹೊಂದು. ||೭||

ದೇವತೆಗಳಿಗೆ ವರವೃಷ್ಟಿಯನ್ನು ನೀಡುವವಳೆ, ಅಸಾಧ್ಯರನ್ನು ಎದುರಿಸಿ ಸದೆ ಬಡಿಯುವವಳೆ, ದುರ್ಮುಖನನ್ನು ನಾಶ ಮಾಡಿದವಳೆ, ಆನಂದನಿರತಳೆ, ಮೂಲೋಕಗಳನ್ನು ಪೋಷಿಸುವವಳೆ, ಶಂಕರನಿಗೆ ಆನಂದದಾಯಿನಿಯೆ, ಪಾಪನಾಶಕಳೆ, ಆನಂದನಿರತಳೆ, ದಾನವರಲ್ಲಿ ರೋಷವನ್ನು ಪಡೆದವಳೆ, ಧರ್ಮದಾತೃಗಳ ಪೋಷಕಳೆ, ದುಷ್ಟವಾದ ಮದವನ್ನು ಶೋಷಣಮಾಡುವವಳೆ, ಆನಂದನಿರತಳೆ, ಜಯವನ್ನು ಹೊಂದು. ||೮||

ಲಕ್ಷೋಪಲಕ್ಷ ಸಂಖ್ಯೆಯ ದೇವಾಂಗನೆಯರ "ಥೈಯಿತ" "ಥೈಯಿತ" "ತಾಧಿಮಿತಾಮ್" ಎಂಬ ಧ್ವನಿಗಳನ್ನೊಳಗೊಂಡ ನೃತ್ಯದಲ್ಲಿ ತಲ್ಲೀನಳಾದವಳೆ, "ಕುಕುಧುಕ್" "ಕುತಧುಕ್" "ಕುತಧೋಂಗತ ಹಾದ್ದಿ" ಎಂಬ ಧ್ವನಿ ಕೌತುಕದಿಂದ ಕೂಡಿದ ಗಾನದಲ್ಲಿ ನಿರತಳೆ, "ದುದುಕುಟ" "ದುದುಕುಟ" ಧಿಮಿತದ್ದಿಮಿತ" ಎಂದು ನುಡಿಸಲ್ಪಟ್ಟ ಮೃದಂಗ ಧ್ವನಿಯಲ್ಲಿ ಮಗ್ನಳಾದವಳೆ, ಜಯವನ್ನು ಹೊಂದು. ||೯||

ಪ್ರಸಿದ್ಧವಾದ ಮಹಾಕದನದಲ್ಲಿ ಬಳ್ಳಿಯಂತೆ ಸುರುಳಿ ಸುತ್ತಿದ, ತಲ್ಲಿಕ (ಬೀಗದ ಕೈಗಳಂತಿರುವ) ಗಳಿಂದ ಕಂಪಿಸುವ ಕೋಲುಗಳಿಂದ ಕೂಡಿದ ಝಲ್ಲಕಿ ಎಂಬ ವಾದ್ಯ ವಿಶೇಷವುಳ್ಳವಳೆ, ವಲ್ಲಿಕ, ಮಲ್ಲಿಕ, ಭಲ್ಲಿಕ, ಝಿಲ್ಲಿಕ, ಝಿಲ್ಲಿಕವಾದ್ಯ ಗಳಿಂದ ಕೂಡಿರುವವಳೆ, ಶಬ್ದಪಾಕದಿಂದ(ವೇದಾಂತ) ಅರಳಿ ಕಾಂತಿಯನ್ನೊಳಗೊಂಡ ಚಿಗುರೆಲೆಯಂತಿರುವ ಚಂದವಾದ ತುಟಿಗಳಿಂದ ಕಂಗೊಳಿಸುವವಳೆ, ನೀನು ಜಯ ಹೊಂದು. ||೧೦||

ಸೊಂಟದ ಪಕ್ಕಗಳನ್ನು ಬಳಸಿಕೊಂಡಿರುವ ಹಳದಿಬಣ್ಣದ ರೇಶ್ಮೆ ಪಟ್ಟೆಯು ವಿಚಿತ್ರವಾದ ಕಿರಣಗಳಿಂದ ಸೂರ್ಯನ ಕಾಂತಿಯನ್ನು ತಿರಸ್ಕರಿಸಿದವಳೆ, ಮೇರುಪರ್ವತವನ್ನು ಜಯಿಸುವ ಕಾಂತಿಯುಳ್ಳ ಕಿರೀಟಮಣಿಯ ಹೊಳಪಿನ ಔನ್ನತ್ಯದಿಂದ ಬಾಗಿದ ಸೂರ್ಯಕಾಂತಿಯುಳ್ಳವಳೆ, ನಮಸ್ಕರಿಸುವ ದೇವರುಗಳು ಸಮರ್ಪಿಸುವ ಕಿರೀಟಸ್ಥಾನಗಳ ಪಂಕ್ತಿಗಳಿಂದ ಹೊರಲಾರದಷ್ಟು ಇರುವ ಮಹಾಕುಂಜ(ಹೂದೋಟ)ಗಳ ಕಾಂತಿಯನ್ನು ತಳೆದವಳೆ, ನೀನು ಜಯವನ್ನು ಹೊಂದು.||೧೧||

ಕಮಲದಳದಂತೆ ನಿರ್ಮಲವಾದ ಕಾಂತಿಕಲೆಯಿಂದ ಕೂಡಿದ ಅನುಪಮವಾದ ಪಾದತಳವುಳ್ಳವಳೆ, ಸಮಸ್ತವಿಲಾಸ ಕಲಾಮಂದಿರದ ಕ್ರಮಬದ್ಧವಾದ ಶೃಂಗಾರಚರ್ಯೆಯ ಫಲಾಫಲಗಳ ಲೀಲಾಸಮೂಹದಿಂದ ಕೂಡಿದವಳೆ, ಭೃಂಗ ಸಮೂಹಗಳ ಜಂಗುಳಿಯಂತಿರುವ ಕೇಶಗಳಿಂದ ಮೃದುವಾಗಿ ಕಾಣುವ ಕಿರೀಟದ ಬಳಿಸೇರಿ ಝೇಂಕಾರ ಮಾಡುತ್ತಿರುವ ತುಂಬಿಗಳ ಸಮೂಹವನ್ನುಳ್ಳವಳೆ. ಜಯವನ್ನು ಹೊಂದು. ||೧೨||

ಜಯಜಯ ಶಬ್ಧಗಳಿಂದ, ವಿಶಿಷ್ಟಶಬ್ದಶ್ರುತಿಪಾಕವನ್ನು ಆಶ್ರಯಿಸಿ ಪ್ರಖ್ಯಾತಿಗೊಂಡ ವಿಶ್ವ(ಸಮಸ್ತ)ದಿಂದ ಸ್ತುತಿಗೊಂಡವಳೆ; ಝಣ ಝಣವೆಂಬ ಝಂಕಾರ ಮಾಡುವ ಗೆಜ್ಜೆಗಳ ಮೋಹಕವಾದ ಧ್ವನಿಯಿಂದ ಮೋಹವಶನಾದ ಭೂತಪತಿಯನ್ನುಳ್ಳವಳೆ, ನಟನೆ ಮಾಡಿದ ನಟರ ಆರ್ಭಟಗಳಿಂದ ಕೂಡಿದ, ನಟ ನಾಟಕ ನಾಟ್ಯ ವಿನೋದಗಳನ್ನು ಮಾಡುವ ನಂದಿಯಿಂದ ಸ್ತೋತ್ರಗೊಂಡವಳೆ, ಜಯವನ್ನು ಹೊಂದು. ||೧೩||

ತದೇಕಚಿತ್ತರಾದ ದೇವ ಸಮೂಹದ ಹೃದ್ಯವಾದ ಮನೋಮಯವಾದ ಮತ್ತು ಸರ್ವಾಂಗಸುಂದರವಾದ ಕಾಂತಿಯುಕ್ತಳೆ, ವಿನಯ(ಮದ)ದಿಂದ ಅತ್ಯಂತವಾಗಿ ಶೋಭಿಸುವ ವೇಗವನ್ನು ಹೊಂದಿ ಸೂಕ್ಷ್ಮವಾದ ಮದದ ಭ್ರಮೆಯನ್ನುಂಟು ಮಾಡುವ ಸುಂದರವಾದ ಭ್ರಮರಗಳಿಂದ ನಿಯಮಿತಳಾದವಳೆ(ಕೂಡಿದವಳೆ,), ಪರಾಗದಿಂದ ಕೂಡಿ ಪರಿಶುದ್ಧವಾದ ನೀರಿನಲ್ಲಿ ಹುಟ್ಟಿದ ಕಮಲದ ಮೇಲಿನ ನಿರ್ಮಲವಾದ ಜಲಬಿಂದುವಿನಂತೆ (ಶುಭ್ರ) ಮೊಗವುಳ್ಳವಳೆ, ಜಯವನ್ನು ಹೊಂದು ||೧೪||

ಸೂರ್ಯನ ಸಹಸ್ರಕರ(ಕಿರಣ)ಗಳನ್ನು ಜಯಿಸಿದ (ಅಂಥಕಾಂತಿಯುಳ್ಳ) ಅದ್ವಿತೀಯವಾದ ಮಂದಹಾಸದಿಂದ ಕೂಡಿದ ಏಕಹಸ್ತ(ಗಣಪತಿ)ನನ್ನು ಪುತ್ರನಾಗಿರುವವಳೆ, ದೇವರುಗಳ ಕಷ್ಟಗಳನ್ನು ನೀಗಿಸಲು ಕೈಗೊಂಡ ಯುದ್ಧದಲ್ಲಿ ತಾರಕಾಸುರನೊಡನೆ ಯುದ್ಧಮಾಡಿದ ತಾರಕಸೂನು(ಶಿವಸುತ ಸ್ಕಂದ)ವನ್ನು ಪುತ್ರನನ್ನಾಗಿ ಪಡೆದವಳೆ, ಸುರತಸಮಾಧಿಗೆ ಸಮಾನವಾದ ಸಮಾಧಿನಿಷ್ಠತಪೋವಿಶೇಷಗಳಿಂದ ಉಂಟಾದ ಸನ್ಮತಿಯುಳ್ಳವಳೆ, ಜಯವನ್ನು ಹೊಂದು. ॥೧೫॥

ಹೇ ಕರುಣಾನಿಲಯೆ, ಸಮಗ್ರವಾಗಿ ಮಂಗಳಯುತವಾದ ನಿನ್ನ ಚರಣಕಮಲವನ್ನು ಅನುದಿನವೂ ನಾನು ಭಜಿಸುವೆ. ಕಲಾವಾಸದಿಂದ ಕೂಡಿದವಳೆ, ಕಲಾರ್ಧದಿಂದ ಕೂಡಿದ ಭವಸ್ವರೂಪಿಣಿಯೆ, ಪೂರ್ಣವಾಗಿ ಅನಿಕೇತನನಾದ ನಾನು ನಿನ್ನ ಪಾದಕಮಲವನ್ನು ಭಜಿಸುವೆನು. ಹೆಜ್ಜೆಹೆಜ್ಜೆಗೂ ನಿನ್ನ ಪದವನ್ನೇ ಧ್ಯಾನಿಸುವ ನನಗೆ ಬೇರೇನು ಬೇಕಾಗಿದೆ. ಹೇ ಮಹಿಷಾಸುರ ಮರ್ದಿನಿ! ಸುಂದರಜಟಾಧರೆ, ಗಿರಿಪುತ್ರಿ ನೀನು ವಿಜಯಿನಿಯಾಗು. 660-675

ಇತಿ ಶ್ರೀ ಮಹಿಷಾಸುರಮರ್ದಿನೀಸ್ತೋತ್ರ.

32b

ಶ್ರೀಚಕ್ರೋದ್ಧಾರಕ್ರಮ, ಲಲಿತಾರ್ಚನಮಂಜರಿಯಲ್ಲಿ

ಬಿಂದು, ತ್ರಿಕೋಣ, ವಸು (ಅಷ್ಟ) ಕೋಣ, ದಶದಲ, ಮನು (14), ನಾಗ (8) ಅಷ್ಟದಳ, ಹದಿನಾರು ದಳ, ಮೂರುವೃತ್ತ ಧರಣಿಸದನತ್ರಯ (3), ಇದು ಪರದೇವತಾ ಶ್ರೀಚಕ್ರ ಲಕ್ಷಣ. 676

b/1

ಇನ್ನೊಂದು ಪ್ರಕಾರದ ಶ್ರೀಚಕ್ರೋದ್ಧಾರಕ್ರಮ, ಸೌಂದರ್ಯಲಹರಿಯಲ್ಲಿ

ನಾಲ್ವರು ಶ್ರೀಕಂಠರಿಂದಲೂ ಐವರು ಶಿವಯುವತಿಯರಿಂದಲೂ ಸುವಿಭಕ್ತವಾದ ಶಂಭುವಿನ ಒಂಬತ್ತು ಮೂಲ ಪ್ರಕೃತಿಗಳಿಂದ ವಸುದಳ (8), ಕಲಾ (16) ಅಶ್ರ (14) ತ್ರಿವಲಯ (3) ತ್ರಿರೇಖಾ (3) ಗಳಿಂದ ನಿನ್ನ ಮನೆಯ ಕೋನಗಳು ನಾಲ್ವತ್ತ ನಾಲ್ಕು ಆಗಿ ಪರಿಣತವಾಗಿವೆ. ಈ ಪ್ರಕಾರವಾಗಿ ಶ್ರೀಚಕ್ರೋದ್ಧಾರ ಕ್ರಮ. ಸೌಂದರ್ಯಲಹರಿಯ ಲೊಲ್ಲಾಜೀಯ ವ್ಯಾಖ್ಯಾನದಲ್ಲಿ ವಿವರಣಸಮೇತವಾಗಿ ಹೇಳಲಾಗಿದೆ. ಅದನ್ನು ಪರಿಶೀಲಿಸುವುದರಿಂದ ಎಲ್ಲ ವಿವರಣಗಳೂ ತಿಳಿಯುತ್ತವೆ. 677

33a/1 ಈ ಚಕ್ರದ ಅಂಗ ದೇವ್ಯಂತರದ ಮುಂಭಾಗ (ಎತ್ತರ) ಸರ್ವಾನಂದಮಯಚಕ್ರವೆಂಬ ಒಂಬತ್ತನೆಯ ಆವರಣವಾದ, ಬಿಂದುಪೀಠ, ಪಂಚಾಶತ್ (50) ಪೀಠರೂಪಮಯವಾದ, ಶ್ರೀಪೀಠ, ಮಹಾಪೀಠ, ವಿದ್ಯಾಪೀಠವೆಂಬ ಹೆಸರಿನ ಈ ಬಿಂದು ಪೀಠದಲ್ಲಿ, ಅನೇಕ ಪ್ರಪಂಚಮೂಲ್ಯಮಯವಾದ ಅಗ್ನಿ, ನಿರ್ಋತಿ, ವಾಯು, ಈಶಾನ್ಯವೆಂಬ ನಾಲ್ಕು ವಿದಿಕ್ಕುಗಳಲ್ಲೂ ಬ್ರಹ್ಮಾ, ವಿಷ್ಣು, ರುದ್ರ, ಈಶ್ವರ ಎಂಬ ನಾಲ್ಕು ಪಾದಗಳುಳ್ಳ ಸದಾಶಿವಾತ್ಮಕವಾದ ಫಲಕ (ಹಲಗೆ)ವುಳ್ಳ ಮಂಚದಲ್ಲಿ ಹಂಸತೂಲಿಕಾಶಯನದಲ್ಲಿ ಕಾಮೇಶ್ವರನ ತೊಡೆಯಲ್ಲಿ ಶ್ರೀಜಗದೀಶ್ವರೀ ಸಚ್ಚಿದಾನಂದರೂಪಳಾದ ಶ್ರೀರಾಜರಾಜೇಶ್ವರೀ ದೇವಿಯು ಸರ್ವಾಭರಣಭೂಷಿತೆಯಾಗಿ ಶೋಭಿಸುತ್ತಿರುವಳು. ಈ ರೀತಿಯಿಂದ ವಿವಿಧವೃಕ್ಷ ಮಹೋದ್ಯಾನಗಳುಳ್ಳ ಕಾಲಾಯಸನಿರ್ಮಿತವಾದ ಮೊದಲನೆ ಪ್ರಾಕಾರವನ್ನು ಆರಂಭಿಸಿ ಇಪ್ಪತ್ತೈದು ಪ್ರಾಕಾರಗಳನ್ನು ಚಿಂತಾಮಣಿಗೃಹದ ಒಂಬತ್ತು ಚಕ್ರಗಳನ್ನು ಬರೆಯಿಸಿ ಯಾರು ಪಠಿಸುವರೊ, ಶ್ರವಣ ಮಾಡುವರೊ, ಬರೆಯುವರೊ, ಅಂಥವರು ನಾಲ್ಕು ವಿಧವಾದ ಪುರುಷಾರ್ಥಗಳನ್ನು ಪಡೆಯುವರು.

33b/1

ಯೋಗಿನೀಧ್ಯಾನ, ಪಾಂಚರಾತ್ರದ ಪಾದ್ಮಸಂಹಿತೆಯಲ್ಲಿ

ಅತ್ಯಂತ ಸೌಮ್ಯಳಾಗಿ ಕಮಲದಂತಹ ಕಣ್ಣುಗಳುಳ್ಳ, ಪಾಶ ಮತ್ತು ಪಾತ್ರಗಳನ್ನು ಧರಿಸಿದ ದ್ವಿಭುಜಗಳುಳ್ಳ ಶ್ಯಾಮಲಾ ಎಂಬ ದೇವಿ ಶಯ್ಯೆಯನ್ನು ಏರಿ ನಿದ್ರೆ ಮಾಡಲಿ. (ಹಸಿರು ಬಣ್ಣ) 678

33b/2

ಮನೋನ್ಮನೀಧ್ಯಾನ, ಕಾರಣಾಗಮದಲ್ಲಿ

ಒಂದು ಮುಖವಿದ್ದು ಮೂರು ಕಣ್ಣುಗಳಿರುವ, ಕಿರೀಟ ಮತ್ತು ಮಕುಟಗಳಿಂದ ಕೂಡಿದ ವರದ ಮತ್ತು ಅಭಯ ಹಸ್ತಗಳಿಂದ ಪೂರ್ಣಳಾಗಿದ್ದಾಳೆ. ನಾಲ್ಕು ಭುಜಗಳಿಂದ ಶೋಭಿಸುವ ಆಕೆಯು ಮೇಲ್ಭಾಗದ ಎರಡು ಹಸ್ತಕಮಲಗಳಲ್ಲಿ ಎರಡು ನೈದಿಲೆ/ಕಮಲಗಳನ್ನು ಧರಿಸಿರುವಳು. ರೇಶ್ಮೆ ವಸ್ತ್ರವನ್ನುಟ್ಟು ಸಕಲಆಭರಣಗಳಿಂದ ಶೋಭಿಸುವಳು. ಪದ್ಮಾಸನದಲ್ಲಿ ಕುಳಿತಿರುವ ಈ ಲಕ್ಷಣಗಳಿಂದ ಕೂಡಿದ ಮನೋನ್ಮನೀದೇವಿಯನ್ನು ಈ ಪ್ರಕಾರವಾಗಿ ಧ್ಯಾನಿಸಬೇಕು. (ಸುಪ್ರಭೇದಾಗಮದಲ್ಲಿ ಶುಭ್ರವರ್ಣ). 679-680

33b/3

ಶ್ಯಾಮಲಾದೇವಿಯ ಧ್ಯಾನ, ಶ್ಯಾಮಲಾಕಲ್ಪದಲ್ಲಿ

ಈಕೆಗೆ ಹದಿನಾರು ಹೆಸರುಗಳಿರುವುದನ್ನು ಲಲಿತೋಪಾಖ್ಯಾನದಲ್ಲಿ ಸೂಚಿಸಿದೆ. ಪ್ರಥಮಪುಷ್ಪಿಣಿ (ಪ್ರಥಮ ದೃಷ್ಟರಜಸ್ಕಾ)ಯಾಗಿ ರಕ್ತಬಿಂದುಗಳಿಂದ ಕೆಂಪಾಗಿರುವ ವಸ್ತ್ರವುಳ್ಳ, ಮದ್ಯತುಂಬಿದ ಸಣ್ಣಪಾತ್ರೆಯನ್ನು ಹಿಡಿದುಕೊಂಡಿರುವ, ಮದದಿಂದ ವಾಲುತ್ತಿರುವ ಕಣ್ಣಂಚುಗಳುಳ್ಳ, ಕೈಯಲ್ಲಿ ವೀಣೆಯನ್ನು ಧರಿಸಿ ಶೋಭಿಸುತ್ತಿರುವ, ಶುಭ್ರವಾದ ಶಂಖ ನಿರ್ಮಿತವಾದ ಕರ್ಣಾಭರಣವಿರುವ, ಗಡುಸಾದ ಬೃಹತ್ಕುಚಗಳಿಂದ ಆಲಸ್ಯಪೂರ್ಣಳಾದ, ಬಿಚ್ಚಿದ ಕೂದಲುಗಳುಳ್ಳ ಶ್ಯಾಮಲಾದೇವಿಯನ್ನು ಸ್ಮರಣೆ ಮಾಡಬೇಕು. (ಶ್ಯಾಮವರ್ಣ) 681

ಇವಳ ಹದಿನಾರು ಹೆಸರುಗಳು - ೧. ಸಂಗೀತಯೋಗಿನೀ, ೨. ಶ್ಯಾಮಾ, ೩. ಶ್ಯಾಮಲಾ, ೪. ಮಂತ್ರನಾಯಿಕಾ ೫. ಮಂತ್ರಿಣೀ ೬. ಸಚಿವೇಶೀ ೭. ಪ್ರಧಾನೇಶೀ ೮. ಶುಕಪ್ರಿಯಾ ೯. ವೀಣಾವತೀ ೧೦. ವೈಣಿಕೀ ೧೧. ಮುದ್ರಿಣೀ ೧೨. ಪ್ರಿಯಕಪ್ರಿಯಾ ೧೩. ನೀಪಪ್ರಿಯಾ ೧೪. ಕದಂಬೇಶೀ ೧೫. ಕದಂಬವನವಾಸಿನೀ ೧೬. ಸದಾಮದಾ.

34a/1

ರಾಜಮಾತಂಗೀಧ್ಯಾನ, ರಾಜಮಾತಂಗೀಕಲ್ಪದಲ್ಲಿ

ರತ್ನನಿರ್ಮಿತವಾದ ಆಸನದಲ್ಲಿ ಕುಳಿತಿರುವ, ಶ್ಯಾಮವರ್ಣದ ದೇಹವುಳ್ಳ, ಗಿಳಿಯ ಮಾತುಗಾರಿಕೆಯನ್ನು ಕೇಳುತ್ತಿರುವ, ಕಮಲದ ಮೇಲೆ ತನ್ನ ಒಂದು ಪಾದವನ್ನಿಟ್ಟಿರುವ, ಅಂದವಾಗಿ ಚಂದ್ರನನ್ನು ಶಿರಃ ಪ್ರದೇಶದಲ್ಲಿ ಅಲಂಕರಿಸಿಕೊಂಡಿರುವ, ವೀಣೆಯನ್ನು ನುಡಿಸುತ್ತಿರುವ, ತಿಲಕ (ಬೊಟ್ಟು)ದಿಂದ ಶೋಭಿಸುತ್ತಿರುವ ಹಣೆಯುಳ್ಳ, ಸೌಗಂಧಿಕ ಮಾಲೆಯ ಮೊಗ್ಗುಗಳಿಂದ ಅಲಂಕರಿಸಲ್ಪಟ್ಟ ಕೇಶಗಳುಳ್ಳ, ರಕ್ತವರ್ಣದ ವಸ್ತ್ರವನ್ನು ಧರಿಸಿದ, ಆ ಭೂಷಣಗಳಿಂದ ಅಲಂಕರಿಸಲ್ಪಟ್ಟ, ಮಾತಂಗಿಯನ್ನು ನಾನು ವಂದಿಸುವೆನು. (ಶ್ಯಾಮವರ್ಣ) 682-683

34a/2

ಬಾಲಾಧ್ಯಾನ, ತ್ರಿಪುರಸುಂದರೀಕಲ್ಪದಲ್ಲಿ

ಬಾಲಿಕಾದೇವಿಯು ಜಪಾ(ದಾಸವಾಳ)ಕುಸುಮದಂತೆ ಬಣ್ಣವುಳ್ಳವಳೂ, ಅರಳಿದ ಪದ್ಮದಲ್ಲಿ ಕುಳಿತಿರುವವಳೂ, ಅಕ್ಷಮಾಲೆ, ಪುಸ್ತಕ, ಅಭಯ, ವರದಮುದ್ರೆಯುಳ್ಳವಳೂ ಆಗಿದ್ದಾಳೆ. (ರಕ್ತವರ್ಣ) 684

34a/3 **ಭುವನೇಶ್ವರೀಧ್ಯಾನ, ಮಹಾಲಕ್ಷ್ಮೀರತ್ನಕೋಶದಲ್ಲಿ**

ಉದಯಸೂರ್ಯನಿಗೆ ಸಮಾನವಾದ ಶೋಭೆಯುಳ್ಳ, ಹೊಸದಾಗಿ ಅರಳಿದ ದಾಸವಾಳದ ವರ್ಣಕಾಂತಿಯುಳ್ಳ, ಅರ್ಧಚಂದ್ರನನ್ನು ಶಿರಸ್ಸಿನಲ್ಲಿ ಅಲಂಕರಿಸಿಕೊಂಡಿರುವ, ನಕ್ಷತ್ರಮಾಲೆಯನ್ನು ಧರಿಸಿದ, ಮೂರು ಕಣ್ಣುಗಳ್ಳುಳ್ಳ, ನಾನಾ ಮಣಿಗಳಿಂದ ಶೋಭಿಸುವ ಕರ್ಣಕುಂಡಗಳಿರುವ, ಪದ್ಮದ ಮೇಲೆ ಆಸೀನಳಾಗಿರುವ, ಹಾರ, ಕಂಠಾಭರಣ, ಒಡ್ಯಾಣ, ಮಣಿಸಮೂಹಗಳ ಕಂಕಣಗಳಿಂದ ಕೂಡಿರುವ, ಪ್ರಶಸ್ತವಾದ ವಸ್ತ್ರವನ್ನು ಧರಿಸಿರುವ, ಪಾಶ, ಅಂಕುಶಗಳನ್ನು ಅಭಯ, ವರದಮುದ್ರೆಗಳನ್ನು ಹಸ್ತಗಳಿಂದ ಧರಿಸಿದ ಆದಿಭುವನೇಶ್ವರಿಯನ್ನು ಧ್ಯಾನಿಸುವೆನು. (ರಕ್ತವರ್ಣ) 685

34a/4 **ಸೌಭಾಗ್ಯಭುವನೇಶ್ವರಿಯ ಧ್ಯಾನ, ಶಾರದಾತಿಲಕದಲ್ಲಿ**

ಕುಂಕುಮದಂತೆ ಕೆಂಪಾದ ಶರೀರವಿರುವ, ಮೂರುಕಣ್ಣುಗಳುಳ್ಳ, ಮಾಣಿಕ್ಯಕಿರೀಟದ ಮೇಲೆ ಹೊಳೆಯುವ ಚಂದ್ರನಿರುವ, ಮುಗುಳ್ನಗೆಯಿಂದ ಕೂಡಿದ ಮುಖವುಳ್ಳ, ಬೃಹತ್ತಾದ ಸ್ತನಗಳಿರುವ, ಮಣಿರತ್ನಗಳಿಂದ ಪೂರ್ಣವಾಗಿ ನಿರ್ಮಿಸಲ್ಪಟ್ಟ ಮದ್ಯಪಾತ್ರೆಯನ್ನೂ, ಕೆಂದಾವರೆಯನ್ನು ಎರಡು ಹಸ್ತಗಳಿಂದ ಧರಿಸಿಕೊಂಡಿರುವ ಸೌಮ್ಯ ಸ್ವರೂಪವುಳ್ಳ, ತನ್ನ ಎಡಗಾಲನ್ನು ರತ್ನನಿಧಿಗಳ ಮೇಲೆ ಇರಿಸಿಕೊಂಡಿರುವ ಪರಾಂಬಿಕೆಯನ್ನು ಧ್ಯಾನಮಾಡಬೇಕು. (ರಕ್ತವರ್ಣ) 686

34b/1 **ಮಾಯಾಭುವನೇಶ್ವರೀಧ್ಯಾನ, ಶಾರದಾತಿಲಕದಲ್ಲಿ**

ಶ್ಯಾಮವರ್ಣಶರೀರವುಳ್ಳ, ಮುಡಿಯಲ್ಲಿ ಚಂದ್ರನನ್ನು ಧರಿಸಿಕೊಂಡಿರುವ ತನ್ನ ಹಸ್ತಗಳಿಂದ ದಾನಮುದ್ರೆ, ರಕ್ತ ಕಮಲ, ರತ್ನಪೂರ್ಣವಾದ ಪಾತ್ರ, ಅಭಯಮುದ್ರೆ ಇವುಗಳನ್ನು ಧರಿಸಿಕೊಂಡಿರುವ, ನಿತ್ಯಸ್ವರೂಪಿಣಿಯಾದ, ಮುತ್ತಿನಹಾರಗಳಿಂದ ಕಾಂತಿಯನ್ನು ಹೊಂದಿದ, ಪಯೋಧರಗಳಿಂದ ಬಗ್ಗಿದವಳಾದ, ಮೂರುಕಣ್ಣುಗಳಿಂದ ರಾಜಿಸುತ್ತಿರುವ, ಕೆಂದಾವರೆಯ ಮೇಲೆ ಕುಳಿತಿರುವ, ದೇವಸಮೂಹದಿಂದ ಪೂಜೆಗೊಂಡ ಹರವಧುವಾದ ಮಾಯಾಭುವನೇಶ್ವರಿಯನ್ನು ನಾನು ನಮಸ್ಕರಿಸುವೆನು. (ನೀಲವರ್ಣ) 687

34b/2 **ನಾಲ್ಕಕ್ಷರಗಳಿಂದ ಪ್ರತಿಪಾದಿಸಲ್ಪಟ್ಟ ಸೂರ್ಯಾತ್ಮಕಭುವನೇಶ್ವರೀಧ್ಯಾನ, ಮಂತ್ರದೇವತಾಪ್ರಕಾಶಿಕೆಯಲ್ಲಿ**

ಕಿರೀಟದಲ್ಲಿ ಹೊಳೆಯುವ ರತ್ನ ಸಮೂಹಗಳಿರುವ, ದೀಪ್ತಿಯುಳ್ಳ ಅಮೃತಕಾಂತಿಯ (ಚಂದ್ರ) ರಂಜಿಸುವ ಸುಂದರ ರೇಖೆಯುಳ್ಳ, ಆಗತಾನೆ ಕಾದಚಿನ್ನದ, ಕಮಲದ, ದಾಸವಾಳದ ಹೊಳಪುಳ್ಳ ಪ್ರಭೆಗಳಿಂದ ವಿಶ್ವಾಕಾಶದಷ್ಟು ಅವಕಾಶ (ಸ್ಥಳ)ದಲ್ಲಿ ಉರಿಯುತ್ತಿದ್ದರೂ, ಶೀತಲವಾಗಿರುವ, ಪಾಶ, ಅಂಕುಶ, ವರ, ಅಭಯಗಳನ್ನು ಧರಿಸಿರುವ ಭಂಗಿಯಿಂದ ಕೂಡಿದ್ದ ತುಂಗಕುಚಗಳುಳ್ಳ ಜಗನ್ಮಾತೆಯ ಸೂರ್ಯಸಂಬಂಧದ ಶರೀರವು ನಮ್ಮನ್ನು ರಕ್ಷಿಸಲಿ. (ಸಿಂದೂರ ವರ್ಣ ಕೆಂಬಣ್ಣ) 688

34b/3

ಹದಿನೆಂಟು ಭುಜಗಳುಳ್ಳ ಭದ್ರಕಾಳಿಧ್ಯಾನ, ನೃಸಿಂಹಪ್ರಾಸಾದದಲ್ಲಿ

ಭದ್ರಕಾಳಿಯನ್ನು ಹದಿನೆಂಟು ಭುಜಗಳಿರುವಂತೆ ಮನೋಹಾರಿಣಿಯನ್ನಾಗಿ ರಚಿಸಬೇಕು. ನಾಲ್ಕು ಸಿಂಹಗಳಿರುವ ರಥದ ಮೇಲೆ ಆಕೆಯು ಆಲೀಢ (ಬಾಣವನ್ನು ಬಿಡುವ ಭಂಗಿ) ಸ್ಥಾನದಲ್ಲಿ ನಿಂತಿರಬೇಕು. ಅಕ್ಷರಮಾಲೆ, ತ್ರಿಶೂಲ, ಖಡ್ಗ, ಗುರಾಣಿ, ಬಾಣ, ಬಿಲ್ಲು, ಶಂಖ, ಪದ್ಮ, ಸ್ರುಕ್, ಸ್ರುವ, ದಿವ್ಯಕಮಂಡಲು, ದಂಡ, ಶಕ್ತಿ, ಕೃಷ್ಣಾಜಿನ, ಅಗ್ನಿ, ಅಭಯ, ವರದ, ರತ್ನಪಾತ್ರ, ಭದ್ರಕಾಳಿಯ ಹದಿನೆಂಟು ಹಸ್ತಗಳಲ್ಲಿ ಈ ಹದಿನೆಂಟು ವಸ್ತುಲಕ್ಷಣಗಳಿರಬೇಕು. (ಕೃಷ್ಣವರ್ಣ) 689-692

35a/1

ಅಷ್ಟಭುಜಕಾಳಿಧ್ಯಾನ, ಕಾರಣಾಗಮದಲ್ಲಿ

ಎಂಟು ಬಾಹುಗಳಿಂದ ಕೂಡಿದ ಮಹಾಶರೀರವುಳ್ಳ, ಕಪ್ಪು ಮೋಡದ ಕಾಂತಿಯುಳ್ಳ, ಶಂಖ, ಚಕ್ರ, ಗದಾ, ಕುಂಭ, ಮುಸಲ (ಒನಕೆ), ಅಂಕುಶ, ಪಾಶ, ಹಾಗೂ ವಜ್ರಾಯುಧವನ್ನು ಧರಿಸಿದ ಮಹಾಕಾಳಿಯು ನಮಗೆ ಆನಂದವನ್ನುಂಟು ಮಾಡಲಿ. (ಮೇಘಶ್ಯಾಮವರ್ಣ) 693

35a/2

ಷೋಡಶಭುಜದುರ್ಗಾಧ್ಯಾನ, ದುರ್ಗಾಕಲ್ಪದಲ್ಲಿ

ಹದಿನಾರು ಶೂಲಗಳನ್ನು ಹಸ್ತಗಳಲ್ಲಿ ಧರಿಸಿರುವ, ಮೂರು ಕಣ್ಣುಗಳುಳ್ಳ, ಸರ್ಪಗಳಿಂದ ಸುತ್ತು ಹಾಕಲ್ಪಟ್ಟ ಶರೀರವಿರುವ, ಸರ್ಪಕಂಕಣಗಳು ಸುಂದರಭೂಷಣವಾಗಿರುವ, ಶ್ಯಾಮವರ್ಣದ ಕಂಠಪ್ರದೇಶವುಳ್ಳ, ದಿಗಂಬರೆ (ನಗ್ನೆ)ಯನ್ನು ಭಜಿಸುವೆನು. (ಶ್ಯಾಮವರ್ಣ) 694

35a/3

ವಿಂಧ್ಯವಾಸಿನೀದುರ್ಗಾಧ್ಯಾನ

ಚಿನ್ನದ ಕಮಲದ ಮಧ್ಯದಲ್ಲಿ ಆಸೀನಳಾಗಿರುವ, ಮೂರುಕಣ್ಣುಗಳುಳ್ಳ, ಮಿಂಚಿನಂತೆ ಕಾಂತಿಯುಳ್ಳ, ಶಂಖ, ಚಕ್ರ ಹಾಗೂ ವರ, ಮತ್ತು ಅಭಯ ಮುದ್ರಾಧಾರಿಣಿಯಾದ, ಚಂದ್ರಕಲೆಯನ್ನು ಹೊತ್ತಿರುವ, ಕಂಠಹಾರ, ಭುಜಾಭರಣ, ಹಾರ, ಕುಂಡಲಗಳನ್ನು ಧರಿಸಿರುವ, ಇಂದ್ರಾದಿಗಳಿಂದ ಸ್ತುತಿಸಲ್ಪಟ್ಟ, ಪಕ್ಕದಲ್ಲಿ ಸಿಂಹವಿರುವ ಚಂದಿರವದನೆಯಾದ ವಿಂಧ್ಯ ನಿವಾಸಿನಿಯನ್ನು ಧ್ಯಾನ ಮಾಡಬೇಕು. (ಕನಕವರ್ಣ) 695

35a/4

ರುದ್ರಾಂಶದುರ್ಗಾಧ್ಯಾನ, ಕಾರಣಾಗಮದಲ್ಲಿ

ರಕ್ತವರ್ಣದ ವಸ್ತ್ರವನ್ನುಟ್ಟ, ಶ್ಯಾಮಲಕಾಂತಿಯ, ಎರಡು ಕಣ್ಣುಗಳುಳ್ಳ, ಕಿರೀಟ, ರತ್ನ ನಿರ್ಮಿತವಾದ ಭುಜಾಭರಣ ಮತ್ತು ಚಿನ್ನದ ಅಲಂಕಾರಗಳನ್ನು ಹೊಂದಿರುವ, ಶೂಲ, ಖಡ್ಗ, ಶಂಖ ಮತ್ತು ಚಕ್ರಗಳನ್ನು ಧರಿಸಿದ, ಸಿಂಹವಾಹಿನಿಯಾಗಿ ಸೂರ್ಯಚಂದ್ರರನ್ನು ಅಲಂಕಾರದಂತೆ ಧರಿಸಿಕೊಂಡ, ಇಷ್ಟಾರ್ಥವನ್ನು ನೀಡುವ, ದೇವತೆಗಳು ಚರಣಕಮಲಗಳನ್ನು ನಮಿಸುತ್ತಿರುವ ರುದ್ರಾಂಶದುರ್ಗೆಯನ್ನು ಅಂತರಂಗದಿಂದ ನೆನೆಯುತ್ತೇನೆ. (ಶ್ಯಾಮವರ್ಣ) 696

35b/1

ಜಯದುರ್ಗಾಧ್ಯಾನ, ಶಾರದಾತಿಲಕದಲ್ಲಿ

ಶ್ಯಾಮಲವರ್ಣವುಳ್ಳ, ವಿಶಾಲವಾದ ಕಟಾಕ್ಷಗಳುಳ್ಳ (ಕಡೆಗಣ್ಣನೋಟ) ಶತ್ರುಸಂತಾನಕ್ಕೆ ಭೀತಿಯನ್ನು ನೀಡುವ, ಕಿರೀಟದಲ್ಲಿ ಚಂದ್ರಕಲೆಯನ್ನು ಧರಿಸಿರುವ, ಶಂಖ, ಚಕ್ರ, ಖಡ್ಗ, ತ್ರಿಶೂಲಗಳನ್ನು ಹಸ್ತಗಳಿಂದ ಧರಿಸಿರುವ, ಮೂರುಕಣ್ಣುಗಳುಳ್ಳ, ಸಿಂಹದ ಭುಜವನ್ನು ಏರಿ ಕುಳಿತಿರುವ, ತನ್ನ ತೇಜಸ್ಸಿನಿಂದ ಸಮಗ್ರ ತ್ರಿಭುವನಗಳನ್ನು ತುಂಬುತ್ತಿರುವ, ಸಿದ್ಧಿಯನ್ನು ಬಯಸುವ ದೇವತೆಗಳಿಂದ ಸುತ್ತುವರಿಯಲ್ಪಟ್ಟ ಜಯದುರ್ಗೆಯನ್ನು ಧ್ಯಾನಿಸಬೇಕು. (ಕೃಷ್ಣವರ್ಣ) 697

35b/2

ವನದುರ್ಗಾಧ್ಯಾನ, ಆಮ್ನಾಯದಲ್ಲಿ

ಚಕ್ರ, ಶಂಖ, ಖಡ್ಗ, ಗುರಾಣಿ, ಬಾಣ, ಬಿಲ್ಲು, ಶೂಲ, ತರ್ಜನೀ (ಬೆದರಿಕೆ ಹಾಕುವ ಮುದ್ರೆ) ಇವುಗಳನ್ನು ಧರಿಸಿರುವ, ಕೋಣದ ಶಿರಸ್ಸಿನ ಮೇಲೆ ಆರೂಢಳಾದ, ಚಿಗುರುದೂರ್ವೆಯ(ಗರಿಕೆ ಹುಲ್ಲು) ವರ್ಣದಂತಿರುವ ದುರ್ಗೆಯು ನನ್ನ ಐಶ್ವರ್ಯಕ್ಕೆ ಕಾರಣವಾಗಲಿ. (ಸುವರ್ಣವರ್ಣ) 698

35b/3

ರಿಪುಮಾರಿಣೀದುರ್ಗಾಧ್ಯಾನ, ಶಾರದಾತಿಲಕದಲ್ಲಿ

ತರ್ಜನೀಮುದ್ರೆಯನ್ನು ಹಾಗೂ ತ್ರಿಶೂಲವನ್ನು ಭುಜಗಳಿಂದ ಧರಿಸಿದ, ಭಯಾನಕಳಾದ, ಸೂರ್ಯಬಿಂಬದಂತೆ ರಕ್ತವರ್ಣೆಯಾದ, ರಿಪುಮಾರಿಣಿಯನ್ನು ಧ್ಯಾನಿಸಿ, ಅಯುತ (10,000) ಸಂಖ್ಯೆಯಲ್ಲಿ ಮಂತ್ರವನ್ನು ಜಪಿಸಬೇಕು. ಹಾಗೆ ಮಾಡಿದ ತತ್ಕ್ಷಣದಲ್ಲಿ ಬಂಧುವರ್ಗಸಮೇತವಾಗಿ ಶತ್ರುಗಳನ್ನು ಸಾಯಿಸುವನು. (ರಕ್ತವರ್ಣ) 699

35b/4

ಅಗ್ನಿದುರ್ಗಾಧ್ಯಾನ, ಶಾರದಾತಿಲಕದಲ್ಲಿ

ವಿದ್ಯುಲ್ಲತೆಯಂತೆ ಪ್ರಭೆಯುಳ್ಳ, ಸಿಂಹದ ಹೆಗಲ ಮೇಲೆ ಕುಳಿತಿರುವ, ಭೀಷಣಾಕೃತಿಯ, ಖಡ್ಗ, ಗುರಾಣಿಗಳನ್ನು ಕೈಗಳಲ್ಲಿ ಧರಿಸಿ ಶೋಭಿಸುತ್ತಿರುವ, ಕನ್ಯೆಯರಿಂದ ಸೇವೆಗೊಂಡ, ಚಕ್ರ, ಶಂಖ, ಖಡ್ಗ, ಗುರಾಣಿ, ಬಾಣ, ಪಾಶ, ಅಂಕುಶ, ಮತ್ತು ತರ್ಜನೀ ಮುದ್ರೆಯನ್ನು ಕೈಗಳಿಂದ ಧರಿಸಿದ, ಶಿರಸ್ಸಿನಲ್ಲಿ ಚಂದ್ರಕಲೆಯನ್ನು ಹೊತ್ತ ಮೂರುಕಣ್ಣುಗಳಿರುವ, ಸರ್ವಪವಿತ್ರಳಾದ ದುರ್ಗೆಯನ್ನು ಭಜಿಸುವೆನು. (ಕನಕವರ್ಣ) 700

36a/1

ಶೈವಾಗಮದ ಪ್ರಕಾರ ನವದುರ್ಗಾಪ್ರಭೇದ, ಶೈಲಪುತ್ರೀಧ್ಯಾನ

ಬಯಸಿದುದನ್ನು ಹೊಂದುವ ಸಲುವಾಗಿ, ಅರ್ಧಚಂದ್ರನನ್ನು ಶಿರಸ್ಸಿನಲ್ಲಿ ಧರಿಸಿದ, ಎತ್ತಿನ ಮೇಲೇರಿದ, ಶೂಲವನ್ನು ಹೊತ್ತುಕೊಂಡ, ಯಶೋವತಿಯಾದ ಹಿಮವತ್ಪರ್ವತಪುತ್ರಿಯನ್ನು ನಮಸ್ಕರಿಸುತ್ತೇನೆ. (ಶ್ಯಾಮವರ್ಣ) 701

36a/2

ಬ್ರಹ್ಮಚಾರಿಣಿಯಾದ ದುರ್ಗಾಧ್ಯಾನ, ಶೈವಾಗಮದಲ್ಲಿ

ಕರಕಮಲಗಳಿಂದ ಅಕ್ಷಮಾಲೆ ಮತ್ತು ಕಮಂಡಲುವನ್ನು ಧರಿಸಿರುವ, ಅತಿಶ್ರೇಷ್ಠಳಾದ, ಬ್ರಹ್ಮಚಾರಿಣಿಯಾದ ದೇವಿಯು ನನ್ನಲ್ಲಿ ಪ್ರಸನ್ನಳಾಗಲಿ. (ನೀಲವರ್ಣ) 702

36a/3 **ಚಂಡಖಂಡಾದುರ್ಗಾಧ್ಯಾನ, ಶೈವಾಗಮದಲ್ಲಿ**

ಅಂಡಜಪ್ರವರ (ಮೊಟ್ಟೆಗಳಿಂದ ಹುಟ್ಟಿದ ಪಕ್ಷಿಗಳಲ್ಲಿ ಶ್ರೇಷ್ಠ)ನಾದ ಗರುಡನನ್ನು ಏರಿದ, ಅತಿಯಾದ ಸಿಟ್ಟು ಮತ್ತು ಆರ್ಭಟಗಳಿಂದ ಕೂಡಿದ, 'ಚಂಡಖಂಡಾ' ಎಂದು ಪ್ರಸಿದ್ಧಳಾದ ದೇವಿಯು ನನ್ನಲ್ಲಿ ಸಂತುಷ್ಟಳಾಗಲಿ. (ಮೇಘವರ್ಣ) 703

36a/4 **ಸ್ಕಂದಮಾತೃದುರ್ಗಾಧ್ಯಾನ, ಶೈವಾಗಮದಲ್ಲಿ**

ಸಿಂಹಾಸನದಲ್ಲಿ ಕುಳಿತಿರುವ ಸತತವಾಗಿ ಪದ್ಮಗಳನ್ನು ತನ್ನೆರಡು ಹಸ್ತಗಳಲ್ಲಿ ಧರಿಸಿ ಶೋಭಿಸುತ್ತಿರುವ, ಯಶೋವತಿಯಾದ ದೇವೀಸ್ಕಂದಮಾತೆಯು ನನಗೆ ಶುಭವನ್ನು ನೀಡಲಿ. (ಶ್ಯಾಮವರ್ಣ) 704

36b/1 **ಕೂಷ್ಮಾಂಡದುರ್ಗಾಧ್ಯಾನ, ಶೈವಾಗಮದಲ್ಲಿ**

ಮದ್ಯಪೂರ್ಣವಾದ ಕಲಶವನ್ನು, ಹಾಗೂ ರಕ್ತಪೂರ್ಣವಾದ ಕಲಶವನ್ನು ಕರಕಮಲಗಳಿಂದ ಧರಿಸಿದ ಕೂಷ್ಮಾಂಡಾ ದುರ್ಗೆಯು ನನಗೆ ಮಂಗಳವನ್ನುಂಟುಮಾಡಲಿ. (ಶ್ಯಾಮಲವರ್ಣ) 705

36b/2 **ಕಾತ್ಯಾಯನೀದುರ್ಗಾಧ್ಯಾನ, ಶೈವಾಗಮದಲ್ಲಿ**

ಚಂದ್ರಹಾಸಖಡ್ಗದಿಂದ ಕಾಂತಿಪೂರ್ಣವಾದ ಹಸ್ತವುಳ್ಳ, ಶ್ರೇಷ್ಠವಾದ ಹುಲಿಯನ್ನು ಏರಿರುವ, ದಾನವರನ್ನು ನಾಶಪಡಿಸುವ ಕಾತ್ಯಾಯನೀ ದೇವಿಯು ಶುಭವನ್ನು ನೀಡಲಿ. (ನೀಲವರ್ಣ) 706

36b/3 **ರಾತ್ರಿದುರ್ಗಾಧ್ಯಾನ, ಶೈವಾಗಮದಲ್ಲಿ**

ಭಯಾನಕ ಸ್ವರೂಪಿಣಿಯಾದ, ಕನ್ನೈದಿಲೆಯಂತೆ ಕಪ್ಪಾದ ಶರೀರವುಳ್ಳ, ಭಯಾನಕವಾದ ಅಟ್ಟಹಾಸಮಾಡುತ್ತಿರುವ ಕಾಲರಾತ್ರಿಯು ಶುಭವನ್ನು ನೀಡಲಿ. (ಮೇಘವರ್ಣ) 707

36b/4 **ಗೌರೀದುರ್ಗಾಧ್ಯಾನ, ಶೈವಾಗಮದಲ್ಲಿ**

ಬಿಳಿ ಆನೆಯ ಮೇಲೆ ಕುಳಿತಿರುವ, ಬಿಳಿಉಡುಗೆಯನ್ನುಟ್ಟಿರುವ, ಶುಭ್ರವರ್ಣದವಳಾದ, ಮಹಾದೇವನಿಗೆ ಅಮಿತಾನಂದವನ್ನು ನೀಡುವ ಮಹಾಗೌರಿಯು ಶುಭವನ್ನು ನೀಡಲಿ. (ಮೇಘಶ್ಯಾಮವರ್ಣ) 708

37a/1 **ಸಿದ್ಧಿದಾಯಿನೀದುರ್ಗಾಧ್ಯಾನ, ಶೈವಾಗಮದಲ್ಲಿ**

ಸಿದ್ಧ, ಗಂಧರ್ವ, ಯಕ್ಷ ಮೊದಲಾದವರಿಂದ, ಅಸುರರಿಂದ, ಹಾಗೂ ದೇವತೆಗಳಿಂದ ಸೇವಿಸಲ್ಪಡುತ್ತಿರುವ ಸಿದ್ಧಿದಾಯಿನಿಯು ಸತತವಾಗಿ ಸಿದ್ಧಿಯನ್ನು ನೀಡುವವಳಾಗಲಿ. (ಶ್ಯಾಮವರ್ಣ) 709

37a/2 **ಸ್ಕಾಂದಪುರಾಣ ಮತ್ತು ಯಾಮಲ (ರುದ್ರಯಾಮಳ)ದಲ್ಲಿ**

ಮೇಲೆ ಹೇಳಿರುವ ಪ್ರಕಾರದ ಒಂಬತ್ತು ದುರ್ಗಾದೇವಿಗಳಲ್ಲಿ ಅಷ್ಟಾದಶ (ಹದಿನೆಂಟು) ಭುಜಗಳುಳ್ಳ ದುರ್ಗಾ. ಹದಿನಾರು ಭುಜಗಳ ಎಂಟು ವಿಧ ದುರ್ಗಾದೇವಿಗಳ ಮಧ್ಯೆ ಲಕ್ಷಣದ ತಿಳಿವಳಿಕೆಗಾಗಿ ಒಂದೇ ದುರ್ಗಾಚಿತ್ರವನ್ನು ರಚಿಸಲಾಗಿದೆ.

೧. ಚಂಡದುರ್ಗಾ, ೨. ಶಚೀದುರ್ಗಾ, ೩. ಶೈವಾದುರ್ಗಾ, ೪. ಚಂಡೀದುರ್ಗಾ, ೫. ಕ್ರೂರಾದುರ್ಗಾ, ೬. ಅನುಚಂಡಿಕಾದುರ್ಗಾ, ೭. ನವಮೀದುರ್ಗಾ, ೮. ಉಗ್ರಚಂಡಾದುರ್ಗಾ. ಈ ಎಂಟು ದುರ್ಗೆಯರ ಧ್ಯಾನ ಮತ್ತು ವರ್ಣಗಳು ಮುಂದೆ ಬರೆದ ಧ್ಯಾನಶ್ಲೋಕಗಳಲ್ಲಿ ಇವೆ.

37a/3 **ಸ್ಕಾಂದಪುರಾಣ ಮತ್ತು ಯಾಮಳ (ರುದ್ರಯಾಮಳ)ದ ಪ್ರಕಾರವಾಗಿ**
ನವದುರ್ಗೆಯರ ಮಧ್ಯೆ ಅಷ್ಟಾದಶ (ಹದಿನೆಂಟು) ಭುಜಾ ರುದ್ರಾದುರ್ಗಾಧ್ಯಾನ

ಪದ್ಮಾಸನ ಸ್ಥಾನದಲ್ಲಿ ಮೂರ್ತಿರೂಪದಲ್ಲಿ ಕಲ್ಪಿಸಿದ ದುರ್ಗೆಯರನ್ನು ಪೂಜಿಸಬೇಕು. ಹದಿನೆಂಟು ಭುಜಗಳುಳ್ಳ ದುರ್ಗೆಯ ಸ್ತನಗಳು, ಭುಜಗಳು ಮತ್ತು ತೊಡೆಗಳು ಪುಷ್ಟವಾಗಿವೆ. ಸರ್ವಾಲಂಕಾರಗಳಿಂದ ಕೂಡಿದ ಅವಳು ಸಕಲ ಸಿದ್ಧಿಗಳನ್ನು ನೀಡುವವಳು. ಅವಳು ತನ್ನ ಎಡಕೈಗಳಲ್ಲಿ ಮೂರ್ಧಜ(ಜುಟ್ಟನ್ನು), ಗುರಾಣಿ, ಗಂಟೆ, ಕನ್ನಡಿ, ತರ್ಜನಿ (ಬೆದರಿಕೆಯ ಚಿಹ್ನೆ) ಬಿಲ್ಲು, ಧ್ವಜ, ಡಮರುಕ, ಪಾಶಗಳನ್ನು ಧರಿಸಿರುವಳು. ಬಲಕೈಗಳಲ್ಲಿ ಶಕ್ತಿ, ಮುದ್ಗರ(ಒನಕೆಯಂತಹ ಆಯುಧ), ಶೂಲ, ವಜ್ರಾಯುಧ, ಶಂಖ, ಕಮಲ, ಕಡ್ಡಿ (ಬೆತ್ತದಂತಹ ಕೋಲು) ಬಾಣ, ಚಕ್ರಗಳನ್ನು ಧರಿಸಿರುವಳು. ಉಳಿದ ದುರ್ಗೆಯರು ಬಾಣ ಮತ್ತು ಡಮರುಕಗಳಿಲ್ಲದೇ ಹದಿನಾರು ಭುಜಗಳುಳ್ಳವರು. ಜಯವನ್ನು ಬಯಸುವ ಜ್ಞಾನಿಗಳು ಈ ದುರ್ಗೆಯರನ್ನು ಪೂಜಿಸಬೇಕು. 710-713

ಇವರ ಹೆಸರುಗಳು:- ರುದ್ರಾ, ಚಂಡಾ, ಶಚೀ, ಶೈವಾ, ಚಂಡೀ, ಕ್ರೂರಾ, ಅನುಚಂಡಿಕಾ, ನವಮೀ, ಉಗ್ರಚಂಡಾ ಎಂದು ನವದುರ್ಗೆಯರು ಪ್ರಸಿದ್ಧರು. ಆ ದುರ್ಗೆಯರ ವರ್ಣಗಳು ಅಗ್ನಿ, ಕಾಡಿಗೆ, ಕಪ್ಪು, ನೀಲ, ಧವಳ, ಹೊಗೆ, ಹಳದಿ, ಬೂದು, ಹಸಿರು. 714

37b/1 **ಶ್ರೀವಿದ್ಯಾಧ್ಯಾನ, ಮಹಾಲಕ್ಷ್ಮೀರತ್ನಕೋಶದಲ್ಲಿ**

ಆಧಾರರೂಪಿಣಿಯೆ, ಉದಯಸೂರ್ಯಬಿಂಬಮುಖಿಯೆ, ಅತಿಭೀಕರವಾದ ಮೊನಚಾದ ಕೋರೆಹಲ್ಲುಗಳುಳ್ಳವಳೆ, ಅನಂತವಾದ ಭೋಗಾವಾಸವುಳ್ಳವಳೆ, ವೀಣಾದಿಗಾನವಾದ್ಯಪ್ರಿಯಳೆ, ನಾನಾವರ್ಣಾತ್ಮಿಕೆಯೆ, ಮಾನುಷ ಅಸ್ಥಿಗಳಿಂದ ಸುಂದರಿಯಾಗಿರುವವಳೆ, ಸುಸ್ಪಷ್ಟವಾಗಿ ಕಾಣುವ ಮಾಲೆಗಳನ್ನು ಧರಿಸಿದವಳೆ, ಹೇ ತ್ವರಿತಾದೇವಿ, ಹೇ ಶ್ರೀವಿದ್ಯೆ, ಶಂಕರ ಪ್ರಿಯೆ, ನಿನ್ನನ್ನು ಭಜಿಸುವೆನು. (ಚಿತ್ರವರ್ಣ) 715

37b/2 **ಶುದ್ಧವಿದ್ಯಾಧ್ಯಾನ, ಸೋಮನಾಥವಲ್ಲೀಮಂತ್ರಶಾಸ್ತ್ರ ಹಾಗೂ ಶೈವಾಗಮದಲ್ಲಿ**

ಅಕ್ಷಮಾಲೆ, ಪುಸ್ತಕ, ಚಿನ್ಮುದ್ರೆ, ಹಾಗೂ ಅಭಯಹಸ್ತಮುದ್ರೆಯನ್ನು ಧರಿಸಿದ ಧವಳ ಶರೀರಿಣಿಯಾದ ಶುದ್ಧ ವಿದ್ಯಾದೇವಿಯು ನಿರಂತರವಾಗಿ ರಕ್ಷಿಸಲಿ (ಶ್ವೇತವರ್ಣ) 716

37b/3 **ಬಗಲಾಧ್ಯಾನ, ಬಗಲಾಕಲ್ಪದಲ್ಲಿ**

ಚತುರ್ಭುಜಗಳುಳ್ಳ, ಮೂರು ಕಣ್ಣುಗಳಿರುವ, ಕಮಲಾಸನದಲ್ಲಿ ಕುಳಿತಿರುವ, ತ್ರಿಶೂಲ, ಮದಿರಾಪಾನಪಾತ್ರೆ, ಗದೆ, ಜಿಹ್ವೆ ಇವುಗಳನ್ನು ಧರಿಸಿದ, ತೊಂಡೆಹಣ್ಣಿನಂತೆ ಕೆಂಬಣ್ಣದ ತುಟಿಗಳುಳ್ಳ, ಶಂಖದಂತಹ ಕಂಠಪ್ರದೇಶವಿರುವ, ಸಮಾನ ಹಾಗೂ ಪುಷ್ಟವಾದ ಪಯೋಧರಗಳುಳ್ಳ, ಪೀತ (ಹಳದಿ) ವಸ್ತ್ರವನ್ನು ಉಟ್ಟಿರುವ, ಮದದಿಂದ ವಾಲುತ್ತಿರುವಂತಿರುವ ಬ್ರಹ್ಮಾಸ್ತ್ರದೇವತೆ (ಬಗಲಾ) ಯನ್ನು ಧ್ಯಾನಿಸಬೇಕು. (ಪೀತವರ್ಣ) 717

37b/4 **ಇಂದ್ರಾಕ್ಷೀಧ್ಯಾನ, ಇಂದ್ರಾಕ್ಷೀಕಲ್ಪದಲ್ಲಿ**

ಎರಡು ಭುಜಗಳಿರುವ ಹಳದಿ ಬಣ್ಣದ ಎರಡು ವಸ್ತ್ರಗಳಿಂದ ಕೂಡಿರುವ, ಎಡಕೈಯಲ್ಲಿ ವಜ್ರವನ್ನೂ (ವಜ್ರಾಯುಧ) ಬಲಗೈಯಲ್ಲಿ ವರದಮುದ್ರೆಯನ್ನೂ ಧರಿಸಿರುವ, ಯುವತಿಯಾಗಿರುವ, ನಾನಾಲಂಕಾರಗಳಿಂದ ಅಲಂಕೃತಳಾದ, ಸಂತೋಷವನ್ನು ಸೂಸುವ ಮುಖಕಮಲದ, ಅಪ್ಸರಸ್ಸ್ತ್ರೀ ಸಮೂಹದಿಂದ ಸೇವೆಯನ್ನು ಹೊಂದುತ್ತಿರುವ ಇಂದ್ರಾಕ್ಷೀದೇವಿಯನ್ನು ಭಜಿಸುವೆನು. (ಪೀತವರ್ಣ) 718-719

38a/1 **ದಂಡನಾಥಾವಾರಾಹೀಧ್ಯಾನ, ಲಲಿತೋಪಾಖ್ಯಾನದಲ್ಲಿ**

ನೂರು ಸ್ತಂಭಗಳಿಂದ ಕೂಡಿದ ಮಂಟಪದಲ್ಲಿ ದಂಡನಾಥಾದೇವಿಯು ಇರುವಳು. ಅಲ್ಲಿ ಸುವರ್ಣಕಮಲಕರ್ಣಿಕೆ (ಕಮಲದ ಬೀಜಕೋಶ)ಯ ಮಧ್ಯದಲ್ಲಿ ಬಿಂದು, ತ್ರಿಕೋಣ ಮತ್ತು ವೃತ್ತದಿಂದ ಕೂಡಿದ ಆರುದಳಗಳ ಎರಡು ವೃತ್ತಗಳಿರುವ, ಕಾದ ಚಿನ್ನದ ವರ್ಣದಂತೆ ಹೊಳೆಯುವ ಚಕ್ರವು ಶೋಭಿಸುವುದು. ಅಲ್ಲಿ ಸಂಧ್ಯಾಕಾಲದ ಕೆಂಬಣ್ಣದಂತೆ ಹೊಳೆಯುವ ವಸ್ತ್ರಗಳಿರುವ, ಸಮಸ್ತ ಆಭರಣಗಳಿಂದ ಅಲಂಕೃತಳಾದ, ಶಂಖ, ಚಕ್ರ, ಅಭಯಮುದ್ರೆ, ವರಮುದ್ರೆ, ನೇಗಿಲು, ಒನಕೆ, ಪಾಶ ಮತ್ತು ಅಂಕುಶಗಳನ್ನು ಧರಿಸಿದ, ಚಂದ್ರಲೇಖಾಲಂಕಾರವನ್ನು ಹೊಂದಿದ, ಹಂದಿಯ ಮುಖದಿಂದ ಕೂಡಿದ ದಂಡಿನಿಯು ಇರುವಳು. (ಕನಕವರ್ಣ) 720-723

ಇವಳ ಹನ್ನೆರಡು ಹೆಸರುಗಳು - ಎಲ್ಲೈ ಮುನಿಯೆ, ಪಂಚಮೀ, ದಂಡನಾಥಾ, ಸಂಕೇತಾ, ಸಮಯೇಶ್ವರೀ, ಸಮಯ ಸಂಕೇತಾ, ವಾರಾಹೀ, ಪೋತ್ರಿಣೀ, ವಾರ್ತಾಲೀ, ಮಹಾಸೇನಾ, ಆಜ್ಞಾಚಕ್ರಾ, ಈಶ್ವರೀ, ಅರಿಘ್ನೀ ಎಂಬ ಹನ್ನೆರಡು ಹೆಸರುಗಳನ್ನು ಅವಳಿಗೆ ಹೇಳಲಾಗಿವೆ. 724-725

38a/2 **ಶುದ್ಧವಾರಾಹೀಧ್ಯಾನ, ವಾರಾಹೀಕಲ್ಪದಲ್ಲಿ**

ಕೋರೆದಾಡೆಗಳಿಂದ ಹೊಳೆಯುವ ಹಂದಿಯ ಮುಖವುಳ್ಳ, ಕೆಂಪುಬಣ್ಣದ ವಸ್ತ್ರದ ಉತ್ತರೀಯವುಳ್ಳ, (ಎಡ ತೋಳಿನಿಂದ ಹಾಕುವ ವಸ್ತ್ರ) ಶೂಲ, ಕಪಾಲ, ಒನಕೆ, ಸರ್ಪ, ಇವುಗಳನ್ನು ಕರಕಮಲಗಳಲ್ಲಿ ಧರಿಸಿರುವ, ಚಂದ್ರರೇಖೆಯಿಂದ ಶೋಭಿಸುವ ಕಿರೀಟವುಳ್ಳ ವಾರಾಹೀದೇವಿಯ ಸೇವೆಯನ್ನು ನಾನು ಮಾಡುತ್ತೇನೆ. (ಶ್ಯಾಮವರ್ಣ) 726

ಸ್ವಪ್ನವಾರಾಹೀಧ್ಯಾನ, ವಾರಾಹೀಕಲ್ಪದಲ್ಲಿ

ಮೋಡದಂತೆ ಶ್ಯಾಮಲಕಾಂತಿಯುಳ್ಳ, ಹೃದಯಾವರ್ಜಕವಾದ ಸ್ತನಗಳುಳ್ಳ, ಮೂರುಕಣ್ಣುಗಳಿಂದ ಶೋಭಿಸುವ, ಹಂದಿಯ ಮುಖವನ್ನುಳ್ಳ, ಶಿರಸ್ಸಿನಲ್ಲಿ ಚಂದ್ರನಿರುವ, ಶುಭ್ರವಾದ ಸಮಸ್ತದಾಡೆಗಳ ಹೊಳಪಿನಿಂದ ಶೋಭಿಸುವ, ತನ್ನ ಕರಕಮಲಗಳಿಂದ ಖಡ್ಗ, ಗುರಾಣಿ, ಪಾಶ, ಮತ್ತು ಅಂಕುಶವನ್ನು ಧರಿಸಿರುವ, ಶ್ರೇಷ್ಠವಾದ ಕುದುರೆಯನ್ನು ಏರಿರುವ, ಮಂಗಳಾಲಂಕಾರಗಳನ್ನು ಹೊಂದಿದ ವಾರಾಹಿಯನ್ನು ಸತತವಾಗಿ ಧ್ಯಾನ ಮಾಡಬೇಕು. (ಮೇಘ ಶ್ಯಾಮವರ್ಣ) 727

38b/1

ವಾಗೀಶ್ವರೀಧ್ಯಾನ, ಪಾಂಚರಾತ್ರಕ್ರಿಯಾಪಾದದಲ್ಲಿ

ಧವಳ ಪದ್ಮದಲ್ಲಿ ಕುಳಿತಿರುವ, ಧವಳಾಂಗಿಯಾದ, ಚತುರ್ಭುಜಗಳನ್ನುಳ್ಳ, ಜಟೆ ಹಾಗೂ ಕಿರೀಟವುಳ್ಳ, ರತ್ನಕುಂಡಲ (ಕರ್ಣಾಭರಣ)ಗಳಿಂದ ಶೋಭಿಸುವ, ಯಜ್ಞೋಪವೀತವನ್ನುಳ್ಳ, ಹಾರ ಮತ್ತು ಮುತ್ತುಗಳ ಆಭರಣಗಳಿಂದ ಶೋಭಿತಳಾದ, ಪಟ್ಟೆಯ ಬಟ್ಟೆಗಳನ್ನು ಧರಿಸಿದ, ಮೂರುಕಣ್ಣುಗಳಿಂದ ಕೂಡಿರುವ, ಬಲಕೈಯಲ್ಲಿ ಸುಂದರವಾದ ದಂಡವನ್ನು(ಅಕ್ಷರಗಳನ್ನು ಬರೆಯುವ ಸಾಧನ), ಎಡಗೈಯಲ್ಲಿ ಪುಸ್ತಕವನ್ನು, ಬಲಗೈ(ಮೇಲ್ಭಾಗ)ಯಲ್ಲಿ ಅಕ್ಷಮಾಲೆಯನ್ನು, ಎಡಗೈ (ಮೇಲ್ಭಾಗ)ಯಲ್ಲಿ ಸಣ್ಣಪಾತ್ರೆಯನ್ನು ಧರಿಸಿರುವಳು. ಇದು ವಾಗೀಶ್ವರಿಯ ರೂಪವೆಂದು ಹೇಳಲಾಗಿದೆ. (ಶ್ವೇತವರ್ಣ) 728-730

38b/2

ಸೌಭಾಗ್ಯವಾಗೀಶ್ವರೀಧ್ಯಾನ, ಶಾರದಾತಿಲಕದಲ್ಲಿ

ಚಂದ್ರಕಲೆಯನ್ನು ಧರಿಸಿದ, ಶುಭ್ರಕಾಂತಿಯುಳ್ಳ, ಸ್ತನಭಾರದಿಂದ ನಮ್ರವಾದ ಅಂಗವುಳ್ಳ, ಧವಳ ಕಮಲದ ಮೇಲೆ ಕುಳಿತಿರುವ, ತನ್ನ ಕರಕಮಲಗಳಿಂದ ಲೇಖನಿ ಮತ್ತು ಪುಸ್ತಕದ ಬೆಳಕನ್ನು ಹೊರಸೂಸುವ ವಾಗ್ದೇವತೆಯು ಸಮಸ್ತ ಐಶ್ವರ್ಯಸಮೂಹಗಳನ್ನು ನೀಡಿ ನಮ್ಮನ್ನು ಕಾಪಾಡಲಿ. (ಶುಭ್ರವರ್ಣ) 731

38b/3

ಧೇನುವಾಗೀಶ್ವರೀಧ್ಯಾನ, ಆಶ್ವಲಾಯನಕಲ್ಪದಲ್ಲಿ

ಅಚ್ಚವಾದ ಸ್ಫಟಿಕದಂತಿರುವ, ಧವಳಮಾಲೆ ಮತ್ತು ಧವಳ ವಸ್ತ್ರಗಳನ್ನು ಉಟ್ಟಿರುವ, ಅಂಕುಶ, ಅಕ್ಷಸೂತ್ರ, ಪಾಶ, ಮತ್ತು ಪುಸ್ತಕಗಳನ್ನು ಧರಿಸಿರುವ ಮುತ್ತುಗಳ ಹಾರಗಳಿಂದ ಕೂಡಿರುವ ದೇದೀಪ್ಯಮಾನವಾಗಿರುವ ಚತುರ್ಭುಜಗಳನ್ನುಳ್ಳ, ಕನ್ನಡಿಯಂತೆ ಬಿಳಿಯ ಬಣ್ಣದ ವಸ್ತ್ರದಿಂದ ಅಲಂಕೃತಳಾದ, ಸುಲಕ್ಷಣವಾದ ಕುಚಗಳಿರುವ, ಯಜ್ಞವೇದಿಕೆಯಂತೆ ಸಣ್ಣ ನಡುವುಳ್ಳ, ಅರ್ಧಚಂದ್ರಾಕೃತಿಯನ್ನು ಶಿರಸ್ಸಿನಲ್ಲಿ ಧರಿಸಿರುವ, ಜಟಾಸಮೂಹದಿಂದ ಕೂಡಿದ, ಪೂರ್ಣಚಂದಿರನಂತೆ ಕಂಗೊಳಿಸುವ ಮೊಗವುಳ್ಳ, ಮೂರುಕಣ್ಣುಗಳಿರುವ, ಚಿನ್ನದ ಕಾಲ್ಗೆಜ್ಜೆಗಳನ್ನು ತೊಟ್ಟಿರುವ, ಚಿನ್ನ ಮತ್ತು ರತ್ನಗಳಿಂದ ನಿರ್ಮಿತವಾದ ಬಳೆಗಳಿಂದ ಅನರ್ಘ್ಯವಾದ ವಲಯಭೂಷಿತಳಾಗಿರುವ, ಕೇಯೂರ(ಭುಜಾಲಂಕರಣ) ಮೇಖಲೆ (ನಡುಪಟ್ಟಿ)ಗಳಿಂದ ಮೂರುಲೋಕಗಳನ್ನು ಪ್ರಕಾಶಿಸುತ್ತಿರುವ, ಶಬ್ದಬ್ರಹ್ಮಸ್ವರೂಪಿಣಿಯಾದ ಪರಮ ಶ್ರೇಷ್ಠಳಾದ ಧೇನುವಾಗೀಶ್ವರಿಯನ್ನು ಧ್ಯಾನಿಸಬೇಕು. (ಶ್ವೇತವರ್ಣ) 732-737

38b/4 **ತ್ರಿಪುರಭೈರವೀಧ್ಯಾನ, ಶಾರದಾತಿಲಕದಲ್ಲಿ**

ಉದಯಸೂರ್ಯಸಹಸ್ರಕಾಂತಿಯನ್ನು ಹೊಂದಿದ, ಕೆಂಬಣ್ಣದ ಪಟ್ಟೆ ವಸ್ತ್ರವನ್ನು ಧರಿಸಿದ, ಶಿರಸ್ಸುಗಳ ಮಾಲೆಯನ್ನು ಧರಿಸಿದ, ರಕ್ತದಿಂದ ಬಳಿದಂಥ ಸ್ತನಗಳಿರುವ, ಜಪಮಾಲೆ, ವಿದ್ಯೆ(ಜ್ಞಾನಮುದ್ರೆ?) ಅಭಯಮುದ್ರೆ, ಹಾಗೂ ವರದಮುದ್ರೆಗಳನ್ನು ಕರಕಮಲಗಳಿಂದ ಧರಿಸಿದ, ಮೂರುಕಣ್ಣುಗಳಿಂದಲೂ ಕರಕಮಲಗಳಿಂದಲೂ ಶೋಭಿಸುವ, ಚಂದ್ರನುಳ್ಳ ರತ್ನಕಿರೀಟವನ್ನು ಶಿರಸ್ಸಿನಲ್ಲಿ ಧರಿಸಿದ, ಕಮಲಾಸನದಲ್ಲಿರುವ ದೇವಿಯನ್ನು ನಮಸ್ಕರಿಸುವೆನು. (ರಕ್ತವರ್ಣ) 738

39a/1 **ಸಂವಿತ್ತ್ರಿಪುರಾಧ್ಯಾನ, ಶಾರದಾತಿಲಕದಲ್ಲಿ**

ಚಂದ್ರಾಭರಣದಿಂದ ಕೂಡಿದ, ಶರತ್ಕಾಲದ ಚಂದ್ರನಂತೆ ಶುಭ್ರ (ಬಿಳಿ)ಳಾದ, ಮನಸ್ಸಿನಲ್ಲಿ ಐವತ್ತೂ ಅಕ್ಷರಗಳನ್ನು ಧ್ಯಾನಿಸುತ್ತಿರುವ, ಕರಕಮಲಗಳಿಂದ ಪುಸ್ತಕ, ಜಪಮಾಲೆ, ಅಮೃತಪೂರ್ಣಕುಂಭ, ವ್ಯಾಖ್ಯಾಮುದ್ರೆ, ಇವುಗಳನ್ನು ಧರಿಸಿದ, ಮೂರುಕಣ್ಣುಗಳುಳ್ಳ ದೇವಿಯನ್ನು ಧ್ಯಾನಿಸುವೆನು. (ಶ್ವೇತವರ್ಣ) 739

39a/2 **ಬಾಲಾತ್ರಿಪುರಸುಂದರೀಧ್ಯಾನ, ಶಾರದಾತಿಲಕದಲ್ಲಿ**

ಹೇ ತ್ರಿಪುರ ಸುಂದರಿ, ಆಗತಾನೆ ಉದಯಿಸಿದ ಸಾವಿರ ಸೂರ್ಯರ ಕಾಂತಿಯುಳ್ಳ, ವಿದ್ಯಾ (ಪುಸ್ತಕ) ಅಕ್ಷಮಾಲೆ, ವರದ ಮತ್ತು ಅಭಯ ಹಸ್ತಲಕ್ಷಣಗಳಿರುವ, ಕನ್ನೈದಿಲೆಯಂತಹ ಮೂರು ಕಣ್ಣುಗಳಿಂದ ಶೋಭೆಗೊಂಡ ಮುಖ ಕಮಲವಿರುವ, ಹಾರಗಳ ಭಾರದಿಂದ (ಅತಿ ಹೆಚ್ಚು ಹಾರಗಳು) ಮನೋಹರಿಯಾದ ನಿನ್ನನ್ನು (ಭಕ್ತರು) ಭಜಿಸುವರು. (ರಕ್ತವರ್ಣ) 740

39a/3 **ನಿತ್ಯಾಧ್ಯಾನ, ಶಾರದಾತಿಲಕದಲ್ಲಿ**

ಬಾಲಚಂದ್ರನನ್ನು ತನ್ನ ಮುಡಿಯಲ್ಲಿ ಧರಿಸಿದ, ಹಸ್ತಗಳಿಂದ ಪಾಶ, ಅಂಕುಶ, ಕಲ್ಪವಲ್ಲಿ, ಹಾಗೂ ಕಪಾಲವನ್ನು ಧರಿಸಿದ ಅರುಣ (ಕೆಂಪು) ವರ್ಣದ, ಕೈಯಲ್ಲಿರುವ ವೀಣೆಯನ್ನು ನುಡಿಸುವ ಮೂರುಕಣ್ಣುಗಳುಳ್ಳ ನಿತ್ಯಾದೇವಿಯನ್ನು ಭಜಿಸುವೆನು. (ರಕ್ತವರ್ಣ) 741

39a/4 **ಮೋಹಿನೀನಿತ್ಯಾಧ್ಯಾನ, ಶಾರದಾತಿಲಕದಲ್ಲಿ**

ಅರ್ಧಚಂದ್ರನನ್ನು ಶಿರಸ್ಸಿನಲ್ಲಿ ಧರಿಸಿ, ಕೆಂಬಣ್ಣವಿರುವ, ದೇವರುಗಳಿಂದ ನಮಸ್ಕೃತಳಾದ, ಕಮಲ, ಪಾಶ, ಅಂಕುಶ, ಹಾಗೂ ಪೂರ್ಣಕಪಾಲವನ್ನು ಹಸ್ತಗಳಲ್ಲಿ ಧರಿಸಿರುವ, ಕೆಂಬಣ್ಣದ ಅಂಗರಾಗ (ಶರೀರವನ್ನು ಪೂಸುವದ್ರವ್ಯ) ವಸ್ತ್ರ ಹಾಗೂ ಆಭರಣಗಳಿರುವ ಮೂರುಕಣ್ಣುಗಳುಳ್ಳ ಮದದಿಂದ (ಮದ್ಯದಿಂದಾದ) ನಡುಕವುಳ್ಳಂತಿರುವ ಅಂಗಗಳುಳ್ಳ ಶಿವನ ವನಿತೆ (ಸ್ತ್ರೀ)ಯನ್ನು ಧ್ಯಾನಮಾಡಬೇಕು. (ರಕ್ತವರ್ಣ). 742

39b/1 **ವಶ್ಯಮುಖೀಧ್ಯಾನ, ಮಹಾಲಕ್ಷ್ಮೀರತ್ನಕೋಶದಲ್ಲಿ**

ಹೂವಿನ ಬಾಣವನ್ನು ಸಂಧಾನಮಾಡಿ ಕಬ್ಬಿನ ಬಿಲ್ಲನ್ನು ಹೆದೆಯೇರಿಸುತ್ತಿರುವ, ಜಗಜ್ಜಯಿನಿ(ಸಮಸ್ತ ಜಗತ್ತುಗಳನ್ನು ಜಯಿಸುವ ಶಕ್ತಿಶಾಲಿನಿ)ಯಾದ, ದಾಸವಾಳದಂತೆ ಕೆಂಬಣ್ಣದ ವಶ್ಯಮುಖೀದೇವಿಯನ್ನು ಭಜಿಸುತ್ತೇನೆ. (ರಕ್ತವರ್ಣ) 743

39b/2 **ಪ್ರತ್ಯಂಗಿರಾಧ್ಯಾನ, ಪ್ರತ್ಯಂಗಿರಾಕಲ್ಪದಲ್ಲಿ**

ಶ್ಯಾಮಲಕಾಂತಿಯ ಮೂರುಕಣ್ಣುಗಳುಳ್ಳ, ಸಿಂಹ ಮುಖಿಯಾದ, ನಾಲ್ಕುಭುಜಗಳುಳ್ಳ, ಊರ್ಧ್ವಕೇಶಿ (ಮೇಲ್ಮುಖವಾದ ತಲೆಗೂದಲು)ಯಾದ, ಸಿಂಹವಾಹಿನಿಯಾದ, ತಲೆಗೂದಲಮೇಲೆ ಚಂದ್ರಚಿಹ್ನೆಯಿರುವ, ಕಪಾಲ, ಶೂಲ, ಡಮರು ಮತ್ತು ನಾಗಪಾಶ, ಇವುಗಳನ್ನು ಧರಿಸಿರುವ ಮಂಗಳಸ್ವರೂಪಿಣಿಯಾದ, ಸಕಲಶತ್ರುಗಳನ್ನು ನಾಶ ಮಾಡುವ ಪ್ರತ್ಯಂಗಿರಾದೇವಿಯನ್ನು ಸತತವಾಗಿ ಸೇವಿಸುವೆನು. (ಶ್ಯಾಮವರ್ಣ) 744-745

39b/3 **ಶೂಲಿನೀಧ್ಯಾನ, ಶೂಲಿನೀಕಲ್ಪದಲ್ಲಿ**

ಶೂಲ, ಬಾಣ, ಖಡ್ಗ, ಚಕ್ರ, ಶಂಖ, ಗದೆ, ಪಾಶ, ಬಿಲ್ಲು, ಇವುಗಳನ್ನು ಹಸ್ತಗಳಿಂದ ಧರಿಸಿಕೊಂಡಿರುವ, ಮೋಡದಂತೆ ಶ್ಯಾಮಲವರ್ಣೆಯಾದ, ಚಂದ್ರಾಲಂಕೃತವಾದ ಕಿರೀಟವುಳ್ಳ, ಭಯಾನಕಳಾದ, (ಸಕಲ) ಭೂಷಣಗಳಿಂದ ತುಂಬಿದವಳಾಗಿ, ಸಿಂಹದ ಭುಜವನ್ನೇರಿದವಳಾಗಿ, ಗುರಾಣಿಗಳನ್ನು ಹಿಡಿದಿರುವ ನಾಲ್ವರು ಕನ್ಯೆಯರಿಂದ ಕೂಡಿಕೊಂಡವಳಾಗಿ, ದೈತ್ಯರನ್ನು ಕತ್ತರಿಸಿ ಹಾಕಿದ, ಶೂಲಿನಿಯು ನಮಗೆ ಸಂಸಾರಭಯವನ್ನು ನಾಶಪಡಿಸುವವಳಾಗಿರಲಿ. (ಮೇಘಶ್ಯಾಮವರ್ಣ) 746

40a/1 **ಪ್ರಾಣಶಕ್ತಿಧ್ಯಾನ, ಶಾರದಾತಿಲಕದಲ್ಲಿ**

ರಕ್ತಸಮುದ್ರದಲ್ಲಿರುವ ನೌಕೆಯಲ್ಲಿ ಕಂಗೊಳಿಸುವ ಕಮಲವನ್ನೇರಿ ಕುಳಿತಿರುವ, ಕರಕಮಲಗಳಿಂದ ಪಾಶ, ಜೇನ್ನೊಣಗಳ ಹಗ್ಗವಿರುವ ಕಬ್ಬಿನ ಬಿಲ್ಲು, ಅಂಕುಶ, ಐದು ಬಾಣಗಳು, ಕಪಾಲಗಳ ಮಾಲಿಕೆ, ಇವುಗಳನ್ನು ಧರಿಸಿದ ಮೂರು ಕಣ್ಣುಗಳಿಂದಲೂ ಶೋಭಾಯಮಾನಳಾದ, ಪುಷ್ಪಸ್ತನಗಳಿಂದಲೂ ಕೂಡಿದ, ಉದಯ ಸೂರ್ಯನ ವರ್ಣವುಳ್ಳ ಮಹಿಮಾನ್ವಿತೆಯಾದ ಪ್ರಾಣಶಕ್ತಿದೇವಿಯು ನಮಗೆ ಸುಖಕೊಡುವವಳಾಗಿರಲಿ. (ರಕ್ತವರ್ಣ) 747

40a/2 **ಮೃತಸಂಜೀವಿನೀಧ್ಯಾನ, ರುದ್ರಯಾಮಲ ಮತ್ತು ಕುಹೂಕಲ್ಪದಲ್ಲಿ**

ಪಾಶ, ಸರ್ಪರಾಜ, ಅಂಕುಶ, ಗದೆ, ಖಡ್ಗ, ಶೂಲ, ವರ ಮತ್ತು ಅಭಯ ಚಿಹ್ನೆಗಳನ್ನು ಧರಿಸಿರುವ, ಶಾಂತ ಸ್ವರೂಪಳಾದ, ರಕ್ತವರ್ಣೆಯಾದ, ಅಷ್ಟಭುಜಗಳುಳ್ಳ, ಅರಳಿದ ಕಮಲದ ಮೇಲೆ ಆಸೀನಳಾದ, ಮಂಗಳಾಂಗಿಯಾದ, ಚಿತ್ತಾಕರ್ಷಕಳಾದ ಮೃತಸಂಜೀವಿನೀದೇವಿಯನ್ನು ನಮಸ್ಕರಿಸುವೆನು. (ರಕ್ತವರ್ಣ) 748

40a/3 **ಸ್ವಸ್ಥಾವೇಶಿನೀಧ್ಯಾನ, ಅಹಿರ್ಬುಧ್ನ್ಯಸಂಹಿತೆಯಲ್ಲಿ**

ರಕ್ತವರ್ಣದವಳಾದ, ಶವದ ಮೇಲೆ ಕುಳಿತಿರುವ, ಮೂರು ಶಿರಸ್ಸುಗಳಿರುವ, ರೌದ್ರಾಕಾರದ, ಮಹಾಭೀಕರ ಸ್ವರೂಪಳಾದ, ಹೊಗೆಯ ಬಣ್ಣದ ಕಣ್ಣುಗಳುಳ್ಳ, ಭಯನಾಶಿನಿಯಾದ, ದಟ್ಟವಾದ ತುರುಬು ಹಾಗೂ ಕಪ್ಪಾದ

ಮುಂಗುರುಳುಗಳಿಂದ ಅಲಂಕೃತೆಯಾದ, ಢಕ್ಕಾ (ಚರ್ಮವಾದ್ಯ) ಮತ್ತು ಶೂಲ, ಇವುಗಳನ್ನು ಧರಿಸಿದ, ಮಹಾಬಲ (ಶಿವ)ನ ಶತ್ರುಗಳನ್ನು ನಾಶ ಮಾಡುವ, ಕೃಶದೇಹದ ಮಹಾಭಯಾನಕವಾದ ಅಂಗಗಳುಳ್ಳ, ಮೂರು ಜಟೆಗಳನ್ನು ಹೊಂದಿದ, ಕಾಳ್ಗಿಚ್ಚಿನಿಂದ ಸುತ್ತುವರಿಯಲ್ಪಟ್ಟ, ಪಿನಾಕಿ (ಶಿವ)ಯಿಂದ ಸ್ತೋತ್ರಮಾಡಲ್ಪಟ್ಟ, (ಶವಸ್ಥಾವೇಶಿನಿಯನ್ನು) ಧ್ಯಾನಿಸಬೇಕು. (ರಕ್ತವರ್ಣ) 749

40a/4

ಶತ್ರುವಿಧ್ವಂಸಿನೀಧ್ಯಾನ, ಸುದರ್ಶನಸಂಹಿತೆಯಲ್ಲಿ

ರೌದ್ರಸ್ವರೂಪದ, ಮೂರು ಶಿರಸ್ಸುಗಳಿರುವ, ರಕ್ತವರ್ಣದ ನೇತ್ರಗಳಿರುವ, ಅಗ್ನಿಯ ಜ್ವಾಲೆಗಳಂತೆ ಭಯಂಕರವಾದ ಮುಖಗಳುಳ್ಳ, ಭಯಾನಕವಾದ ಕೋರೆಹಲ್ಲುಗಳಿರುವ, ಮೂರುಕಣ್ಣುಗಳಿರುವ, ದಿಗಂಬರೆ (ನಗ್ನೆ)ಯಾದ, ಕೆಂಪು, ಕೂದಲುಗಳಿರುವ, ಕೆಂಬಣ್ಣದ ಹಸ್ತಗಳಿರುವ, ಮಹಾಕಾರದ ಹೊಟ್ಟೆಯಿರುವ, ಘೋರಲಕ್ಷಣಗಳಿಂದ ಕೂಡಿದವಳಾದ ಶತ್ರುವಿಧ್ವಂಸಿನೀದೇವಿಯು ಶತ್ರುಗಳನ್ನು ಶೀಘ್ರವಾಗಿ ಉಚ್ಚಾಟನೆ ಮಾಡುವಳು. (ಎತ್ತಿಕೊಂಡು ನೆಕ್ಕಿ ನಿರ್ನಾಮ ಮಾಡುವಳು). (ನೀಲವರ್ಣ) 750-51

40b/1

ವಜ್ರಪ್ರಸ್ತಾರಿಣೀಧ್ಯಾನ, ಶಾರದಾತಿಲಕದಲ್ಲಿ

ರಕ್ತಸಮುದ್ರದಲ್ಲಿರುವ ರಕ್ತವರ್ಣದ ನೌಕೆಯಲ್ಲಿ ಅರಳಿದ ಕಮಲದ ನಡುವೆ ಕುಳಿತಿರುವ, ರಕ್ತವರ್ಣದ, ಕೆಂಬಣ್ಣದ ಕಿರೀಟದಲ್ಲಿ ಹೊಳೆಯುವ ಚಂದ್ರಕಲೆಯನ್ನುಳ್ಳ, ಮುಗುಳ್ನಗುವ ಮುಖದ ಮೂರು ಕಣ್ಣುಗಳುಳ್ಳ, ದಾಳಿಂಬ, ಬಾಣ, ಪಾಶ, ಅಂಕುಶ, ಒನಕೆ, ಬಿಲ್ಲು, ಮಾಲೆ, (ಅಕ್ಷಮಾಲೆ) ಕಪಾಲ ಇವುಗಳನ್ನು ಹಸ್ತಗಳಿಂದ ಧರಿಸಿದ, ಸ್ತನಪುಷ್ಟಿಯಿಂದ ಬಾಗಿದ, ಸಮಗ್ರಾಂಗಗಳಲ್ಲೂ ಬಾಗಿದ ಭಾವವುಳ್ಳ ಅಂಬಿಕೆಯನ್ನು (ವಜ್ರಪ್ರಸ್ತಾರಿಣಿ) ನಮಿಸುವೆನು. (ರಕ್ತವರ್ಣ) 752

40b/2

ತ್ರಿಕಂಟಕೀಧ್ಯಾನ, ಶಾರದಾತಿಲಕದಲ್ಲಿ

ನಾಭಿಯಿಂದ ಕೆಳಭಾಗದಲ್ಲಿ ಶ್ಯಾಮಲವರ್ಣದವಳೂ, ನಾಭಿಯಿಂದ ಕಂಠ ಪ್ರದೇಶದ ಪರ್ಯಂತ ರಕ್ತವರ್ಣದವಳೂ, ಉದರದ ಸುತ್ತಲೂ ಬಂದಂತಿರುವ ಭೀಕರವಾದ ಕೋರೆಹಲ್ಲುಗಳಿಂದ (ಅಷ್ಟು ದೀರ್ಘವಾಗಿರುವ) ಕೂಡಿದ ನಾಲ್ಕು ಮುಖಗಳಿಂದ ಕೂಡಿದವಳೂ, ಕರಕಮಲಗಳಿಂದ ಎರಡು ದೀಪಗಳನ್ನು, ಶಂಖವನ್ನು, ಮತ್ತು ಚಕ್ರವನ್ನು ಧರಿಸಿದ, ಮೂರು ಕಣ್ಣುಗಳಿರುವ, ಜಟೆಯೊಳಗಿಂದ ಹೊಳೆಯುವ ಚಂದ್ರಕಲೆಯಿರುವ ದೇವತೆಯು ನಮಗೆ ಭಯನಾಶಿನಿಯಾಗಿರಲಿ. (ಕೃಷ್ಣ, ರಕ್ತ, ಧವಲ, ಮೂರು ಬಣ್ಣಗಳು) 753

40b/3

ಅಪರಾಜಿತಾಧ್ಯಾನ, ನಾರದಸಂಹಿತೆಯಲ್ಲಿ

ಕನ್ನೈದಿಲೆಯಂತೆ ಹೊಳೆಯುವ, ನಿದ್ರೆಯಿಂದ ಮುಚ್ಚಿದ ಕಣ್ಣುಗಳುಳ್ಳ, ನೀಲವರ್ಣದ ವಕ್ರಕೇಶಗಳುಳ್ಳ, ಆಳವಾದ ಹೊಕ್ಕುಳು ಮತ್ತು ಮೂರು ವಲಿ (ಉದರದ ಮೇಲೆ ಮೂರು ವಕ್ರರೇಖೆ)ಗಳಿರುವ, ವರ ಮತ್ತು ಅಭಯ ಮುದ್ರೆಯ ಲಕ್ಷಣಗಳ ಕರಕಮಲಗಳಿರುವ, ನಮಸ್ಕರಿಸಿದವರ ದುಃಖವನ್ನು ನಾಶಮಾಡುವ, ಉತ್ಕೃಷ್ಟವಾದ ಪೀತಾಂಬರವನ್ನು ಧರಿಸಿದ, ಉತ್ಕೃಷ್ಟವಾದ ಆಭೂಷಣಗಳು, ಹಾರಗಳು ಹಾಗೂ ಸುಗಂಧದ್ರವ್ಯಲೇಪನವಿರುವ, ಮಹಾಶಕ್ತಿಸ್ವರೂಪಿಣಿ ಯಾದ, ಮೃದುಸ್ವಭಾವದ, ಶತ್ರುಸೈನ್ಯವನ್ನು ನಾಶಪಡಿಸುವ ಶಂಖ, ಚಕ್ರ, ಗದೆ, ಅಭಯಮುದ್ರೆಗಳನ್ನು ಬೇರೆ ಬೇರೆ ಹಸ್ತಗಳಿಂದ ಧರಿಸಿದ, ಮೂರು ಕಣ್ಣುಗಳುಳ್ಳ, ಸಮಸ್ತ ಇಷ್ಟಗಳನ್ನು ನೀಡುವ ದೇವಿ ಅಪರಾಜಿತೆಯನ್ನು ಧ್ಯಾನಿಸಬೇಕು. (ನೀಲವರ್ಣ) 754-756

40b/4 **ಧೂಮಾವತೀಧ್ಯಾನ, ಧೂಮಾವತೀಕಲ್ಪದಲ್ಲಿ**

ರಕ್ತವರ್ಣದ ವಸ್ತ್ರಗಳನ್ನು ಧರಿಸಿದ, ಆನೆಯದಂತದಂತೆ ಹೊಳೆಯುವ ಕುಂಡಲಗಳಿರುವ, ಕೋಪವನ್ನು ಪ್ರದರ್ಶಿಸುವ ಕೋರೆ ಹಲ್ಲುಗಳಿರುವ, ಕಂಠದಲ್ಲಿ ಕಾಣುವ ರುಂಡಮಾಲೆಯಿರುವ, ಸುತ್ತಲೂ ಹೊಳೆಯುವಂತಿರುವ ಕಾಂತಿಪೂರ್ಣವಾದ ಪಿಶಾಚಸಮೂಹವಿರುವ, ಘೋರಸ್ವರೂಪಳಾದ, ಭಯಾನಕವಾದ ಅಟ್ಟಹಾಸವನ್ನು ಮಾಡುತ್ತಿರುವ, ಹಸ್ತಗಳಲ್ಲಿ ಕಪಾಲ ಹಾಗೂ ಖಡ್ಗವನ್ನು ಧರಿಸಿ ಭೀಷಣವಾಗಿ ಕಾಣುತ್ತಿರುವ, ಮೂರು ಕಣ್ಣುಗಳುಳ್ಳ, ಶತ್ರುಪ್ರಾಣಗಳನ್ನು ಹಿಂಸಿಸುವ, ಬಾಲಚಂದ್ರನನ್ನು ಶಿರಸ್ಸಿನಲ್ಲಿ ಧರಿಸಿದ, ಧೂಮಕಾಳಿಯನ್ನು ಧ್ಯಾನಿಸಬೇಕು (ರಕ್ತವರ್ಣ) 757

41a/1 **ಕಾಮಕಲೇಶ್ವರೀಧ್ಯಾನ, ಮಹಾಲಕ್ಷ್ಮೀರತ್ನಕೋಶದಲ್ಲಿ**

ಕಮಲ, ಪಾಶ, ಕಬ್ಬಿನಬಿಲ್ಲು, ಮುತ್ತುಗದ ಹೂವು, ಬತ್ತದ ತೆನೆ, ಪಂಚಬಾಣಗಳು, ಅಭಯ ಹಾಗೂ ವರದಮುದ್ರೆ ಇವುಗಳನ್ನು ಸತತವಾಗಿ ಧರಿಸಿಕೊಂಡಿರುವ, ಕಾಮಕಲಾಂಬಿಕೆಯನ್ನು ನಾನು ಧ್ಯಾನಿಸುವೆನು. (ರಕ್ತವರ್ಣ) 758

41a/2 **ಸರ್ವವರ್ಣೇಶ್ವರೀಧ್ಯಾನ, ಸಿದ್ಧಶಾಬರತಂತ್ರದಲ್ಲಿ**

ಅಕ್ಷಮಾಲೆ, ಜಿಂಕೆಮರಿ, ಮೇಲ್ಮೊನಚಿನಬಾಣ, ವಿದ್ಯಾ (ಪುಸ್ತಕ) ಇವುಗಳನ್ನು ತನ್ನ ಹಸ್ತಗಳಿಂದ ಸತತವಾಗಿ ಧರಿಸಿರುವ, ಮೂರುಕಣ್ಣುಗಳುಳ್ಳ, ಅರ್ಧಚಂದ್ರನನ್ನು ಶಿರಸ್ಸಿನಲ್ಲಿ ಧರಿಸಿರುವ, ಅರುಣವರ್ಣದ, ಕಮಲವಾಸಿನಿಯಾದ, ಸ್ತನಭಾರದಿಂದ ಬಾಗಿದ ವರ್ಣೇಶ್ವರಿಯನ್ನು ನಮಸ್ಕರಿಸಿ. (ಅರುಣವರ್ಣ) 759

41a/3 **ತ್ವರಿತಾದೇವೀಧ್ಯಾನ, ಶಾರದಾತಿಲಕದಲ್ಲಿ**

ಶ್ಯಾಮಲವರ್ಣದ, ಮಯೂರಪಿಚ್ಛವನ್ನು ಶಿರಸ್ಸಿನಲ್ಲಿ ಧರಿಸಿದ, ಪತ್ರವಸ್ತ್ರವನ್ನು ಉಟ್ಟ, ಗುಲಗುಂಜಿಗಳ ಹಾರದಿಂದ ಶೋಭಾಯಮಾನವಾದ ಸ್ತನಗಳುಳ್ಳ, ಎಂಟು ಸರ್ಪರಾಜರನ್ನು ಧರಿಸಿಕೊಂಡಿರುವ, ಕರ್ಣಾಭರಣ, (ತಾಟಂಕ) ಭುಜಾಭರಣ ಹಾಗೂ ಕಾಂಚಿಯನ್ನು ಧರಿಸಿದ, ದಾರಗಳಲ್ಲಿ ಕಟ್ಟಿರುವ ಕಾಲ್ಗೆಜ್ಜೆಗಳ ನಿನಾದದಿಂದುಂಟಾದ ಕಾಂತಿಯಿಂದ ಭೂಷಿತಳಾದ, ವರದ ಮತ್ತು ಅಭಯ ದಾನಕ್ಕಾಗಿ ಸಿದ್ಧವಾದ ಹಸ್ತಮುದ್ರೆಗಳಿರುವ, ಮೂರು ಕಣ್ಣುಗಳಿರುವ, ಕಿರಾತವೇಷದ (ಕಿರಾತಸ್ತ್ರೀ) ಅಂಬಿಕೆಯನ್ನು ಭಜಿಸುವೆನು. (ನೀಲವರ್ಣ) 760

41a/4 **ದ್ವಾದಶಾರ್ಧದೇವೀಧ್ಯಾನ, ಮಹಾಲಕ್ಷ್ಮೀರತ್ನಕೋಶದಲ್ಲಿ**

ಐದುಮೊಗಗಳಿರುವ, ಮೂರುಕಣ್ಣುಗಳಿರುವ, ಶವದ ಮೇಲೆ ಸ್ಥಾಪಿತಳಾದ, ರಕ್ತವರ್ಣದ, ಕೆಂಪುತಾವರೆ ಹಾಗೂ ಶಿರಸ್ಸುಗಳನ್ನು ಹಾರವಾಗಿ ಧರಿಸಿಕೊಂಡ, ಚಂದ್ರರೇಖೆಯನ್ನು ಅಲಂಕರಿಸಿಕೊಂಡ, ಅಕ್ಷಮಾಲಾ, ಅಂಕುಶ, ವರ, ತ್ರಿಶೂಲ, ಪುಷ್ಪಬಾಣಗಳು, ಪಾಶ, ಕಬ್ಬಿನಬಿಲ್ಲು, ಅಭಯ, ಕಪಾಲ, ಪುಸ್ತಕ, ಇವುಗಳನ್ನು ಧರಿಸಿಕೊಂಡಿರುವ ದ್ವಾದಶಾರ್ಧದೇವಿಯನ್ನು ನಾನು ನಮಸ್ಕರಿಸುತ್ತೇನೆ. (ರಕ್ತವರ್ಣ) 761-762

41b/1 **ತಿರಸ್ಕರಿಣೀಧ್ಯಾನ, ಮಹಾಲಕ್ಷ್ಮೀರತ್ನಕೋಶದಲ್ಲಿ**

ಶ್ಯಾಮವರ್ಣದ ಕುದುರೆಯನ್ನೇರಿದ, ಶ್ಯಾಮಲವರ್ಣದ, ಖಡ್ಗಧಾರಿಣಿಯಾದ, ನಿದ್ರೆಯಿಂದ ಲೋಕದ ಕಣ್ಣುಗಳನ್ನು ಮುಚ್ಚುವಂತೆ ಮಾಡಿದ, ತಿರಸ್ಕರಿಣೀದೇವಿಯು ನಮ್ಮ ರಕ್ಷಣೆಯನ್ನು ಮಾಡಲಿ. (ನೀಲವರ್ಣ) 763

41b/2 **ಅಶ್ವರೂಢಾಧ್ಯಾನ, ಮಹಾಲಕ್ಷ್ಮೀರತ್ನಕೋಶದಲ್ಲಿ**

ಕುದುರೆಯನ್ನು ಏರಿದವಳಾಗಿ, ದಕ್ಷಿಣಹಸ್ತಾಗ್ರದಲ್ಲಿ ನೂತನವಾದ ಸುವರ್ಣಮಯವೇತ್ರಯಷ್ಟಿ (ಬೆತ್ತದ ಕೋಲು)ಯನ್ನು ಧರಿಸಿದ, ಸದಾಕಾಲ ಪ್ರಸನ್ನಳಾದ, ಚಂದ್ರನಿಂದ ಕಂಗೊಳಿಸುವ ಕೇಶ ಸಮೂಹವುಳ್ಳ, ಮೂರುಕಣ್ಣುಗಳನ್ನು ಹೊಂದಿರುವ ದೇವಿಯು ಸ್ವಚ್ಛ (ಪವಿತ್ರ)ವಾದ, ಸಕಲಸುಖಫಲಗಳನ್ನು ಹೊಂದಿ ಆನಂದವೀಯುವ ಸಂಪತ್ತನ್ನು ನಮಗೀಗ ನೀಡಲಿ. (ರಕ್ತವರ್ಣ) 764

41b/3 **ಆಸುರೀದೇವೀಧ್ಯಾನ, ಆಸುರೀಕಲ್ಪದಲ್ಲಿ**

ಸಾಗರಶ್ರೇಷ್ಠವಾದ ಕ್ಷೀರಸಮುದ್ರವನ್ನು ಕಡೆಯುವ ವೇಳೆಯಲ್ಲಿ ಉತ್ಪನ್ನಳಾದ ಕನ್ನಿಕೆಯ ರೂಪವಿರುವ, ಹದಿನೆಂಟು ಭುಜಗಳಿಂದ ಕೂಡಿರುವ, ರಕ್ತವರ್ಣದ, ಆಯತಾಕಾರದ ಕಣ್ಣುಗಳಿರುವ, ಶಂಖ, ಖಡ್ಗ, ಬಿಲ್ಲು, ಕಪಾಲ, ಒನಕೆ, ಶಕ್ತಿ, ಗದೆ, ವರದಮುದ್ರೆ, ಗಂಟೆ, ಇವುಗಳನ್ನು ಎಡಭುಜಗಳಿಂದಲೂ, ಚಕ್ರ, ಮುಷ್ಟಿಮುದ್ರೆ, ಬಾಣ, ಶೂಲ, ಕಬ್ಬಿಣ (ಯಾವುದೇ ಆಕಾರದ ಆಯುಧವಿರಬಹುದು) ಗುರಾಣಿ, ತೋಮರ, ಅಭಯಮುದ್ರೆ, ಭಿಂಡಿವಾಳ, ಇವುಗಳನ್ನು ಬಲಭುಜಗಳಿಂದಲೂ ಧರಿಸಿರುವ, ಮೂರು ಕಣ್ಣುಗಳಿರುವ, ಎತ್ತರ ಮತ್ತು ತೆಳುವಾದ ಶರೀರವುಳ್ಳ, ಕಲ್ಪಾಂತದ ಉರಿದ ಅಗ್ನಿಯಂತೆ ಪ್ರಭೆಯುಳ್ಳ, ಮಂದರಪರ್ವತವನ್ನು ಸುತ್ತುತ್ತ ನೊರೆಗಳ ಸುಳಿಗಳಿಂದ ಭಯಾನಕವಾದ, ಗೋಮೂತ್ರ ಮತ್ತು ಕ್ಷೀರ (ಹಾಲು) ವರ್ಣದ ಕಾಂತಿಯುಳ್ಳ, ಕಪ್ಪುಬಣ್ಣದ ಶ್ರೇಷ್ಠವಾದ ಸುರೆಯನ್ನು (ಸುರಾದೇವಿ) ಭಜಿಸುವೆನು. ಅಸುರರನ್ನು ಭಯಪಡಿಸುತ್ತ ದೇವತೆಗಳಿಗೆ ನಿರ್ಭಯವನ್ನುಂಟುಮಾಡುತ್ತ ಇರುವ ಸುರೆಯು ಉಮಾದೇವಿಯೇ ಆಗಿರುವಳು. ಮೋಹ(ಅಜ್ಞಾನ)ವು ಮಹೇಶ್ವರನಾಗಿರುವನು. (ಚಿತ್ರವರ್ಣ) 765-770

42a/1 **ಉಗ್ರತಾರಾಧ್ಯಾನ, ಆಮ್ನಾಯದಲ್ಲಿ**

"ಪ್ರತ್ಯಾಲೀಢ' ಎಂಬ ಭಂಗಿಯಲ್ಲಿ ಪಾದನ್ಯಾಸಮಾಡಿದ, ಶವವನ್ನು ಹೊತ್ತುಕೊಂಡು ಭಯಾನಕವಾದ ಅಟ್ಟಹಾಸಮಾಡುವವಳಾಗಿ ಶ್ರೇಷ್ಠಳಾದ, ಖಡ್ಗ, ಕನ್ನೈದಿಲೆ, ಶೂಲ ಮತ್ತು ಕಪಾಲಗಳನ್ನು ಹಸ್ತಗಳಲ್ಲಿ ಧರಿಸಿದವಳಾಗಿ, 'ಹುಂ' ಎಂಬ ಬೀಜಮಂತ್ರದಿಂದ ಆವಿರ್ಭಾವವನ್ನು ಪಡೆದ, ಹ್ರಸ್ವಸ್ವರೂಪಳಾದ, ಕಪ್ಪಾಗಿ ವಿಶಾಲವಾದ ಕೆಂಬಣ್ಣದ ಜಟಾಸಮೂಹವುಳ್ಳ, ಸಿಟ್ಟಿನಿಂದ ಕೆರಳಿದ ಸರ್ಪಗಳಿಂದ ಸುತ್ತುವರೆದವಳಾಗಿ, ಉಗ್ರತಾರೆಯಾದ ತಾನು ಮೂರು ಲೋಕಗಳ ಜಾಡ್ಯಗಳನ್ನು ಕಪಾಲದಲ್ಲಿ ಎಸೆದು ನಾಶಮಾಡುವಳು. (ಸಿಂಧೂರವರ್ಣ) 771

42a/2 **ಲೋಪಾಮುದ್ರಾಧ್ಯಾನ, ಆಮ್ನಾಯದಲ್ಲಿ**

ಪಾಶ ಮತ್ತು ಅಂಕುಶಗಳನ್ನು ಬಾಣ ಮತ್ತು ಬಿಲ್ಲನ್ನು ಧರಿಸಿರುವ ಮೂರುಕಣ್ಣುಗಳಿರುವ, ಸೂರ್ಯನಂತೆ ಕಾಂತಿಯುಳ್ಳ ಚಂದ್ರನನ್ನು ಶಿರಸ್ಸಿನಲ್ಲಿ ಧರಿಸಿರುವ ಶಿವೆ (ಶಿವನ ಪತ್ನಿ, ಮಂಗಳಮಯಿ)ಯನ್ನು ಭಜಿಸುವೆನು. (ರಕ್ತವರ್ಣ) 772

42a/3 **ಚತುರ್ಭುಜಅನ್ನಪೂರ್ಣಾಧ್ಯಾನ, ಕಾರಣಾಗಮದಲ್ಲಿ**

ಸಿಂಧೂರವರ್ಣದ ಕಾಂತಿಯುಳ್ಳ, ಮೂರುಕಣ್ಣುಗಳಿರುವ, ಅಮೃತಮಯವಾದ ಚಂದ್ರಕಲೆಯನ್ನು ಧರಿಸಿದ, ಆಕಾಶಸಂಚಾರಿಣಿಯಾದ, ಕೆಂಪುವಸ್ತ್ರಗಳನ್ನು ಧರಿಸಿದ, ಪುಷ್ಟವಾದ ಮತ್ತು ಉನ್ನತವಾದ ಸ್ತನಗಳನ್ನುಳ್ಳ, ನೂತನ ಯೌವನದ ಉದಯದಿಂದ ಸುಂದರಿಯಾದ, ವಿವಿಧಾಲಂಕಾರಗಳಿಂದ ಕೂಡಿದ, ಕಮಲನೇತ್ರೆಯಾದ, ಚಂದ್ರನೊಂದಿಗೆ ಮಿಳಿತವಾದ ಶರೀರವುಳ್ಳ, ಪಾಶ, ಅಂಕುಶ, ಅಭಯ, ವರದ ಮುದ್ರಾಯುಕ್ತವಾದ ಹಸ್ತಗಳುಳ್ಳ ಅನ್ನಪೂರ್ಣಾದೇವಿಯನ್ನು ನಮಸ್ಕರಿಸುವೆನು. (ಸಿಂದೂರವರ್ಣ) 773

42a/4 **ದ್ವಿಭುಜಅನ್ನಪೂರ್ಣಾಧ್ಯಾನ, ಕಾರಣಾಗಮದಲ್ಲಿ**

ಎಡಭಾಗದ ಕರಕಮಲದಲ್ಲಿ ಮಧುರಸದಿಂದ ತುಂಬಿದ ಮಾಣಿಕ್ಯಪಾತ್ರೆಯನ್ನು ಧರಿಸಿದ, ರತ್ನಕಂಕಣವುಳ್ಳ, ಬಲಭಾಗದಕರಕಮಲದಲ್ಲಿ ದಿವ್ಯರತ್ನಗಳಿಂದ ಪೂರ್ಣವಾದ ರತ್ನದ ಸೌಟನ್ನು ಧರಿಸಿದ, ರಕ್ತವರ್ಣೆಯಾದ, ಪುಷ್ಟ ಹಾಗೂ ಉನ್ನತವಾದ ಸ್ತನಭಾರದಿಂದ ಹೊಳೆಯುವ ಚಂಚಲಹಾರವಿರುವ, ಮೂರುಕಣ್ಣುಗಳಿರುವ, ಪೂರ್ಣಚಂದ್ರಬಿಂಬಕ್ಕೆ ಸರಿಸಾಟಿಯಾದ ಮೊಗವುಳ್ಳ ಅನ್ನಪೂರ್ಣಾಂಬಿಕೆಯನ್ನು ನಮಸ್ಕರಿಸುತ್ತೇನೆ. (ರಕ್ತವರ್ಣ) 774

42b/1 **ಗಾಯಿತ್ರೀಧ್ಯಾನ, ಮಾರ್ಕಂಡೇಯ ಪುರಾಣದಲ್ಲಿ**

ಪೂರ್ವಾಹ್ಣದ ಸಂಧ್ಯೆ (ಸಂಧಿಸಮಯ)ಯಲ್ಲಿ ಗಾಯಿತ್ರೀದೇವಿಯನ್ನು, ವಹ್ನಿರೂಪಿಣಿ, ಕುಮಾರಿ, ರಕ್ತವಸ್ತ್ರೆ, ರಕ್ತಾಂಗಿ, ರಕ್ತಮಾಲೆ, ರಕ್ತಅನುಲೇಪಿತೆ (ಸುಗಂಧ ದ್ರವ್ಯಗಳನ್ನು ಪೂಸುವಿಕೆ) ಚತುರ್ಭುಜೆ, ಚತುರ್ವಕ್ತ್ರೆ (ಮುಖ), ವರದೆ, ಅಷ್ಟಲೋಚನೆ (ಎಂಟುಕಣ್ಣುಗಳು) ಬಲಗೈಯಲ್ಲಿ ವರ್ತುಳವಾದ ಪದ್ಮಾಕ್ಷಮಾಲೆಯನ್ನು, ಎಡಗೈಯಲ್ಲಿ ಕಮಂಡಲು, ಬಲಗೈಯಲ್ಲಿ ಸ್ರುವವನ್ನೂ, ಎಡಗೈಯಲ್ಲಿ ಅಭಯಮುದ್ರೆಯನ್ನೂ ಧರಿಸಿ, ಪದ್ಮಪೀಠದಲ್ಲಿ ಸ್ಥಾಪಿತಳಾದ ಋಗ್ವೇದಸ್ವರೂಪಿಣಿಯಾದ, ಪ್ರಾತಃಸವನಸ್ವರೂಪಳೂ, ಹಂಸವಾಹನೆಯೂ ಆದ ಪೃಥ್ವಾಯನೆ, ಬೃಹತೀಛಂದಾತ್ಮಿಕೆ, ಗಾರ್ಹಪತ್ಯ ಅಗ್ನಿಪ್ರತಿಷ್ಠಿತೆಯಾದ ಗಾಯತ್ರಿಯನ್ನು ಭಜಿಸುವೆನು. (ರಕ್ತವರ್ಣ) 775-778

42b/2 **ಸಾವಿತ್ರಿಧ್ಯಾನ, ಮಾರ್ಕಂಡೇಯಪುರಾಣದಲ್ಲಿ**

ರುದ್ರರೂಪಿಣಿ, ಯುವತಿ, ಶ್ವೇತವಸ್ತ್ರಧಾರಿಣಿ, ಧವಳಹಾರಾನ್ವಿತೆ, ಬಿಳಿಯ ಹಾರಅನುಲಿಪ್ತಳಾದ, ನಾಲ್ಕು ಭುಜಗಳುಳ್ಳ, ನಾಲ್ಕು ಮುಖಗಳುಳ್ಳ, ಹನ್ನೆರಡು ಕಣ್ಣುಗಳಿರುವ, ರುದ್ರಾಕ್ಷಮಾಲೆಯನ್ನು ವಲಯರೂಪವಾಗಿ, ಬಲಗೈಯಲ್ಲಿಯೂ ಎಡಗೈಯಲ್ಲಿ ಅಭಯ ಮುದ್ರೆಯನ್ನೂ (ಎಡಗೈಯಲ್ಲಿ ಖಟ್ವಾಂಗ, ಶಿಖರದಲ್ಲಿ ಮುಂಡವಿರುವ ಕೋಲನ್ನೂ ಬಲಗೈಯಲ್ಲಿ ತ್ರಿಶೂಲವನ್ನೂ), ಅರ್ಧಚಂದ್ರನನ್ನೂ ಶಿರಸ್ಸಿನಲ್ಲೂ ಧರಿಸಿದ ಮೃದುಮನೋಹರವಾದ ಚಿನ್ನದ ಪೀಠವಿರುವ ಆಸನದಲ್ಲಿ ಕುಳಿತಿರುವ, ಯಜುರ್ವೇದ ಸ್ವರೂಪಿಣಿಯಾದ ಮಾಧ್ಯಂದಿನ ಸವನಪೂಜ್ಯಳಾದ, ವೃಷಭವಾಹನವನ್ನುಳ್ಳ, ಸತೀ ಸಾವಿತ್ರೀ ದೇವಿಯನ್ನು ಭಜಿಸುವೆನು. (ಶುಕ್ಲವರ್ಣ) 779-781

42 b/3

ಸರಸ್ವತೀಧ್ಯಾನ, ಮಾರ್ಕಂಡೇಯಪುರಾಣದಲ್ಲಿ

ಸಾಯಾಹ್ನ(ಸಂಜೆ)ಸಂಧ್ಯಾಸಮಯದಲ್ಲಿ, ವೃದ್ಧೆಯಾಗಿ ಕನ್ನೈದಿಲೆಯಂತೆ ಶ್ಯಾಮಲವಾಗಿರುವ, ಕಪ್ಪಾದ ವಕ್ರಕೇಶಗಳಿರುವ, ನಾಲ್ಕು ಭುಜಗಳಿರುವ, ಒಂದೇ ಮುಖದ, ಕಮಲದ ಪತ್ರದಂತೆ ದೀರ್ಘಾಕಾರವಾದ ಕಣ್ಣುಗಳಿರುವ, ಹಸ್ತಗಳಲ್ಲಿ ಶಂಖ, ಚಕ್ರ, ಗದಾ, ಮತ್ತು ಅಭಯಮುದ್ರೆಗಳನ್ನು ಧರಿಸಿದ, ಪೀತಾಂಬರವನ್ನು ತೊಟ್ಟು, ದಿವ್ಯವಾದ ಹಾರ ಮತ್ತು ಸುಗಂಧದ್ರವ್ಯದ ಲೇಪವನ್ನು ಮಾಡಿಕೊಂಡ, ತೃತೀಯಸವನಾ ಎಂಬ ಹೆಸರಿನ ವಿಷ್ಣುರೂಪಿಣಿಯಾದ, ಸೊಬಗಿನ ನೀಲಪೀಠದಲ್ಲಿರುವ, ಸಾಮವೇದ ರೂಪಿಣಿಯಾದ, ವರದ ಸ್ವರೂಪಿಣಿಯಾದ, ಗರುಡನನ್ನೇರಿದ, ಆಹವನೀಯಾಗ್ನಿಯಲ್ಲಿ ಉಪಸ್ಥಿತಳಾದ ಸರಸ್ವತಿಯನ್ನು ಧ್ಯಾನಿಸುವೆನು. (ಶ್ಯಾಮವರ್ಣ) 782-785

ತ್ರಿಸಂಧ್ಯಾತ್ಮಕವಾದ ಸಮಷ್ಟಿಗಾಯತ್ರೀಧ್ಯಾನ, ಶಾರದಾತಿಲಕದಲ್ಲಿ
ಇಪ್ಪತ್ತ ಒಂದನೆ ಪಟಲದಲ್ಲಿ ಹೇಳಲಾಗಿದೆ

ಮುತ್ತು, ಹವಳ, ಚಿನ್ನ, ನೀಲ, ಬಿಳಿ ವರ್ಣಛಾಯೆಗಳುಳ್ಳ, ಮೂರು ಮೂರು ಕಣ್ಣುಗಳಿರುವ ಮುಖಗಳಿಂದ ಕೂಡಿರುವ, ಚಂದ್ರಕಲೆಯನ್ನು ರತ್ನದ ಕಿರೀಟದಲ್ಲಿ ಧರಿಸಿರುವ, ತತ್ತ್ವಾರ್ಥವನ್ನು ವಿವರಣೆ ಮಾಡುವಂಥ ವರ್ಣಗಳುಳ್ಳ, ವರದ, ಅಭಯ (ಮುದ್ರೆ). ಅಂಕುಶ, ಕಶಾ (ಚಾಟಿ) ಶುಭ್ರವಾದ ಕಪಾಲ (ಪಾತ್ರ) ರಜ್ಜು, ಶಂಖ, ಚಕ್ರ, ಎರಡು ಕಮಲಗಳು, ಇವುಗಳನ್ನು ಹಸ್ತಗಳಿಂದ ಧರಿಸಿರುವ ಗಾಯತ್ರೀದೇವಿಯನ್ನು ಭಜಿಸುತ್ತೇನೆ. (ಐದು ಮುಖಗಳಿಗೆ ಐದು ಬಣ್ಣಗಳು, ಶರೀರಕ್ಕೆ ಹೊಂಬಣ್ಣ) 786

43 a/1

ಶಾಕಂಭರೀಧ್ಯಾನ, ಪದ್ಮಪುರಾಣದಲ್ಲಿ

ಶೂಲ, ಪಾಶ, ಕಪಾಲ, ಬಿಲ್ಲು, ವಜ್ರಾಯುಧ, ಬಾಣಗಳು, ಅಂಕುಶ, ಗುರಾಣಿ, ಶಂಖ, ಚಕ್ರ, ಗದಾ, ಸರ್ಪ, ಖಡ್ಗ, ಅಭಯಮುದ್ರೆ, ಖಟ್ವಾಂಗ, ದಂಡ ಹಾಗೂ ದೂರ್ವಾ ಇವುಗಳನ್ನು ಧರಿಸಿ ಮಳೆಯು ಬಾರದೇ (ಕ್ಷಾಮ) ಹತಪ್ರಾಯರಾಗಿದ್ದ ಮುನಿಸಮೂಹವನ್ನು ಸಸ್ಯಾದಿಗಳನ್ನು ನೀಡಿ ಯಾವಳು ರಕ್ಷಿಸುವಳೋ ಅಂತಹ ಲೋಕಜನನಿಯಾದ ಮಹೇಶ ಪ್ರಾಣವಲ್ಲಭೆಯಾದ ಶಾಕಂಭರಿಯನ್ನು ನಮಿಸುತ್ತೇನೆ. (ರಕ್ತವರ್ಣ) 787

43 a/2

ಬನಶಂಕರೀಧ್ಯಾನ, ಪದ್ಮಪುರಾಣದಲ್ಲಿ

ಪ್ರಳಯಕಾಲದ ವಹ್ನಿರೂಪದ ಕಾಂತಿಯಿಂದ ಸುಂದರಿಯಾಗಿರುವ, ಶೂಲ, ಕಪಾಲ, ಬಾಣ, ಬಿಲ್ಲು, ವರ, ಅಭಯ, ಪರಿಘ(ಒಂದು ಆಯುಧ) ಶಂಖ, ಚಕ್ರ ಮತ್ತು ಗದೆ ಇವುಗಳನ್ನು ಧರಿಸಿರುವ, ಚಂದ್ರಕಲೆಯಿಂದ ಶೋಭಿಸುವ ಕಿರೀಟವುಳ್ಳ, ರತ್ನಖಚಿತವಾದ ವಸ್ತ್ರಗಳಿಂದ ಅಲಂಕೃತಳಾದ, ಮೂರು ಕಣ್ಣುಗಳಿರುವ, ಬ್ರಹ್ಮಾ ಮತ್ತು ವಿಷ್ಣುವಿನಿಂದ ಸ್ತೋತ್ರಮಾಡಲ್ಪಟ್ಟ ಬನಶಂಕರಿಯನ್ನು ನಮಸ್ಕರಿಸುತ್ತೇನೆ. (ರಕ್ತವರ್ಣ) 788

43 a/3 **ತುಳಜಾಭವಾನೀಧ್ಯಾನ, ತುಳಜಾಭವಾನೀಕಲ್ಪದಲ್ಲಿ**

ರಕ್ತದ ಕಾಂತಿಯಂತೆ ಅರುಣವರ್ಣದ, ಮಂಗಳಕರವಾದ ವಸ್ತ್ರಗಳನ್ನು ಧರಿಸಿದ, ಆನಂದ ಪೂರ್ಣವಾದ ಮುಖವುಳ್ಳ, ಮುತ್ತುಗಳ ಹಾರಗಳು ಆಭೂಷಣಗಳಾಗಿರುವ, ಪುಷ್ಟವಾದ ಸ್ತನಗಳುಳ್ಳ ಅಂದವಾದ ಸೊಂಟದ ಪಟ್ಟಿಯುಳ್ಳ, ದಿವ್ಯ ರಸಮಿಶ್ರಿತವಾದ ಅನ್ನಗಳಿಂದ ಪೂರ್ಣವಾದ ಕಲಶವನ್ನು ಧರಿಸಿದ, ತಾವರೆಯಂತಿರುವ ಸೌಟನ್ನು ಹಸ್ತದಲ್ಲಿ ಹಿಡಿದಿರುವ, ಮೂರುಕಣ್ಣುಗಳಿರುವ ಮೋಡದಂತೆ ಕಪ್ಪಾದ ಮುಂಗುರುಳುಗಳುಳ್ಳ ಶಂಕರಪ್ರಿಯೆಯನ್ನು ಧ್ಯಾನಿಸಬೇಕು. ನಾನೂ ಭಜಿಸುವೆನು. (ಅರುಣವರ್ಣ) 789

43 a/4 **ತುಲಸೀದೇವೀಧ್ಯಾನ, ತುಳಸೀ ಮಾಹಾತ್ಮ್ಯದಲ್ಲಿ**

ಶ್ಯಾಮವರ್ಣೆಯಾದ, ತಾವರೆಗಣ್ಣಿನ, ಅತಿಸಂತುಷ್ಟಳಾದ, ಕಮಲ, ಕಲ್ಹಾರ, ವರ, ಅಭಯಮುದ್ರೆಗಳನ್ನು ಚತುರ್ಹಸ್ತಗಳಲ್ಲಿ ಧರಿಸಿದ, ಕಿರೀಟ, ಹಾರ, ಭುಜಾಭರಣ, ಕರ್ಣಾಭರಣ ಮೊದಲಾದುವುಗಳಿಂದ ಅಲಂಕೃತಳಾದ, ಶುಭ್ರವಸ್ತ್ರಗಳನ್ನು ಧರಿಸಿರುವ, ಪದ್ಮಾಸನದಲ್ಲಿರುವ ತುಳಸೀದೇವಿಯನ್ನು ಧ್ಯಾನಿಸಬೇಕು. (ಶ್ಯಾಮವರ್ಣ) 790-791

43 b/1 **ಚಂದ್ರಾಪರಮೇಶ್ವರೀ ಧ್ಯಾನ, ಪರಮೇಶ್ವರೀಕಲ್ಪದಲ್ಲಿ**

ಹಸ್ತದಲ್ಲಿ ಹೊಳಪುಳ್ಳ ಕಮಲವನ್ನು ಧರಿಸಿದ, ಸುಂದರವಾದ ಕಣ್ಣಾವರೆಗಳಿರುವ ಮುಗುಳ್ನಗೆಯಿಂದ ಕೂಡಿದ ಮುಖಪದ್ಮವುಳ್ಳ ಸಕಲದೇವಸಮೂಹದಿಂದ ನಮಸ್ಕರಿಸಲ್ಪಟ್ಟ ಚರಣಕಮಲಗಳುಳ್ಳ, ಮಧುಸುವಾಸನೆಗಿಂತ ಹೆಚ್ಚಿನ ಸುವಾಸನೆಯಿರುವುದರಿಂದಾಗಿ ಮದವೇರುತ್ತಿರುವ ಜೇನ್ನೊಣಗಳುಳ್ಳ ಚಂದ್ರಾದೇವಿಯು ನಮ್ಮ ಹೃದಯದಲ್ಲಿ ನೆಲೆಸಲಿ. ಕೈಯಲ್ಲಿ ಖಡ್ಗವನ್ನು ಧರಿಸಿದ, ಕಂಸನಿಗೆ ಅತಿಭಯಂಕರಳಾದ, ನಡಿಗೆಯಲ್ಲಿ ಹಂಸವನ್ನು ಸೋಲಿಸುವ, ರೆಪ್ಪೆಗಳ ಸಾಲುಗಳಿಂದ ಬಹುಕುಟಿಲಳಾಗಿರುವ, ಅರಳಿದ ಕಮಲಗಳ ಮಾಲೆಯ ಸಂಸರ್ಗದಿಂದ ಸಂಗೀತಯುಕ್ತಳಾದ, ಸುಂದರವಾದ ಲೀಲೆಗಳನ್ನು ತೋರ್ಪಡಿಸುವ ಚಂದ್ರಿಕಾನಂದಬಾಲಿಕೆಯು ನನ್ನ ಹೃದಯದಲ್ಲಿ ನೆಲೆಸಲಿ. ಚಿನ್ನದ ವರ್ಣವುಳ್ಳ, ಮಹಾದೇವಿಯಾದ, ದಿವ್ಯವಾದ ಸಿಂಹಾಸನದಲ್ಲಿ ಕುಳಿತಿರುವ, ವರದಾನಮಾಡುವ ದೇವಿ ಚಂದ್ರಾಪರಮೇಶ್ವರಿಯನ್ನು ಧ್ಯಾನಿಸಬೇಕು. (ಸ್ವರ್ಣವರ್ಣ) 792-794

43 b/2 **ಅರವತ್ತನಾಲ್ಕು ಕಲಾದೇವಿಯರಧ್ಯಾನ, ಶಾಬರತಂತ್ರದಲ್ಲಿ**

ಪದ್ಮ, ಚಕ್ರ, ಹಗ್ಗ, ಜಿಂಕೆ, ಪುಸ್ತಕ, ವರ್ಣಮಾಲಿಕೆ, ಬಾಣ, ಶುಭ್ರವಾದ ಕಪಾಲ, ಶಂಖ, ಅಮೃತದಿಂದ ಶೋಭಿಸುವ ಚಿನ್ನದ ಬಿಂದಿಗೆ, ಇವುಗಳನ್ನು ಹಸ್ತಗಳಿಂದ ಧರಿಸಿದ ಮುತ್ತು, ಮಿಂಚು, ಮೋಡ, ಸ್ಫಟಿಕ, ನೂತನ ವಾದ ದಾಸವಾಳ ಇವುಗಳ ವರ್ಣದಂತೆ ಮೃದುವರ್ಣಮಯವಾದ ಐದು ಮುಖಗಳಿಂದಲೂ, ಮೂರು ಕಣ್ಣು ಗಳಿಂದಲೂ ಕೂಡಿದ, ಸ್ತನಭಾರದಿಂದ ನಮ್ರಳಾಗಿರುವ ಪೂರ್ಣಚಂದ್ರನ ಕಾಂತಿಯಂತೆ ಕಾಂತಿಯುಳ್ಳ ಶಾರದೆಯನ್ನು ನಮಸ್ಕರಿಸುವೆನು. (ಶುಭ್ರವರ್ಣ) 795

43 b/3 **ಮೂಲಾಧಾರಪೀಠೇಶ್ವರೀಸಾಕಿನೀಧ್ಯಾನ, ಷೋಢಾಕಲ್ಪದಲ್ಲಿ**

ನಾಲ್ಕು ದಳಗಳುಳ್ಳ ಮೂಲಾಧಾರದ ಪದ್ಮದಲ್ಲಿರುವ, ಐದು ಮೊಗಗಳನ್ನುಳ್ಳ, ಮೂರು ಕಣ್ಣುಗಳುಳ್ಳ, ಚಿನ್ನದ ಕಾಂತಿಯುಳ್ಳ, ಎಲುಬುಗಳ ಮೇಲೆ ಕುಳಿತಿರುವ, ಕರಗಳಿಂದ, ಅಂಕುಶ, ಕಮಲ, ಪುಸ್ತಕ ಹಾಗೂ ಜ್ಞಾನಮುದ್ರೆಯನ್ನು ಧರಿಸಿರುವ, ಅತಿ ಸುಂದರಿಯಾದ ಮುದ್ಗಾನ್ನ (ಹೆಸರುಬೆಳೆ ಮತ್ತು ಅನ್ನ)ದಲ್ಲಿ ಆಸಕ್ತ ಮನಸ್ಕಳಾದ, ಮದ್ಯದ ಮದದಿಂದ ಸಂತುಷ್ಟಳಾದ ಸಾಕಿನಿಯನ್ನು ಭಾವಿಸಬೇಕು. (ಸ್ವರ್ಣವರ್ಣ) 796

44 a/1 **ಸ್ವಾಧಿಷ್ಠಾನಪೀಠೇಶ್ವರೀಕಾಕಿನೀಧ್ಯಾನ, ಷೋಢಾಕಲ್ಪದಲ್ಲಿ**

ಆರು ದಳಗಳಿರುವ ಸ್ವಾಧಿಷ್ಠಾನವೆಂಬ ಪದ್ಮದಲ್ಲಿ, ನಾಲ್ಕು ಮೊಗಗಳುಳ್ಳ, ಮೂರು ಕಣ್ಣುಗಳುಳ್ಳ, ಹಳದಿ ವರ್ಣಕಾಂತಿಯನ್ನು ಹೊಂದಿರುವ, ಬಾಣ, ಹಗ್ಗ, ಕಪಾಲ ಮತ್ತು ಅಭಯವನ್ನು (ಮುದ್ರೆ) ಹಸ್ತಗಳಿಂದ ಧರಿಸಿದ, ಜ್ವಾಂತ ವರ್ಗದ ಮೇದಸ್ಸು ಮತ್ತು ಧಾತುಗಳ ಮೇಲೆ ಸ್ಥಾಪಿತಳಾದ, ಜೇನ್ನೊಣಗಳ ಮದದಿಂದ ಸಂತುಷ್ಟಳಾದ, ಬಂಧಿನಿ? ಪೂಗ (ರಾಶಿ) ಶಕ್ತಿಯ, ಪೀತವರ್ಣದ, ದಧ್ಯನ್ನ(ಮೊಸರನ್ನ)ದಲ್ಲಿ ಆಸಕ್ತಳಾದ ಇಷ್ಟಫಲಗಳನ್ನು ನೀಡುವ ಕಾಕಿನಿಯನ್ನು ಭಾವಿಸ(ಧ್ಯಾನಿಸ)ಬೇಕು. (ಪೀತವರ್ಣ) 797

44 a/2 **ಮಣಿಪೂರಪೀಠೇಶ್ವರೀಲಾಕಿನೀಧ್ಯಾನ, ಷೋಢಾಕಲ್ಪದಲ್ಲಿ**

ದಶದಳನಾಭಿಪದ್ಮದಲ್ಲಿ ಮೂರು ಮುಖಗಳಿಂದಲೂ ಮೂರು ಕಣ್ಣುಗಳಿಂದಲೂ ಕೂಡಿರುವ, ಕೃಷ್ಣವರ್ಣದ, ಭುಜಗಳಿಂದ ಶಕ್ತಿ, ವಜ್ರ, ದಂಡ ಮತ್ತು ಅಭಯ(ಮುದ್ರೆ)ಗಳನ್ನು ಧರಿಸಿರುವ, ಅತಿಶಯವಾಗಿ ಉಗ್ರಸ್ವರೂಪಿಣಿಯಾದ, ಡಾಮರೀ ಮುಂತಾದ ಸಹಚರಿಗಳಿಂದ ಸುತ್ತುವರಿಯಲ್ಪಟ್ಟ, ಪಶುಗಳಿಗೂ ಜನಸಮೂಹಕ್ಕೂ ಭಯವನ್ನುಂಟುಮಾಡುವ ಮಾಂಸ ಮತ್ತು ಧಾತು(ದೇಹದ ಒಂದು ಪದಾರ್ಥ)ಗಳ ಮೇಲೆ ಕುಳಿತಿರುವ, ಬೆಲ್ಲದನ್ನದಲ್ಲಿ ಆಸಕ್ತವಾದ ಮನಸ್ಸಿರುವ, ಸಕಲರಿಗೂ ಸುಖವನ್ನು ನೀಡುವ ಲಾಕಿನಿಯನ್ನು ಸ್ಮರಿಸಬೇಕು. (ಕೃಷ್ಣವರ್ಣ) 798

44 a/3 **ಅನಾಹತಪೀಠೇಶ್ವರಿಯಾದ ರಾಕಿನಿಧ್ಯಾನ, ಷೋಢಾಕಲ್ಪದಲ್ಲಿ**

ಹನ್ನೆರಡು ದಳಗಳ ಹೃತ್ಪದ್ಮದಲ್ಲಿ ಎರಡು ಮೊಗಗಳಿಂದ ಕೂಡಿದ್ದು, ಹೊಳೆಯುವ ಕೋರೆಹಲ್ಲುಗಳುಳ್ಳ, ಶ್ಯಾಮವರ್ಣೆಯಾದ, ಬಾಣ, ಶೂಲ, ಕಪಾಲ, ಡಮರು, ಇವುಗಳನ್ನು ಭುಜಗಳಿಂದ ಧರಿಸಿರುವ, ಮೂರು ಕಣ್ಣುಗಳುಳ್ಳ ರಕ್ತವಾಸಿನಿಯಾದ, ಕಾಲರಾತ್ರಿ ಮುಂತಾದ ತನ್ನ ಪರಿವಾರದಿಂದ ಸುತ್ತುವರೆಯಲ್ಪಟ್ಟ, ಶುದ್ಧರಕ್ತದಲ್ಲಿರುವ, ಶ್ರೀವೀರೇಂದ್ರ ಪುರುಷರಿಂದ ವಂದನಾರ್ಹಳಾದ ಇಷ್ಟಫಲಗಳನ್ನು ನೀಡುವ ರಾಕಿನಿಯನ್ನು ಧ್ಯಾನಿಸುತ್ತೇನೆ. (ಶ್ಯಾಮವರ್ಣ) 799

44 a/4 **ವಿಶುದ್ಧಪೀಠೇಶ್ವರೀಢಾಕಿನೀಧ್ಯಾನ, ಷೋಢಾಕಲ್ಪದಲ್ಲಿ**

ಏಳು ದಳಗಳಿರುವ ವಿಶುದ್ಧವಾದ ಗ್ರೀವಾಕೂಪಚಕ್ರದಲ್ಲಿ ರಕ್ತವರ್ಣೆಯಾದ, ಮೂರು ಕಣ್ಣುಗಳಿರುವ, ಖಟ್ವಾಂಗ, ಕಪಾಲ, ಬಾಣ, ದೊಡ್ಡಗುರಾಣಿ ಇವುಗಳನ್ನು ಧರಿಸಿರುವ, ಒಂದು ಮೊಗವಿರುವ, ಪಶುಗಳಿಗೂ ಜನರಿಗೂ

ಭಯವನ್ನುಂಟುಮಾಡುವ, ಪಾಯಸಾನ್ನ ಪ್ರಿಯಳಾದ, ಚರ್ಮನಿವಾಸಿನಿಯಾದ, ಅಮೃತ ಪ್ರವಾಹಗಳಿಂದ ಸುತ್ತುವರೆಯಲ್ಪಟ್ಟ ಶರೀರವುಳ್ಳ ವೀರಸ್ವಭಾವದ ಹಾಗೂ ಕೋಪಯುಕ್ತಳಾದ ಢಾಕಿನಿಯನ್ನು ಧ್ಯಾನಿಸುತ್ತೇನೆ. (ರಕ್ತವರ್ಣ) 800

44 b/1

ಆಜ್ಞಾಪೀಠೇಶ್ವರಿಯಾದ ಹಾಕಿನೀಧ್ಯಾನ, ಷೋಢಾಕಲ್ಪದಲ್ಲಿ

ಎರಡುದಳಗಳಿರುವ ಹುಬ್ಬುಗಳ ನಡುವಿನ ಬಿಂದುಪದ್ಮದಲ್ಲಿ ಶುಭ್ರವರ್ಣಾತ್ಮಿಕೆಯಾದ, ಕರಕಮಲಗಳಿಂದ ಜ್ಞಾನಮುದ್ರೆ, ಹೊಳೆಯುವ ಡಮರು, ಅಕ್ಷಮಾಲೆ ಹಾಗೂ ಕಪಾಲ ಇವುಗಳನ್ನು ಧರಿಸಿದ, ಆರು ಮೊಗಗಳಿರುವ, ಮಜ್ಜೆ (ಶರೀರದ ಧಾತು)ಯಲ್ಲಿ ಆಸೀನಳಾಗಿರುವ ಮೂರು ಕಣ್ಣುಗಳಿಂದ ಸುಂದರಿಯಾಗಿ ಕಾಣುವ, ಹಂಸವತಿ ಮೊದಲಾದ ಸಹಚಾರಿಣಿಗಳಿಂದ ಕೂಡಿದ, ಹರಿದ್ರಾನ್ನ (ಅರಸಿನ ಅನ್ನ) ಪ್ರಿಯಳಾದ, ಸಕಲಸುರರಿಂದ ನಮಿಸಲ್ಪಟ್ಟ, ಹಾಕಿನಿಯನ್ನು ಧ್ಯಾನಿಸಬೇಕು. (ಶ್ವೇತವರ್ಣ) 801

ಜಾಲಂಧರಪೀಠೇಶ್ವರಿಯಾದ ಯಾಕಿನೀಧ್ಯಾನದ ಪ್ರಕಾರವಾಗಿ, ಮೂಲಾಧಾರದ ಸಾಕಿನಿಯನ್ನು ಆರಂಭಿಸಿ ಆಜ್ಞಾಪೀಠದ ಹಾಕಿನೀವರೆಗೆ ಆರು ಚಕ್ರಸ್ಥದೇವತೆಗಳ ಮುಖ, ವರ್ಣ, ಹಸ್ತಗಳು, ಆಯುಧಗಳು, ಆಹಾರ, ಪದ್ಮದಳ ಸಂಖ್ಯೆ ಇವುಗಳ ಸಮೇತವಾದ(ಜಾಲಂಧರಪೀಠೇಶ್ವರೀಯಾಕಿನೀಧ್ಯಾನ ಪ್ರಕಾರವಾಗಿ) ಪ್ರತಿಮಾ ವಿವರಣೆ.

ಇಪ್ಪತ್ತ ಒಂದು ಮುಖಗಳ ವರ್ಣಗಳು		**ಆಹಾರ ಷಟ್ಕ(ಆರು)ದ ವಿವರಣೆ.**
ಚಿನ್ನದ ಬಣ್ಣದ ಮುಖಗಳು ಐದು	......	ಮುದ್ಗಾನ್ನ ಆಹಾರ
ಹಳದಿ ಬಣ್ಣದ ಮುಖಗಳು ನಾಲ್ಕು	......	ದಧ್ಯನ್ನ ಆಹಾರ
ಕಪ್ಪು ಬಣ್ಣದ ಮುಖಗಳು ಮೂರು	......	ಗುಡಾನ್ನ ಆಹಾರ
ಶ್ಯಾಮಲ ಬಣ್ಣದ ಮುಖಗಳು ಎರಡು	......	ರಕ್ತಾನ್ನ ಆಹಾರ
ರಕ್ತವರ್ಣದ ಮುಖ ಒಂದು	......	ಪಾಯಸಾನ್ನ ಆಹಾರ
ಶ್ವೇತವರ್ಣದ ಮುಖಗಳು ಆರು	......	ಹರಿದ್ರಾನ್ನ ಆಹಾರ

ಮೂಲಾಧಾರಪೀಠೇಶ್ವರಿಯಾದ ಸಾಕಿನಿಯಿಂದ ಆರಂಭಗೊಂಡು ಆಜ್ಞಾಪೀಠೇಶ್ವರಿಯಾದ ಹಾಕಿನಿಯವರೆಗೆ ಇರುವ ಆರುದೇವತೆಗಳ ಆಯುಧಗಳು, ಐವತ್ತು ಪದ್ಮದಳಗಳು, ಇಪ್ಪತ್ತನಾಲ್ಕು ಭುಜಗಳು, ಇಪ್ಪತ್ತನಾಲ್ಕು ಆಯುಧಗಳು, ಶಂಖ, ಚಕ್ರ ಮೊದಲಾದ ಇತರ ಆಯುಧಗಳು ಕೂಡಾ ಇಲ್ಲಿ ಲಿಖಿತವಾಗಿವೆ. ಈ ಲಕ್ಷಣಗಳಿಂದ ಗುರುತಿಸಲಾದ ಜಾಲಂಧರಪೀಠೇಶ್ವರಿಯಾದ ಯಾಕಿನೀಪ್ರತಿಮೆಯನ್ನು ಕೆಳಗೆ ಬರೆಯಲಾಗಿದೆ.

44 b/2

ಜಾಲಂಧರಪೀಠೇಶ್ವರಿಯಾದ ಯಾಕಿನೀಧ್ಯಾನ, ಷೋಢಾಕಲ್ಪದಲ್ಲಿ

ಸಕಲದಳಗಳಿಂದ ಕೂಡಿದ ಶಿರಸ್ಸಿನ ಆಕಾಶಪ್ರದೇಶದಲ್ಲಿರುವ ಪದ್ಮದಲ್ಲಿ ಭೈರವಿಸ್ವರೂಪದ ಯಕ್ಷಿಣಿ ಮೊದಲಾಗಿರುವ, ಸಕಲಆಯುಧಗಳಿಂದ ಶೋಭಿಸುವ ಹಸ್ತಗಳುಳ್ಳ, ಸರ್ವವರ್ಣಸಮನ್ವಿತೆಯಾದ, ಸಮಷ್ಟಿರೂಪಳಾದ, ಸಮಸ್ತರಿಗೂ

ಸುಖವನ್ನುಂಟುಮಾಡುವವಳಾದ, ಸಮಗ್ರಧಾತು ಸ್ವರೂಪಳಾದ (ದೇಹದ ಧಾತುಗಳು) ಸಮಸ್ತವಿಧವಾದ ಅನ್ನದಲ್ಲಿ ಪ್ರೀತಿಪಟ್ಟ ಮನಸ್ಸುಳ್ಳ, ಪರಶಿವನ ಪ್ರಿಯಳಾದ ಯಾಕಿನಿಯನ್ನು ಧ್ಯಾನಿಸಬೇಕು. ಪೀಠದೇವತಾ ಸಂಕೇತಸಕಲಾ ರೂಢಹಯ 802

ಶರೀರದಲ್ಲಿರುವ ಷಟ್‌ಚಕ್ರಕ್ರಮ, ಯೋಗಶಾಸ್ತ್ರದಲ್ಲಿ

ಆಧಾರ, ಲಿಂಗ, ನಾಭಿ, ಹೃತ್ಪದ್ಮ, ತಾಲುಮೂಲ, ಲಲಾಟ(ಹಣೆ) ಈ ಆರು ಚಕ್ರಗಳಲ್ಲಿ ಕ್ರಮವಾಗಿ ನಾಲ್ಕು, ಆರು, ಹತ್ತು, ಹನ್ನೆರಡು, ಹದಿನಾರು, ಮತ್ತು ಎರಡುದಳಗಳಿಂದ ಕೂಡಿದ ವಾಸಾಂತ, ಬಾಲ (ಕೇಶ) ಮಧ್ಯ ಹಾಗೂ ಕಂಠದೇಶದಲ್ಲಿ ಸಕಲದಳಗಳಿಗೂ ಸೇರಿದ, ಡ,ಷ,ಕ,ಠ ಮತ್ತು ಹಂ ಕ್ಷಂ ಎಂಬ ಸ್ವರತತ್ತ್ವಗಳಿಂದ ಕೂಡಿದ ವರ್ಣರೂಪವನ್ನು ನಮಸ್ಕರಿಸುತ್ತೇನೆ. 803

45 a/1

ಬ್ರಾಹ್ಮೀದೇವತಾಧ್ಯಾನ, ನೃಸಿಂಹಪ್ರಾಸಾದದಲ್ಲಿ

ಬ್ರಾಹ್ಮಿಯು ನಾಲ್ಕು ಮೊಗಗಳನ್ನುಳ್ಳವಳು, ಆರು ಭುಜಗಳಿರುವ ಆ ದೇವತೆಯು ಹಂಸಾರೂಢೆಯಾಗಿದ್ದಾಳೆ, ಹಳದಿವರ್ಣದಿಂದ ಶೋಭಿತೆ. ಭೂಷಣಗಳಿಂದ ಕೂಡಿರುವವಳು, ಕೃಷ್ಣಮೃಗದ ಚರ್ಮವನ್ನು ಉತ್ತರೀಯವಾಗಿ (ಎಡ ಭುಜದಿಂದ ಹಾಕುವ ಕ್ರಮ) ಮಾಡಿರುವವಳು. ವರದಮುದ್ರೆ, ಸೂತ್ರ?, ಸ್ರುವ (ಯಜ್ಞಸಾಧನ ಪಾತ್ರೆ) ಇವುಗಳನ್ನು ಬಲಗೈಗಳಲ್ಲಿ ಧರಿಸಿರುವವಳು. ಎಡಗೈಗಳಲ್ಲಿ ಪುಸ್ತಕ, ಸಣ್ಣಪಾತ್ರೆ, ಹಾಗೂ ಅಭಯಮುದ್ರೆಯನ್ನು ಧರಿಸಿರುವವಳು. (ಪೀತವರ್ಣ) 804-805

45 a/2

ಮಾಹೇಶ್ವರೀದೇವತಾರೂಪ, ನೃಸಿಂಹಪ್ರಾಸಾದದಲ್ಲಿ

ಮಾಹೇಶ್ವರಿಯು ಎತ್ತನ್ನು ಏರಿರುವವಳು, ಐದು ಮೊಗಗಳು, ಮೂರು ಕಣ್ಣುಗಳು, ಧವಲವರ್ಣ, ಹತ್ತು ಭುಜ ಗಳನ್ನು ಹೊಂದಿದ್ದು ಚಂದ್ರರೇಖೆಯಿಂದ ಅಲಂಕೃತಳಾಗಿದ್ದಾಳೆ. ಕೈಗಳಲ್ಲಿ, ಖಡ್ಗ, ವಜ್ರ, ತ್ರಿಶೂಲ, ಕೊಡಲಿ, ಅಭಯಮುದ್ರೆ, ವರದಮುದ್ರೆ, ಪಾಶ, ಘಂಟೆ, ಸರ್ಪ, ಅಂಕುಶ, ಇವುಗಳನ್ನು ಧರಿಸಿರುವವಳು. (ಧವಲವರ್ಣ) 806-807

45 a/3

ಕೌಮಾರೀದೇವತಾರೂಪ, ನೃಸಿಂಹಪ್ರಾಸಾದದಲ್ಲಿ

ಕೌಮಾರಿಯು ಆರು ಮೊಗದವಳು, ಕೆಂಪು ಮೈಬಣ್ಣ, ಸುಗುಣಾನ್ವಿತೆ, ಹನ್ನೆರಡು ಬಾಹುಗಳನ್ನುಳ್ಳವಳು, ಮಯೂರವಾಹನೆ, ವರದಮುದ್ರೆ, ಶಕ್ತಿ(ಆಯುಧ), ಪತಾಕೆ, ದಂಡ, ಪಾತ್ರ, ಬಾಣ, ಇವುಗಳನ್ನು ಬಲಭುಜಗಳಲ್ಲೂ, ವಾಮಭುಜಗಳಲ್ಲಿ ಬಿಲ್ಲು, ಗಂಟೆ, ಕಮಲ, ಕೋಳಿ, ಪರಶು(ಕೊಡಲಿ) ಹಾಗೂ ಅಭಯ ಮುದ್ರೆಯನ್ನು ಧರಿಸಿರುವವಳು (ಪಾಟಲವರ್ಣ) 808-809

45 a/4

ವೈಷ್ಣವೀದೇವತಾರೂಪ, ನೃಸಿಂಹಪ್ರಾಸಾದದಲ್ಲಿ

ವೈಷ್ಣವೀದೇವತೆಯು ಗರುಡಗಾಮಿನಿ, ಶ್ಯಾಮವರ್ಣೆ, ಆರು ಭುಜಗಳನ್ನುಳ್ಳವಳು. ವನಮಾಲಾಧಾರಿಣಿ (ಎಂದೆಂದೂ ಬಾಡದ ಮಾಲಿಕೆ ವನಮಾಲೆ) ಬಲಕೈಗಳಲ್ಲಿ ವರದಮುದ್ರೆ, ಗದೆ ಹಾಗೂ ಕಮಲವನ್ನು, ಎಡಗೈಗಳಲ್ಲಿ ಶಂಖ, ಚಕ್ರ ಮತ್ತು ಅಭಯಮುದ್ರೆಯನ್ನೂ ಧರಿಸಿರುವವಳು, ಓರೆನೋಟದಿಂದ ನೋಡುವವಳು. ಹೊಳೆಯುವ ಭುಜಗಳುಳ್ಳವಳೂ ಆಗಿದ್ದಾಳೆ. (ನೀಲವರ್ಣ) 810

45 b/1

ವಾರಾಹೀರೂಪಧ್ಯಾನ, ನೃಸಿಂಹಪ್ರಾಸಾದದಲ್ಲಿ

ವಾರಾಹಿಯು ಶ್ಯಾಮವರ್ಣೆ. ಕೋಣನ ಮೇಲೇರಿರುವಳು. ಅವಳು ದೊಡ್ಡಹೊಟ್ಟೆಯನ್ನುಳ್ಳವಳು. ಬಲಗೈಗಳಲ್ಲಿ ವರದಮುದ್ರೆ, ದಂಡ, ಖಡ್ಗಗಳನ್ನು ಧರಿಸಿರುವವಳು. ಎಡಗೈಗಳಲ್ಲಿ ಗುರಾಣಿ, ಪಾತ್ರೆ, ಅಭಯಮುದ್ರೆಗಳನ್ನು ಧರಿಸಿರುವವಳು. ಅವಳ ಮುಖವು ಹಂದಿಯ ಮುಖದಂತಿದ್ದು ಬಾಹುಗಳು ಕಾಂತಿಯುಕ್ತವಾಗಿವೆ. (ಕೃಷ್ಣವರ್ಣ) 811

45 b/2

ಇಂದ್ರಾಣೀದೇವತಾಧ್ಯಾನ, ನೃಸಿಂಹಪ್ರಾಸಾದದಲ್ಲಿ

ಇಂದ್ರಾಣಿಯು ಸಾವಿರ ಕಣ್ಣುಗಳುಳ್ಳವಳು, ಸೌಮ್ಯ (ಮೃದು ಸ್ವಭಾವ)ಳಾಗಿ ಚಿನ್ನದಂತೆ ಕಾಂತಿಯುಕ್ತಳಾಗಿದ್ದಾಳೆ. ಆನೆಯನ್ನೇರಿರುವಳು. ಬಲಗೈಗಳಲ್ಲಿ ವರದಮುದ್ರೆ, ಸೂತ್ರ, ಹಾಗೂ ವಜ್ರ(ಆಯುಧ)ವನ್ನು ಮೇಲ್ಭಾಗದಲ್ಲಿ ಧರಿಸಿರುವವಳು. ಎಡಗೈಗಳಲ್ಲಿ ಕಮಲ, ಪಾತ್ರ ಹಾಗೂ ಕೆಳಭಾಗದ ಕೈಯಲ್ಲಿ ಅಭಯಮುದ್ರೆಯನ್ನು ಧರಿಸಿರುವವಳು. (ಕನಕವರ್ಣ) 812

45 b/3

ಚಂಡಿಕಾಧ್ಯಾನ, ನೃಸಿಂಹಪ್ರಾಸಾದದಲ್ಲಿ

ಚಂಡಿಕೆಯು ಧವಲವರ್ಣವುಳ್ಳವಳು, ಮಂಗಳಸ್ವರೂಪಿಣಿ, ಸಿಂಹಗಾಮಿನಿ, ಜಟಾಯುತೆ, ದುಂಡಾದ ಮೂರು ಕಣ್ಣುಗಳುಳ್ಳವಳು, ವರದಮುದ್ರೆ, ಶೂಲ, ಕರ್ತ್ರಿಕಾ (ಕರ್ತರೀ ಸಣ್ಣಚೂರಿ) ಇವುಗಳನ್ನು ಬಲಗೈಗಳಲ್ಲೂ, ಎಡಗೈಗಳಲ್ಲಿ ಪಾಶ, ಪಾತ್ರ, ಅಭಯಮುದ್ರೆ ಇವುಗಳಿಂದ ಕೂಡಿರುವವಳು. (ಶ್ವೇತವರ್ಣ) 813

45 b/4

ಅರವತ್ತನಾಲ್ಕು ಯೋಗಿನಿಯರ ಧ್ಯಾನ, ರುದ್ರಯಾಮಲದಲ್ಲಿ
ಮೊದಲ ಅಷ್ಟಕದ ದೇವತಾ ಧ್ಯಾನ

ಮೊದಲ ಅಷ್ಟಕವು ಚಿನ್ನದ ಕಾಂತಿಯುಳ್ಳದ್ದಾಗಿದೆ. ಈ ಅಷ್ಟಕದ ದೇವತೆಗಳು ತ್ರಿಶೂಲ, ಡಮರು, ಪಾಶ, ಖಡ್ಗ ಇವುಗಳನ್ನು ಧರಿಸಿರುವವರು. ಈ ಅಷ್ಟಕವು ಸರ್ವಾಂಗಸುಂದರವಾಗಿದೆ. ಇದರಲ್ಲಿ ದಿವ್ಯಯೋಗಿ, ಮಹಾಯೋಗಿ, ಸಿದ್ಧಯೋಗಿ, ಮಹೇಶ್ವರಿ, ಪಿಶಾಚಿನಿ, ಡಾಕಿನಿ, ಕಾಲರಾತ್ರಿ ಮತ್ತು ನಿಶಾಚರಿಗಳಿರುವರು. (ಕನಕವರ್ಣ). 814-815

ಈ ಎಂಟು ದೇವತೆಗಳೂ ಸಮಾನವಾದ ವರ್ಣವನ್ನು ಹೊಂದಿರುವುದರಿಂದ ಒಂದೇ ಪ್ರತಿಮೆಯನ್ನು ಚಿತ್ರಿಸಲಾಗಿದೆ.

46 a/1

ಎರಡನೆ ಅಷ್ಟಕದ ದೇವತೆಗಳ ಧ್ಯಾನ, ರುದ್ರಯಾಮಲದಲ್ಲಿ

ಅಕ್ಷಮಾಲೆ, ಅಂಕುಶ, ಪುಸ್ತಕ ಮತ್ತು ವೀಣೆಯನ್ನು ಧರಿಸಿದ ಧವಲವರ್ಣದ, ಮಣಿಗಳ ಆಭೂಷಣಗಳಿರುವ ಎರಡನೇ ಅಷ್ಟಕವನ್ನು ಧ್ಯಾನಿಸಬೇಕು. ಈ ಅಷ್ಟಕದಲ್ಲಿ ಕಂಕಾಲೀ, ರೌದ್ರವೇತಾಳೀ, ಹೂಂಕಾರೀ, ಭುವನೇಶ್ವರಿ, ಊರ್ಧ್ವಕೇಶೀ, ವಿರೂಪಾಕ್ಷೀ, ಶುಷ್ಕಾಂಗಿ ಮತ್ತು ನರಭೋಜಿನಿ ಎಂಬ ದೇವತೆಗಳು (ಶ್ವೇತವರ್ಣ). 816-817

ಈ ಎಂಟು ದೇವತೆಗಳೂ ಸಮಾನವಾದ ರೂಪವನ್ನು ಹೊಂದಿರುವುದರಿಂದ ಲಕ್ಷಣಕ್ಕಾಗಿ ಒಂದೇ ಪ್ರತಿಮೆಯನ್ನು ಬರೆಯಲಾಗಿದೆ.

46 a/2

ಮೂರನೆ ಅಷ್ಟಕದ ದೇವತಾಧ್ಯಾನ, ರುದ್ರಯಾಮಲದಲ್ಲಿ

ಜ್ವಾಲಾ, ಶಕ್ತಿ, ಗದಾ, ಕುಂತ ಇವುಗಳನ್ನು ಧರಿಸಿರುವ ನೀಲವರ್ಣದ ಶುಭಲಕ್ಷಣವುಳ್ಳ, ಶುಭವನ್ನು ನೀಡುವ ಮೂರನೇ ಅಷ್ಟಕವನ್ನು ಧ್ಯಾನಿಸಬೇಕು. ಈ ಅಷ್ಟಕದಲ್ಲಿ ಷಟ್ಕಾರೀ, ವೀರಭದ್ರೀ, ಧೂಮ್ರಾಕ್ಷೀ, ಕಲಹಪ್ರಿಯಾ, ರಕ್ತಾಕ್ಷೀ, ರಾಕ್ಷಸೀ, ಘೋರಾ, ವಿಶ್ವರೂಪಾ ಈ ಎಂಟು ದೇವತೆಗಳಿರುವರು.(ನೀಲವರ್ಣ) 818-819

ಈ ಎಂಟು ದೇವತೆಗಳೂ ಒಂದೇ ರೂಪವನ್ನುಳ್ಳವರಾದ್ದರಿಂದ ಲಕ್ಷಣಕ್ಕಾಗಿ ಒಂದೇ ಪ್ರತಿಮೆಯನ್ನು ಬರೆಯಲಾಗಿದೆ.

46 a/3

ನಾಲ್ಕನೆ ಅಷ್ಟಕದ ದೇವತಾಧ್ಯಾನ, ರುದ್ರಯಾಮಲದಲ್ಲಿ

ಖಡ್ಗ, ಗುರಾಣಿ, ಪಟ್ಟಿಸ (ಈ ಹೆಸರಿನ ಆಯುಧ) ಪರಶು (ಕೊಡಲಿ) ಇವುಗಳನ್ನು ಧರಿಸಿದ. ಹೊಗೆಯ ಬಣ್ಣವುಳ್ಳ ನಮ್ಮ ಇಷ್ಟವಾದ ಅಷ್ಟಕವನ್ನು ಆದರದಿಂದ ಧ್ಯಾನಿಸಬೇಕು. ಕಾಮಾಕ್ಷಿ, ಉಗ್ರಚಾಮುಂಡೀ, ಭೀಷಣಾ ತ್ರಿಪುರಾಂತಕಾ, ವೀರಕೌಮಾರಿಕಾ, ಚಂಡೀ, ವಾರಾಹೀ, ಭಯಂಕರೀ ಎಂಬ ಎಂಟು ದೇವತೆಗಳು. (ಧೂಮ್ರವರ್ಣ) 820

ಈ ಎಂಟು ಸಮಾನ ರೂಪದವುಗಳಾದುದರಿಂದ ಒಂದೇ ಪ್ರತಿಮೆಯನ್ನು ಬರೆಯಲಾಗಿದೆ.

46 a/4

ಐದನೆ ಅಷ್ಟಕದ ದೇವತಾಧ್ಯಾನ, ರುದ್ರಯಾಮಲದಲ್ಲಿ

ಕುಂತ(ಈಟಿ) ಗುರಾಣಿ, ಪರಿಘ (ಈ ಹೆಸರಿನ ಆಯುಧ) ಭಿಂದಿವಾಳ (ಈ ಹೆಸರಿನ ಆಯುಧ) ಇದು ಪಂಚಮಾಷ್ಟಕದ ದೇವತಾಯುಧಗಳು. ಈ ಅಷ್ಟಕವು ಧವಲ ಹಾಗೂ ಅತ್ಯಂತ ಮನೋಹರವಾಗಿದೆ. ಮುಂಡಧಾರಿಣೀ, ಭೈರವೀ, ಹಸ್ತಿನೀ, ಕ್ರೋಧದುರ್ಮುಖೀ, ಪ್ರೇತವಾಹಿನೀ, ಖಟ್ವಾಂಗದೀರ್ಘಲಂಬೋಷ್ಠೀ, ಮಾಲತೀ, ಮಂದ್ರಯೋಗಿನೀ ಈ ಎಂಟು ದೇವತೆಗಳು ಈ ಅಷ್ಟಕದಲ್ಲಿರುವರು. (ಶ್ವೇತವರ್ಣ) 821-822

ಈ ಎಂಟು ದೇವತೆಗಳೂ ಸಮಾನವರ್ಣವುಳ್ಳವರಾದ್ದರಿಂದ ಒಂದೇ ಪ್ರತಿಮೆಯನ್ನು ಬರೆಯಲಾಗಿದೆ.

46 b/1

ಆರನೆ ಅಷ್ಟಕದ ದೇವತೆಗಳ ಧ್ಯಾನ, ರುದ್ರಯಾಮಲದಲ್ಲಿ

ಭಿಂದಿವಾಳ, ಪರಿಘ, ಕುಂತ, ಗುರಾಣಿ ಈ ಆಯುಧಗಳನ್ನು ಧರಿಸಿದ ಹಳದಿ ಬಣ್ಣವುಳ್ಳ, ಬಹುಚಿತ್ತಾಕರ್ಷಕವಾದ ಆರನೆಯ ಅಷ್ಟಕವನ್ನು ನಾನು ಧ್ಯಾನಿಸುತ್ತೇನೆ. ಅಸ್ಥಿನೀ, ಚಕ್ರಿಣೀ, ಗ್ರಾಹಾ, ಕಂಕಾಲೀ, ಭುವನೇಶ್ವರೀ, ಕಂಟಕೀ, ತಾಟಕೀ, ಶುಭ್ರಾ ಈ ಎಂಟು ದೇವತೆಗಳು ಈ ಅಷ್ಟಕದಲ್ಲಿರುವರು. (ಪೀತವರ್ಣ) 823-824

ಈ ಎಂಟು ದೇವತೆಗಳೂ ಸಮಾನವರ್ಣವುಳ್ಳವರಾದ್ದರಿಂದ ಒಂದೇ ಚಿತ್ರವನ್ನು ಬರೆಯಲಾಗಿದೆ.

46 b/2

ಏಳನೆ ಅಷ್ಟಕದ ದೇವತೆಗಳ ಧ್ಯಾನ, ರುದ್ರಯಾಮಲದಲ್ಲಿ

ಗುರಾಣಿ, ಈಟಿ, ಪರಿಘ, ಭಿಂಡಿವಾಳ ಇವುಗಳನ್ನು ಧರಿಸಿರುವ ಕೆಂಪು ಬಣ್ಣವುಳ್ಳ ಅತಿಮನೋಹರವಾದ ಋಷ್ಯಷ್ಟಕ (ಸಪ್ತಮಾಷ್ಟಕ)ವನ್ನು ನಾನು ಧ್ಯಾನಿಸುವೆನು. ಕ್ರಿಯಾದೂತೀ, ಕರಾಲಿನೀ, ಶಂಖಿನೀ, ಪದ್ಮಿನೀ, ಕ್ಷೀರಾ, ಅಸಂಘಾ, ಪ್ರಹಾರಿಣೀ, ಲಕ್ಷ್ಮೀ ಈ ಎಂಟು ದೇವತೆಗಳು ಋಷ್ಯಷ್ಟಕವೆಂಬುದಾಗಿ ಈ ಅಷ್ಟಕದಲ್ಲಿರುವರು. (ರಕ್ತವರ್ಣ). 825-826

ಈ ಎಂಟು ದೇವತೆಗಳು ಕೂಡಾ ಸಮಾನರೂಪವಾಗಿರುವುದರಿಂದ ಒಂದೇ ಪ್ರತಿಮೆಯನ್ನು ಬರೆಯಲಾಗಿದೆ.

46 b/3

ಎಂಟನೆ ಅಷ್ಟಕದ ದೇವತೆಗಳ ಧ್ಯಾನ, ರುದ್ರಯಾಮಲದಲ್ಲಿ

ಪರಿಘ, ಬಿಂಢಿವಾಳ, ಕುಂತ ಮತ್ತು ಗುರಾಣಿ ಇವುಗಳನ್ನು ಧರಿಸಿದ ಮಿಂಚಿನಂತೆ ಹೊಳೆಯುವ, ವಿಭೂಷಣಗಳಿಂದ ಕೂಡಿದ ಮಂಗಳಕರವಾದ ಎಂಟನೇ ಅಷ್ಟಕವನ್ನು ಧ್ಯಾನಿಸಬೇಕು. ಕಾಮುಕೀ, ಲೋಲಕಾಕದೃಷ್ಟಿ, ಅಧೋಮುಖೀ, ಧೂರ್ಜಟಿ, ಮಾಲಿನೀ, ಘೋರಾ, ಕಪಾಲಿ, ವಿಷಭೋಜಿನಿ, ಈ ಪ್ರಕಾರವಾಗಿ ಅರ್ವತ್ತನಾಲ್ಕು ಯೋಗಿನಿಯರು ವರಸಿದ್ಧಿಯನ್ನು ನೀಡುವವರಾಗಿ ಪ್ರಸಿದ್ಧರಾಗಿದ್ದಾರೆ. (ತಡಿದ್ವರ್ಣ) 827-828.

ಈ ಎಂಟು ಯೋಗಿನಿಯರು ಸಮಾನರೂಪದವರಾದ್ದರಿಂದ ಒಂದೇ ಪ್ರತಿಮೆಯನ್ನು ಲಕ್ಷಣಕ್ಕಾಗಿ ಬರೆಯಲಾಗಿದೆ.

46 b/4

ಎಂಟು ಮಹಾಲಕ್ಷ್ಮಿಯರ ಧ್ಯಾನ, ನೃಸಿಂಹಪ್ರಾಸಾದ, ಪಾಂಚರಾತ್ರ, ಮಯೂಖ ಹಾಗೂ ಅಥರ್ವಣರಹಸ್ಯದಲ್ಲಿ: ಅವರ ಪೈಕಿ ದ್ವಿಭುಜಮಹಾಲಕ್ಷ್ಮಿಧ್ಯಾನ, ನೃಸಿಂಹಪ್ರಾಸಾದದಲ್ಲಿ

ಹೇ ರಾಜನೇ, ಹರಿಯ ಸಮೀಪದಲ್ಲಿ ಎರಡು ಭುಜಗಳಿರುವ ಮಹಾಲಕ್ಷ್ಮಿಯನ್ನು ರಚಿಸಬೇಕು. ದಿವ್ಯರೂಪವನ್ನು ಹೊಂದಿ ಕೈಗಳಲ್ಲಿ ಕಮಲಗಳಿರಬೇಕು. ಸಮಸ್ತ ಆಭರಣಗಳಿಂದ ಅಲಂಕೃತೆಯಾಗಿರಬೇಕು. (ಕನಕವರ್ಣ) 829

47 a/1

ಗಜಲಕ್ಷ್ಮೀಧ್ಯಾನ ಪಾಂಚರಾತ್ರದಲ್ಲಿ

ದೇವಿಲಕ್ಷ್ಮಿಯು ಬಿಳಿಯ ವಸ್ತ್ರವನ್ನು ಧರಿಸಿರುವಳು, ಭೂಮಿಯಲ್ಲಿ ಅಪ್ರತಿಮವಾದ ರೂಪವುಳ್ಳವಳು. ಚತುರ್ಭುಜಳಾದ ದೇವಿಯನ್ನು ಕುಳಿತಿರುವಂತೆ ರಚಿಸಬೇಕು. ಇವಳ ಸಿಂಹಾಸನದಲ್ಲಿ ಸುಂದರವಾದ ಕರ್ಣಿಕೆ (ಬೀಜಕೋಶ)ಯುಳ್ಳ ಕಮಲವನ್ನು ಬರೆಯಬೇಕು. ಅದಕ್ಕೆ ಎಂಟು ದಳಗಳು. ಕರ್ಣಿಕೆಯ ಮೇಲೆ ದೇವಿ ಕುಳಿತಿರಬೇಕು. ದೇವಿಯು ಕುಳಿತಿರುವ ಭಂಗಿಯು ವಿನಾಯಕನು ಕುಳಿತಿರುವಂತಿರಬೇಕು. ಅವಳ ಹಸ್ತದಲ್ಲಿ ಮಂಗಳಕರವಾದ ಉದ್ದವಾದ ನಾಲವಿರುವ ಒಂದು ಕಮಲವಿರಬೇಕು. ಎಲೈ ಯದುಶ್ರೇಷ್ಠ! ಆ ಕಮಲವು ಬಲಭಾಗದಲ್ಲಿ ಕೇಯೂರವಿರುವ ಜಾಗದಲ್ಲಿರುವಂತೆ ರಚಿಸಬೇಕು. ರಾಜನೇ, ವಾಮಭಾಗದಲ್ಲಿ ಚಿತ್ತಾಕರ್ಷಕವಾದ ಅಮೃತಘಟವನ್ನು ರಚಿಸಬೇಕು. ಅವಳ ಇತರ ಎರಡು ಕೈಗಳು ಬಿಲ್ವ ಫಲ ಮತ್ತು ಶಂಖವನ್ನು ಧರಿಸಿರುವಂತೆ ರಚಿಸಲ್ಪಟ್ಟಿರಬೇಕು. ದೇವಿಯ ಹಿಂಭಾಗದಲ್ಲಿ ಸೊಂಡಿಲುಗಳನ್ನು ತಿರುವಿಕೊಂಡಿರುವ ಎರಡು ಆನೆಗಳನ್ನು ರಚಿಸಬೇಕು. ದೇವಿಯ ಶಿರ: ಪ್ರದೇಶದ ಮೇಲೆ ಚಿತ್ತಾಕರ್ಷಕವಾದ ಒಂದು ಕಮಲವಿರಬೇಕು. (ಸ್ವರ್ಣವರ್ಣ) 830-834

47a/2 **ಮಹಾಲಕ್ಷ್ಮೀಧ್ಯಾನ, ನೃಸಿಂಹಪ್ರಾಸಾದದಲ್ಲಿ**

ವಿಶ್ವಕರ್ಮನು ಅದನ್ನು ಹೇಳಿರುವನು. ಕೊಲ್ಲಾಪುರ ಕ್ಷೇತ್ರದಲ್ಲಿ ಧನ್ಯಸ್ವರೂಪಿಣಿಯಾದ ಮಹಾಲಕ್ಷ್ಮಿಯು ಹೇಗೆ ಹೇಳಲ್ಪಟ್ಟಿರುವಳೋ ಹಾಗೆ ಸರ್ವಾಭರಣಭೂಷಿತೆಯಾಗಿರುವ ಆಕೆಯನ್ನು ಲಕ್ಷ್ಮಿಯಂತೆ ರಚಿಸಬೇಕು. ಕೆಳಭಾಗದ ಬಲಗೈಯಲ್ಲಿ ಪಾತ್ರವನ್ನೂ ಊರ್ಧ್ವ ಭಾಗದಲ್ಲಿ ಕೌಮೋದಕೀಗದೆಯನ್ನೂ, ಎಡಭಾಗದಲ್ಲಿ ಗುರಾಣಿಯನ್ನೂ ಅದರ ಕೆಳಭಾಗದ ಕೈಯಲ್ಲಿ ಶ್ರೀಫಲವನ್ನೂ ಧರಿಸಿರುವಳು. ಮಸ್ತಕದಲ್ಲಿ ಲಿಂಗವನ್ನು ಧರಿಸಿದ ಲಕ್ಷ್ಮಿಯು ಐಶ್ವರ್ಯಪ್ರಾಪ್ತಿಗಾಗಿ ಪೂಜಿತಳಾಗಬೇಕು. (ಸ್ವರ್ಣವರ್ಣ) 835-836

47 a/3 **ಶ್ರೀದೇವೀಧ್ಯಾನ, ಮಯೂಖದಲ್ಲಿ**

ಪಾಶ, ಅಕ್ಷಮಾಲೆ, ತಾವರೆ, ಅಂಕುಶಗಳನ್ನು ದಕ್ಷಿಣೋತ್ತರ ಕೈಗಳಿಂದ ಧರಿಸಿರುವ ಪದ್ಮಾಸನದಲ್ಲಿ ಕುಳಿತಿರುವಂತೆ ಮೂಲೋಕಗಳ ತಾಯಿಯಾದ ಲಕ್ಷ್ಮಿಯನ್ನು ರಚಿಸಬೇಕು. (ಸ್ವರ್ಣವರ್ಣ) 837

47 a/4 **ವೀರಲಕ್ಷ್ಮೀಧ್ಯಾನ, ಪಾಂಚರಾತ್ರದಲ್ಲಿ**

ವರದ ಮತ್ತು ಅಭಯಹಸ್ತ ಮುದ್ರೆಗಳನ್ನು ಧರಿಸಿ ಮೇಲ್ಭಾಗದ ಎರಡು ಕೈಗಳಲ್ಲಿ ಪದ್ಮಗಳನ್ನು ಧರಿಸಿ, ಪದ್ಮಾಸನದಲ್ಲಿ ಕುಳಿತಿರುವವಳು ವೀರಲಕ್ಷ್ಮಿಯೆಂದು ಪ್ರಸಿದ್ಧಳಾಗಿದ್ದಾಳೆ. (ಕನಕವರ್ಣ) 838

47 b/1 **ದ್ವಿಭುಜಾವೀರಲಕ್ಷ್ಮೀಧ್ಯಾನ, ಪಾಂಚರಾತ್ರದಲ್ಲಿ**

ದ್ವಿಭುಜಾವೀರಲಕ್ಷ್ಮಿಯ ಬಲಗೈಯಲ್ಲಿ ಅಭಯ, ಎಡಗೈಯಲ್ಲಿ ವರದ ಮುದ್ರೆ ಇರುತ್ತದೆ. ತೊಡೆಗಳು ಪದ್ಮದಲಾಕಾರವಾಗಿರುತ್ತವೆ. ಇದು ವೀರಲಕ್ಷ್ಮಿಯ ಲಕ್ಷಣ. (ಕನಕವರ್ಣ) 839

47 b/2 **ಅಷ್ಟಭುಜಾವೀರಲಕ್ಷ್ಮೀಧ್ಯಾನ, ಪಾಂಚರಾತ್ರದಲ್ಲಿ**

ಪಾಶ, ಅಂಕುಶ, ಅಕ್ಷಸೂತ್ರ, ವರ, ಅಭಯ, ಗದಾ, ಪದ್ಮ ಪಾತ್ರಗಳಿರುವಂತೆ ಚಿತ್ರಿಸಬೇಕು. (ಕನಕವರ್ಣ)

47 b/3 **ಪ್ರಸನ್ನಲಕ್ಷ್ಮೀಧ್ಯಾನ, ಅಥರ್ವಣರಹಸ್ಯದಲ್ಲಿ**

ಪರಮಕಲ್ಯಾಣ ಸ್ವರೂಪಿಣಿಯಾದ, ಶುದ್ಧಸುವರ್ಣದಂತೆ ಪ್ರಕಾಶಮಾನವಾಗಿರುವ, ತೇಜಸ್ ಸ್ವರೂಪಿಣಿಯಾದ, ಚಿನ್ನದ ವಸ್ತ್ರಗಳನ್ನುಟ್ಟ ಸಮಸ್ತಭೂಷಣಗಳಿಂದ ಉಜ್ವಲವಾದ ಅಂಗಗಳುಳ್ಳ, ದಾಳಿಂಬ, ಚಿನ್ನದ ಕಲಶ, ಮತ್ತು ಚಿನ್ನದ ಎರಡು ಪದ್ಮಗಳನ್ನು ಧರಿಸಿರುವ, ವಿಷ್ಣುವಿನ ಎಡತೊಡೆಯ ಮೇಲೆ ಕುಳಿತುಕೊಂಡಿರುವ ಸಕಲಲೋಕದ ಜನನಿಯಾಗಿರುವ ಆದಿ ಶಕ್ತಿಯನ್ನು ನಮಸ್ಕರಿಸುವೆನು. (ಸ್ವರ್ಣವರ್ಣ) 840

47 b/4 **ಸಿದ್ಧಿಲಕ್ಷ್ಮೀಧ್ಯಾನ, ಮಂತ್ರದೇವತಾಪ್ರಕಾಶಿಕೆಯಲ್ಲಿ**

ಐದು ಮೊಗಗಳ, ಹತ್ತು ಭುಜಗಳು ಇರುವ, ಪುಷ್ಟ ಮತ್ತು ಉನ್ನತವಾದ ಸ್ತನಗಳಿರುವ, ಕೋಟಿ ಮಿಂಚುಗಳ ಪ್ರಕಾಶವಿರುವ, ಸಿಂಧೂರದಂತೆ ಕೆಂಬಣ್ಣದ ಶರೀರವಿರುವ, ಅಕ್ಷಮಾಲೆ, ಕಪಾಲ, ಶೂಲ, ಖಡ್ಗ, ಗುರಾಣಿ, ಚಿನ್ನದ ಗಂಟೆ, ಪಾಶ, ಅಂಕುಶ ವರ ಮತ್ತು ಅಭಯ ಮುದ್ರೆಗಳನ್ನು ಧರಿಸಿರುವ ಸಕಲಸಿದ್ಧಿಗಳನ್ನು ನೀಡುವ ದೇವಿಯಾದ ಸಿದ್ಧಿಲಕ್ಷ್ಮಿಯನ್ನು ನಮಿಸುತ್ತೇನೆ. (ಸಿಂಧೂರವರ್ಣ) 841-843

48 a/1 **ಪದ್ಮಾಲಕ್ಷ್ಮೀಧ್ಯಾನ, ಪಾಂಚರಾತ್ರಕ್ರಿಯಾಪಾದದಲ್ಲಿ**

ಪದ್ಮಾಲಕ್ಷ್ಮಿಯು ಕಮಲಾಸನೆ, ಕಮುದಕಾಂತಿಯುಳ್ಳವಳು. ಪದ್ಮದಲ್ಲಿ ವಾಸಿಸುವವಳು. ಚಿನ್ನ ಮತ್ತು ರತ್ನದಂತೆ ಹೊಳಪುಳ್ಳ ಮೊಸಳೆಯ ಆಕೃತಿಯ ಕುಂಡಲವನ್ನು ಕಿವಿಯ ಆಭರಣವನ್ನಾಗಿ ಮಾಡಿಕೊಂಡಿರುವವಳು. ಚಂದ್ರಬಿಂಬದಂತೆ ನಿರ್ಮಲ ಮುಖಿ. ಕಿವಿಯವರೆಗೆ ತುಂಬಿದಂತಿರುವ ಆಯತನೇತ್ರೆ. ಯುವತಿ, ತುಂಬ ಸೊಗಸಾದ ಅಂಗವುಳ್ಳವಳು. ವಕ್ರವಾದ ಹುಬ್ಬುಗಳಿರುವವಳು. ವಿಭ್ರಮ (ಶೃಂಗಾರ ಭಾವ) ದಿಂದ ಕೂಡಿದವಳು. ಕೆಂಪು ತುಟಿಗಳಿದ್ದು ಕಪೋಲಗಳು ಉಬ್ಬಿವೆ. ಸ್ತನಗಳನ್ನು ರವಿಕೆಯಿಂದ ಮುಚ್ಚಿರುವಳು. ಶಿರಸ್ಸಿನಲ್ಲಿ ಅಲಂಕಾರಕ್ಕಾಗಿ ಶಂಖ, ಚಕ್ರ ಹಾಗೂ ಬೈತಲೆಗೆ ಪದ್ಮಾಕಾರದ ಆಭರಣಗಳಿವೆ. ಆನೆಯ ಸೊಂಡಲಿನಂತೆ ಬಾಹುಗಳಿವೆ. ಅವು ಕೈಯೂರಗಳಿಂದ ಹೊಳೆಯುತ್ತಿವೆ. ವಾಮ ದಕ್ಷಿಣ ಭಾಗದ ಹಸ್ತಗಳಲ್ಲಿ ತಾವರೆಯನ್ನೂ ಶ್ರೀಫಲ (ಬಿಲ್ವದ ಫಲ)ವನ್ನು ಧರಿಸಿರುವಳು. ಸುಂದರವಾದ ವಸ್ತ್ರಗಳನ್ನು ಧರಿಸಿರುವಳು. ವಿಶಾಲವಾದ ಶ್ರೋಣಿ (ಕಟಿಪ್ರದೇಶ)ಯುಳ್ಳವಳು, ಕಟಿಯಲ್ಲಿ ಮೇಖಲೆ (ಸೊಂಟದ ಪಟ್ಟಿ) ಇದೆ. ಈ ಲಕ್ಷ್ಮಿಯು ಸಂಪತ್ತನ್ನು ಅಧಿಕಗೊಳಿಸುವ ದೇವತೆ. (ಪದ್ಮವರ್ಣ) 844-848

48 a/2 **ವಿಷ್ಣುಪರಿವಾರದೇವತೆಗಳ ಧ್ಯಾನ, ಪದ್ಮಪುರಾಣದಲ್ಲಿ**

ಶ್ರೀದೇವಿಯು ಚಿನ್ನದ ಕಾಂತಿಯವಳು. ಭೂದೇವಿಯು ಅರ್ಜುನಪುಷ್ಪ (ಧವಳ ಪುಷ್ಪ)ದ ಕಾಂತಿಯುಳ್ಳವಳು. ಸರಸ್ವತಿದೇವಿಯು ಧವಲವರ್ಣೆ. ಪ್ರೀತಿದೇವಿಯು ಶ್ಯಾಮಲಕಾಂತಿಯವಳು. ಕೀರ್ತಿದೇವಿಯು ರಕ್ತವರ್ಣದವಳು. ಶಾಂತಿದೇವಿಯು ಸ್ಫಟಿಕದಂತೆ ಶುಭ್ರಳು. ತುಷ್ಟಿದೇವಿಯು ಹಳದಿವರ್ಣದವಳು. ಪುಷ್ಟಿದೇವಿಯು ಶ್ಯಾಮಲವರ್ಣದವಳು. ಹೀಗೆ ಈ ದೇವಿಯರು ನಿರೂಪಿತರಾಗಿದ್ದಾರೆ. ಎರಡು ಹಸ್ತಗಳಲ್ಲಿ ಪದ್ಮಗಳನ್ನು ಧರಿಸಿ ವರದ ಮತ್ತು ಅಭಯ ಮುದ್ರೆಗಳನ್ನು ಧರಿಸಿದ್ದಾರೆ.

ಈ ರೀತಿಯಾಗಿ ಒಂಬತ್ತು ಪ್ರತಿಮೆಗಳೂ ಒಂದೇ ರೂಪವುಳ್ಳವುಗಳಾದ್ದರಿಂದ ಒಂದೇ ಪ್ರತಿಮೆಯನ್ನು ಲಕ್ಷಣಜ್ಞಾನಕ್ಕಾಗಿ ಬರೆಯಲಾಗಿದೆ. ಶ್ರೀ:ಸ್ವರ್ಣವರ್ಣ, ಕೀರ್ತಿ ರಕ್ತವರ್ಣ, ಶಾಂತಿ: ಸ್ಫಟಿಕವರ್ಣ, ತುಷ್ಟಿ: ಹಳದಿಬಣ್ಣ, ಪುಷ್ಟಿ : ಶ್ಯಾಮಲವರ್ಣ. 849-850

48 a/3 **ಅಕಾರಾದಿಕ್ಷಕಾರಪರ್ಯಂತವಾಗಿ ಅಕ್ಷರ ಸ್ವರೂಪಗಳು, ಸಿದ್ಧಶಾಬರತಂತ್ರದಲ್ಲಿ**

ಈ ವರ್ಣಗಳ ಅಭಿಮಾನಿದೇವತೆಗಳ, ಧ್ಯಾನ, ವರ್ಣ, ಆಯುಧ ಲಕ್ಷಣಗಳನ್ನು ಪಾಂಚರಾತ್ರಾಗಮದಲ್ಲಿ ನೋಡಬೇಕು. ಅವುಗಳ ಪೈಕಿ ಅಕಾರ ಸ್ವರೂಪ. ಹೆಣ್ಣು ಆಡಿನ ಮುಖವಿದ್ದು, ರಕ್ತವರ್ಣವನ್ನು ಹೊಂದಿ, ಹಂಸಗಾಮಿನಿಯಾಗಿ, ಬಿಳಿಯ ವಸ್ತ್ರವನ್ನು ಉಟ್ಟ ಈಕೆಯು ಬಲಗೈಗಳಲ್ಲಿ ಬಿಲ್ಲು ಮತ್ತು ವರದ ಮುದ್ರೆಯನ್ನು ಎಡಗೈಗಳಲ್ಲಿ ಬಾಣ ಮತ್ತು ಅಭಯಮುದ್ರೆಯನ್ನು ಧರಿಸಿರುವಳು. (ರಕ್ತವರ್ಣ) 851

ಈ ವರ್ಣದ ಅಭಿಮಾನಿ ದೇವತೆ ವಿಷ್ಣು. ಷಡನ್ವಯಪರೀಕ್ಷೆಯೆಂಬ ದುರ್ವಾಸನು ಮಾಡಿದ ಮಹಿಮ್ನವ್ಯಾಖ್ಯಾನದಲ್ಲಿ, ಮಂತ್ರ ಶಾಸ್ತ್ರದಲ್ಲಿ ಹಾಗೂ ಇತರ ತಂತ್ರ ಗ್ರಂಥದಲ್ಲಿ ಈ ೫೧ ಅಕ್ಷರಗಳ ಶರೀರಗಳು ದೀರ್ಘವಾಗಿವೆ. ಗಾತ್ರಪ್ರಮಾಣಗಳು, ಅತಿಕಾಯ. (ಬೃಹದ್ಗಾತ್ರ)

48 b/1 **ಆಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ**

ಆಕಾರವೆಂಬ ದೇವತೆಯು ಅಥರ್ವಣವೇದಸ್ವರೂಪಿಣಿ, ಶ್ಯಾಮವರ್ಣೆಯಾಗಿ ಧವಲಾಂಬರವನ್ನುಟ್ಟು ಅಶ್ವಗಮನೆಯಾಗಿದ್ದಾಳೆ. ಈ ದೇವತೆಯು ಖಡ್ಗ, ಗುರಾಣಿಯನ್ನು ಬಲಗೈಗಳಲ್ಲೂ, ವರ ಮತ್ತು ಅಭಯಮುದ್ರೆಯನ್ನು ಎಡಗೈಗಳಲ್ಲೂ ಧರಿಸಿದ್ದಾಳೆ. (ಶ್ಯಾಮವರ್ಣ). ಈ ಅಕ್ಷರ ದೇವತೆಯ ಅಭಿಮಾನಿಯು ಮಧುಸೂದನ, ಅತಿಕಾಯ (ಬೃಹದ್ಗಾತ್ರ). 852

48 b/2 **ಇಕಾರಸ್ವರೂಪ, ಸಿದ್ಧಶಾಬರ ತಂತ್ರದಲ್ಲಿ**

ಇಕಾರವೆಂಬ ಇಳಾದೇವಿಯು ಧವಲವರ್ಣೆ, ಮತ್ತಗಜಗಮನೆ, ಹಾಗೂ ಮಂಗಳಸ್ವರೂಪಿಣಿ. ಈಕೆಯು ಬಲಗೈಗಳಲ್ಲಿ ಚಂದ್ರಹಾಸ (ಖಡ್ಗ) ಮತ್ತು ವರದ ಮುದ್ರೆಯನ್ನೂ, ಎಡಗೈಗಳಲ್ಲಿ ಗದೆ ಮತ್ತು ಅಭಯಮುದ್ರೆಯನ್ನೂಧರಿಸಿದ್ದಾಳೆ. (ಶ್ವೇತವರ್ಣ). ಈ ಅಕ್ಷರದೇವತೆಯ ಅಭಿಮಾನಿದೇವತೆಯು ತ್ರಿವಿಕ್ರಮ, ಮೂರು ಯೋಜನ ಗಾತ್ರ. 853

48 b/3 **ಈಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ**

ಈಶ್ವರಿಯು ಚಿನ್ನದ ವರ್ಣದಂತೆ ಕಾಂತಿಯುಳ್ಳವಳು, ಎತ್ತಿನ ಮೇಲೇರಿದವಳು, ಧವಲವಸ್ತ್ರಾನ್ವಿತೆ. ಬಲಗೈಗಳಲ್ಲಿ ಹೆಣ್ಣುಗಿಳಿಯನ್ನೂ ವರದ ಮುದ್ರೆಯನ್ನೂ, ಎಡಗೈಗಳಲ್ಲಿ ಅಂಕುಶ ಮತ್ತು ಅಭಯಮುದ್ರೆಯನ್ನೂ ಧರಿಸಿರುವಳು. (ಸ್ವರ್ಣವರ್ಣ). ಈ ಅಕ್ಷರಾಭಿಮಾನಿದೇವತೆಯು ವಾಮನ, ೧೦ ಯೋಜನ ಉದ್ದ. ೫ ಯೋಜನಗಾತ್ರ. 854

48 b/4 **ಉಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ**

ಉಕಾರದೇವತೆಯು ಉಗ್ರಸ್ವರೂಪಳು. ಆರುಭುಜಗಳನ್ನು ಪಡೆದ ಆದೇವಿಯು ಧವಳವರ್ಣೆ ಹಾಗೂ ಸಿಂಹಗಾಮಿನಿ. ಬಲಗೈಗಳಲ್ಲಿ ಆಕೆಯು ಶೂಲ, ಅಂಕುಶ ಮತ್ತು ವರದಮುದ್ರೆಯನ್ನೂ ಎಡಗೈಗಳಲ್ಲಿ ಪಾಶ ಗದೆ ಮತ್ತು ಅಭಯಮುದ್ರೆಗಳನ್ನೂ ಧರಿಸಿರುವಳು - (ಶುಭ್ರವರ್ಣ) 855

ಈ ಅಕ್ಷರಾಭಿಮಾನಿದೇವತೆ ವಿಷ್ಣು. ೨೦೦೦ ಯೋಜನಗಳು.

48 b/5

ಊಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ

ಊಕಾರವು ಊರ್ಜಸ್ವಲಾದೇವಿ. ಆಕೆಯು ಶ್ರೇಷ್ಠವಾದ ಹುಲಿಯನ್ನೇರಿರುವಳು. ರಕ್ತವರ್ಣದ ಚತುರ್ಭುಜಗಳಿರುವ ಈ ದೇವಿಯು ಖಡ್ಗ, ಗುರಾಣಿ, ವರ ಮತ್ತು ಅಭಯಮುದ್ರೆಗಳನ್ನು ಧರಿಸಿರುವಳು (ರಕ್ತವರ್ಣ). ಈ ದೇವತೆಯ ಅಭಿಮಾನಿ ಹೃಷೀಕೇಶ. ೨೦೦೦ ಯೋಜನಗಳು. 856

48 b/6

ಋಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ

ಋಕಾರದೇವತೆಯು 'ಋತಧಾಮಾ' ಎಂಬವಳು. ರಕ್ತವರ್ಣೆ ಎತ್ತಿನ ಮೇಲೆ ಕುಳಿತಿರುವಳು. ಆಕೆಯು ಬಲ ಭಾಗದ ಭುಜಗಳಲ್ಲಿ ಪಾಶ ಮತ್ತು ವರದ ಮುದ್ರೆಯನ್ನು ಎಡಭಾಗದ ಹಸ್ತಗಳಲ್ಲಿ ಅಂಕುಶ ಮತ್ತು ಅಭಯಮುದ್ರೆಯನ್ನು ಧರಿಸಿರುವಳು (ರಕ್ತವರ್ಣ). ಈ ಅಕ್ಷರಾಭಿಮಾನಿದೇವತೆಯು ಪದ್ಮನಾಭ. ೨೦೦೦ ಯೋಜನಗಳು: 857

49 a/1

ೠಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ

ೠಕಾರವೆಂಬ ಈ ದೇವತೆಯು ರೇಣುಕೆ. ಆರುಮೊಗಗಳನ್ನೂ ಆರು ಭುಜಗಳನ್ನೂ ಹೊಂದಿ ಧವಳ ವರ್ಣೆಯಾಗಿದ್ದಾಳೆ. ಬಲಗೈಗಳಲ್ಲಿ ಶೂಲ, ಪಾಶ ಮತ್ತು ವರದ ಮುದ್ರೆಯನ್ನೂ ಎಡಗೈಗಳಲ್ಲಿ ಖಡ್ಗ, ಗದೆ ಮತ್ತು ಅಭಯಮುದ್ರೆಯನ್ನೂ ಧರಿಸಿದ್ದಾಳೆ. ಇವಳು ಕೆಂಪು ಸಿಂಹದ ಮೇಲೇರಿ ಕ್ರೂರಸ್ವಭಾವದವಳಾಗಿ ಲೋಕಗಳಿಗೆ ಭಯವನ್ನು ಉಂಟುಮಾಡುವಳು. (ಶ್ವೇತವರ್ಣ) ಈ ಅಕ್ಷರಾಭಿಮಾನಿದೇವತೆ ದಾಮೋದರ ೨೦೦೦ ಯೋಜನಗಳು.
858

49 a/2

ಲೃಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ

ಲೃಕಾರದೇವತೆಯು ಋತಂಭರೆ ಎಂಬ ಹೆಸರನ್ನು ಹೊಂದಿದವಳು. ಶ್ಯಾಮವರ್ಣೆಯಾದ ಈಕೆಯು ಶ್ರೇಷ್ಠವಾದ ಹುಲಿಯ ಮೇಲೆ ಇರುವಳು. ನಾಲ್ಕು ಮುಖಗಳು ಮತ್ತು ಎಂಟು ಹಸ್ತಗಳನ್ನು ಪಡೆದ ಈ ದೇವತೆಯು ಬಲಗೈಗಳಿಂದ ಅಸ್ತ್ರಗಳಾದ ತ್ರಿಶೂಲ, ಪಾಶ, ಡಮರು ಹಾಗೂ ವರದಮುದ್ರೆಯನ್ನೂ ಎಡಗೈಗಳಿಂದ ಖಡ್ಗ, ಕಪಾಲ, ಮುಸಲ(ಒನಕೆ) ಮತ್ತು ಅಭಯಮುದ್ರೆಯನ್ನೂ ಧರಿಸಿರುವಳು. ಇವಳು ಪೀತಾಂಬರವನ್ನು ಉಟ್ಟು ಮಂಗಳಮಯಿಯಾಗಿರುವಳು. (ಶ್ಯಾಮವರ್ಣ) ಈ ಅಕ್ಷರಾಭಿಮಾನಿದೇವತೆ ಶಂಭು, ತುಂಬಾ ಎತ್ತರ. 859-860

49 a/3

ಲೄಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ

'ಲೄ'ಕಾರ ದೇವತೆಯು ಲೄಂಜಿಕಾ ಅಥವಾ 'ಜ್ಯೇಷ್ಠಾಲೄಂಜಿಕಾ'. ಆ ದೇವತೆಯು ಪುಷ್ಪದಂತವೆಂಬ ಆನೆಯ ಮೇಲಿರುವಳು. ರಕ್ತವರ್ಣದ ಆಕೆಯು ಹತ್ತು ಭುಜಗಳನ್ನು ಹೊಂದಿದ್ದಾಳೆ. ಬಲಗೈಗಳಿಂದ ಕ್ರಮವಾಗಿ ಶ್ರೇಷ್ಠವಾದ ತ್ರಿಶೂಲ, ಪಾಶ, ಮುಸಲ(ಒನಕೆ) ಚಂದ್ರಹಾಸ(ಖಡ್ಗ) ವರದಮುದ್ರೆಯನ್ನೂ ಎಡಗೈಗಳಿಂದ ಖಡ್ಗ, ಗುರಾಣಿ, ಗದೆ, ಶಕ್ತಿ ಮತ್ತು ಅಭಯಮುದ್ರೆಗಳನ್ನು ಧರಿಸಿರುವಳು (ರಕ್ತವರ್ಣ). ಈ ಅಕ್ಷರಾಭಿಮಾನಿದೇವತೆ ನಾರಾಯಣ, ಅತಿದೀರ್ಘವಿಸ್ತಾರ.
861-862

ಏಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ

49 a/4 ಏಕಾರದೇವತೆಯು ರೇವತಿ. ಹತ್ತುಮುಖಗಳುಳ್ಳವಳು, ರುಂಡಮಾಲೆಯನ್ನು ಧರಿಸಿದವಳು, ರಕ್ತವರ್ಣವುಳ್ಳವಳು, ಇಪ್ಪತ್ತು ಭುಜಗಳನ್ನು ಹೊಂದಿದವಳು, ಹಣೆಯ ಮೇಲೆ ಕಣ್ಣುಳ್ಳವಳಾಗಿದ್ದಾಳೆ. ಈಕೆಯು ಬಲ ಭಾಗದಲ್ಲಿ ಚಕ್ರ, ಶೂಲ, ಪಾಶ, ಖಡ್ಗ, ಕಮಂಡಲು, ಅಕ್ಷಸೂತ್ರ, ಜ್ಞಾನಮುದ್ರೆ, ಭೃಶುಂಡಿ ಮತ್ತು ಮುದ್ಗರ(ಒಂದು ಆಯುಧ) ಹಾಗೂ ವರದಮುದ್ರೆಯನ್ನೂ ಎಡಭಾಗದ ಕೈಗಳಿಂದ ಶಂಖ, ಭಿಂಡೀಡ? (ಭಿಂಡಿವಾಳ?), ಮೃಗ (ಜಿಂಕೆ), ಗುರಾಣಿ, ಕಪಾಲ, ಅಗ್ನಿ, ಶೋಷ (ಶೋಷಣೆಮಾಡುವ ಆಯುಧ?), ದಂಡ, ಗದೆ ಮತ್ತು ಅಭಯಮುದ್ರೆ ಇವುಗಳನ್ನು ಧರಿಸಿರುವವಳು (ರಕ್ತವರ್ಣ). ಈ ಅಕ್ಷರಾಭಿಮಾನಿದೇವತೆ ಮಾಧವ (ಮಹಾಕಾರ). 863-865

49 a/5

ಐಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ

ಐಕಾರದೇವತೆಯು ಶುಷ್ಕ ರೇವತೀ. ಮೂರು ಶಿರಸ್ಸುಗಳನ್ನು ಹೊಂದಿದವಳು. ಧವಳವರ್ಣೆ. ನವಿಲಿನ ಮೇಲೆ ಸಂಚರಿಸುವಳು, ಆರುಭುಜಗಳುಳ್ಳ ಈಕೆ ಕೆಂಪು ಕೂದಲುಗಳಿಂದ ಮುಚ್ಚಲ್ಪಟ್ಟಿದ್ದಾಳೆ. ಬಲಗೈಗಳಿಂದ ಚಕ್ರ, ತ್ರಿಶೂಲ, ವರದಮುದ್ರೆಯನ್ನೂ ಎಡಗೈಗಳಿಂದ ಶಂಖ, ದೊಡ್ಡಗದೆ ಹಾಗೂ ಅಭಯಮುದ್ರೆಯನ್ನು ಧರಿಸಿರುವವಳು(ಶುಭ್ರವರ್ಣ) ಈ ಅಕ್ಷರಾಭಿಮಾನಿದೇವತೆಯು ಗೋವಿಂದ, ಒಂದು ಕೋಟಿ ಯೋಜನಗಳು. 866-867

ಓಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ

49 a/6 ಓಕಾರದೇವತೆಯು ಓಜಸ್ವಿನಿದೇವಿ. ರಕ್ತವರ್ಣವುಳ್ಳ ಈಕೆಯು ಆರು ಮೊಗದವಳು. ನವಿಲಿನ ಮೇಲೇರಿರುವಳು. ಹನ್ನೆರಡು ಹಸ್ತಗಳುಳ್ಳ ಈಕೆ ಬಲ ಭಾಗದ ಭುಜಗಳಲ್ಲಿ ಅಂಕುಶ, ಬಾಣ, ಖಡ್ಗ, ಪಾಶ, ಜ್ಞಾನಮುದ್ರೆ, ವರದ ಮುದ್ರೆಯನ್ನು ಧರಿಸಿರುವವಳು. ಇವಳ ದೃಷ್ಟಿಯು ವಕ್ರ. ಎಡಭಾಗದ ಭುಜಗಳಲ್ಲಿ ಶೂಲ, ಬಿಲ್ಲು, ಗುರಾಣಿ, ಒನಕೆ, ಪುಸ್ತಕ ಮತ್ತು ಅಭಯಮುದ್ರೆಯನ್ನು ಧರಿಸಿರುವವಳು ಈಕೆ ಸಮಸ್ತ ಶತ್ರುಗಳಿಗೆ ಭಯಜನನಿ (ರಕ್ತವರ್ಣ). ಈ ಅಕ್ಷರಾಭಿಮಾನಿ ದೇವತೆ ವಾಸುದೇವ, ಅತಿ ಸ್ಥೂಲ. 868-689

49 b/1

ಔಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ

ಔಕಾರದೇವತೆಯು ಅಘೋರಾ ಎಂಬುವಳು. ಭಯಾನಕಳಾದ ಈಕೆಯ ನಾಲಗೆಯು ದೀರ್ಘವಾಗಿದೆ. ಒಂದು ಮುಖವನ್ನೂ, ದುಂಡಾದ ಕಣ್ಣುಗಳನ್ನೂ ಗಂಟಿಕ್ಕಿದ ಹುಬ್ಬುಗಳಿಂದ ಕೂಡಿದ ನೋಟವನ್ನೂ ಪಡೆದಿದ್ದಾಳೆ. ಕಪ್ಪಾದ ಮೋಡದಂತೆ ಕಂಗೊಳಿಸುವಳು. ರೌದ್ರಸ್ವರೂಪದ ಈಕೆಯು ಉತ್ತಮವಾದ ಭೇರುಂಡವನ್ನು ವಾಹನವನ್ನಾಗಿ ಮಾಡಿ ಕೊಂಡಿರುವಳು. ಆರು ಭುಜಗಳಿಂದ ಕೂಡಿದ ದೇವಿಯು ಬಲಗೈಗಳಿಂದ ಶೂಲ, ಖಡ್ಗ, ವರಮುದ್ರೆಯನ್ನೂ ಗದೆ, ಗುರಾಣಿ ಮತ್ತು ಅಭಯಮುದ್ರೆಯನ್ನು ಧರಿಸಿರುವವಳು. ಇವಳು ಮಹೋದರಿ(ಮಹಾಗಾತ್ರದ ಹೊಟ್ಟೆಯುಳ್ಳವಳು) ಈ ಅಕ್ಷರಾಭಿಮಾನಿ ದೇವತೆ ಸಂಕರ್ಷಣ. (ಶಾಮವರ್ಣ) 870-871

49 b/2

ಅಂಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ

ಅಂಕಾರದೇವತೆಯು ಅಂಜನ(ಕಾಡಿಗೆ)ದಂತಿರುವ ಅಂಜನಾದೇವಿ. ಐದು ಮೊಗದವಳು. ಜಟಾಪೂರ್ಣಳು. ಕೃಶವಾಗಿರುವಳು. ಅವಳು ಮಹೋದರಿ(ಮಹಾಗಾತ್ರದ ಹೊಟ್ಟೆಯಿರುವವಳು) ದೊಡ್ಡದಾದ ಶ್ರೇಷ್ಠವಾಗಿರುವ ಹುಲಿಯನ್ನು ವಾಹನವಾಗಿ ಏರಿದವಳು. ನಾಲ್ಕು ಭುಜಗಳಿದ್ದು, ಅವುಗಳಲ್ಲಿ ಶೂಲ, ಪಾಶ, ವರ ಮತ್ತು ಅಭಯ ಮುದ್ರೆಯನ್ನು ಧರಿಸಿದವಳು. ಈ ಅಕ್ಷರಾಭಿಮಾನಿ ದೇವತೆ ಪ್ರದ್ಯುಮ್ನ. ಅಪ್ರಮಾಣ ಗಾತ್ರ (ಕೃಷ್ಣವರ್ಣ). 872

49 b/3

ಅಃ ಕಾರದಸ್ವರೂಪ ಸಿದ್ಧಶಾಬರತಂತ್ರದಲ್ಲಿ

ಅಃ ಎಂಬುದರ ದೇವತೆಯು ಅಜಾದೇವಿ. ಮೂರು ಶಿರಸ್ಸುಗಳು ಮತ್ತು ಮೂರುಕಣ್ಣುಗಳಿರುವವಳು. ಕೆಂಬಣ್ಣದವಳಾಗಿ ಪೀತಾಂಬರವನ್ನುಟ್ಟಿರುವಳು. ಕ್ರೂರವಾದ ಉತ್ತಮ ವ್ಯಾಘ್ರವಾಹನವಿರುವಳು. ಅವಳು ಆರು ಭುಜಗಳುಳ್ಳವಳು. ಬಲಗೈಗಳಿಂದ ಶೂಲ, ಪಟ್ಟಾಸ (ಒಂದು ಆಯುಧ) ಮತ್ತು ವರದ ಮುದ್ರೆಯನ್ನು ಧರಿಸಿರುವಳು. ಎಡಗೈಗಳಿಂದ ಅಂಕುಶ, ದೊಡ್ಡ ಗುರಾಣಿ ಹಾಗೂ ಅಭಯ ಮುದ್ರೆಯನ್ನು ಕ್ರಮದಂತೆ ಧರಿಸಿರುವಳು (ರಕ್ತವರ್ಣ). ಈ ಅಕ್ಷರದ ಅಭಿಮಾನಿದೇವತೆ ಅನಿರುದ್ಧ. ೧೦೦೦ ಯೋಜನಗಳು. 873-874

49 b/4

ಕಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ

ಭೂತವಿನ್ಯಾಸಿನಿ ಎಂಬ ಈ ಕಕಾರದೇವತೆ ಶುಭ್ರವರ್ಣೆ. ಆನೆಯನ್ನೇರಿರುವಳು, ನಾಲ್ಕು ಭುಜಗಳನ್ನು ಹೊಂದಿರುವಳು. ಬಲಗೈಗಳಲ್ಲಿ ತ್ರಿಶೂಲ ಹಾಗೂ ವರದ ಮುದ್ರೆಯನ್ನು ಎಡಗೈಗಳಲ್ಲಿ, ಅಂಕುಶ ಹಾಗೂ ಅಭಯಮುದ್ರೆಯನ್ನೂ ಧರಿಸಿರುವಳು (ಶ್ವೇತವರ್ಣ). ಈ ಅಕ್ಷರದ ಅಭಿಮಾನಿದೇವತೆ ವಿಧಿ. ೨೦೦೦ ಯೋಜನಗಳು. 875

49 b/5

ಖಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ

ಖ ಅಕ್ಷರದೇವತೆ ಖದ್ಯೋತಿನಿಯು ಮಿಣುಕು ಹುಳದ ಮೇಲೆ ಕುಳಿತಿರುವಳು: ಹಳದಿ ಬಣ್ಣದ ಮೂರು ಶಿರಸ್ಸುಗಳಿರುವವಳು. ಆಕೆಯು ಹಸ್ತಗಳಿಂದ ತ್ರಿಶೂಲ, ಖಡ್ಗ, ವರದ ಮುದ್ರೆ, ಅಭಯ ಮುದ್ರೆಯನ್ನು ಧರಿಸಿರುವಳು (ಪೀತವರ್ಣ). ಈ ಅಕ್ಷರಾಭಿಮಾನಿದೇವತೆಯು ಸುದರ್ಶನ, ೧೦೦ ಯೋಜನಗಳು. 876

49 b/6

ಗಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ

ಗಕಾರಾಕ್ಷರ ದೇವತೆಯು ಧೂಮ್ರಾ ಎಂಬುವಳು. ನಾಲ್ಕು ಮೊಗಗಳನ್ನು ಹೊಂದಿದ್ದಾಳೆ. ಸಿಂಹವಾಹಿನಿಯಾದ ಈಕೆಗೆ ಅಷ್ಟಭುಜಗಳು. ಮಂಗಳಾಂಗಿ. ಹೊಗೆಬಣ್ಣ, ಬಲ ಭುಜಗಳಲ್ಲಿ ಶೂಲ, ಅಕ್ಷಮಾಲೆ, ಸ್ರುವ(ಯಜ್ಞಿಯ ಪಾತ್ರ), ವರದಮುದ್ರೆಯನ್ನು ಎಡ ಭುಜಗಳಲ್ಲಿ ಪುಸ್ತಕ, ಸಣ್ಣಪಾತ್ರೆ, ಕಪಾಲ ಹಾಗೂ ಅಭಯ ಮುದ್ರೆಯನ್ನು ಕ್ರಮವಾಗಿ ಧರಿಸಿರುವಳು (ಧೂಮ್ರವರ್ಣ). ಈ ಅಕ್ಷರಾಭಿಮಾನಿ ದೇವತೆ ವಾಣಿ. ೧೦೦ ಯೋಜನಗಳು. 877

50 a/1 **ಘಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ**

ಘ ಕಾರರೂಪ ದೇವತೆಯು ಕಪ್ಪುಬಣ್ಣದವಳು. ಹಂದಿಯ ಮುಖದಂತೆ ಮುಖ, ಕೃಶವಾದ ಹೊಟ್ಟೆ, ಆರು ಭುಜಗಳುಳ್ಳ ಈ ದೇವತೆಯು ಬಲ ಭುಜಗಳಿಂದ ಕ್ರಮವಾಗಿ ಶೂಲ, ಖಟ್ವಾಂಗ(ಶಿರಸ್ಸಿನ ಆಕೃತಿಯು ಮೇಲ್ಭಾಗದಲ್ಲಿರುವ ದಂಡ) ವರದ ಮುದ್ರೆಗಳನ್ನು ಎಡ ಭುಜಗಳಿಂದ ಖಡ್ಗ, ಗುರಾಣಿ ಹಾಗೂ ಅಭಯ ಮುದ್ರೆಯನ್ನು ಧರಿಸಿರುವಳು (ಕೃಷ್ಣವರ್ಣ). ಈಕೆ ಶತ್ರುನಾಶಿನಿ(ಕೃಷ್ಣವರ್ಣ) ಈ ಅಕ್ಷರಾಭಿಮಾನಿ ದೇವತೆ ಶಾರ್ಙ್ಗಧಾರಿ. ೧೦೦೦ ಯೋಜನಗಳು. 878

50 a/2 **ಙಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ**

ಅನಂತ ಶಕ್ತಿ ಎಂಬ ಹೆಸರಿನ ಈ ದೇವತೆಯು ಕೆಂಪು ಬಣ್ಣವುಳ್ಳವಳು, ಮಯೂರವಾಹನೆ, ಆರು ಮೊಗದವಳು. ಬಾಣ, ಬಿಲ್ಲು, ಖಡ್ಗ, ಗುರಾಣಿ, ವರದ, ಅಭಯ ಮುದ್ರೆಗಳನ್ನು ಧರಿಸಿರುವಳು (ರಕ್ತವರ್ಣ). ಈ ಅಕ್ಷರಾಭಿಮಾನಿದೇವತೆ ನಂದಕನು. ಅರ್ಧಕೋಟಿ ದಪ್ಪ ಹಾಗೂ ಕೋಟಿ ಯೋಜನ ದೀರ್ಘ. 879

50 a/3 **ಚಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ**

"ಸುಷಮಾ" ಎಂಬ ಈ ದೇವತೆಯು ಒಂದು ಮೊಗದವಳು. ಕುದುರೆಯನ್ನೇರಿರುವಳು. ನಾಲ್ಕು ಭುಜಗಳಿರುವ ಈಕೆಯು ಮಂಗಳಾಂಗಿ. ತನ್ನ ಕೈಗಳಲ್ಲಿ ಖಡ್ಗ, ಗುರಾಣಿ, ವರದಮುದ್ರೆ, ಹಾಗೂ ಅಭಯಮುದ್ರೆಯನ್ನು ಧರಿಸಿರುವಳು (ಸ್ವರ್ಣವರ್ಣ). ಈ ಅಕ್ಷರಾಭಿಮಾನಿ ದೇವತೆಯು ನಂದಕ, ಕೋಟಿಯೋಜನಗಳು. 880

50 a/4 **ಛಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ**

ಛಕಾರ ದೇವತೆಯು 'ನಿರ್ಝರಾ ಅರುಂಧತೀ' ಹಳದಿ ಬಣ್ಣದವಳು. ಮರ್ಕಟವು ಆಕೆಯ ವಾಹನ. ಮಂಗಳ ಸ್ವರೂಪಿಣಿಯಾದ ಈಕೆಯು ತ್ರಿಶೂಲ, ಸಣ್ಣಚೂರಿ, ಪಾಶ, ಹಾಗೂ ಗುರಾಣಿಯನ್ನು ಧರಿಸಿರುವಳು(ಪೀತವರ್ಣ). ಈ ಅಕ್ಷರಾಭಿಮಾನಿದೇವತೆಯು ಯಮ. ಕೋಟಿ ಯೋಜನಗಳು. 881

50 a/5 **ಜಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ**

ಜಕಾರದ ದೇವತೆ 'ಭೋಗದಾಯೀ' ಆಕೆಯ ಮುಖ ಕೆಂಪು. ಮೂರು ಕಣ್ಣುಗಳಿದ್ದು ಸಿಂಹವಾಹಿನಿಯಾಗಿರುವಳು. ಚತುರ್ಭುಜೆಯಾದ ಈಕೆಯು ಖಡ್ಗ, ಗುರಾಣಿ, ವರದ ಮತ್ತು ಅಭಯ ಮುದ್ರಾ ಯುಕ್ತವಾದ ಹಸ್ತಗಳುಳ್ಳವಳು (ರಕ್ತವರ್ಣ). ಈ ಅಕ್ಷರಾಭಿಮಾನಿ ದೇವತೆ 'ಮುಸಲೀ' ೧೦೦೦ ಯೋಜನಗಳು. 882

50 a/6 ## ಝುಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ

ಝುಕಾರ ದೇವತೆಯು ನಿರ್ಝರನದೀ ದೇವಿ, ಈಕೆಯು ಮೊಸಳೆಯ ಮೇಲೆ ಆಸೀನಳಾಗಿ, ಶರತ್ಕಾಲದ ಮೋಡದಂತೆ ಶುಭ್ರವಾಗಿರುವ ಕಮಲ(ಬಿಳಿದಾವರೆ)ವನ್ನು, ಪಾಶವನ್ನು, ವರದ ಮತ್ತು ಅಭಯಮುದ್ರೆಯನ್ನು ಧರಿಸಿರುವಳು. ಈಕೆಯು ಮನುಷ್ಯರಿಗೆ ಶುಭವನ್ನು ನೀಡುವಳು. (ಶುಭ್ರವರ್ಣ). ಈ ಅಕ್ಷರಾಭಿಮಾನಿ ದೇವತೆಯು ಅಂಕುಶಧಾರಿಣಿ, ೧೦೦೦ ಯೋಜನಗಳು. 883

50 b/1 ## ಞಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ

ಞ ಕಾರ ದೇವತೆಯು ಪ್ರಬೋಧಿನೀ, ಶುಭ್ರವರ್ಣೆ. ಸಿಂಹಾರೂಢಳಾದ ಇವಳು ಜ್ಞಾನ ಸ್ವರೂಪಿಣಿ. ಮಂಗಳಾಂಗಿಯಾದ ಈಕೆಯು ಕೈಗಳಲ್ಲಿ ತ್ರಿಶೂಲ, ಕಮಲ, ಜ್ಞಾನಮುದ್ರೆ, ಅಭಯ ಮುದ್ರೆಗಳನ್ನು ಧರಿಸಿರುವಳು(ಶುಭ್ರವರ್ಣ). ಈ ಅಕ್ಷರಾಭಿಮಾನಿದೇವತೆ ಭೃಗು. ಒಂದು ಲಕ್ಷ ಯೋಜನಗಳು. 884

50 b/2 ## ಟಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ

'ಟ' ಕಾರಾಕ್ಷರ ದೇವತೆಯು ಧಾರಿಣೀದೇವಿ. ಇವಳು ಕೆಂಬಣ್ಣದಿಂದ ಕೂಡಿದ್ದು ಬಿಳಿಯ ವಸ್ತ್ರವನ್ನು ಧರಿಸಿರುವಳು. ಮದಿಸಿದ ಆನೆಯನ್ನೇರಿ ಕುಳಿತಿರುವ ಈಕೆಯು ಹಸ್ತಗಳಲ್ಲಿ ಶೂಲ, ಸಣ್ಣಬಾಣ, ವರದ ಮತ್ತು ಅಭಯ ಮುದ್ರೆಗಳನ್ನು ಧರಿಸಿದ್ದಾಳೆ(ಪಾಟಲವರ್ಣ). ಈ ಅಕ್ಷರಭಿಮಾನಿ ದೇವತೆ ಕೂರ್ಮ. ಲಕ್ಷಯೋಜನಗಳು. 885

50 b/3 ## ಠಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ

ಠಕಾರಾಕ್ಷರ ದೇವತೆಯು ಕ್ರಿಯಾಸರಸ್ವತಿ. ಈಕೆಯು ಶ್ರೇಷ್ಠವಾದ ಸಿಂಹವನ್ನು ಏರಿದವಳಾಗಿ, ಬಾಣ, ಅಂಕುಶ, ವರದಮುದ್ರೆ, ಅಭಯಮುದ್ರೆಗಳನ್ನು ಹಸ್ತಗಳಿಂದ ಧರಿಸಿರುವಳು. ಈಕೆಗೆ ಒಂದು ಮುಖವಿದ್ದು ಅರುಣ(ಕೆಂಬಣ್ಣ) ವರ್ಣವನ್ನು ಹೊಂದಿದ್ದಾಳೆ. ಈ ಅಕ್ಷರಾಭಿಮಾನಿ ದೇವತೆ ಪಟ್ಟಾಭಿರಾಮ(ಅರುಣ ವರ್ಣ). 886

50 b/4 ## ಡಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ

ಡಕಾರಾಕ್ಷರ ದೇವತೆಯು 'ತತ್ಕಾರಿಣೀ'. ಐದು ಮೊಗಗಳನ್ನೂ ಬಿಳಿಯ ಬಣ್ಣವನ್ನೂ ಹೊಂದಿದ್ದಾಳೆ. ಚೇಣ, ಗದೆ, ವರದ ಮತ್ತು ಅಭಯಮುದ್ರೆಗಳನ್ನು ಹೊಂದಿದ್ದಾಳೆ. ನಾಲ್ಕು ಬಾಹುಗಳಿರುವ ಈ ದೇವಿಯು ಕೋಳಿಯ ಮೇಲೆ ಕುಳಿತಿರುವಳು(ಶುಭ್ರವರ್ಣ). ಈ ಅಕ್ಷರಾಭಿಮಾನಿ ದೇವತೆ ಗರುಡ. ೧೦೦೦ ಯೋಜನಗಳು. 887

50 b/5 ## ಢಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ

'ಢ' ಕಾರ ದೇವತೆಯು 'ಶ್ರೀಘನಾ' ಎಂಬವಳು. ಐದು ಮೊಗಗಳನ್ನುಳ್ಳ ಈಕೆಯು ನವಿಲನ್ನೇರಿ ಹೋಗುವಳು. ಮಿಂಚಿನಂತೆ ಗೌರ (ಹಳದಿ ಮಿಶ್ರಿತ ಬಿಳಿ) ವರ್ಣದ ಈ ದೇವಿಯು ತನ್ನ ಹಸ್ತಗಳಿಂದ ಶೂಲ, ಚೇಣ, ವರ ಮತ್ತು ಅಭಯ

ಮುದ್ರೆಗಳನ್ನು ಧರಿಸಿರುವಳು (ಹೇಮವರ್ಣ). ಈ ಅಕ್ಷರಾಭಿಮಾನಿ ದೇವತೆಗಳು ಸಪ್ತಮಾತೃಕೆಗಳು, ೧೦೦೦ ಯೋಜನಗಳು.

888

50 b/6

ಣಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ

ಣ ಕಾರದೇವತೆಯು ದೇವೇಶಿ ಎಂಬವಳು. ರಕ್ತವರ್ಣೆ, ನವಿಲು ಅವಳ ವಾಹನ, ಶುಭ್ರಪ್ರದೆಯಾದ ಈಕೆಗೆ ಒಂದು ಮುಖ. ಶೂಲ, ಶಕ್ತಿ, ವರ ಮತ್ತು ಅಭಯ ಮುದ್ರೆಯನ್ನು ಕೈಗಳಲ್ಲಿ ಹೊಂದಿರುವಳು (ರಕ್ತವರ್ಣ). ಈ ಅಕ್ಷರಾಭಿಮಾನಿ ವಿಷ್ಣು. ೧೦೦೦ ಯೋಜನಗಳು. 889

51 a/1

ತಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ

ತಕಾರಾಕ್ಷರದೇವತೆಯು ಸರಸ್ವತಿ, ಧವಳವರ್ಣೆ. ಬಿಳಿಯ ತಾವರೆಯು ಅವಳ ಆಸನ. ಬಿಳಿಯ ವಸ್ತ್ರವುಳ್ಳವಳು. ಒಂದು ಮೊಗದವಳು. ತನ್ನ ಹಸ್ತಗಳಿಂದ ವೀಣೆ, ತಂತಿ, ವರ ಮತ್ತು ಅಭಯ ಮುದ್ರೆಯನ್ನು ಧರಿಸಿರುವಳು (ಶುಭ್ರವರ್ಣ). ಈ ಅಕ್ಷರಾಭಿಮಾನಿ ದೇವತೆ ಅಚ್ಯುತ, ೧೦೦೦ ಯೋಜನಗಳು. 890

51 a/2

ಥಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ

ಥಕಾರಾಕ್ಷರ ದೇವತೆಯು ಐದು ಮೊಗಗಳುಳ್ಳವಳು. ಅವಳು ನೀಲಕಂಠೆಸರಸ್ವತಿ ಎಂಬುವಳು. ಎತ್ತನ್ನು ಏರಿದಾಕೆಯು ಶಾರಿಕಾ(ಹೆಣ್ಣುಗಿಳಿ), ಡಮರು, ವರ ಮತ್ತು ಅಭಯ ಮುದ್ರೆಗಳನ್ನು ಧರಿಸಿರುವಳು(ಶ್ವೇತವರ್ಣ). ಈ ಅಕ್ಷರಾಭಿಮಾನಿ ದೇವತೆ ಪುರುಷೋತ್ತಮ - ಕೋಟಿ ಯೋಜನೆಗಳು. 891

51 a/3

ದಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ

ಒಂದು ಮೊಗದ 'ಅರುಣಾ' ಎಂಬ ಈ ದೇವತೆಯು ಎಂಟು ಭುಜಗಳನ್ನು ಹೊಂದಿರುವಳು. ಈಕೆ ಸುಖದಾಯಿನಿಯಾಗಿ ಹಸ್ತಗಳಲ್ಲಿ ಶಾರಿಕಾ(ಹೆಣ್ಣುಗಿಳಿ) ಕಮಲ, ವೀಣೆ, ಡಮರು, ಜಿಂಕೆ, ವರದ ಮತ್ತು ಅಭಯ ಮುದ್ರೆಗಳನ್ನು ಹೊಂದಿರುವಳು (ಅರುಣವರ್ಣ). (ಎರಡು ಕಮಲಗಳಿರಬಹುದು?) ಈ ಅಕ್ಷರಾಭಿಮಾನಿ ಅತ್ರಿ. ಕೋಟಿ ಯೋಜನೆಗಳು. 892

51 a/4

ಧಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ

ಈ ಅಕ್ಷರ ದೇವತೆಯು ಶ್ಯಾಮಲ ವರ್ಣದ (ತುಸುಕಪ್ಪು) ಶ್ಯಾಮಲೆ. ಒಂದು ಮುಖವನ್ನೂ ನಾಲ್ಕು ಭುಜಗಳನ್ನು ಹೊಂದಿದ್ದಾಳೆ. ಈಕೆ ಎತ್ತಿನ ಮೇಲೆ ಸ್ಥಿತಳಾಗಿ ತನ್ನ ಹಸ್ತಗಳಿಂದ ಶಾರಿಕೆ, ಕಮಲ, ವರ ಮತ್ತು ಅಭಯ ಮುದ್ರೆಗಳನ್ನು ಧರಿಸಿದ್ದಾಳೆ (ಶ್ಯಾಮವರ್ಣ). ಈ ಅಕ್ಷಾರಾಭಿಮಾನಿ ದೇವತೆಯು ಕುಬೇರ, ನಾಲ್ಕು ಲಕ್ಷ ಯೋಜನಗಳು. 893

51 a/5 **ನಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ**

ಈ ಅಕ್ಷರ ದೇವತೆಯು ಅನಂತ ಶಕ್ತಿ ಎಂಬ ದೇವೇಶ್ವರಿ. ಮದ್ದಾನೆಯ ಮೇಲೆ ಆರೂಢಳಾದ ಈಕೆಯು ಒಂದು ಮುಖದವಳು. ಮಿಂಚಿನಂತೆ ಗೌರವರ್ಣವುಳ್ಳವಳು. ಈಕೆಯು ತನ್ನ ನಾಲ್ಕು ಕರಗಳಲ್ಲಿ ಪದ್ಮಗಳನ್ನು, ವರ ಮತ್ತು ಅಭಯಮುದ್ರೆಯನ್ನು ಧರಿಸಿರುವಳು(ಹೇಮವರ್ಣ). ಈ ಅಕ್ಷರಾಭಿಮಾನಿ ದೇವತೆ ಲಂಬೋದರ. 894

51 a/6 **ಪಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ**

ಈ ಅಕ್ಷರದೇವತೆಯು ಇಚ್ಛಾಶಕ್ತಿ ರೂಪಾ ತನ್ನಕರಗಳಲ್ಲಿ ಶೂಲ, ಶಕ್ತಿ, ವರದ ಮತ್ತು ಅಭಯ ಮುದ್ರೆಗಳನ್ನು ಧರಿಸಿದ್ದಾಳೆ. ಇವಳಿಗೆ ಐದು ಮುಖಗಳಿವೆ. ಅರಳಿದ ಕಮಲವು ಅವಳ ಆಸನ. ಅರುಣವರ್ಣಶರೀರ(ರಕ್ತವರ್ಣ). ಈ ಅಕ್ಷರಾಭಿಮಾನಿ ಯೋಗನೃಸಿಂಹ, ಕೋಟಿಯೋಜನಗಳು. 895

51 b/1 **ಫಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ**

ಫಕಾರವೆಂಬ ಅಕ್ಷರದೇವತೆಯು ಜಯಶ್ಯಾಮಲೆ. ಐದು ಮೊಗಗಳಿದ್ದು ಈಕೆ ಉಗ್ರವಾದ ಸಿಂಹದ ಮೇಲೆ ಕುಳಿತಿರುವಳು. ಪಾಟಲ(ಕೆಂಪು) ವರ್ಣ. ತನ್ನ ಹತ್ತು ಹಸ್ತಗಳಿಂದ ಗಿಣಿ, ಜಿಂಕೆ, ಖಡ್ಗ, ಗುರಾಣಿ, ವರದ ಮುದ್ರೆ, ಅಭಯಮುದ್ರೆ, ಬಿಲ್ಲು, ಬಾಣ, ಪಾಶ, ಮತ್ತು ಡಮರುಗವನ್ನು ಧರಿಸಿರುವಳು (ಪಾಟಲವರ್ಣ). ಈ ಅಕ್ಷರಾಭಿಮಾನಿ ದೇವತೆ ಭೀಮನೃಸಿಂಹ. ಹತ್ತುಕೋಟಿಯೋಜನಗಳು. 896

51 b/2 **ಬಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ**

ಚಿತ್ರವರ್ಣ (ಮಿಶ್ರವರ್ಣಗಳು)ದಿಂದ ಕೂಡಿದ ಬಕಾರಾಕ್ಷರದೇವತೆಯು ಚಿಚ್ಛಾಮಲಾ ದೇವಿ. ಸಿಂಹಾರೂಢೆಯಾದ ಈಕೆಯು ಕ್ರಮವಾಗಿ ತನ್ನ ಕರಗಳಿಂದ ಹಿಂದಿನ ದೇವತೆಗೆ ಹೇಳಿದ ಆಯುಧಗಳನ್ನು ಧರಿಸಿರುವಳು(ಬಭ್ರುವರ್ಣ). ಈ ಅಕ್ಷರಾಭಿಮಾನಿದೇವತೆ ಬಲರಾಮ, ಹತ್ತುಕೋಟಿಯೋಜನಗಳು. 897

51 b/3 **ಭಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ**

ಭಕಾರಾಕ್ಷರದೇವತೆಯು ಅನುಶ್ಯಾಮಲಾ. ಒಂದು ಮುಖವುಳ್ಳ ಈಕೆ ಭದ್ರಾಸನದಲ್ಲಿ ಕುಳಿತಿರುವಳು. ಉದಯ ಸೂರ್ಯನಂತೆ ಕಾಂತಿಯುಳ್ಳ ಈಕೆಯು ಬಾಣ, ಬಿಲ್ಲು, ವರದ ಹಾಗೂ ಅಭಯ ಮುದ್ರೆಗಳನ್ನು ಧರಿಸಿರುವಳು (ಸಿಂದೂರವರ್ಣ). ಈ ಅಕ್ಷರಾಭಿಮಾನಿ ಯೋಗನೃಸಿಂಹ, ಹತ್ತು ಲಕ್ಷಯೋಜನಗಳು. 898

51 b/4 **ಮಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ**

ಮಕಾರಾಕ್ಷರ ದೇವತೆಯು ವಿದ್ಯಾಶ್ಯಾಮಲಾದೇವಿ. ಕುದುರೆಯ ಮುಖದಂತೆ ಮೊಗವಿರುವ ಈಕೆ ಸ್ಫಟಿಕದ ಕಾಂತಿಯನ್ನು ಪಡೆದಿರುವಳು. ವೀಣಾವಾದನ ಶಾಸ್ತ್ರವನ್ನು ಬಲ್ಲವಳು. ವರದ ಮತ್ತು ಅಭಯಮುದ್ರೆಗಳನ್ನು ಹಸ್ತಗಳಿಂದ ಧರಿಸಿರುವಳು. ಆಕೆ ಶುಭಾಂಗಿ (ಶ್ವೇತವರ್ಣ). ಈ ಅಕ್ಷರಾಭಿಮಾನಿ ದೇವತೆ ನಾರಾಯಣ, ಮಹಾಕಾರ. 899

51 b/5 **ಯಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ**

ಯಕಾರಾಕ್ಷರ ದೇವತೆಯು ದೀಪಿನೀದೇವಿ. ಬಿಳಿಯ ಬಣ್ಣ ಹಾಗೂ ಎಂಟು ಭುಜಗಳಿಂದ ಕೂಡಿದ ಈಕೆ ಸಿಂಹಾರೂಢೆಯಾಗಿರುವಳು. ಶೂಲ, ಪಾಶ, ಬಾಣ, ಬಿಲ್ಲು, ಖಡ್ಗ, ಗುರಾಣಿ, ದಾನ ಮತ್ತು ಅಭಯಮುದ್ರೆಗಳಿಂದ ಕೂಡಿರುವಳು(ಶುಭ್ರವರ್ಣ). ಈ ಅಕ್ಷರಾಭಿಮಾನಿದೇವತೆ ವಾಯು. ಅತ್ಯುಚ್ಚ(ಅತಿ ಎತ್ತರ ಆಕಾರ). 900

51 b/6 **ರಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ**

ರೇಫ ಅಕ್ಷರದ ದೇವಿಯು ರೇಚಿಕೆ. ಶ್ಯಾಮವರ್ಣೆಯಾದ ಈಕೆ ಸಿಂಹಾರೂಢೆ, ರಕ್ತವರ್ಣದ ವಸ್ತ್ರವನ್ನು ಧರಿಸಿರುವಳು. ಐದು ಮುಖಗಳನ್ನು ಹೊಂದಿರುವಳು. ತನ್ನ ಎಂಟು ಹಸ್ತಗಳಲ್ಲಿ ಬಲ ಮತ್ತು ಎಡ ಭಾಗದ ಕ್ರಮವನ್ನನುಸರಿಸಿ ಖಡ್ಗ, ಗುರಾಣಿ, ಅಂಕುಶ, ಗದೆ, ಪಾಶ, ಶೂಲ, ವರದ ಮುದ್ರೆ ಮತ್ತು ಅಭಯ ಮುದ್ರೆಗಳನ್ನು ಧರಿಸಿರುವಳು(ಶ್ಯಾಮವರ್ಣ). ಈ ಅಕ್ಷರಾಭಿಮಾನಿ ಧೂಮಧ್ವಜ. ೧೦೦೦ ಯೋಜನಗಳು. 901

52 a/1 **ಲಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ**

ಲಕಾರಾಕ್ಷರದೇವಿಯು ಲೋಚನೀದೇವಿ. ಚಿನ್ನದಂತೆ ಕಾಂತಿಯುಕ್ತಳು. ಆನೆಯನ್ನೇರಿದವಳು. ಆರು ಭುಜಗಳನ್ನುಳ್ಳವಳು. ತನ್ನ ಹಸ್ತಗಳಲ್ಲಿ ಅಂಕುಶ, ಶೂಲ, ಖಡ್ಗ, ಗುರಾಣಿ, ದಾನಮುದ್ರೆ ಮತ್ತು ಅಭಯಮುದ್ರೆಗಳಿಂದ ಕೂಡಿರುವಳು. (ಸ್ವರ್ಣವರ್ಣ). ಈ ಅಕ್ಷರಾಭಿಮಾನಿದೇವತೆ ಇಂದ್ರ, ೧೦೦ ಯೋಜನಗಳು 902

52 a/2 **ವಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ**

'ವ' ಎಂಬ ಹೆಸರಿನ ಅಕ್ಷರದ ದೇವತೆಯು ಸ್ಫಟಿಕದಂತೆ ಬಿಳುಪಾದ ಕಾಂತಿಯನ್ನು ಹೊಂದಿರುತ್ತಾಳೆ. ಕೆಂಪು ಬಣ್ಣದ ವಸ್ತ್ರವನ್ನು ಧರಿಸಿರುವ ಈಕೆಗೆ ಪಾರಾಯಣೀ (ಎಂಬ ಹೆಸರೂ ಇದೆ). ಇವಳು ಸ್ಫುಟವಾದ ಪದ್ಮಾಸನದಲ್ಲಿ ಕುಳಿತಿದ್ದು, ಕೈಗಳಲ್ಲಿ ಎರಡು ಪದ್ಮಗಳನ್ನೂ ವರ ಮತ್ತು ಅಭಯ ಎಂಬ ಮುದ್ರೆಗಳನ್ನು ಧರಿಸಿರುತ್ತಾಳೆ. ಪ್ರಮಾಣ:ಅತಿಸ್ಥೂಲ (ಬಿಳಿಬಣ್ಣ). 903

52 a/3 **ಶಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ**

ಶಕಾರಾಕ್ಷರ ದೇವಿಯು ಮಂಗಳಗೌರಿ. ಈಕೆ ಕಾದಚಿನ್ನದಂತೆ ಕಾಂತಿಯುಕ್ತಳಾಗಿದ್ದಾಳೆ. ಸಹಸ್ರಪದ್ಮ(ಸಹಸ್ರದಳ) ಪೀಠದ ಮೇಲೆ ಕುಳಿತಿರುವ ಈಕೆ ದಿವ್ಯವಾದ ಆಭರಣಗಳನ್ನು ಧರಿಸಿರುವಳು. ನಾಲ್ಕು ಭುಜಗಳುಳ್ಳ ಈಕೆ ಕೈಗಳಿಂದ ಎರಡು ಕಮಲಗಳನ್ನೂ ವರದ ಮತ್ತು ಅಭಯಮುದ್ರೆಗಳನ್ನು ಧರಿಸಿರುವಳು. ಈ ಅಕ್ಷರಾಭಿಮಾನಿ ಉಮಾದೇವಿ (ಕುಬ್ಜ). 904

52 a/4

ಷಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ

ಷಕಾರಾಕ್ಷರದೇವಿಯು ಕೆಂಬಣ್ಣವುಳ್ಳ ಅನುಕ್ರಿಯಾದೇವಿ. ಉತ್ತಮವಾದ ರಾಜಹಂಸವನ್ನೇರಿ ಕುಳಿತಿರುವಳು. ಪೀತಾಂಬರವನ್ನುಟ್ಟಿರುವಳು. ಕೈಗಳಿಂದ ಎರಡು ಪದ್ಮಗಳನ್ನೂ, ವರದ ಮತ್ತು ಅಭಯ ಮುದ್ರೆಗಳನ್ನೂ ಧರಿಸಿರುವಳು. (ರಕ್ತವರ್ಣ). 905

ಈ ಅಕ್ಷರಾಭಿಮಾನಿ ದೇವತೆಯು ಲಕ್ಷ್ಮೀದೇವಿ. ಪ್ರಮಾಣಾತೀತ (ಈ ಆಕಾರಕ್ಕೆ ಯಾವುದೇ ಮಿತಿಯಿಲ್ಲ)

52 a/5

ಸಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ

ಸಕಾರಾಕ್ಷರದೇವಿಯು ಸಿದ್ಧಕ್ರಿಯಾ ಎಂಬುವಳು. ಆಕೆಯು ಬಿಳಿದಾವರೆಯ ಮೇಲೆ ವಾಸಿಸುವಳು. ಅವಳ ಬಣ್ಣ ನಸುಗೆಂಪು, ಕೈಗಳಲ್ಲಿ ಚಿನ್ಮುದ್ರೆ, ಕಮಲ, ವರ ಮತ್ತು ಅಭಯಮುದ್ರೆಗಳನ್ನು ಧರಿಸಿದ್ದಾಳೆ. (ನಸುಗೆಂಪು ಬಣ್ಣ). ಈ ಅಕ್ಷರದ ಅಭಿಮಾನಿದೇವತೆ ಚಂದ್ರ ೧೦೦೦ ಯೋಜನ. 906

52 a/6

ಹಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ

ಹಕಾರಾಕ್ಷರ ದೇವಿಯು ಆಪ್ಯಾಯನೀ. ಮದ್ದಾನೆಯು ಆಕೆಯ ವಾಹನ. ಪಾಟಲಕಾಂತಿಯುಕ್ತೆ. ತನ್ನ ಕರಗಳಿಂದ ಜ್ಞಾನಮುದ್ರೆ, ಕಮಲ, ವರದ ಮತ್ತು ಅಭಯ ಮುದ್ರೆಯನ್ನು ಹೊಂದಿರುವಳು(ಪಾಟಲವರ್ಣ). ಈ ಅಕ್ಷರಾಭಿಮಾನಿದೇವತೆಯು ಸೂರ್ಯ. ೨೦೦ ಯೋಜನಗಳು. 907

52 b/1

ಳಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ

ಳ ಎಂಬ ಅಕ್ಷರ ದೇವಿಯು ಬಂಧಮೋಚಿನೀ ದೇವಿ. ಚಿನ್ನದಂತೆ ಕಾಂತಿಯುಕ್ತಳು. ಆನೆಯ ಮೇಲಿರುವಳು. ಆರು ಭುಜಗಳುಳ್ಳವಳು. ತನ್ನ ಕರಗಳಿಂದ ಅಂಕುಶ, ಶೂಲ, ಖಡ್ಗ, ಗುರಾಣಿ, ದಾನಮುದ್ರೆ ಮತ್ತು ಅಭಯಮುದ್ರೆಗಳನ್ನು ಧರಿಸಿರುವಳು(ಕನಕವರ್ಣ). ಆ ಅಕ್ಷರಾಭಿಮಾನಿ ದೇವತೆ ಇಂದ್ರ. ಅತ್ಯುನ್ನತ. 908

52 b/2

ಕ್ಷಕಾರಸ್ವರೂಪ, ಸಿದ್ಧಶಾಬರತಂತ್ರದಲ್ಲಿ

'ಕ್ಷ' ಅಕ್ಷರ ದೇವತೆಯು ಮಾಯಾಮಾಲಿನೀದೇವಿ. ಶ್ರೇಷ್ಠವಾದ ಸಿಂಹದ ಮೇಲೆ ಕುಳಿತಿರುವಳು. ಐದು ಮೊಗಗಳುಳ್ಳವಳು. ಪಾಟಲ(ಕೆಂಪು)ವರ್ಣೆ. ಕರಗಳಲ್ಲಿ ಖಡ್ಗ, ಶೂಲ, ವರ ಮತ್ತು ಅಭಯ ಮುದ್ರೆಗಳನ್ನು ಧರಿಸಿರುವಳು(ಪಾಟಲವರ್ಣ). ಈ ಅಕ್ಷರಾಭಿಮಾನಿ ದೇವತೆ ಲಕ್ಷ್ಮಿ, ಅತಿಕೃಶ. 909

52 b/3

ಪ್ರಣವದ ದೇವತೆ ನಾರಾಯಣ, ಶೇಷ ಸಂಹಿತೆಯಲ್ಲಿ

ನಾರಾಯಣನು ಕನ್ನೈದಿಲೆಯ ದಳಗಳ ಕಾಂತಿಯುಳ್ಳವನು. ಕಮಲದ ನಡುವಿನಲ್ಲಿರುವನು. ಪೀತಾಂಬರನಾಗಿ ಸಮಸ್ತ ಆಭರಣಗಳಿಂದ ಅಲಂಕೃತನಾಗಿರುವನು, ಶ್ರೀ ಮತ್ತು ಭೂ ದೇವಿಯರೊಂದಿಗಿರುವನು. ಶಂಖ, ಚಕ್ರ, ಗದಾ, ಪದ್ಮ ಆಯುಧಗಳನ್ನು ಪ್ರದಕ್ಷಣಾಕ್ರಮವಾಗಿ ಧರಿಸಿರುವನು(ನೀಲವರ್ಣ) ಪ್ರಮಾಣಾತೀತ.

52 b/4

ರಕ್ತಚಾಮುಂಡೀ ಧ್ಯಾನ, ಪ್ರಪಂಚಸಾರದಲ್ಲಿ

ರಕ್ತವರ್ಣಕಾಂತಿಯುಳ್ಳ, ಹಳದಿವಸ್ತ್ರವನ್ನು ಧರಿಸಿದ, ಮೊಗದಾವರೆಯಲ್ಲಿ ಮುಗುಳ್ನಗೆ ಇರುವ, ಚಂದ್ರಕಲೆಯನ್ನು ಅಲಂಕರಿಸಿಕೊಂಡ, ದಿವ್ಯವಾದ, ಮಾಣಿಕ್ಯ ಮುತ್ತು ಮಣಿಸಮೂಹಗಳಿಂದ ಕುಸುರಿಮಾಡಿದ ಆಭೂಷಣಗಳಿಂದ ಶೋಭಿಸುವ, ಕಬ್ಬಿನ ಬಿಲ್ಲು ಮತ್ತು ಬಾಣಗಳನ್ನು ಧರಿಸಿ ಸ್ವಲ್ಪ ಬಗ್ಗಿದ ತನ್ನ ಭುಜಗಳಿರುವ, ಅರಳಿದ ತಾವರೆಯ ದಳಗಳಂತೆ ಆಯತಾಕಾರದ ಕಣ್ಣುಗಳಿರುವ ಲಕ್ಷಣಾನ್ವಿತವಾದ ನಾಭಿಯುಳ್ಳ, ಶತ್ರು ಸಮೂಹವನ್ನು ಕಡಿದು ಹಾಕುತ್ತಿರುವ ಶಂಕರನ ಪತ್ನಿ ಚಾಮುಂಡಿಯನ್ನು ಮನಸ್ಸಿನಲ್ಲಿ ನೆನೆಯುವೆನು. (ಕೆಂಪು ಬಣ್ಣ). 910

52 b/5

ಕಾಲರಾತ್ರಿಸ್ವರೂಪ, ನೃಸಿಂಹಪ್ರಾಸಾದದಲ್ಲಿ

ಒಂದು ಜಡೆಯವಳು, ದಾಸವಾಳವನ್ನು ಕರ್ಣಾಭರಣ ಮಾಡಿರುವವಳು ವಿವಸ್ತ್ರಳಾಗಿರುವವಳು, ಕತ್ತೆಯನ್ನೇರಿದವಳು, ಉದ್ದವಾದ ತುಟಿಯಿರುವವಳು, ಕರ್ಣಿಕಾ ಪುಷ್ಪವನ್ನು ಕಿವಿಯ ಮೇಲೆ ಧರಿಸಿದವಳು, ಎಣ್ಣೆಯಿಂದ ತೊಯ್ದ ದೇಹವುಳ್ಳವಳು, ಎಡಪಾದದಲ್ಲಿ ಮಿರುಗವ ಲೋಹ ನಿರ್ಮಿತವಾದ ಮುಳ್ಳು ಬಳ್ಳಿಯ ಭೂಷಣವುಳ್ಳವಳು, ತಲೆಯ ಕೇಶಸಮೂಹವು ಮೇಲ್ಮುಖವಾಗಿರುವವಳು, ಕಪ್ಪುಬಣ್ಣದವಳು, ಭಯಂಕರಳಾದ ಕಾಳ ರಾತ್ರಿಯಾಗಿದ್ದಾಳೆ(ಕೃಷ್ಣವರ್ಣ). 911-912

52 b/6

ಸೀತಲಾಸ್ವರೂಪ, ರುದ್ರಯಾಮಲ ಹಾಗೂ ಸೀತಲಾಕಲ್ಪದಲ್ಲಿ

ಕತ್ತೆಯ ಮೇಲೆ ಕುಳಿತಿರುವ, ನಗ್ನಶರೀರದ, ಪೊರಕೆ ಮತ್ತು ಚಂಬನ್ನು ಕೈಯಲ್ಲಿ ಹಿಡಿದಿರುವ ಶೂರ್ಪ(ಮೊರ)ವನ್ನು ತಲೆಯ ಮೇಲೆ ಅಲಂಕಾರವಾಗಿ ಧರಿಸಿದ ಸೀತಲಾದೇವಿಯನ್ನು ಧ್ಯಾನಿಸಬೇಕು(ಕೃಷ್ಣವರ್ಣ). 913

53 a/1

ಮೋಹಿನೀಧ್ಯಾನ, ಪ್ರಪಂಚಸಾರದಲ್ಲಿ

ಸಮಸ್ತಭುವನಗಳನ್ನು ಜಯಿಸುವ ಶಕ್ತಿಯುಳ್ಳ, ಹೂಬಾಣ ಮತ್ತು ಕಬ್ಬಿನ ಬಿಲ್ಲನ್ನು ಹಿಡಿದಿರುವ, ಜಗತ್ತಿನಲ್ಲಿ ವಿವಿಧರೂಪಗಳನ್ನು ಹೊಂದಿ ಜನರನ್ನು ಆಕ್ರಮಿಸುವ, ಉದಯಸೂರ್ಯನ ಕಾಂತಿಯುಳ್ಳ, ಬಿಳಿಯವಸ್ತ್ರವನ್ನು ಧರಿಸಿರುವ ಮೋಹಿನಿಯಾಗಿ ಬಾಳುವ ಈ ದೇವಿಯು ಸಮಸ್ತ ಲೋಕಗಳನ್ನು ಜಯಿಸಿಬಿಡುವಳು(ಅರುಣವರ್ಣ). 914

53 a/2 ## ಮಾಯಾಜಗನ್ಮೋಹಿನೀಧ್ಯಾನ, ಪ್ರಪಂಚಸಾರದಲ್ಲಿ

ಮಾಯೆಯೆಂಬ ಬಟ್ಟೆಯಿಂದ ಜಗತ್ತಿಗೆ(ಜನರಿಗೆ) ವಿವಶತೆಯನ್ನೂ ಅಜ್ಞಾನವನ್ನೂ ಮತ್ತು ಮಾಯಾಕೌತುಕದಿಂದ ಅವರ ಮನೋರಥವನ್ನೂ ವಿಸ್ತರಿಸುತ್ತಾಳೆ. ಈ ದೇವಿಯು ನಾರಾಯಣ(ವಿಷ್ಣು)ನ ಪ್ರಿಯತಮೆಯಾಗಿದ್ದು, ದಟ್ಟವಾದ ಹೊಂಗೆಯಂತೆ, ಕೃಷ್ಣವರ್ಣದವಳಾಗಿದ್ದು, ಶೂಲವೆಂಬ ಆಯುಧವನ್ನು ಧರಿಸಿ ಕುದುರೆಯನ್ನೇರಿ ಸರ್ವೋತ್ಕೃಷ್ಟಳಾಗಿದ್ದಾಳೆ (ಶ್ಯಾಮಲವರ್ಣ). 915

53 a/3 ## ಜ್ಯೇಷ್ಠಾಲಕ್ಷ್ಮೀಧ್ಯಾನ, ಪ್ರಪಂಚಸಾರದಲ್ಲಿ

ಕಪ್ಪಾದ ಮೋಡದಂತೆ ನೀಲವರ್ಣವುಳ್ಳ, ಚದುರಿದ ವಸ್ತ್ರವುಳ್ಳ, ಕಾಗೆಯ ಕೊಕ್ಕಿನಂತೆ ಮೂಗು, ಕಣ್ಣು, ಕಿವಿಗಳಿರುವ, ಕಸಬರಿಕೆ, ಜ್ವಾಲೆ, ಮೊರ ಮತ್ತು ಒನಕೆಯನ್ನು ಹಸ್ತಗಳಲ್ಲಿ ಧರಿಸಿರುವ, ವಕ್ರವಾದ ಹಲ್ಲುಗಳುಳ್ಳ, ವಿಷದಿಂದ ತುಂಬಿದ ಬಾಯಿಯುಳ್ಳ ನಿರ್ವಾಣ (ನಗ್ನ) ವೇಷವಿರುವ, ಗಂಟಿಕ್ಕಿದ ಹುಬ್ಬುಗಳಿಂದ ಕೂಡಿದ ಕಣ್ಣುಗಳುಳ್ಳ, ಬಿಚ್ಚಿದ ಕೂದಲುಗಳುಳ್ಳ, ಸ್ವಚ್ಛಂದಚಾರಿಣಿಯಾದ, ಎತ್ತರವಾದ ಪರ್ವತಗಳಂತೆ ಪಕ್ಕಗಳಿಗೆ ವಾಲಿದ ಶುಷ್ಕ (ಬತ್ತಿದ)ಸ್ತನಗಳುಳ್ಳ, ಕರುಣಾಹೀನಳಾದ, ಶತ್ರುಗಳನ್ನು ನಾಶಪಡಿಸುವ ಜ್ಯೇಷ್ಠಾಲಕ್ಷ್ಮಿಯನ್ನು ಧ್ಯಾನಿಸಬೇಕು(ನೀಲವರ್ಣ). 916

53 a/4 ## ಪುಲಿಂದಿನೀಧ್ಯಾನ, ಪ್ರಪಂಚಸಾರದಲ್ಲಿ

ನವಿಲುಗರಿಯ ಅಲಂಕಾರದಿಂದ ಸುಂದರವಾದ ಕುಂತಲ (ಮುಂಗುರುಳು)ಗಳಿರುವ, ಶರೀರದಿಂದ ಬೆಳದಿಂಗಳು ಬೆಳಗುತ್ತಿರುವಂತಿರುವ, ಗುಲಗುಂಜಿಯ ಹಾರವುಳ್ಳ, ಸುಜಾಲದಿಂದ ಹೊಳೆಯುವ ಕಂಠವುಳ್ಳ, ಹೆದರಿದಂತಿರುವ ದೃಷ್ಟಿಯುಳ್ಳ, ಮಾವಿನ ಮರದ ಚಿಗುರಿನಂತೆ ಕೆಂಪಾದ ವಸ್ತ್ರವಿರುವ, ಅರ್ಧಚಂದ್ರವಿಂದ ಅಲಂಕೃತವಾದ ಮೊಗವುಳ್ಳ, ದಿವ್ಯಮಯಿ(ಪೂರ್ಣದಿವ್ಯಸ್ವರೂಪ) ಹಾಗೂ ಸಂತುಷ್ಟಹೃದಯೆಯಾದ ದೇವಿ ಕಿರಾತಾಂಬಿಕೆ(ಪಾರ್ವತಿಯ ಕಿರಾತವೇಷಸ್ವರೂಪ) ಧ್ಯಾನಸಬೇಕು(ಔಚಿತ್ಯದಿಂದ ಶ್ಯಾಮವರ್ಣ). 917

53 b/1 ## ರೇಣುಕಾಧ್ಯಾನ, ಪ್ರಪಂಚಸಾರದಲ್ಲಿ

ಎಡಭಾಗದ ಕರಕಮಲಗಳಿಂದ ಶೂಲ, ಎರಡು ಕಪಾಲಗಳು, ಹಾಗೂ ಬಲಗೈಗಳಿಂದ ಖಡ್ಗ ಮತ್ತು ಶಬ್ದ ಮಾಡುತ್ತಿರುವ ಡಿಂಡಿಮ(ತಮ್ಮಟೆ)ಯನ್ನು ಧರಿಸಿರುವ, ಮೂರು ಕಣ್ಣುಗಳಿರುವ, ಎಂಟು ನಾಗಗಳನ್ನು ಆಭರಣವನ್ನಾಗಿ ಮಾಡಿ ಶೋಭಿಸುವ, ಯುಗಗಳ ಅಂತ್ಯದಲ್ಲಿ ಬೆಳಗುವ ಅನೇಕಕೋಟಿಸೂರ್ಯರಿಗೆ ಸಮಾನವಾದ ಕಾಂತಿಯುಳ್ಳ, ಹೊಳೆಯುವ ನಾಸಾಭರಣವುಳ್ಳ, ವಕ್ಷಃಸ್ಥಳದಲ್ಲಿ ತೂಗುತ್ತಿರುವ ರಾಮ?(ಪರಶುರಾಮ?) ನಿಂದ ಗುರುತಿಸಲ್ಪಟ್ಟ ಪಾದಗಳುಳ್ಳ ಶ್ರೀ ರೇಣುಕಾದೇವಿಯನ್ನು ಆಶ್ರಯಿಸುವೆನು(ರಕ್ತವರ್ಣ). 918

53 b/2 ## ಮಹಿಷಾಸುರಮರ್ದಿನೀದುರ್ಗಾಧ್ಯಾನ, ಮಂತ್ರದೇವತಾಪ್ರಕಾಶಿಕೆಯಲ್ಲಿ

ಶಂಖ, ಚಕ್ರ, ಬಿಲ್ಲು, ಬಾಣ, ಗದೆ, ಶೂಲ, ಖಡ್ಗ ಮತ್ತು ಗುರಾಣಿಯನ್ನು ಧರಿಸಿರುವ ಸಕಲಶೋಭಾಪರಿಪೂರ್ಣಳಾದ ಚಿನ್ನದ ಕಾಂತಿಯನ್ನುಳ್ಳ ದುರ್ಗಾದೇವಿಯನ್ನು ಭಜಿಸುವೆನು(ಸ್ವರ್ಣವರ್ಣ). 919

53 b/3 **ಅಷ್ಟಾಕ್ಷರೀದುರ್ಗಾಧ್ಯಾನ, ಮಂತ್ರದೇವತಾಪ್ರಕಾಶಿಕೆಯಲ್ಲಿ**

ಶಂಖ, ಚಕ್ರ, ಬಿಲ್ಲು, ಬಾಣಗಳನ್ನು ಹಸ್ತಗಳಲ್ಲಿ ಧರಿಸಿರುವ ಮೂರು ಕಣ್ಣುಗಳುಳ್ಳ ಚಂದ್ರಕಲೆಯಿಂದ ಶೋಭಿಸುವ ಕಿರೀಟವುಳ್ಳ, ಸಿಂಹದ ಮೇಲೆ ಆಸೀನಳಾಗಿರುವ, ಸಮಸ್ತಸಿದ್ಧರು, ದೇವರುಗಳು ಮತ್ತು ಅಸುರರಿಂದ ಪೂಜಿತಳಾದ, ದೂರ್ವೆಯಂತೆ ಶ್ಯಾಮಲವರ್ಣದ, ಪಾಪಸಮೂಹವನ್ನು ನಾಶಪಡಿಸುವ ದುರ್ಗೆಯನ್ನು ನಮಸ್ಕರಿಸುತ್ತೇನೆ. (ದೂರ್ವಾಶ್ಯಾಮವರ್ಣ). 920

53 b/4 **ಮಾತೃಕಾಂತರ್ಗತಚಾಮುಂಡಾಧ್ಯಾನ, ನೃಸಿಂಹಪ್ರಾಸಾದದಲ್ಲಿ**

ಚಾಮುಂಡೆಯು ಪ್ರೇತದ ಮೇಲೆ ನಿಂತಿರುವಳು, ಕಪ್ಪುಬಣ್ಣವುಳ್ಳ ಆಕೆಯು ವಿಕಾರವಾಗಿದ್ದು, ಸರ್ಪಗಳಿಂದ ಅಲಂಕೃತಳಾಗಿದ್ದಾಳೆ. ಕೋರೆಹಲ್ಲುಗಳು, ಕ್ಷೀಣವಾದ ದೇಹ, ಗುಳಿಬಿದ್ದ ಕಣ್ಣುಗಳಿದ್ದು, ಇಚ್ಛಾರೂಪವನ್ನು ಹೊಂದಿದ್ದಾಳೆ. ಆಕೆಗೆ ಹತ್ತು ಬಾಹುಗಳು. ಬಲಗೈಗಳಲ್ಲಿ ಒನಕೆ, ಚಕ್ರ, ಚಾಮರ, ಅಂಕುಶ, ಖಡ್ಗ, ಹಾಗೂ ಎಡಗೈಗಳಲ್ಲಿ ಗುರಾಣಿ, ಪಾಶ, ಬಿಲ್ಲು, ಕೋಲು ಮತ್ತು ಕೊಡಲಿಯನ್ನು ಧರಿಸಿರುವಳು(ಕೃಷ್ಣವರ್ಣ). 921-922

54 a/1 **ಚಿಂತಾಮಣಿದುರ್ಗಾಧ್ಯಾನ, ದೇವಶಿಲ್ಪಿಶಾಸ್ತ್ರದಲ್ಲಿ**

ಪದ್ಮರಾಗಮಣಿಯ ಪ್ರಭೆಯುಳ್ಳ, ಉದಯ ಸೂರ್ಯನ ಕಿರಣಗಳಂತೆ ಕೆಂಪಾಗಿರುವ, ಹತ್ತುಮೊಗಗಳಿರುವ, ಮೂರು ಕಣ್ಣುಗಳಿರುವ, ಉನ್ನತವಾದ ಕುಚಗಳಿರುವ, ಹತ್ತು ಪಾದಕಮಲಗಳಿರುವ, ಹತ್ತು ದಿಙ್ಮುಖಗಳಲ್ಲೂ ಪೂಜಿತಳಾದ, ಕೆಂಪು ವಸ್ತ್ರಗಳನ್ನು ಧರಿಸಿರುವ, (ಕೆಂಪು ಗಂಧ / ರಕ್ತಚಂದನ)ವನ್ನು ಲೇಪಿಸಿಕೊಂಡಿರುವ, ಕಾದಚಿನ್ನದಂತೆ ಮಹಾಜ್ವಾಲೆಗಳಿರುವ, ಚಂದ್ರಕಲೆಯಿಂದ ಅಲಂಕೃತಳಾದ, ಚಂದ್ರಹಾಸ(ಖಡ್ಗ), ತ್ರಿಶೂಲ, ಖಡ್ಗ, ಗದೆ, ಬಿಲ್ಲು, ಬಾಣ, ಕೊಡಲಿ, ಡಮರು, ಗುರಾಣಿ, ಬಿಂಡಿವಾಳ, ಅಮೃತ ತುಂಬಿದ ಘಟಗಳು ಫಲಕ ಮುಷ್ಟಿ (ಮುದ್ರೆ) ವಜ್ರಾಯುಧ, ಈಟಿ, ಖಟ್ವಾಂಗ, ನೇಗಿಲು, ಅಂಕುಶ, ಸಣ್ಣಚೂರಿ, ದ್ರೋಣ, ತೋಮರ, ಪಾನಪಾತ್ರೆ, ಪಟ್ಟಿಸ, ದಂಡ, ಸರ್ಪ, ವರದಮುದ್ರೆ, ಪಾಶ, ಭುಶುಂಡಿ, ಕನ್ನಡಿ, ರುದ್ರವೀಣೆ ಇವುಗಳನ್ನು ತನ್ನ ಮೂವತ್ತ ಎರಡು ಭುಜಗಳಿಂದ ಧರಿಸಿಕೊಂಡಿರುವ ಚಿಂತಾಮಣಿ ಮಹಾದುರ್ಗೆಯಾದ, ಸರ್ವಶತ್ರುಗಳನ್ನು ಸಂಪೂರ್ಣವಾಗಿ ನಾಶಪಡಿಸುವ ಮಹಿಷಾಸುರ ಮರ್ದಿನಿಯನ್ನು (ಧ್ಯಾನಿಸಬೇಕು), (ನೀಲವರ್ಣ). 923-929

54 a/2 **ಚಿತ್ರಿಣೀಧ್ಯಾನ, ಪ್ರಪಂಚಸಾರದಲ್ಲಿ**

ಶುಭ್ರವಾದ ಕಮಲದ ನಡುವೆ ಚಂದ್ರಪೀಠದಲ್ಲಿ ಕುಳಿತಿರುವ, ಎರಡು ಅಮೃತಕಲಶಗಳನ್ನು ಧರಿಸಿರುವ ಅಭಯ ಮತ್ತು ವರದಮುದ್ರೆಗಳಿಂದ ಕೂಡಿದ ಹಸ್ತಗಳುಳ್ಳ, ನಮಸ್ಕರಿಸಿದವರ ಶಿರಸ್ಸಿನ ಮೇಲೆ ಅಮೃತದ ಪ್ರವಾಹವನ್ನು ಸುರಿಸುತ್ತಿರುವ ಶ್ರೀಶಿವೆಯ ಸ್ವರೂಪವುಳ್ಳ ಚಿತ್ರವಿದ್ಯಾದೇವಿ(ಚಿತ್ರಿಣಿ)ಯನ್ನು ಶರಣು ಹೋಗುವೆನು. (ಔಚಿತ್ಯದಿಂದ ಮರಕತವರ್ಣ). 930

54 a/3 **ಯಕಲಾದೇವೀಧ್ಯಾನ, ದೇವಶಿಲ್ಪದಲ್ಲಿ**

ಹತ್ತು ಬಾಹುಗಳುಳ್ಳ, ಮೂರು ಕಣ್ಣುಗಳಿರುವ, ಹಳದಿ ವಸ್ತ್ರದಿಂದ ಭೂಷಿತಳಾದ ಕೋಣನ ಮೈ ಮೇಲೆ ಪಾದವನ್ನಿಟ್ಟಿರುವ, ಶಂಖ, ಚಕ್ರ, ಗದೆ, ಡಮರು, ಫಲಕ, ಶೂಲ, ಬಿಲ್ಲು, ಬಾಣ, ಗುರಾಣಿ, ಖಡ್ಗ ಇವುಗಳನ್ನು ಧರಿಸಿರುವ ಕೆಂಪು ಬಣ್ಣದಿಂದ ಕೂಡಿದ, ಭಕ್ತರ ಇಷ್ಟಫಲಗಳನ್ನು ನೀಡುವ, ಕೋರೆಹಲ್ಲುಗಳಿಂದ ಭೀಕರಳಾಗಿ ಕಾಣಿಸುವ, ಉಗ್ರಮೂರ್ತಿ(ಶರೀರ)ಯಾದ ಯಕಲಾದೇವಿಯನ್ನು ನಾನು ಭಜಿಸುತ್ತೇನೆ(ರಕ್ತವರ್ಣ). 931-932

54 b/1 **ಚಿಂತಾಮಣಿಸರಸ್ವತೀಧ್ಯಾನ, ಪ್ರಪಂಚಸಾರದಲ್ಲಿ**

ಹಂಸವಾಹನೆಯಾಗಿ, ಹರನ ಭಸ್ಮದಂತೆ, ಮುತ್ತಿನಹಾರದಂತೆ, ಚಂದ್ರನಂತೆ, ಮಲ್ಲಿಗೆಯಂತೆ ಶುಭ್ರವಾದ, ಮುಗುಳ್ನಗೆಯಿಂದ ಕೂಡಿದ ಮೊಗವುಳ್ಳ, ಕಿರೀಟದಲ್ಲಿ ಚಂದ್ರಕಲೆಯನ್ನು ಧರಿಸಿರುವ, ವಿದ್ಯಾ(ಪುಸ್ತಕ) ವೀಣೆ, ಅಮೃತಪೂರ್ಣವಾದ ಕಲಶ ಹಾಗೂ ಅಕ್ಷಮಾಲೆಯನ್ನು ಕೈಗಳಿಂದ ಧರಿಸಿದ, ಬೆಳ್ದಾವರೆಯ ಮೇಲೆ ಆಸೀನಳಾಗಿರುವ, ವಾಣಿಭಾರತೀದೇವಿಯು ತಮ್ಮೆಲ್ಲರ ಇಷ್ಟಾರ್ಥಸಿದ್ಧಿಗಾಗಿ ಇರಲಿ(ಶುಭ್ರವರ್ಣ). 933

54 b/2 **ಬಾಲಾಸರಸ್ವತೀಧ್ಯಾನ, ಪ್ರಪಂಚಸಾರದಲ್ಲಿ**

ಹೊಂಗಿರಣಗಳ ಬಲೆಗಳಿಂದ ಶೃಂಗರಿಸಲ್ಪಟ್ಟ ದಿಗ್ವಿಭಾಗಗಳುಳ್ಳ, ಜಪಮಾಲೆ, ಪುಸ್ತಕ, ಅಭಯಮುದ್ರೆ ಹಾಗೂ ವರದಮುದ್ರೆಯನ್ನು ಧರಿಸಿದ, ಅರಳಿದ ಕಲ್ಹಾರ(ಸಂಜೆ ಅರಳುವ ಬಿಳಿಕಮಲ)ದ ಮೇಲೆ ಆಸೀನಳಾಗಿರುವ, ಸತತ ಕಲ್ಯಾಣಗುಣಮಯಿಯಾದ ಬಾಲಾಸರಸ್ವತಿಯು ನನ್ನ ಹೃದಯದಲ್ಲಿ ನೆಲೆಗೊಳ್ಳಲಿ. 934

ಇನ್ನೊಂದು ಪ್ರಕಾರದ ಧ್ಯಾನ

ಮಾಲೆ(ಜಪಮಾಲೆ) ಅಂಕುಶ, ಪುಸ್ತಕ ಮತ್ತು ಪಾಶಗಳನ್ನು ಕೈಗಳಿಂದ ಧರಿಸಿದ, ಯುವಕ ಕಾಮೇಶ್ವರನೊಂದಿಗೆ ಶೃಂಗಾರಕ್ರೀಡೆಯಲ್ಲಿ ಆಸಕ್ತಳಾಗಿರುವ ಸುಮಾರು ಒಂಭತ್ತು ವರ್ಷ ಪ್ರಾಯವಾಗಿರುವ, ಲಲಿತಾಕುಮಾರಿಯಾದ ಗೌರ ವರ್ಣದ ಬಾಲಾಂಬಿಕೆಯನ್ನು ನಮಸ್ಕರಿಸುವೆನು. 935

54 b/3 **ಸೂರ್ಯಮಂಡಲದಲ್ಲಿರುವ ದುರ್ಗಾಧ್ಯಾನ, ಪ್ರಪಂಚಸಾರದಲ್ಲಿ**

ಪ್ರಳಯಕಾಲದ ಅಗ್ನಿಯಂತಿರುವ, ಮತ್ತೊಂದು ಪ್ರಳಯಕಾಲರಾತ್ರಿ (ಕಪ್ಪುರಾತ್ರಿ) ಸ್ವರೂಪಿಣಿಯಾದ, ಶೂಲ ಮತ್ತು ಪಾಶವನ್ನು ಧರಿಸಿರುವ, ಭಯಂಕರ ರೂಪವುಳ್ಳ, ಸಿಂಹದ ಭುಜದ ಮೇಲೆ ಕುಳಿತಿರುವ, ಸೂರ್ಯಮಂಡಲದ ಮಧ್ಯದಲ್ಲಿರುವ, ಕೆಂಪಾದ ತನ್ನ ಮೂರುಕಣ್ಣುಗಳಿಂದ ಪುಟಿದೆದ್ದ ಅಗ್ನಿಕಣಗಳಿಂದ ಹೆದರಿದ ಶರೀರದ ಶತ್ರುವನ್ನು ಸುಡುತ್ತಿರುವ, ತುಟಿಯನ್ನು ಗಟ್ಟಿಯಾಗಿ ಕಚ್ಚಿಕೊಂಡ, ಕುಣಿಯುವ ವಕ್ರವಾದ ಹುಬ್ಬುಗಳಿಂದ ಭಯಾನಕವಾದ ಮೊಗವುಳ್ಳ, ಭಯಂಕರಾಕಾರದ ತೋರುಬೆರಳಿನಿಂದ ತನ್ನ ಶತ್ರುವನ್ನು ಬೆದರಿಸುತ್ತಿರುವ, ಕೋರೆಹಲ್ಲುಗಳ ಕಿರಣಜಾಲ(ಸಮೂಹ)ದಿಂದ ದಿಗಂತರಗಳನ್ನು ಪ್ರಕಾಶಪಡಿಸುತ್ತಿರುವ ಶೂಲದಿಂದ ವೈರಿಗಳ ಎದೆಯನ್ನು ಬಡಿಯುತ್ತಿರುವ ಭಯೋತ್ಪಾದಕಳಾದ ದುರ್ಗೆಯನ್ನು ಧ್ಯಾನಿಸುತ್ತೇನೆ. 936-939

ಶತ್ರುಗಳ ನಿಗ್ರಹಕ್ಕಾಗಿ ಈ ಮೂರ್ತಿಯ ಧ್ಯಾನವಿಧಾನ

ಅಸ್ತ್ರ ಮತ್ತು ಮಂತ್ರಗಳಿಂದ ವಿನ್ಯಾಸಮಾಡಲ್ಪಟ್ಟಿರುವ, ಪ್ರಳಯಕಾಲದ ಅಗ್ನಿಗೆ ಸಮನಾದ ಪ್ರಭೆಯುಳ್ಳ, ರಕ್ತವಸ್ತ್ರವನ್ನು ಉಟ್ಟಿರುವ, ಸಿಟ್ಟುಗೊಂಡ, ಕೆಂಪಗಿರುವ ಮೂರುಕಣ್ಣುಗಳುಳ್ಳ, ಸಿಂಹವನ್ನು ಏರಿರುವ, ಶತ್ರುವನ್ನು ಅಟ್ಟಿಸಿಕೊಂಡು ಹೋಗುವ, ಖಡ್ಗದಿಂದ ಶತ್ರುವಿನ ತಲೆಯನ್ನು ಕತ್ತರಿಸಿ ಆಕಾಶಕ್ಕೆ ತೆರಳಿದ, ದುರ್ಗೆಯನ್ನು, ಭೋಜನ ವನ್ನು ಮಾಡದೇ ಮೂರು ದಿನಗಳ ಪರ್ಯಂತ ಅಯುತ ಸಂಖ್ಯೆ(ಹತ್ತುಸಾವಿರ)ಯಲ್ಲಿ ಜಪಿಸಬೇಕು. ಈ ವಿಧಾನ ದಿಂದಲೇ ಶತ್ರುವಾಗಿದ್ದವನು ಮಿತ್ರನಾಗಿ ಪ್ರೀತಿಪಾತ್ರನಾಗುವನು (ರಕ್ತವರ್ಣ). 940-942

55 a/1

ಮಣಿಕರ್ಣಿಕಾಧ್ಯಾನ, ಕಾಶೀಖಂಡದಲ್ಲಿ

ನಾಲ್ಕುಭುಜಗಳುಳ್ಳ, ವಿಶಾಲವಾದ ಕಣ್ಣುಗಳುಳ್ಳ, ಹೊಳೆಯುವ ಹಣೆಗಣ್ಣುಳ್ಳವಳು, ಪಶ್ಚಿಮದಿಕ್ಕಿಗೆ ಮುಖವನ್ನು ಮಾಡಿರುವವಳು ಕೈಗಳನ್ನು ಅಂಜಲಿ ಮುದ್ರೆಯಲ್ಲಿರಿಸಿಕೊಂಡವಳು, ಬಲಗೈಯಲ್ಲಿ ಕನ್ನೈದಿಲೆಯ ಮಾಲೆಯನ್ನು ಧರಿಸಿದ, ವರದಾನಕ್ಕಾಗಿ ಎತ್ತಿಕೊಂಡ ಕೈಯಲ್ಲಿ ಮಂಗಳಕರವಾದ ಮಾದಳದ ಹಣ್ಣನ್ನು ಧರಿಸಿದ, ನಿತ್ಯ ಕುಮಾರ(ಕೌಮಾರ) ರೂಪವನ್ನುಳ್ಳ, ನಿತ್ಯದ್ವಾದಶ(ಹನ್ನೆರಡು) ವರ್ಷದ, ಶುದ್ಧವಾದ ಸ್ಫಟಿಕಕಾಂತಿಯುಳ್ಳ, ಅಚ್ಚಕಪ್ಪಾದ ನುಣುಪಾದ ತಲೆಗೂದಲಿರುವ, ಪ್ರವಾಳ ಮತ್ತು ಮಾಣಿಕ್ಯವನ್ನು ಸೋಲಿಸುವಂಥ ಸುಂದರವಾದ ತುಟಿಗಳಿರುವ, ಅರಳಿದ ಕೇತಕ ಪುಷ್ಪದಿಂದ ಹೊಳೆಯುವ ಶಿರೋಭಾಗದ ಕೂದಲುಗಳುಳ್ಳ, ಸಮಗ್ರ ಅಂಗಗಳಲ್ಲಿ ಮುತ್ತಿನ ಆಭರಣಗಳುಳ್ಳ, ಚಂದ್ರಕಾಂತದಂತಿರುವ ಅಥವಾ ಚಂದ್ರನಂತೆ ಸುಂದರವಾದ ವಸ್ತ್ರಗಳಿಂದ ಆವೃತಳಾದ, ಸೌಂದರ್ಯದಿಂದ ಕೂಡಿದ ತಾವರೆಗಳ ಮಾಲೆಯನ್ನು ವಕ್ಷಃಪ್ರದೇಶದಲ್ಲಿ ಧರಿಸಿರುವ, ಮಣಿಕರ್ಣಿಕಾದೇವಿಯನ್ನು ಮೋಕ್ಷಾರ್ಥಿಗಳು ನಿರಂತರವಾಗಿ ಧ್ಯಾನಿಸಬೇಕು. ಶ್ರೀಮತೀ ಮಣಿಕರ್ಣಿಕೆಯು ಮೋಕ್ಷಲಕ್ಷ್ಮಿಯ ವಾಸಸ್ಥಾನವಾಗಿರುವಳು. (ಶುಭ್ರವರ್ಣ).

943-948

55 a/2

ದೇವಿಯ ಕೈಯಲ್ಲಿರುವ ಗಿಳಿಯ ರೆಕ್ಕೆಗಳಲ್ಲಿ ಉದ್ಭವಿಸುವ ಪಂಚಾಕ್ಷರಿಯ ಪ್ರಭೇದ, ಸ್ಕಾಂದಪುರಾಣ, ಪರಾಶರಸಂಹಿತೆ ಮತ್ತು ಚಿದಂಬರರಹಸ್ಯದಲ್ಲಿ

ಶ್ರೀಚಾಮುಂಡೇಶ್ವರಿಗೆ ನಮನಗಳು, ನಕಾರ ಅಕ್ಷರವು ಈಶಾನದೇವತಾತ್ಮಕ. ಕೋಟಿ ವಿದ್ಯುತ್ಪ್ರಭೆಗಿಂತ ಹೆಚ್ಚಿನ ಪ್ರಭೆಯುಳ್ಳದ್ದು. ಹಸಿರು ಬಣ್ಣದಿಂದ ಕೂಡಿ, 'ಹಂಸ' ಎಂಬ ನಾಮಧೇಯದಿಂದ ಆಕಾಶರೂಪವನ್ನು ಪಡೆದಿರುತ್ತದೆ. 'ಮ'ಕಾರ ಎಂಬ ಅಕ್ಷರವು ಸ್ಫಟಿಕದ ಆಕೃತಿಯುಳ್ಳದ್ದು. ಕೋಟಿ ಚಂದ್ರಪ್ರಭೆಗಿಂತ ಹೆಚ್ಚಿನ ಪ್ರಭಾಯುತವಾದುದು. 'ತತ್ಪುರುಷ' ಎಂಬ ನಾಮಧೇಯದಿಂದ ಧವಲರೂಪವಾದ ಈ ಅಕ್ಷರವು ವಾಯುವಿನ ಅಂಶವನ್ನು ಹೊಂದಿರುತ್ತದೆ. 'ಶಿ' ಎಂಬ ಅಕ್ಷರವು ಶ್ಯಾಮಲವರ್ಣದಿಂದ ಕೂಡಿದೆ. ಕಾರ್ಮೋಡದ ಪ್ರಭೆಗಿಂತಲೂ ಹೆಚ್ಚಿನ ಪ್ರಭೆಯನ್ನು ಹೊಂದಿದೆ. ಅಘೋರಮಂತ್ರ ಸಂಜ್ಞೆಯಿಂದ ಕೂಡಿದ ಶಿಕಾರವು ನಿಶ್ಚಯವಾಗಿಯೂ ಅಗ್ನ್ಯಂಶವಾಗಿದೆ. 'ವಾ' ಎಂಬ ಅಕ್ಷರವು ವಾಮದೇವಾತ್ಮಕ. ಕೋಟಿಸೂರ್ಯರ ತೇಜಸ್ಸಿಗಿಂತ ಮಿಗಿಲಾದ ತೇಜಃಪೂರ್ಣ. ಈ ವಾಕಾರವು ಉದಕಾಂಶ (ಜಲಾಂಶ)ವಾಗಿದ್ದು, ನಿಶ್ಚಯವಾಗಿಯೂ ರಕ್ತವರ್ಣವಾಗಿರುವುದು. 'ಯ' ಎಂಬ ಅಕ್ಷರವು ಗೋತ್ರಾಂಶ (ಭೂಮಿ) ಮರಕತ(ಹಸಿರು) ಮಣಿಯ ಪ್ರಭೆಗಿಂತ ಮಿಗಿಲಾದ ಪ್ರಭೆಯುಳ್ಳದ್ದಾಗಿದೆ. ಮಹಾನೀಲದ ಪ್ರಭೆಗಿಂತ ಅತಿಶಯಿತವಾದ ಪ್ರಭೆಯುಳ್ಳ ಸದ್ಯೋಜಾತಾತ್ಮಕವಾದ ಶ್ರೇಷ್ಠತಮವಾದ ಐದು ವರ್ಣ(ಅಕ್ಷರ)ಗಳಿಂದ ಕೂಡಿದ, ಐದು

राष्ट्रिय संस्कृत संस्थान जयपुर परिसर, जयपुर पुस्तकालय
1647

ವರ್ಣಗಳಿಂದ ಹೊಳೆಯುವ ಪಂಚಬ್ರಹ್ಮರ ಉತ್ಪತ್ತಿಗೆ ಕಾರಣವಾದ ಈ ಪಂಚಾಕ್ಷರಿಯು ಪರಮಾನಂದ ನೀಡಬಲ್ಲ ತಾಂಡವದಂತಿದೆ. 949-954

ಶುಕಲಕ್ಷಣ ಶ್ಲೋಕ

ಬಾಣ, ಅಬ್ಧಿ, ಅಗ್ನಿ, ಕರ, ಇಂದು (ಕ್ರಮವಾಗಿ 5 4 3 2 1) ಈ ಸಂಖ್ಯೆಯ ಕೋಷ್ಟಕಗಳಿಂದ ಕೂಡಿದ ಗಿಳಿಯ ರೆಕ್ಕೆಯಲ್ಲಿ ಮೊದಲ ಸಾಲಿನಲ್ಲಿ ಮುಖಾಕ್ಷರ (ನ)ದ ಕೆಳಭಾಗಗಳಲ್ಲಿ ಒಂದೊಂದು ಸಂಖ್ಯೆ ಹೆಚ್ಚಾಗಬೇಕು. ಮುಂಭಾಗಕ್ಕೆ ಪಸರಿಸಿದ ರೆಕ್ಕೆಗಳ ಕೋಷ್ಟಕದಲ್ಲಿ ತಳದಲ್ಲಿರುವ ಸಂಖ್ಯೆಗಳಿಗೆ ಉಚಿತವಾಗಿರುವ ರೀತಿಯಲ್ಲಿ ಐದು, ನಾಲ್ಕು ಮೂರು ವರ್ಣಗಳಿಂದ ಗುಣಿಸಿದ ಸಂಖ್ಯೆಯಿರಬೇಕು. 955-956

(ಮುಂದಿನ ಶ್ಲೋಕದಲ್ಲಿ ಮಂತ್ರೋದ್ಧಾರಕ್ರಮವನ್ನೂ ಹೇಳಲಾಗಿದೆ. ಅದರ ಅರ್ಥ ಅಸ್ಪಷ್ಟವಾಗಿರುವುದರಿಂದ ಅನುವಾದಿಸಿಲ್ಲ).

ಶ್ರೀದೇವಿಯು ಹೇಳಿದಳು

ದೇವದೇವನೆ, ಮಹಾದೇವನೆ, ಸಚ್ಚಿದಾನಂದವಿಗ್ರಹನೆ, ಪಂಚಕೃತ್ಯನಿರತನೇ, ಪರಮೇಶ್ವರನೆ, ಪರಮಾನಂದ ದಾಯಕನೆ, ರಹಸ್ಯಗಳಿಗೂ ರಹಸ್ಯವಾಗಿರುವ ನಮ್ಮ ಸಮಸ್ತಪಂಚಾಕ್ಷರಮಂತ್ರವನ್ನು, ಪೃಥಕ್ಕಾಗಿರುವ ಲೋಕ ಸಂರಕ್ಷಣಾರ್ಥವಾಗಿ, ಸನಾತನವಾದ ಈವರೆಗೆ ಬೇರೆ ಯಾರೊಬ್ಬರಿಗೂ ಹೇಳದ ಮಂತ್ರವನ್ನು ನನಗೆ ಸಮಗ್ರವಾಗಿ ಹೇಳು. 957-959

ಶ್ರೀ ಈಶ್ವರನು ನುಡಿದನು. ಎಲೈ ಸುಂದರಿಯೆ, ಪ್ರಾಣಕಾಂತೆಯೆ, ದೇವಿಯೆ, ನನ್ನ ಸ್ವರೂಪವನ್ನು ಪ್ರದರ್ಶಿಸುವ ಶಕ್ತಿಯುಳ್ಳ ಮಹಾಪಂಚಾಕ್ಷರಮಂತ್ರವನ್ನು ಕೇಳು. ಇದು ರಹಸ್ಯಗಳ ರಹಸ್ಯವಾಗಿದ್ದು ವಿಷ್ಣುಮೊದಲಾದವರಿಗೆ ಅಗೋಚರವಾದುದು. ನಿನ್ನ ಮೇಲಿನ ಪ್ರೀತಿಯಿಂದ ಮಂತ್ರಪ್ರಸ್ತಾರ ಪೂರ್ವಕವಾಗಿ ಇದನ್ನು ನಿನಗೆ ಹೇಳುವೆನು. ಹೇ ಮಹಾದೇವಿ, ಈ ಮಂತ್ರಯೋಗವನ್ನು ಗಮನವಿಟ್ಟು ಕೇಳು. ನಾನು ಸಾಕ್ಷಾತ್ ಪಂಚಾಕ್ಷರಸ್ವರೂಪ. ನೀನು ಪಂಚ ದಶಾಕ್ಷರಿ (ಹದಿನೈದು) ನೀನು ನನ್ನ ಕೋಪದ ಕಾರಣದಿಂದ ಗಿಳಿಯ ರೂಪವನ್ನು ಆಶ್ರಯಿಸಿದೆ. ಪಂಚಾಕ್ಷರಿಪ್ರಭೇದಗಳು ಒಟ್ಟಿಗೆ ನೂರಇಪ್ಪತ್ತು. ದೇವಿಯ ಕರದಲ್ಲಿರುವ ಶುಕ(ಗಿಳಿ)ವು ತಿಳಿಸಿದ ಈ ಪ್ರಸ್ತಾರಗಳನ್ನು ಸಂಗ್ರಹಮಾಡಿ ಹೇಳುವೆನು. ಬ್ರಹ್ಮಾ, ವಿಷ್ಣು, ಇಂದ್ರ, ಋಷಿ ಮೊದಲಾದವರು ನನ್ನ ದರ್ಶನಕ್ಕಾಗಿ ಬಂದರು. ಅವರು ನನ್ನನ್ನು ಒಮ್ಮೆ ನೋಡಿದ ಮಾತ್ರದಿಂದ ನನ್ನ ರೂಪವನ್ನು ಪಡೆದರು. ಆದರೆ ಆ ರೂಪದಲ್ಲಿ ಜಟೆ, ಬಾಲಚಂದ್ರ, ಹಣೆಯ ಮಧ್ಯದ ಕಣ್ಣು, ವಾಮಭಾಗದ ಸ್ತ್ರೀರೂಪ ಇಲ್ಲದೇ ಬರಿಯ ಮೂರ್ತಿಗಳು. ಎಲೈ ಪರಮೇಶ್ವರಿ, ನನ್ನ ವಾಕ್ಯ ಸಂದೇಹವಿಲ್ಲದುದು, ಖಂಡಿತವಾಗಿ ಅಸಂದಿಗ್ಧ. 960-966

ದೇವಿಯ ಕೈಯಲ್ಲಿರುವ ಗಿಳಿಯ ರೆಕ್ಕೆಯಿಂದ ಹುಟ್ಟಿದ ಪಂಚಾಕ್ಷರೀ ಪ್ರಸ್ತಾವ ಕ್ರಮದಿಂದ ಶಿವಶಕ್ತ್ಯಾತ್ಮಕವಾದ ೧೨೦ ಸಂಖ್ಯೆಯ ನಾಮರೂಪಗಳ ವಿಸ್ತರ. ೧೨೦ ನಾಮಗಳ ಪ್ರಸ್ತಾರಕ್ರಮ. (ಈ ಹೆಸರು(೧೨೦) ಗಳಿಗೆ ಅನುವಾದವಿಲ್ಲ).

೧೨೦ ನಾಮಗಳ ಪ್ರಸ್ತಾರ ಕ್ರಮ

೧ ಕೀರಾಂಗವರ್ಣಾಯೈ ನಮಃ । ನಮಃಶಿವಾಯ। ೨ ರೂಪಗರ್ವಿಣ್ಯೈ ನಮಃ । ಮಃನಶಿವಾಯ । ೩ ಗುರುಪೂರ್ವಿಣ್ಯೈ ನಮಃ। ಶಿಮಃ ನವಾಯ । ೪ ವೀರಲೋಕೇಶ್ಯೈ ನಮಃ । ವಾಮಃ ಶಿನಯ । ೫ ಮೇರುಗರ್ಭಾಢ್ಯಾಯೈ ನಮಃ । ಯಮಃ ಶಿವಾನ। ೬ ಕುಲಸ್ತ್ರೀವಶಾಯ್ಯೈ ನಮಃ । ನ ಶಿಮಃ ವಾಯ । ೭ ಫಲಾಢ್ಯವಾಣ್ಯೈ ನಮಃ । ಮಃ ಶಿನವಾಯ । ೮ ಲೋಕಪ್ರವಣಾಯ್ಯೈ ನಮಃ । ಶಿನಮಃ ವಾಯ । ೯ ಭರ್ಗರೂಪಿಣ್ಯೈ ನಮಃ । ವಾಶಿಮಃ ನಯ । ೧೦ ಶೌಂಡಾರಭಟ್ಯೈ ನಮಃ । ಯಶಿಮಃ ವಾನ । ೧೧ ಕವಿಗೋಷ್ಠೀಶ್ಯೈ ನಮಃ । ನವಾಶಿಮಃ ಯ । ೧೨ ರವಿಶ್ಲಾಘ್ಯಾಂಶವೇ ನಮಃ । ಮಃವಾಶಿನಯ । ೧೩ ಲಾವಣ್ಯರಾಶ್ಯೈ ನಮಃ । ಶಿವಾನಮಃ ಯ । ೧೪ ಭವ್ಯಗರಿಮಾಯೈ ನಮಃ । ವಾನಶಿಮಃ ಯ । ೧೫ ಶುಭಾಂಗರೂಪಾಯೈ ನಮ ಃ । ಯವಾಶಿಮಃನ । ೧೬ ಕಲಶೇಶ್ವರ್ಯೈ ನಮಃ। ನಯ ಶಿವಾಮಃ । ೧೭ ಹ್ರೀಮೂಲವಿದ್ಯಾಯೈ ನಮಃ । ಮಃ ಯಶಿವಾನ । ೧೮ ಗ್ಲೌಶಾಕಂಭರ್ಯೈ ನಮಃ । ಶಿಯನವಾಮಃ। ೧೯ ವಾಙ್ಮೂಲಪೀಠಾಯೈ ನಮಃ । ವಾಯಶಿ ನಮಃ । ೨೦ ಮಾಯಾಲವಿತ್ರ್ಯೈ ನಮಃ । ಯನ ಶಿವಾಮಃ । ೨೧ ಕೈರವಶ್ಲಕ್ಷ್ಣಾಯೈ ನಮಃ । ನಮಃ ವಾಶಿಯ । ೨೨ ಶ್ರೇಯೋವರ್ಗಿಣ್ಯೈ ನಮಃ । ಮಃ ನಶಿವಾಯ । ೨೩ ಗೋತ್ರಭೂಶ್ಯಾಮಾಯೈ ನಮಃ । ಶಿಮಃ ವಾನಯ । ೨೪ ವರೇಣ್ಯಗುಣಾಯೈ ನಮಃ । ವಾಮಃ ನಶಿಯ। ೨೫ ಮುಖವಲ್ಲೂಢ್ಯಾಯೈ ನಮಃ । ಯಮಃವಾಶಿನ । ೨೬ ಕಾಲವಾರಿಣ್ಯೈ ನಮಃ । ನ ಶಿವಾಮಃ ಯ । ೨೭ ರಾಗಭೃತ್ಕಾಮಾಯೈನಮಃ । ಮಃ ಶಿವಾನಯ । ೨೮ ಶ್ಲಾಘ್ಯವಜ್ರಿಣ್ಯೈ ನಮಃ । ಶಿನವಾಮಃ ಯ । ೨೯ ಭರ್ಗ ಯುಕ್ಪ್ರಾಣಾಯೈ ನಮ ಃ । ವಾ ಶಿನಮಃ ಯ । ೩೦ ಮೂಲಭದ್ರಯುಜೇ ನಮಃ । ಯ ಶಿವಾಮಃ ನ । ೩೧ ಕವೀಂದ್ರಲಕ್ಷ್ಮ್ಯೈನಮಃ । ನವಾಮಶಿ ಯಃ । ೩೨ ಪ್ರೌಢಾಭ್ಯುದ್ಗಮಾಯೈ ನಮಃ । ಮಃವಾನಶಿಯ । ೩೩ ಗಂಭೀರಯಶಸೇ ನಮಃ । ಶಿವಾಮಃ ನಯ । ೩೪ ಭಾಗ್ಯಪ್ರೋಲ್ಲಸಣಾಯೈ ನಮಃ । ವಾನಮಃ ಶಿಯ । ೩೫ ಶಂಭುರಾಗಾಢ್ಯಾಯೈ ನಮಃ । ಯವಾಮಃ ಶಿನ । ೩೬ ಕಾಮವಲ್ಲ್ಯರ್ಯೈ ನಮಃ । ನಯ ವಾ ಶಿಮ ೩೭ ರಾಮಾಭಿಗೇಯಾಯೈ ನಮಃ । ಮಃ ಯ ವಾಶಿನ । ೩೮ ಗುಣೌಘಪರಾಯೈ ನಮಃ । ಶಿಯವಾ ನಮಃ । ೩೯ ವಶಕುಬೇರಾಯೈ ನಮಃ । ವಾಯನ ಶಿಮಃ । ೪೦ ಮಾಯಾವಾಗುರಾಯೈ ನಮಃ । ಯನವಾ ಶಿಮಃ । ೪೧ ಪರಮೋದ್ವೇಗಾಯೈ ನಮಃ । ನಮಃ ಯ ವಾಶಿ । ೪೨ ಪ್ರಿಯಶಂಭುಗಿರೇ ನಮಃ । ಮಃ ನಯ ವಾಶಿ ೪೩ ಗಿರೀಶಭಾರ್ಯಾಯೈ ನಮ ಃ । ಶಿಮಃಯವಾನ । ೪೪ ವಿಕ್ರಮಕಲಾಯೈ ನಮಃ । ವಾಮಃ ಯನಶಿ । ೪೫ ಮಿತ್ರೈಕವರ್ಗಾಯೈ ನಮಃ । ಯಮಃ ನವಾಶಿ । ೪೬ ಕಾಲಶರ್ವರ್ಯೈ ನಮಃ । ನಶಿಯವಾಮಃ । ೪೭ ತ್ರಿಗುಣಾವಾಪ್ಯಾಯೈ ನಮಃ । ಮಃ ಶಿವಾಯನ । ೪೮ ಕ್ಲೀಂ ಕಾಮೇಶ್ವರ್ಯೈ ನಮಃ । ಶಿನಯವಾಮಃ । ೪೯ ವಾಗೀಶಾಪರಾಯೈ ನಮಃ । ವಾಶಿಯ ನಮಃ । ೫೦ ಮಲ್ಲಿಕೇಶ್ವರ್ಯೈ ನಮಃ । ಯ ಶಿನ ವಾಮಃ । ೫೧ ಪಟ್ವಾತ್ಮಖೇಲಾಯೈ ನಮಃ । ನವಾ ಯ ಮಃ ಶಿ । ೫೨ ಶ್ರೀ ವಿಷ್ಣುಕಲಾಯೈ ನಮಃ । ಮಃ ವಾಯನಶಿ । ೫೩ ಗೀರ್ವಾಣಾಪ್ರಾಢ್ಯಾಯೈ ನಮಃ । ಶಿವಾಯ ಮಃನ । ೫೪ ಭಾಗ್ಯಶೃಂಖಲಾಯೈ ನಮಃ । ವಾನಯಮಃ ಶಿ । ೫೫ ಶುಭಾಂಕಫಾಲಾಯೈ ನಮಃ । ಯವಾ ನಮಃ ಶಿ । ೫೬ ಕೋಶಪ್ರೌಢಿಗಾಯೈ ನಮಃ । ನಯಮಃ ವಾಶಿ । ೫೭ ಭ್ರೂಮಾನ್ಯಭರ್ಗಾಯೈ ನಮಃ । ಮಃ ಯನವಾಶಿ । ೫೮ ಡಾಮರೋದ್ಭಟಾಯೈ ನಮಃ । ಶಿಯಮಃ ವಾನ । ೫೯ ವಿಷ್ಣುಶ್ರೀಪಾಲಾಯೈ ನಮಃ । ವಾಯಮಃ ನಶಿ । ೬೦ ಮುಕುರೋಜ್ಜ್ವಲಾಯೈ ನಮಃ । ಯನಮಃ ವಾಶಿ ॥ ೬೧ ಯಂತ್ರಾಗಮಭುವೇ ನಮಃ । ನಮಃಶಿಯವಾ । ೬೨ ಶ್ರೀ ಕಲಾರ್ಣವಾಯೈ ನಮಃ । ಮಃನಶಿಯವಾ । ೬೩ ಲೋಢ್ರೋಪಮಾಭಾಯೈ ನಮಃ । ಶಿಮಃ ನಯವಾ । ೬೪ ದ್ವಿಫಲಾತ್ಮಿಕಾಯೈ ನಮಃ । ವಾಮಃ ಶಿಯನ । ೬೫ ಶತ್ರುಲಯಭಾಜೇ ನಮಃ । ಯಮಃ ಶಿನವಾ । ೬೬ ಕುಲಾದ್ರೀಶಭುವೆ ನಮಃ । ನ ಶಿಮಃ ಯವಾ । ೬೭ ಖಡ್ಗಪಾಶಭೃತೇ ನಮಃ । ಮಃ ಶಿನಯ ವಾ । ೬೮ ಲೋಕಶ್ರಮಭಿದೇ ನಮಃ । ಶಿನಮಃ ಯವಾ । ೬೯ ಭರ್ಗಪ್ರಶಂಸ್ಯಾಯೈ ನಮಃ । ವಾಶಿಮಃಯನ ।

೭೦ ಶೀಲೋಚ್ಛ್ರಾಯಭೃತೇ ನಮಃ । ಯ ಶಿಮಃ ನವಾ । ೭೧ ಪರ್ವಗ್ಲೌಮುಖ್ಯೈ ನಮಃ । ನವಾ ಶಿಯಮಃ । ೭೨ ಪ್ರೌಢಲಕ್ಷ್ಮ್ಯಯುಜೇ ನಮಃ । ಮಃ ವಾಶಿಯನ । ೭೩ ಗೂಢಕೌಮಾರಾಯ್ಯೈ ನಮಃ । ಶಿವಾನಯಮಃ । ೭೪ ಗೀರ್ಯೋಡಾಮರಾಯ್ಯೈ ನಮಃ । ವಾ ನಶಿಯಮಃ । ೭೫ ಶಂಭುಗೇಯಾಂಘ್ರ್ಯೈ ನಮಃ । ಯವಾಶಿ ನಮಃ । ೭೬ ಕುಶಲಪ್ರಭಾಯ್ಯೈ ನಮಃ । ನಯಶಿಮಃ ವಾ । ೭೭ ಪ್ರೇಮಾಲಾಪಭೃತೇ ನಮಃ । ಮಃ ಯಶಿನವಾ । ೭೮ ಗಣ್ಯೈಕಾಗ್ರಭುವೇ ನಮಃ । ಶಿಯನಮಃ ವಾ । ೭೯ ವಶಗೇಂದ್ರಾರ್ಯಾರ್ಯಾಯ್ಯೈ ನಮಃ । ವಾಯಶಿಮಃ ನ । ೮೦ ಮುಖ್ಯಗೌರವಾಯ್ಯೈ ನಮಃ। ಯನಶಿಮಃ ವಾ । ೮೧ ಪಾತ್ರವಶಗಾಯ್ಯೈ ನಮಃ । ನಮಃ ವಾಯಶಿ । ೮೨ ಸ್ಫೂರ್ತ್ಯಾರ್ ವಿಮಲಾಯ್ಯೈ ನಮಃ । ಮಃ ನವಾಯಶಿ । ೮೩ ಲೇಖೌಘಮಾನ್ಯಾಯ್ಯೈ ನಮಃ । ಶಿಮಃ ವಾಯನ । ೮೪ ಭಾರತ್ಯಾತ್ಮಾಂಘ್ರ್ಯೈ ನಮಃ । ವಾಮಃ ನಯಶಿ । ೮೫ ಶಕ್ರಭಯಲುಪೇ ನಮಃ । ಯಮಃ ವಾನಶಿ । ೮೬ ಯಾಗಘಸ್ಮರಾಯ್ಯೈ ನಮಃ । ನ ಶಿವಾಯಮಃ । ೮೭ ರಾಗವಿಶಿಷ್ಟಾಯ್ಯೈ ನಮಃ । ಮಃ ಶಿವಾಯನ । ೮೮ ಲಕ್ಷ್ಯಾಭಿಮುಖ್ಯೈ ನಮಃ । ಶಿನವಾಯಮಃ । ೮೯ ಭರ್ಗ್ಯೈಕಮಿತ್ರಾಯ್ಯೈ ನಮಃ । ವಾ ಶಿನಯಮಃ । ೯೦ ಶೂಲಭೃತ್ಕರಾಯ್ಯೈ ನಮಃ । ಯ ಶಿವಾನಮಃ । ೯೧ ಪವಿತ್ರಶೀಲಾಯ್ಯೈ ನಮಃ । ನವಾಮಃಯ ಶಿ । ೯೨ ಪ್ರೌಢಕರ್ಮಾರ್ಗಾಯ್ಯೈ ನಮಃ । ಮಃ ವಾನಯಶಿ । ೯೩ ಬಾಢೋಗ್ರಶೌರ್ಯಾರ್ಯಾಯ್ಯೈ ನಮಃ । ಶಿವಾಮಃ ಯನ । ೯೪ ಭಯಭ್ರಮಲುಪೇ ನಮಃ । ವಾನಮಃ ಯಶಿ । ೯೫ ಶುಭರೂಪಾಂಗ್ಯೈ ನಮಃ । ಯವಾಮಃ ನಶಿ । ೯೬ ಕರ್ಮೌಘಫಲಾಯ್ಯೈ ನಮಃ । ನಯವಾಮಃ ಶಿ । ೯೭ ಪ್ರಣವಕಲಾಯ್ಯೈ ನಮಃ । ಮಃ ಯವಾನಶಿ । ೯೮ ಗುಣಭೂಕ್ರಿಯಾಯ್ಯೈ ನಮಃ । ಶಿಯವಾಮಃ ನ । ೯೯ ವಿಷ್ಣುಪೀಠಗಾಯ್ಯೈ ನಮಃ । ವಾಯನಮಃ ಶಿ । ೧೦೦ ಶಿಷ್ಟೌಘರಾಗಾಯ್ಯೈ ನಮಃ । ಯನವಾಮಃ ಶಿ । ೧೦೧ ಕರುಣಾಲೀಢಾಯ್ಯೈ ನಮಃ । ನಮಃ ಯಶಿವಾ । ೧೦೨ ರಿಪುಮೂಲಭಿದೇ ನಮಃ । ಮಃ ನಯಶಿವಾ । ೧೦೩ ಗಿರೀಶಾಂಕಭಾಜೇ ನಮಃ । ಶಿಮಃ ಯನವಾ । ೧೦೪ ವಕ್ತ್ರಮಾಲಿಕಾಯ್ಯೈ ನಮಃ । ವಾಮಃ ಯಶಿನ । ೧೦೫ ಮೈರೇಯಲೋಭಾಯ್ಯೈ ನಮಃ। ಯಮಃ ನಶಿವಾ । ೧೦೬ ಪಲಾಶಪ್ರಭಾಯ್ಯೈ ನಮಃ । ನಶಿಯಮಃ ವಾ । ೧೦೭ ರಾಗಾಂಶುಕಭೃತೇ ನಮಃ । ಮಃ ಶಿಯನವಾ । ೧೦೮ ಲಕ್ಷ್ಯಾಂಶಪ್ರಭವೇ ನಮಃ । ಶಿನಯಮಃ ವಾ । ೧೦೯ ಭೃಂಗಿಶರಣ್ಯಾಯ್ಯೈ ನಮಃ । ವಾಶಿಯಮಃ ನ । ೧೧೦ ಶೌಂಡೀರ್ಯಾಗ್ರ್ಯಭುವೇ ನಮ ಃ । ಯಶಿನಮಃ ವಾ । ೧೧೧ ಪಕ್ವಶೃಂಗಾರಾಯ್ಯೈ ನಮಃ । ನವಾಯ ಶಿಮಃ । ೧೧೨ ದ್ರವಿಣಾಲಯಾಯ್ಯೈ ನಮಃ । ಮಃ ವಾಯಶಿನ । ೧೧೩ ಗೀರ್ವಶೀಕರ್ಯ್ಯೈ ನಮಃ । ಶಿವಾಯ ನಮಃ । ೧೧೪ ವೀರ್ಯಾಂಶಗುರವೇ ನಮಃ । ವಾನಯ ಶಿಮಃ । ೧೧೫ ಶಿವೇಷ್ಟಗೋಪ್ತ್ರ್ಯೈನಮಃ । ಯವಾನ ಶಿಮಃ । ೧೧೬ ಪದ್ಮಫಲಭೃತೇ ನಮಃ । ನಯಮಃಶಿವಾ । ೧೧೭ ಪ್ರಣಯಗಾಢಾಯ್ಯೈ ನಮಃ । ಮಃ ಯನಶಿವಾ । ೧೧೮ ಗುಣರೂಪಭಾಜೇ ನಮಃ । ಶಿಯಮಃ ನವಾ । ೧೧೯ ವೀಣಾಪ್ರಾಗಲ್ಭ್ಯಾಯ್ಯೈ ನಮಃ । ವಾಯಮಃ ಶಿನ । ೧೨೦ ಶಿಷ್ಯರಾಗಭಾಜೇ ನಮಃ । ಯನಮಃ ಶಿವಾ ॥

56 b/1

ಚಂಡಘಾತುಕಳಾದ ಜ್ವಲಜ್ಜಿಹ್ವೆಯ ಧ್ಯಾನ. ದೇವಿಪುರಾಣದಲ್ಲಿ, ಅಖಂಡ ಕಾವೇರಿಮಾಹಾತ್ಮ್ಯದಲ್ಲಿ ಹಾಗೂ ಸ್ಥಳಪುರಾಣದಲ್ಲಿ

ಒಂದು ಮುಖ, ಮೂರು ಕಣ್ಣು ನಾಲ್ಕು ಭುಜಗಳಿಂದ ಕೂಡಿ ತನ್ನ ಬಲಕೈಗಳಲ್ಲಿ ಶೂಲ, ಖಡ್ಗಗಳನ್ನು ಎಡಗೈಗಳಲ್ಲಿ ಡಮರುಗ ಮತ್ತು ಕಪಾಲವನ್ನೂ ಧರಿಸಿದ್ದು, ಎಡಕಾಲನ್ನು ಮಡಿಸಿಕೊಂಡು ಬಲಕಾಲನ್ನು ಲಂಬವಾಗಿ(ಉದ್ದಕ್ಕೆ ಇಳಿಬಿಟ್ಟು) ಇರಿಸಿ ಸಮಸ್ತ ಅಂಗಗಳ ಶೋಭೆಯಿಂದ ಕೂಡಿದ್ದು ಸರ್ಪಕಂಚುಕ (ವ್ಯಾಲಕಂಚುಕ, ಸರ್ಪಗಳ ರವಿಕೆ?)ವನ್ನು ಧರಿಸಿದ, ರುಂಡಮಾಲೆಯನ್ನು ತೊಟ್ಟು ಮೇಲ್ಮುಖವಾದ ತಲೆಗೂದಲುಳ್ಳ ಜಟಾಧರೆಯಾದ, ಕಾಲಬುಡದಲ್ಲಿ ಹುಲಿಯು ಕುಳಿತಿರುವ, ಚಂಡರಾಕ್ಷಸನ ವಧೆಯನ್ನು ಮಾಡಿದ ಚಂಡಘಾತಿನಿಯನ್ನು ಧ್ಯಾನಮಾಡಬೇಕು. (ಔಚಿತ್ಯದ ಪ್ರಕಾರ ರಕ್ತವರ್ಣ). ಇದು 'ಉತ್ತನಹಳ್ಳಿ' ಗ್ರಾಮದೇವತೆಯ (ಮೈಸೂರು ಗ್ರಾಮ ದೇವತೆ) ಧ್ಯಾನ. 967-968

57 a

ದೇವಿಯ ಕೈಯಲ್ಲಿರುವ ಶುಕದ ಪಕ್ಷಗಳಲ್ಲಿ ಉದ್ಭವವಾಗಿರುವ ಶಿವಪಂಚಾಕ್ಷರೀಪ್ರಸ್ತಾರಪ್ರಭೇದ.*

ಸ್ಕಾಂದ ಪರಾಶರಸಂಹಿತೆ ಮತ್ತು ಚಿದಂಬರರಹಸ್ಯದಲ್ಲಿ:- ಪೂರ್ವಪೀಠಿಕಾಶ್ಲೋಕ

ಉತ್ತರ ಪೀಠಿಕೆ

ಇವು ಶಿವಪಂಚಾಕ್ಷರಿ ಮಂತ್ರದ ಪ್ರಸ್ತಾರದಿಂದ ಸಿದ್ಧವಾಗಿರುವ, ಪೂರ್ಣಾಂಕಮಿತಿಯಿರುವ, ಸಕಲ ಇಷ್ಟಗಳನ್ನು ನೀಡುವ ಶುಭವಾದ ಮಂತ್ರಗಳು. ಈ ವಿಚಾರದಲ್ಲಿ ಇಲ್ಲಿ ಒಂದು ಹಿಂದಿನ ಇತಿಹಾಸವನ್ನು ಉದಾಹರಿಸುವರು. ಪೂರ್ವಕಾಲದಲ್ಲಿ ಕಲ್ಪವೃಕ್ಷಗಳಿಂದ ಸುಂದರವಾಗಿರುವ ಕೈಲಾಸಪರ್ವತದ ಶಿಖರದಲ್ಲಿ, ಪಾರ್ವತಿಯ ಹೃದಯಕಮಲದ ಸಮಗ್ರಪ್ರೀತಿರಸದಿಂದ ತೊಯ್ದಂಥ ಶಂಕರನು ಕಥಾಪ್ರಸಂಗದ ಮಧ್ಯದಲ್ಲಿ ಪ್ರಿಯತಮೆಯಾದ ಪಾರ್ವತಿಗೆ ಹೇಳಿದನು. 969-971

ಈಶ್ವರನು ನುಡಿದನು. ಶ್ರೀ ಸರ್ವಮಂಗಳ ಸ್ವರೂಪಿಣಿ, ದೇವಿ, ನೀನು ನನ್ನ ಪ್ರಿಯತಮೆಯಾದ ಕಾರಣದಿಂದ ನಿನ್ನ ಲೀಲಾಶುಕದ ರೆಕ್ಕೆಯೊಳಗೆ ನಾನು ಅಕ್ಷರ ಸ್ವರೂಪನಾಗಿ ಅಡಗಿಕೊಂಡಿರುವೆ.

'ಶಿವೆಯ'ರು ಎಂಬ ಹೆಸರಿನ ನಮ್ಮೀರ್ವರ ಪರಮಮಂಗಳಪಂಚಾಕ್ಷರೀ ಮಂತ್ರದ ಪ್ರಸ್ತಾರ ಕ್ರಮದಿಂದ ಉಪಲಬ್ಧವಾದ ಪೂರ್ಣಾರ್ಕ ಮಂತ್ರಗಳನ್ನು ಅಕ್ಷರಗಳ ಸಂಖ್ಯೆಯಿಂದ, ಬರೆದು, ಪೂಜಿಸಿ, ಆಲಸ್ಯ ರಹಿತನಾಗಿ ದಿನವೂ ಜಪಿಸಬೇಕು. ಅಂಥವನಿಗೆ ದೇವತೆಗಳಿಗೂ ಸಿಗದಂಥ ಇಷ್ಟಾರ್ಥಗಳನ್ನು ನಾನು ನೀಡುವೆನು. ಚಂದ್ರಶೇಖರನು ಈ ಪ್ರಕಾರವಾಗಿ ನುಡಿದು ಪಾರ್ವತಿಯನ್ನು ಸಂತೋಷಪಡಿಸಿದನು. ಸ್ವಚ್ಛವಾಗಿ (ನಿಷ್ಕಪಟ, ನಿರ್ಮಲ) ಮುಗುಳ್ನಕ್ಕ ಗೌರಿಯು ಸಂತೋಷ ಗೊಂಡವಳಾಗಿ ಶಂಕರನನ್ನು ಸ್ತೋತ್ರ ಮಾಡಿದಳು. 972-975

ಈ ರೀತಿಯಾಗಿ ಸ್ಕಾಂದಪರಾಶರಸಂಹಿತೆಯಲ್ಲಿ, ಚಿದಂಬರರಹಸ್ಯದಲ್ಲಿ, ದೇವೀಹಸ್ತಗತವಾಗಿರುವ ಶುಕಪಕ್ಷಗಳಿಂದ ಉದ್ಭವವಾದ ಶಿವಪಂಚಾಕ್ಷರೀಪ್ರಸ್ತಾವಭೇದವರ್ಣನವೆಂಬ ಏಳನೆಯ ಅಧ್ಯಾಯ

ಜಗದಂಬಾಚಕ್ರಶ್ಲೋಕಗಳು

ದ್ವೀಪಶ್ರೀಶೈಲೇಂದುಶಕೆ (೧೭೮೭?) ಶ್ರೀ ಕಲ್ಪದ್ರುಮ (ಅಕ್ಷಯ) ಸಂವತ್ಸರದಲ್ಲಿ, ಸಿದ್ಧಿ ಮಾಸದಲ್ಲಿ ಪೌರ್ಣಮಾಸಿಯ ಚಂದ್ರ(ಸೋಮ) ವಾರದಂದು ನಿರ್ಮಿಸಿದಂತಹ ದೇವಿಯ ಹಸ್ತದಲ್ಲಿರುವ ಗಿಳಿಯ ರೆಕ್ಕೆಯ ಪಕ್ಷಾಭ್ರದವಿಸದ್ಮಗಳಲ್ಲಿ ಶಿವ ಪಂಚಾಕ್ಷರೀ ಮಂತ್ರ ಪ್ರಸ್ತಾವದ ಅಕ್ಷರಗಳಿರುವ ಧರಣಿ ಶರ(15)ಸಂಖ್ಯೆಯ ಪ್ರಸ್ತಾರದ ಮೇಳನವನ್ನು ಮಾಡಿದಾಗ, ಪೂರ್ಣಾಂಗಮಣಿರತ್ನಾಂಕಘನಮಂಡ ಸಂಖ್ಯೆಯುಳ್ಳ ಈ ಶುಕದ ಮೈಮೇಲೆ ಹೊಳೆಯುವ ಸಾವಿರ ಸದನ(ಮನೆ)ಗಳಲ್ಲಿ ಶಿವಮಾಲಾಮಂತ್ರ ಸಾವಿರ ಅಕ್ಷರಗಳಿಂದ ಶೋಭಿಸುವ ಗೌರೀಸಂಖ್ಯೆ ಲಿಂಗದಿಂದ ಕೂಡಿದ ಪಂಚ ಪಂಚಾಯತನಗಳಲ್ಲಿ ವಿಷ್ಣು, ಬ್ರಹ್ಮಾ, ಗಜಾನನ, ಷಡಾನನ, ದಕ್ಷಿಣಾಮೂರ್ತಿ, ಭಿಕ್ಷಾಟನಮೂರ್ತಿ, ಕಂಕಾಲ, ಅಜಶಿರ ಹರ, ಅರ್ಧನಾರೀಶ್ವರ, ಹರಿಹರ, ರಾಮಕೃಷ್ಣ ನಟೇಶ್ವರ (ನಟರಾಜ), ವೀರೇಶ, ಭೈರವ, ನಾಗ, ಸೂರ್ಯ, ಚಂದ್ರ, ಶಾಸ್ತ್ರ (ಅಯ್ಯಪ್ಪನೆಂದು

---

* ಈ ಶಿವಪಂಚಾಕ್ಷರೀ ಮಂತ್ರದ ವರ್ಣಸಂಖ್ಯೆಗಳ ಮಾಲಿಕೆಯನ್ನು ಪ್ರಸ್ತಾರಕ್ರಮದಿಂದ ಸಿದ್ಧಪಡಿಸಿದ ಮಂತ್ರ ಕ್ರಮಜ್ಞಾನಕ್ಕಾಗಿ ಇಲ್ಲಿ ಹೇಳಲಾಗಿದೆ. (ಈ ಕೋಷ್ಟಕವನ್ನು ಮೂಲದಲ್ಲಿ ಕೊಟ್ಟಿದೆ (57a) ಅಲ್ಲಿ ಕನ್ನಡ ಅಕ್ಷರಗಳಲ್ಲಿ ಕೊಟ್ಟಿರುವುದರಿಂದ ಮತ್ತೆ ಇಲ್ಲಿ ಕೊಟ್ಟಿಲ್ಲ. ಇದರಲ್ಲಿ ಕಟಪಯಾದಿ ಕ್ರಮದಿಂದ ನಾಮಗಳ ಕೆಳಗೆ ಸಂಖ್ಯೆಗಳನ್ನು ಸೂಚಿಸಲಾಗಿದೆ. 'ಪರಾಂಗ ವರ್ಮಾ' ಎಂಬಲ್ಲಿ ಪ ಎಂದರೆ ೧, ರ ಎಂದರೆ ೨, ಗ ಎಂದರೆ ೩, ವ ಎಂದರೆ ೪, ಮ ಎಂದರೆ ೫. ಇದೇ ರೀತಿ ಉಳಿದ ನಾಮಗಳಲ್ಲೂ ಸಂಖ್ಯೆಗಳನ್ನು ಅರ್ಥ ಮಾಡಿಕೊಳ್ಳಬೇಕು. 57 a ಮೊದಲಾಗಿ 58 b ತನಕ ಆ ಪುಟಗಳ ಸಂಖ್ಯೆ.

ಪ್ರಸಿದ್ಧ) ಮೃತ್ಯುಂಜಯ, ಮೊದಲಾದ ಇಷ್ಟಲಿಂಗಗಳಿಂದ, ಶೈವ ವೈಷ್ಣವ ದೇವತೆಗಳಿಂದ, ಮಾರ್ಕಂಡೇಯ, ಚಂಡೀಶ, ನಂದಿ, ಭೃಂಗೀಶ, ಭಾರ್ಗವ, ವೃಷ (ಶಿವನ ವಾಹನ ದೇವತೆ) ರಾವಣ, ಬಾಣಾಸುರ, ಇವರಿಂದ ಸುತ್ತುವರೆಯಲ್ಪಟ್ಟ ಮಧ್ಯಭಾಗದಲ್ಲಿ ಸರ್ಪರಾಜನಿರುವ, ಸುತ್ತಲೂ ಶಿವ ನಕ್ಷತ್ರಗಳ ಸಹಸ್ರಸಂಖ್ಯೆಯ ಮಾಲಾವರ್ಣಕದಲ್ಲಿ, ಇಷ್ಟವಾದ ಕಮಲಗ್ರಹದಲ್ಲಿ, ಅಶ್ವಧಾಟಿಯಂತೆ ಚಿತ್ರಿತವಾದುದರಲ್ಲಿ ಸಿದ್ಧರು, ಚಾರಣರು, ಗಂಧರ್ವರು, ನಾರದ ಮೊದಲಾದವರಿಂದ ವಿರಾಜಿಸುವ, ಆನೆ, ಕುದುರೆ, ಜಿಂಕೆ, ನಾಗ, ಸ್ತ್ರೀ, ಸರೋವರ, ಭೇರುಂಡ (ಪಕ್ಷಿ), ನವಿಲು, ಪಾರಿವಾಳ, ಅನಂತ (ನಾಗಭೇದ), ಮೀನು, ಕಮಲ, ಶರಭ, ವ್ಯಾಲಗಳು, ಹಂಸಗಳು ಈ ಮೊದಲಾದ ಸುಂದರ ಹಾಗೂ ಚಿತ್ರ ವಿಚಿತ್ರವಾದ ಪಕ್ಷಿ ಮತ್ತು ಮೃಗಗಳಿಂದ ಹೊಳೆದಿರುವ, ಪಕ್ಕಗಳಲ್ಲಿ ಶಿವಕ್ಷೇತ್ರದ ಪ್ರಕಾಶಮಾನವಾದ ಲಿಂಗಗಳಿಂದ ಶೋಭಿಸುವ .... ಈ ಶ್ರೀಕಂಠೇಶ್ವರದೇವ ಜಗದಂಬಾ ಮನೋಹರನಾಗಿ, ಪ್ರಾಜ್ಞರು ಶ್ಲಾಘಿಸಿದ ಈ ಚಕ್ರದಲ್ಲಿ ದೇದೀಪ್ಯಮಾನನಾಗಿರುವನು. ಶ್ರೀಕಂಠೇಶ್ವರ ದೇವರೊಂದಿಗೆ ಶ್ರೀ ಚಕ್ರರಾಜ್ಞಿಯಾದ ಜಗದಂಬಿಕೆ ಚಾಮುಂಡಾಬಿಕೆಯು ಈ ಚಕ್ರದಲ್ಲಿ ವಿರಾಜಿಸುತ್ತಿರುವಳು. ಶ್ರೀ ಚಾಮುಂಡಾದೇವಿಯ ಕೃಪಾಪಾತ್ರನಾದ ಶ್ರೀ ಚಾಮರಾಜರ ಪುತ್ರನಾದ ಕೆಂಪನಂಜಾಂಬಾಗರ್ಭಾಮೃತಸಾಗರದ ಚಂದಿರನಾದ, ನಂಜರಾಜನೆಂಬ ಹೆಸರುಳ್ಳ ಶ್ರೀ ಕೃಷ್ಣರಾಜನಿಂದ ರಚಿಸಲ್ಪಟ್ಟ ಪ್ರಪಂಚದ ಜನನೀಜನಕರಾದ ಶ್ರೀ ಪಾರ್ವತೀಪರಮೇಶ್ವರರ ಪ್ರೀತಿಗೆ ಕಾರಣವಾದ, ಸಾಧಕರಿಗೆ ಸಕಲಶ್ರೇಯೋಭಿವೃದ್ಧಿ ಕರುಣಿಸುವ, ಸಮಸ್ತಸಂಪತ್ತನ್ನು ಉಂಟುಮಾಡುವ, ಪ್ರತಿದಿನವೂ ಸರ್ವಮಂಗಳಗಳನ್ನು ನೀಡುವ ಜಗದಂಬಾಚಕ್ರವು, ಭೂಮಿ, ಸೂರ್ಯ, ಚಂದ್ರ ನಕ್ಷತ್ರಗಳಿರುವವರೆಗೂ ಇರಲಿ. ಹೀಗೆ ಜಗದಂಬಾಚಕ್ರವು ಸಂಪೂರ್ಣವಾಯಿತು. ಶ್ರೀಕಂಠೇಶ್ವರ ಪರವಾಗಬೇಕಾದಲ್ಲಿ ಕಪ್ಪು ಅಕ್ಷರದ ಮೇಲೆ ಕೆಂಪು ಅಕ್ಷರವನ್ನು ಸೇರಿಸಿಕೊಂಡಲ್ಲಿ ವಾಚಕವಾಗುತ್ತದೆ.
976-990

ಶ್ರೀ ಪಂಚಾಕ್ಷರೀಪ್ರಸ್ತಾರಯಂತ್ರಕ್ರಮ

ಶುಭವಾಗಲಿ. ಈ ಶಿವಾತ್ಮಕವಾದ ಚಕ್ರವು ಖ ಖ ಅಂಗ(೧೨೦) ಗೃಹ(ಕೋನ)ಗಳಿಂದ ಶೋಭಿಸಿದೆ. ಪ್ರಸ್ತಾರ ಕ್ರಮ ಭೇದದಿಂದ ಅದು ಏಳು ಕಲ್ಪವೃಕ್ಷಗಳಿಂದ ಅಲಂಕೃತವಾಗುತ್ತದೆ. ಶಿವನ ಪಾರ್ಶ್ವಗಳಲ್ಲಿ ಆ ವೃಕ್ಷಗಳು ಏಳು ಸಂಖ್ಯೆಯವಾಗಿರುತ್ತವೆ. ಒಂದರಿಂದ ಐದು ಅಂಕಗಳ ಪ್ರಸ್ತಾರದ ಮೇಲನವನ್ನು ಮಾಡಿದರೆ ಒಟ್ಟು ಸಂಖ್ಯೆಯು ಶಕ್ತಿ(3), ದುರ್ಗಾ (9), ಬಲಾಲ (?), ಅಂಕ (7), ಅಂಕ (7), ವತ್ಸರ 60 ಎಂದು ಆಗಿ, ವಿಷ್ಣು, ಬ್ರಹ್ಮ, ಇಂದ್ರರಿಂದ ಸ್ತುತಿಸಲ್ಪಡುವ ಶ್ರೀಕಂಠೇಶ್ವರನು ವಿರಾಜಿಸುತ್ತಾನೆ.
991-993

ಶ್ರೀ ಶಿವಪಂಚಾಕ್ಷರೀಪ್ರಸ್ತಾರಯಂತ್ರಚಕ್ರಕ್ಕೆ ಅನುಸಾರವಾಗಿ ದೇವಿಯ ಮತ್ತು ದೇವನ (ಪಾರ್ವತೀ ಮತ್ತು ಪರಮೇಶ್ವರನ) 120 ಹೆಸರುಗಳನ್ನು ಬರೆಯಲಾಗಿದೆ. (ಇವನ್ನು ಓದುಗರು ಮೂಲದ 57a ಮತ್ತು 58a ಪುಟಗಳಲ್ಲಿ ನೋಡಬಹುದು. ಮೂಲದಲ್ಲಿ ಕನ್ನಡ ಲಿಪಿಯಲ್ಲೇ ಕೊಟ್ಟಿರುವುದರಿಂದ ಇಲ್ಲಿ ಮತ್ತೆ ಕೊಟ್ಟಿಲ್ಲ).

59 a ನಾವು ನಿರ್ಮಿಸಿದ ಸಂಖ್ಯಾರತ್ನಕೋಶವ್ಯಾಖ್ಯಾನವಾದ ಪ್ರಭಾವಲಿಯಲ್ಲಿ ಉದಾಹರಿಸಿದ, ಮತ್ಸ್ಯಪುರಾಣದಲ್ಲಿ ಹೇಳಿರುವ ಕ್ರಮದಿಂದ ೧೦೮ ಶಕ್ತಿಕ್ಷೇತ್ರ ಹೆಸರುಗಳನ್ನು ಮತ್ತು ದೇವಿಯರ ಹೆಸರುಗಳನ್ನೂ ಬರೆಯುವೆವು

ವಿಶಾಲಾಕ್ಷಿಯಿಂದ ವಿರಾಜಿಸಿದ ಕ್ಷೇತ್ರ ವಾರಾಣಸೀ ಎಂಬುದು. ಲಿಂಗಧಾರಿಣಿಯಿಂದ ಅಲಂಕೃತವಾದ ಕ್ಷೇತ್ರ ನೈಮಿಷ ಎಂಬುದು. ಲಲಿತಾದೇವಿಯ ತೇಜಸ್ಸಿನಿಂದ ಶೋಭಿಸುವ ಕ್ಷೇತ್ರ ಪ್ರಯಾಗವೆಂಬುದು. ಕುಮುದಾದೇವಿಯ ಕಾಂತಿಯಿಂದ ಚಿತ್ತಾಕರ್ಷಕವಾದ ಕ್ಷೇತ್ರ ಮಾನಸ ಎಂಬುದು. ವಿಶ್ವಕಾಯಾದೇವಿಯಿಂದ ಅಲಂಕೃತವಾದ ಕ್ಷೇತ್ರ ಅಂಬಿಕಾ ಎಂಬುದು.

ಗೋಮತೀದೇವಿಯಿಂದ ಕೂಡಿದ ಕ್ಷೇತ್ರವು ಗೋಮಂತ ಎಂಬುದು. ಕಾಮಚಾರಿಣಿದೇವಿಯಿಂದ ಅಲಂಕರಿಸಲ್ಪಟ್ಟ ಕ್ಷೇತ್ರ ಮಂದರ ಎಂಬುದು. ಮದೋತ್ಕಟಾದೇವಿಯಿಂದ ಸುಂದರವಾದಕ್ಷೇತ್ರವು ಚಿತ್ರರಥ ಎಂಬುದು. ಜಯಂತೀ ದೇವಿಯಿಂದ ಕೂಡಿದ ಕ್ಷೇತ್ರವು ಹಾಸ್ತಿನಪುರ ಎಂಬುದು. ಗೌರೀದೇವಿಯಿಂದ ರಾರಾಜಿತವಾದ ಕ್ಷೇತ್ರವು ಕನ್ಯಾಕುಬ್ಜ ಎಂಬುದು. ರಂಭಾದೇವಿಯಿಂದ ಮನೋಹರವಾದ ಕ್ಷೇತ್ರವು ಮಲಯಾದ್ರಿ ಎಂಬುದು. ಕೀರ್ತಿಮತಿದೇವಿಯಿಂದ ಪ್ರೀತಿಪಾತ್ರವಾದ ಕ್ಷೇತ್ರವು ಏಕಾಮ್ರಕ ಎಂಬುದು. ವಿಶ್ವಾದೇವಿಯಿಂದ ರಾಜಿತವಾದ ಕ್ಷೇತ್ರವು ವಿಶ್ವೇಶ್ವರ ಎಂಬುದು. ಪುರುಹೂತಾದೇವಿಯಿಂದ ಪ್ರಕಾಶಿತವಾದ ಕ್ಷೇತ್ರವು ಪುಷ್ಕರ ಎಂಬುದು. ಮಾರ್ಗಾಮಿನೀ ದೇವಿಯಿಂದ ಅಲಂಕರಿಸಲ್ಪಟ್ಟ ಕ್ಷೇತ್ರವು ಕೇದಾರ ಎಂಬುದು. ಮಂದಾದೇವಿಯಿಂದ ಮನೋಹರವಾದ ಕ್ಷೇತ್ರವು ಹಿಮವತ್ಪೃಷ್ಠ ಎಂಬುದು.

ಭದ್ರಕರ್ಣಾದೇವಿಯಿಂದ ಅಲಂಕೃತವಾದ ಕ್ಷೇತ್ರವು ಗೋಕರ್ಣ ಎಂಬುದು. ಭವಾನಿದೇವಿಯಿಂದ ಶೋಭೆಗೊಂಡ ಕ್ಷೇತ್ರವು ಸ್ಥಾನೇಶ್ವರ ಎಂಬುದು. ಬಿಲ್ವಪತ್ರ್ಯಂಬಿಕಾದೇವಿಯಿಂದ ಕೂಡಿದ ಕ್ಷೇತ್ರವು ಬಿಲ್ವಕ ಎಂಬುದು. ಮಾಧವೀ ದೇವಿಯ ಕಾಂತಿಯಿಂದ ಸುಂದರವಾದ ಕ್ಷೇತ್ರವು ಶ್ರೀಶೈಲ ಎಂಬುದು. ಭದ್ರಾದೇವಿಯಪ್ರಭೆಗೆ ಸ್ಥಾನವಾಗಿರುವ ಕ್ಷೇತ್ರವು ಭದ್ರೇಶ್ವರ ಎಂಬುದು. ಜಯಾದೇವಿಯಿಂದ ವಿರಾಜಿತವಾದ ಕ್ಷೇತ್ರವು ವಾರಾಹಶೈಲ ಎಂಬುದು. ಕಮಲಾಂಬಾದೇವಿಯ ಕೃಪಾಭಾಜನವಾದ ಕ್ಷೇತ್ರವು ಕಮಲ ಎಂಬುದು. ರುದ್ರಾಣಿದೇವಿಯ ನಿವಾಸದಿಂದ ಸುಂದರವಾದ ಕ್ಷೇತ್ರವು ರುದ್ರಕೋಟಿ ಎಂಬುದು ಕಾಳೀದೇವಿಯ ಕಾಂತಿಯಿಂದ ಪೂರ್ಣವಾದ ಕ್ಷೇತ್ರವು ಕಾಲಂಜರ ಎಂಬುದು. ಕಪಿಲಾದೇವಿಯಿಂದ ಶೋಭಿಸುವ ಕ್ಷೇತ್ರವು ಮಹಾಲಿಂಗ ಎಂಬುದು. ಮುಕುಟೇಶ್ವರೀದೇವಿಯಿಂದ ಅಲಂಕೃತವಾದ ಕ್ಷೇತ್ರವು ಮುಕುಟ ಎಂಬುದು. ಮಹಾದೇವಿಯಿಂದ ಮನೋಹರವಾದ ಕ್ಷೇತ್ರವು ಶಾಲಗ್ರಾಮ ಎಂಬುದು. ಜ್ವಲಪ್ರಿಯಾದೇವಿಯಿಂದ ಕೂಡಿದ ಕ್ಷೇತ್ರವು ಶಿವಲಿಂಗ ಎಂಬುದು. ಕುಮಾರೀದೇವತೆಯಿಂದ ಕಾಂತಿಯುಕ್ತವಾದ ಕ್ಷೇತ್ರವು ಮಾಯಾಪುರೀ ಎಂಬುದು. ಲಲಿತಾಂಬಾದೇವಿಯಿಂದ ಶೋಭಿತವಾದ ಕ್ಷೇತ್ರವು ಸಂತಾನ ಎಂಬುದು. ಉತ್ಪಲಾಕ್ಷೀದೇವಿಯಿಂದ ಸುಭದ್ರವಾಗಿರುವಕ್ಷೇತ್ರವು ಸಹಸ್ರಾಕ್ಷ ಎಂಬುದು. ಅರುಂಧತೀದೇವಿಯಿಂದ ಶೋಭಿಸುವ ಕ್ಷೇತ್ರವು ಸತೀಮಂಡಲ ಎಂಬುದು. ಮಂಗಲಾದೇವಿಯಿಂದ ಸುಶೋಭಿತವಾದ ಕ್ಷೇತ್ರವು 'ಗಯಾ' ಎಂಬುದು. ವಿಮಲಾದೇವಿಯಿಂದ ಸುಂದರವಾಗಿರುವ ಕ್ಷೇತ್ರವು ಪುರುಷೋತ್ತಮ ಎಂಬುದು. ಅಮೋಘಾಕ್ಷೀದೇವಿಯಿಂದ ಮನೋಹರವಾದ ಕ್ಷೇತ್ರವು ವಿಪಾಶಾ ಎಂಬುದು. ಪಾಟಲಾದೇವಿಯಿಂದ ಅಲಂಕೃತವಾದ ಕ್ಷೇತ್ರವು ಪುಣ್ಯವರ್ಧನ ಎಂಬುದು. ನಾರಾಯಣೀದೇವಿಯಿಂದ ರಂಜಿಸಲ್ಪಟ್ಟ ಕ್ಷೇತ್ರವು ಸುಪಾರ್ಶ್ವ ಎಂಬುದು. ರುದ್ರಸುಂದರೀದೇವಿಯಿಂದ ಅಲಂಕರಿಸಲ್ಪಟ್ಟ ಕ್ಷೇತ್ರವು ತ್ರಿಕೂಟ ಎಂಬುದು. ವಿಪುಲಾದೇವಿಯಿಂದ ಭೂಷಿತವಾದ ಕ್ಷೇತ್ರವು ವಿಪುಲ ಎಂಬುದು. ಕಲ್ಯಾಣೀದೇವಿಯ ಕರುಣಾಪಾತ್ರವಾದ ಕ್ಷೇತ್ರವು
59 b ಕಮಲಾಚಲ ಎಂಬುದು. ಕೋಟವೀದೇವಿಯಿಂದ ರಕ್ಷಿತವಾದ ಕ್ಷೇತ್ರವು ಕೋಟಿತೀರ್ಥ ಎಂಬುದು. ಸುಗಂಧಾದೇವಿಯ ಕಾಂತಿಯಿಂದ ಸುಂದರವಾದ ಕ್ಷೇತ್ರವು ಮಧುವನ ಎಂಬುದು. ತ್ರಿಸಂಧ್ಯಾ ದೇವತೆಯಿಂದ ಕೂಡಿರುವ ಕ್ಷೇತ್ರವು ಕುಬ್ಜಾಮ್ರ ಎಂಬುದು. ರತಿಪ್ರಿಯಾದೇವಿಯಿಂದ ಕೂಡಿರುವ ಕ್ಷೇತ್ರವು ಗಂಗಾದ್ವಾರ ಎಂಬುದು. ಶುಭಾನಂದಾದೇವಿಯಿಂದ ಸುಶೋಭಿತವಾದ ಕ್ಷೇತ್ರವು ಶಿವಕುಂಡ ಎಂಬುದು. ನಂದಿನೀದೇವಿಯಿಂದ ಆನಂದಪಾತ್ರವಾದ ಕ್ಷೇತ್ರವು ದೇವಿಕಾತಟ ಎಂಬುದು. ರುಕ್ಮಿಣೀದೇವಿಯಿಂದ ಸುಂದರವಾದ ಕ್ಷೇತ್ರವು ದ್ವಾರಕಾ ಎಂಬುದು. ರಾಧಾದೇವಿಯಿಂದ ವಿರಾಜಿತವಾಗಿರುವ ಕ್ಷೇತ್ರವು ವೃಂದಾವನ ಎಂಬುದು. ದೇವಕೀದೇವಿಯಿಂದ ಅಲಂಕೃತವಾದ ಕ್ಷೇತ್ರವು ಮಧುರಾ ಎಂಬುದು. ಪರಮೇಶ್ವರೀ ದೇವಿಯಿಂದ ಅಲಂಕರಿಸಲ್ಪಟ್ಟ ಕ್ಷೇತ್ರವು ಪಾತಾಲ ಎಂಬುದು. ಸೀತಾದೇವಿಯಿಂದ ಪರಮಕಾಂತಿಯುಕ್ತವಾದ ಕ್ಷೇತ್ರವು ಚಿತ್ರಕೂಟ ಎಂಬುದು. ವಿಂಧ್ಯವಾಸಿನೀದೇವಿಯಿಂದ ಅಲಂಕೃತವಾದ ಕ್ಷೇತ್ರವು ವಿಂಧ್ಯಶೈಲ ಎಂಬುದು. ಏಕವೀರಾದೇವಿಯಿಂದ ವಿರಾಜಿತವಾಗಿರುವ ಕ್ಷೇತ್ರವು ಬ್ರಹ್ಮೇಂದು ಎಂಬುದು. ಚಂಡಿಕಾದೇವಿಯಿಂದ ಸಿಂಗರಿಸಲ್ಪಟ್ಟ ಕ್ಷೇತ್ರವು ಹರಿಖಂಡ

ಎಂಬುದು. ರಮಣಾದೇವಿಯ ಕರುಣೆಯಿಂದ ಉಜ್ಜ್ವಲವಾದ ಕ್ಷೇತ್ರವು ರಾಮತೀರ್ಥ ಎಂಬುದು. ಮೃಗವತೀದೇವಿ
ಯಿಂದ ಉಪಚರಿಸಲ್ಪಟ್ಟ ಕ್ಷೇತ್ರವು ಯಮುನಾ ಎಂಬುದು. ಮಹಾಲಕ್ಷ್ಮೀದೇವಿಯಿಂದ ಸುರಕ್ಷಿತವಾದಕ್ಷೇತ್ರವು ಕರವೀರ
ಎಂಬುದು. ಉಮಾದೇವಿಯ ಕರುಣೆಗೆ ಸ್ಥಾನವಾದ ಕ್ಷೇತ್ರವು ವೈನಾಯಕ ಎಂಬುದು. ಅರೋಗಾಂಬಾದೇವಿಯಿಂದ
ಶೋಭಿಸುವ ಕ್ಷೇತ್ರವು ವೈದ್ಯನಾಥ ಎಂಬುದು. ಮಹೇಶ್ವರಿದೇವಿಯು ವಾಸಮಾಡಿದ ಕ್ಷೇತ್ರವು ಮಹಾಕಾಲ ಎಂಬುದು.
ಅಭಯಾದೇವಿಯಿಂದ ಪರಿಶೋಭಿತವಾದ ಕ್ಷೇತ್ರವು ಉಷ್ಣತೀರ್ಥ ಎಂಬುದು. ಹೃತಾಘಾದೇವಿಯಿಂದ ಅಲಂಕೃತವಾದ
ಕ್ಷೇತ್ರವು ವಿಂಧ್ಯಕಂದರ ಎಂಬುದು. ಮಾಂಡಕಾಂಬಾದೇವಿಯಿಂದ ವಿರಾಜಿತವಾದ ಕ್ಷೇತ್ರವು ಮಾಂಡವ್ಯ ಎಂಬುದು.
ಸ್ವಾಹಾದೇವಿಯಿಂದ ಅತಿಶಯವಾಗಿ ಹೊಳೆಯುವ ಕ್ಷೇತ್ರವು ಮಾಹೇಶ್ವರಪುರ ಎಂಬುದು. ಪ್ರಚಂಡಾದೇವಿಯಿಂದ
ಅಲಂಕೃತವಾದ ಕ್ಷೇತ್ರವು ಸ್ಥಾಗಲಾಂಡ ಎಂಬುದು. ಚಂಡಿಕಾದೇವಿಯಿಂದ ಕೂಡಿರುವ ಉತ್ತಮ ಕ್ಷೇತ್ರವು ಅಮರಕಂಟಕ
ಎಂಬುದು. ಕಾಮುಕಾದೇವಿಯಿಂದ ಉಜ್ಜ್ವಲವಾದ ಕ್ಷೇತ್ರವು ಗಂಧಮಾದನ ಎಂಬುದು. ವರಾರೋಹಾದೇವಿಯಿಂದ
ವಿರಾಜಿತವಾದ ಕ್ಷೇತ್ರವು ಸೋಮೇಶ್ವರ ಎಂಬುದು. ಪುಷ್ಕರಾವತೀದೇವಿಯಿಂದ ಅಲಂಕರಿಸಲ್ಪಟ್ಟ ಕ್ಷೇತ್ರವು ಪ್ರಭಾಸ
ಎಂಬುದು. ದೇವಮಾತೃದೇವಿಯಿಂದ ವಿಭೂಷಿತವಾದ ಕ್ಷೇತ್ರವು ಸರಸ್ವತಿ ಎಂಬುದು. ಪಾರಾದೇವಿಯಿಂದ ಪ್ರಕಾಶಿತ
ವಾದ ಕ್ಷೇತ್ರವು ಪಾರಾತಟ ಎಂಬುದು. ಪಿಂಗಲಾವತಿದೇವಿಯು ಆಶ್ರಯಪಡೆದ ಕ್ಷೇತ್ರವು ಪಯೋಷ್ಣಿ ಎಂಬುದು.
ಸಿಂಹಿಕಾದೇವಿಯ ಮಹಿಮೆಗೆ ಸ್ಥಾನವಾಗಿರುವ ಕ್ಷೇತ್ರವು ಕೃತಕೋಶ ಎಂಬುದು. ಶಂಕರೀದೇವಿಯಿಂದ ಅಲಂಕೃತವಾದ
ಕ್ಷೇತ್ರವು ಕಾರ್ತಿಕೇಯ ಎಂಬುದು. ಲೋಲಾದೇವಿಯು ವಾಸಿಸುವ ಕ್ಷೇತ್ರವು ಉತ್ಪಲಾವರ್ತಕ ಎಂಬುದು. ಸುಭದ್ರಾದೇವಿ
ಯಿಂದ ಪೂಜ್ಯವಾದ ಕ್ಷೇತ್ರವು ಶೋಣಸಂಗಮ ಎಂಬುದು. ಲಕ್ಷ್ಮೀದೇವಿಯು ರಕ್ಷಿಸಿದ ಕ್ಷೇತ್ರವು ಸಿದ್ಧಪುರ ಎಂಬುದು.
ಅನಂಗಾಂಬಾದೇವಿಯಿಂದ ಸುಂದರವಾದ ಕ್ಷೇತ್ರವು ಭರತಾಶ್ರಮ ಎಂಬುದು. ವಿಶ್ವಮುಖ್ಯಾದೇವಿಯಿಂದ ವಿಭೂಷಿತ
ವಾದ ಕ್ಷೇತ್ರವು ಜಾಲಂಧರ ಎಂಬುದು. ತಾರಾದೇವಿಯಿಂದ ಶೋಭಿತವಾದ ಕ್ಷೇತ್ರವು ಕಿಷ್ಕಿಂಧಾದ್ರಿ ಎಂಬುದು.
ಪುಷ್ಟಿದೇವಿಯ ಕೃಪಾಪಾತ್ರವಾದ ಕ್ಷೇತ್ರವು ದೇವದಾರುವನ ಎಂಬುದು. ಮೇಧಾದೇವಿಯಿಂದ ಮನೋಹರವಾದ
ಕ್ಷೇತ್ರವು ಕಾಶ್ಮೀರ ಎಂಬುದು. ಭೀಮಾದೇವಿಯ ದಯಾಪಾತ್ರವಾದ ಕ್ಷೇತ್ರವು ಹೇಮಾದ್ರಿ ಎಂಬುದು. ಶುದ್ಧ್ಯಂಬಿಕಾ
ದೇವಿಯಿಂದ ಕೂಡಿರುವ ಕ್ಷೇತ್ರವು ಕಪಾಲಮೋಚನ ಎಂಬುದು. ಮಾತೃಕಾದೇವಿಯ ಮನೋಹರವಾದ ಕ್ಷೇತ್ರವು
ರೋಹಣ ಎಂಬುದು. ಧ್ವನಿದೇವಿಯಿಂದ ಪ್ರಕಾಶಗೊಂಡ ಕ್ಷೇತ್ರವು ಶಂಖೋದ್ಧಾರ ಎಂಬುದು. ಧೃತಿದೇವಿಯಿಂದ
60 a ಪ್ರಕಾಶಿತವಾದ ಕ್ಷೇತ್ರವು ಪಿಂಡಾರಕ ಎಂಬುದು. ಕಲಾದೇವಿಯ ಕಲಾಪಾತ್ರವಾದ ಕ್ಷೇತ್ರವು ಚಂದ್ರಭಾಗ ಎಂಬುದು.
ಶಿವಧಾರಿಣೀದೇವಿ ಯಿಂದ ಅಲಂಕರಿಸಲ್ಪಟ್ಟ ಕ್ಷೇತ್ರವು ಮತ್ಸ್ಯೋದ ಎಂಬುದು. ಅಮೃತಾದೇವಿಯಿಂದ ಕೂಡಿರುವ
ಕ್ಷೇತ್ರವು ವೇಣ ಎಂಬುದು. ಊರ್ವಶ್ಯಂಬಾದೇವಿಯಿಂದ ಪ್ರಕಾಶಪಟ್ಟ ಕ್ಷೇತ್ರವು ಬದರೀ ಎಂಬುದು. ಔಷಧ್ಯಂಬಾ
ದೇವಿಯಿಂದ ವಿಭೂಷಿತವಾಗಿರುವ ಕ್ಷೇತ್ರವು ಉತ್ತರಕುರು ಎಂಬುದು. ಕುಶೋದಕಾಂಬಿಕಾ ದೇವಿಯಿಂದ ಕೂಡಿದ
ಕ್ಷೇತ್ರವು ಕುಶದ್ವೀಪ ಎಂಬುದು. ಮನ್ಮಥಾಂಬಾದೇವಿಯ ಆಶ್ರಯವಾದ ಕ್ಷೇತ್ರವು ಹಿಮಕೂಟ ಎಂಬುದು. ಸತ್ಯವಾದಿನೀ
ದೇವಿಯಿಂದ ಅಲಂಕೃತವಾದ ಕ್ಷೇತ್ರವು ಕುಮುದ ಎಂಬುದು. ವಂದನೀಯಾ ದೇವಿಯಿಂದ ಸಂತೋಷಜನಕವಾದ
ಕ್ಷೇತ್ರವು ಅಶ್ವತ್ಥ ಎಂಬುದು. ನಿಧಿದೇವಿಯಿಂದ ರಾರಾಜಿಸಲ್ಪಟ್ಟ ಕ್ಷೇತ್ರವು ವೈಶ್ರವಣ ಎಂಬುದು. ಗಾಯತ್ರೀದೇವಿಯಿಂದ
ಅಧಿಷ್ಠಿತವಾದ ಕ್ಷೇತ್ರವು ವೇದವದನ ಎಂಬುದು. ಪಾರ್ವತೀದೇವಿಯಿಂದ ಸುಂದರವಾದ ಕ್ಷೇತ್ರವು ಶಿವಸನ್ನಿಧಿ ಎಂಬುದು.
ಇಂದ್ರಾಣ್ಯಂಬಾ ದೇವಿಯಿಂದ ಅತಿಸುಂದರವಾದ ಕ್ಷೇತ್ರವು ದೇವಲೋಕ ಎಂಬುದು. ಪ್ರಭಾದೇವಿಯು ಆಶ್ರಯಿಸಿದ
ಕ್ಷೇತ್ರವು ಸೂರ್ಯಬಿಂಬ ಎಂಬುದು. ವೈಷ್ಣವೀದೇವಿಯ ಕಾಂತಿಯಿಂದ ರಂಜಿತವಾದ ಕ್ಷೇತ್ರವು ಮಾತೃಲೋಕ ಎಂಬುದು.
ಭ್ರಮರಾಂಬಾದೇವಿ ಯಿಂದ ಭೂಷಿತವಾದ ಕ್ಷೇತ್ರವು ಸೋಮಗಿರಿ ಎಂಬುದು. ಚಾಮುಂಡಾದೇವಿಯಿಂದ ಅಲಂಕೃತವಾದ

ಕ್ಷೇತ್ರವು ಮಹಾಬಲಾಚಲ ಎಂಬುದು. ಸರಸ್ವತ್ಯಂಬಿಕಾದೇವಿಯಿಂದ ಕೂಡಿದ ಕ್ಷೇತ್ರವು ಬ್ರಹ್ಮಾಸ್ಯ ಎಂಬುದು. ಬ್ರಹ್ಮಕಲಾಂಬಾದೇವಿಯಿಂದ ಕೂಡಿದ ಕ್ಷೇತ್ರವು ಚಿತ್ತ ಎಂಬುದು. ಶಕ್ತಿದೇವಿಯಿಂದ ರಾರಾಜಿಸಲ್ಪಟ್ಟ ಕ್ಷೇತ್ರವು ಸರ್ವಶರೀರ ಎಂಬುದು. ಈ ಪ್ರಕಾರವಾಗಿ ಮತ್ಸ್ಯಪುರಾಣದಲ್ಲಿ ಹೇಳಿರುವಂಥ ೧೦೮ ವಿಧವಾದ ಶಕ್ತಿಸ್ಥಾನಗಳನ್ನು ಪುರಾಣಪ್ರವಚನಪಂಡಿತರು ಪುರಾಣಗಳಿಂದ ತಿಳಿಯಬೇಕು.

ಶಿವತತ್ತ್ವರತ್ನಾಕರದಪ್ರಕಾರ ಸಂಖ್ಯಾರತ್ನಕೋಶವ್ಯಾಖ್ಯಾನವಾದ ಪ್ರಭಾವಲಿಯಲ್ಲಿ ಹೇಳಿರುವ ಹದಿನೆಂಟು ಶಕ್ತಿಪೀಠಗಳ ಹೆಸರುಗಳನ್ನು ಬರೆಯುವೆವು

ವಾರಾಣಸಿಯಲ್ಲಿ ವಿಶಾಲಾಕ್ಷೀಪೀಠ, ಮಧುರಾಪುರದಲ್ಲಿ ಮೀನಾಕ್ಷೀಪೀಠ, ಕಾಂಚಿಯಲ್ಲಿ ಕಾಮಾಕ್ಷೀಪೀಠ, ಸಿಂಹಳದಲ್ಲಿ ಸಮಸ್ತ ಇಷ್ಟಾರ್ಥಗಳನ್ನು ನೀಡುವ ಸಿಂಹಿಕಾಪೀಠ, ಲಂಕಾಪುರದಲ್ಲಿ ಶಂಕರೀಪೀಠ, ಕೋಲ್ಲಾಪುರದಲ್ಲಿ ಮಹಾಲಕ್ಷ್ಮೀಪೀಠ, ಕಾನ್ಯಕುಬ್ಜದಲ್ಲಿ ಕುಬ್ಜಿಕೆಯ ಪೀಠ, ಜಾಲಂಧರದಲ್ಲಿ ಪೂಜ್ಯವಾದ ಮಹಾದೇವೀಪೀಠ, ಯೋಗಿನೀಪುರದಲ್ಲಿ ಯೋಗಿನೀಪೀಠ, ಉಜ್ಜಯಿನಿಯಲ್ಲಿ ಮಹಾಕಾಲೀಪೀಠ, ಸುಮೇರುವಿನಲ್ಲಿ ಸುಪ್ರಭಾಪೀಠ, ಶ್ರೀಶೈಲದಲ್ಲಿ ಭ್ರಮರಾಂಬಾಪೀಠ, ವಿಂಧ್ಯಾಚಲದಲ್ಲಿ ವಿಂಧ್ಯವಾಸಿನೀಪೀಠ, ಪರ್ವತದೇಶಿಕದಲ್ಲಿ ಪಾರ್ವತೀದೇವೀಪೀಠ, ಚಕ್ರವಾಟಿಯಲ್ಲಿ ಮಾಣಿಕ್ಯದೇವೀಪೀಠ, ನೀಹಾರ ಪರ್ವತದಲ್ಲಿ ಹಿಮರೂಪಿಣಿಯ ಉತ್ತಮವಾದ ಪೀಠ, ಕಾಲೇಶ್ವರಪುರದಲ್ಲಿ ರೌದ್ರದೇವಿಯ ಶ್ರೇಷ್ಠವಾದ ಪೀಠ, ಪೂರ್ಣಕ್ಷೇತ್ರದಲ್ಲಿ ಪೂರ್ಣಿಕಾದೇವಿಯ ಪೀಠ ಹೀಗೆ ಶಿವತತ್ತ್ವರತ್ನಾಕರದಲ್ಲಿ ಹೇಳಿದಂಥ, ಹದಿನೆಂಟುಪೀಠಗಳನ್ನು ಜ್ಞಾನಿಗಳು ಅರಿತುಕೊಳ್ಳಬೇಕು.

ನಾವು ರಚಿಸಿದ ಸಂಖ್ಯಾರತ್ನಕೋಶವ್ಯಾಖ್ಯೆಯಾದ ಪ್ರಭಾವಲಿಯಲ್ಲಿ ಹದಿನಾರು ಗೌರಿಗಳ ಹೆಸರುಗಳು

ಸ್ವರ್ಣಗೌರೀ, ಅರ್ಕಗೌರೀ, ತಿಂತ್ರಿಣೀಗೌರೀ, ತ್ರಿಲೋಚನಾಗೌರೀ, ಮೌನಗೌರೀ, ಅಂಗುಷ್ಠಾ ಗೌರೀ, ಸಂದೋಹ
60 b ಗೌರೀ, ಕೇಶಬಂಧನಗೌರಿ, ಪೂರ್ಣಗೌರೀ, ಕಪಿತ್ಥಾಗೌರೀ, ಸೌಭಾಗ್ಯಗೌರೀ, ಬೃಹದ್ಗೌರೀ, ಉಪಾಂಗಲಲಿತಾಗೌರೀ, ಕುಂದಗೌರೀ, ಬದರೀಗೌರೀ, ಕಾರ್ತಿಕಗೌರೀ. ಈ ರೀತಿಯಾಗಿ ವೇದಜ್ಞರಾದ ಬ್ರಾಹ್ಮಣರು ವ್ರತಾರ್ಕದಲ್ಲಿ ಹೇಳಿರುವ ಹದಿನಾರು ಗೌರೀನಾಮಗಳನ್ನು ತಿಳಿಯಬೇಕು.

ನಾವು ರಚಿಸಿದ ಸಂಖ್ಯಾರತ್ನಕೋಶವ್ಯಾಖ್ಯಾನಪ್ರಭಾವಲಿಯಲ್ಲಿ ಸೋಪಾನತತ್ತ್ವದ ನಾಮಗಳು

ಭೂಮಿತತ್ತ್ವ, ಅಪ್‌ತತ್ತ್ವ, ತ್ವಕ್‌ತತ್ತ್ವ, ವಾಯುತತ್ತ್ವ, ಆಕಾಶತತ್ತ್ವ, ಅನಲತತ್ತ್ವ, ಪ್ರಕೃತಿತತ್ತ್ವ, ರಸತತ್ತ್ವ, ಗಂಧತತ್ತ್ವ, ವಾಯುತತ್ತ್ವ, ಚಕ್ಷುಸ್ತತ್ತ್ವ, ರೂಪತತ್ತ್ವ, ಪುರುಷತತ್ತ್ವ, ಉಪಸ್ಥತತ್ತ್ವ, ಪಾದತತ್ತ್ವ, ಪಾಣಿತತ್ತ್ವ, ಶ್ರೋತ್ರ ತತ್ತ್ವಮಾಯಾತತ್ತ್ವ, ಕಲಾತತ್ತ್ವ, ಶುದ್ಧವಿದ್ಯಾತತ್ತ್ವ, ಈಶ್ವರತತ್ತ್ವ, ಸದಾಶಿವತತ್ತ್ವ, ಶಿತತತ್ತ್ವ, ನಿಯತಿತತ್ತ್ವ, ವಿದ್ಯಾತತ್ತ್ವ ಅಹಂಕಾರತತ್ತ್ವ, ಶಕ್ತಿತತ್ತ್ವ, ಬುದ್ಧಿತತ್ತ್ವ, ಈ ರೀತಿಯಾಗಿ ಲಲಿತೋಪಾಖ್ಯಾನದಲ್ಲಿ ನಿರೂಪಿಸಲಾದ ಮೂವತ್ತಾರುಸೋಪಾನ ತತ್ತ್ವಗಳನ್ನು ತಿಳಿದುಕೊಳ್ಳಬೇಕು.

ಒಂಬತ್ತು ನಾಥಸಿದ್ಧರು, ಹಿಂದೆ ಹೇಳಿದ ಪ್ರಭಾವಲಿಯ ಪ್ರಕಾರ

ಆದಿನಾಥ, ಮತ್ಸ್ಯೇಂದ್ರನಾಥ, ಗೋರಕ್ಷನಾಥ, ಕೊಂಕಣೇಶ್ವರನಾಥ, ಕುಲೇಂದ್ರನಾಥ, ಮೇಘನಾದನಾಥ, ನಾಗಾರ್ಜುನನಾಥ, ಅರುಣಗಿರಿನಾಥ, ಭುಜಂಗಗುರುನಾಥ, ಈ ರೀತಿಯಾಗಿ ದತ್ತಕಲ್ಪದಲ್ಲಿ ಒಂಬತ್ತು ನಾಥಸಿದ್ಧರು ಗಳನ್ನು ಹೇಳಲಾಗಿದೆ.

ಸಿದ್ಧರ ಹೆಸರುಗಳು, ಹಿಂದೆ ಹೇಳಿದ ಪ್ರಭಾವಲಿಯ ಪ್ರಕಾರ

ಉಡ್ಡೀಶ, ಷಷ್ಠೀಶ, ಮಿತ್ರೇಶ, ಕಾಲತಾಪನ, ಲೋಪಾಮುದ್ರ, ವಾಸುದೇವ, ಮಕ್ತಕೇಶೀಶ್ವರ, ಚರ್ಯಾನಾಥ, ವಿಷ್ಣುದೇವ, ಶ್ರೀರಾಮಾನಂದ, ಧರ್ಮಾಚಾರ್ಯ ದೀಪಕಲಾನಾಥ, ಅಗಸ್ತ್ಯ, ಪ್ರಭಾಕರದೇವ, ತೇಜೋದೇವ, ಮನೋಜ ದೇವ, ಕಲ್ಯಾಣದೇವ, ರತ್ನದೇವ, ಖಡ್ಗಮಾಲೆಯಲ್ಲಿಈ ಪ್ರಕಾರವಾಗಿ ಹದಿನೆಂಟು ಸಿದ್ಧರುಗಳನ್ನು ಹೇಳಲಾಗಿದೆ.

ರಾಜರುಪೂಜೆಗಾಗಿ ಬಳಸಬೇಕಾದ ಅರ್ಹವಾದ ಖಡ್ಗಗಳ ಹೆಸರುಗಳು

'ಹೇಮಾದ್ರಿಯ ಖಡ್ಗಪೂಜೆವಿಧಿಯಲ್ಲಿ.ಅಸಿ,ಖಡ್ಗ, ವಿಶಸನ, ದುರಾಸದ, ಶ್ರೀಗರ್ಭ, ವಿಜಯ, ಧರ್ಮಪಾಲ, ತೀಕ್ಷ್ಣಧಾರ, ಇವುಗಳು ಕ್ರಮವಾಗಿ ರಾಜಪೂಜಾಯೋಗ್ಯವಾದ ಎಂಟು ಖಡ್ಗಗಳ ಹೆಸರುಗಳು.

ಸಿಂಹಾಸನದ ಎಂಟುದಿಕ್ಕುಗಳಲ್ಲಿರುವ ಸಿಂಹಗಳ ಹೆಸರುಗಳು, ಹೇಮಾದ್ರಿಯಲ್ಲಿ

ಪೂರ್ವದಿಕ್ಕಿನಲ್ಲಿ ವಿಜಯ ಎಂಬಸಿಂಹವೂ, ಆಗ್ನೇಯ ದಿಕ್ಕಿನಲ್ಲಿ ಜಯದ ಎಂಬುದೂ, ದಕ್ಷಿಣದಲ್ಲಿ ರಿಪುಘ್ನ ಎಂಬುದೂ, ನೈಋತ್ಯದಲ್ಲಿ ಅತಿಪ್ರಿಯಂಕರ ಎಂಬುದೂ, ಪಶ್ಚಿಮದಲ್ಲಿ ದುಃಖಹಾರಿ ಎಂಬುದೂ, ವಾಯವ್ಯದಲ್ಲಿ ಧರ್ಮದ ಎಂಬುದೂ, ಉತ್ತರದಲ್ಲಿ ಶಾತಸಿಂಹ ಎಂಬುದೂ, ಈಶಾನ್ಯದಲ್ಲಿ ಸರ್ವಾರಿಷ್ಟವಿನಾಶ ಎಂಬ ಎಂಟನೆಯ ಸಿಂಹವೂ ಇದೆ. ಈ ಎಂಟು ಹೆಸರುಗಳುಗಳ್ಳ ಸಿಂಹಗಳು ರಾಜಸಿಂಹಾಸನದ ಎಂಟು ಭಾಗಗಳಲ್ಲಿ ಸ್ಥಿತರಾಗಿದ್ದು, ಸಮಸ್ತ ಐಶ್ವರ್ಯಗಳನ್ನೂ ಸಮಸ್ತ ಇಷ್ಟಗಳನ್ನು ಕೊಡುವುವು.

61 a ಶತ್ರುಪರಾಜಯಕ್ಕಾಗಿ ಶತ್ರುಸೇನೆಯಲ್ಲಿ ಆವಾಹನಮಾಡಬೇಕಾದ ದೇವತೆಗಳ ಹೆಸರುಗಳು ಹಾಗೂ ಅವುಗಳ ಫಲಗಳು ಲಲಿತೋಪಾಖ್ಯಾನದಲ್ಲಿ

ಶತ್ರುಗಳ ಅಪಜಯಕ್ಕಾಗಿ, ಆ ಸೇನೆಯಲ್ಲಿ ಬೇರೆ ಬೇರೆಯಾಗಿ ಆವಾಹನಮಾಡಬೇಕಾದ ದೇವಿಯರನ್ನು ಆವಾಹನೆಯ ಫಲಗಳನ್ನೂ ಹೇಳುವೆವು. (ಶತ್ರುಸೈನ್ಯದಲ್ಲಿ)ಆವಾಹಿಸಲ್ಪಟ್ಟ ಅಲಸಾದೇವಿಯು ಶತ್ರುಗಳಿಗೆ ಆಲಸ್ಯವನ್ನುಂಟುಮಾಡುವಳು. ಅದೇಪ್ರಕಾರವಾಗಿ ಕೃಪಣಾದೇವಿಯ ಕಾರ್ಪಣ್ಯವನ್ನು ನೀಡುವಳು. ದೀನಾದೇವಿಯು ಶತ್ರುಸೈನ್ಯದಲ್ಲಿ ದೈನ್ಯವನ್ನುಂಟು ಮಾಡುವಳು. ನಿದ್ರಾದೇವಿಯು ಅವರ ನಿದ್ರೆಯನ್ನು ಹೆಚ್ಚಿಸುವಳು. ತಂದ್ರಾದೇವಿಯು ಶತ್ರುಸೈನ್ಯದಲ್ಲಿ ತಂದ್ರೆ (ಆಲಸ್ಯ) ಯನ್ನು ಹೆಚ್ಚಿಸುವಳು. ಪ್ರಮೀಲಿತಾದೇವಿಯು ಕಣ್ಣುಗಳನ್ನು ಹೆಚ್ಚಾಗಿ ಮುಚ್ಚುವಂತೆ ಮಾಡುವಳು. ಕ್ಲೀಬಾದೇವಿಯು ಶೂರರಿಗೂ ಕೂಡಾ ನಪುಂಸಕತ್ವವನ್ನು ಉಂಟುಮಾಡುವಳು. ನಿರಹಂಕಾರಿಕಾದೇವಿಯು ವೈರಿಗಳ ಅಹಂಕಾರವನ್ನು ಕಳೆಯುವಳು. ಶತ್ರುವಿನ ಸೈನ್ಯದಲ್ಲಿ ಈ ದೇವಿಯರನ್ನು ಪ್ರಯತ್ನಪೂರ್ವಕವಾಗಿ ಸ್ಥಾಪಿಸಬೇಕು. ಅವರು ಶತ್ರುಗಳಿಗೆ ಆಯಾಫಲಗಳನ್ನು (ತಮ್ಮ ಹೆಸರಿಗೆ ತಕ್ಕ)ಕೊಡುವವರಾಗುವರು.

ಸಿಂಹಾಸನದಲ್ಲಿರುವ ಸಾಲಭಂಜಿಕಾ (ಗೊಂಬೆ ಪ್ರತಿಮೆ)ಗಳ ಹೆಸರುಗಳು, ನಾವು ರಚಿಸಿದ ಸಂಖ್ಯಾರತ್ನಕೋಶ ವ್ಯಾಖ್ಯಾಪ್ರಭಾವಲಿಯಲ್ಲಿ

ಪದ್ಮಾವತೀ, ಮೋಹಿನೀ, ವಿಜಯಾ, ಸುರತಪ್ರಿಯಾ, ಆನಂದಸಂಜೀವಿನೀ, ಕುರಂಗಾ, ಜಯಾವತೀ, ಕುರಂಗಲೋಚನಾ, ವಿಷ್ಣುಗಂಧಿನೀ, ರಕ್ತಚಂಡಿಕಾ, ವಿದ್ಯಾಧರೀ, ಕಾಮಕಲಾ, ಕನಕಾವತೀ, ಅನಂಗಜಾ, ನವಪ್ರಮೋಹಿನೀ, ಹಂಸಗಮನಾ,

ರತಿರೂಪಿಣೀ, ತ್ರೈತೋಕ್ಯಮೋಹಿನೀ, ಇಂದ್ರಾರ್ಚಿತಾ, ಸಂಧ್ಯಾವಲೀ, ಇಲಾ, ಕರ್ಣಾವತೀ, ವಾಮಲೋಚನಾ, ಪದ್ಮಿನೀ, ರತಿಪ್ರಿಯಾ, ಲಾವಣ್ಯವತೀ, ರತ್ನಾವತೀ, ಪ್ರಭಾವತೀ, ಕಾಮಲತಿಕಾ, ಇಲಾವತೀ, ಸಮ್ಮೋಹಿನೀ, ಅನಂಗಶಯನಾ ಎಂದು ಸಾಲಭಂಜಿಕೆಗಳು. ಭೋಜರಾಜ ಮತ್ತು ಪುತ್ಥಳಿಕಾಸಂವಾದಕಥೆಯಲ್ಲಿ ಇದೇ ಪ್ರಕಾರವಾಗಿ ಮುವತ್ತೆರಡು ಸಾಲಭಂಜಿಕೆಗಳಿರುವುವೆಂದು ಪಂಡಿತವರೇಣ್ಯರು ತಿಳಿಯಬೇಕು.

ಮಂತ್ರಸಾರದಲ್ಲಿ ಶಕ್ತಿಮಂತ್ರಜಪಾಂಗಗಳು

ಧ್ಯಾನ, ಆವಾಹನ, ನಾಮ, ಅರ್ಗಲ, ಕೀಲಕ, ಹೃದಯ, ದಲ, ಕವಚ, ನ್ಯಾಸ, ಮಾಹಾತ್ಮ್ಯ, ಈ ರೀತಿಯಾಗಿ ಜಪಕಾರ್ಯಪರರು ದೇವೀಮಂತ್ರ ಜಪಾಂಗಗಳನ್ನು ಹೇಳಿರುವರು. ಈ ಅಂಗಗಳು ಖಂಡಿತವಾಗಿಯೂ ಮಂತ್ರಸಿದ್ಧಿಯನ್ನು ಕೊಡುವವು.

ದೇವಿಮಂತ್ರನ್ಯಾಸಗಳು, ಮಂತ್ರಸಾರದಲ್ಲಿ

ಮೊದಲನೆಯ ಮಾತೃಕಾನ್ಯಾಸ, ಆ ಬಳಿಕ ಕ್ರಮವಾಗಿ, ಕರ್ಪೂರಮಣಿಬಂಧನ, ಸಾರಸ್ವತ, ತ್ರೈತೋಕ್ಯವಿಜಯ, ಜರಾಮೃತ್ಯುಹರ, ಸರ್ವಕಾಮದ, ಸದ್ಗತಿಪ್ರದ, ರೋಗಹರ, ಸರ್ವದುಃಖಹರ, ದೇವತ್ವಪ್ರಾಪಕ, ತ್ರೈಲೋಕ್ಯಮೋಹನ, ಹೀಗೆ ಸಿದ್ಧಿಯನ್ನು ನೀಡಬಲ್ಲ ಹನ್ನೊಂದು ದೇವಿಯ ಶ್ರೇಷ್ಠವಾದ ಮಂತ್ರನ್ಯಾಸಗಳು ಮಂತ್ರಸಾರದಲ್ಲಿ ಹೇಳಲಾಗಿದೆ.

ಅಷ್ಟದಳಪರ್ವತಗಳು

ಮಹಾಬಲಗಿರಿ, ಸೋಮಗಿರಿ, ಅರ್ಕಗಿರಿ, ದೇಶೇಶಗಿರಿ, ಕನಕಗಿರಿ, ತಿಂದುಕಗಿರಿ, ಮಲ್ಲಿಕಗಿರಿ, ಕುಂದಗಿರಿ ಇವು ಅಷ್ಟದಳಪರ್ವತಗಳು. (ಎಂಟು ದಳಪರ್ವತಗಳು) 994-1092

61 b

ಗದ್ಯಪ್ರಾರಂಭ

ಶ್ರೀಮನ್ನಾರಾಯಣಶಿವಬ್ರಹ್ಮೇಂದ್ರಾದಿಸಮಸ್ತ ಸುರಶ್ರೇಷ್ಠರ ಪರಾಭವದಲ್ಲಿ ಪರಿಣತಿಹೊಂದಿದ ಪ್ರಚಂಡ ಬಲವುಳ್ಳ ಚಂಡ ಮುಂಡರನ್ನು ತುಂಡರಿಸುವುದರಲ್ಲಿ ನಿಪುಣವಾದ ಧನುಃಕಾಂಡದ ಅಗ್ರಭಾಗವನ್ನು ಧರಿಸಿದ ಭುಜದಂಡದಿಂದ ಶೋಭಿಸುವ, ಚಾಮುಂಡಿಕಾಕಟಾಕ್ಷದ ನೋಟದಿಂದ ಪ್ರವೃದ್ಧಿಹೊಂದುವ ಭೂಮಂಡಲಾಧಿಪತ್ಯವುಳ್ಳ, ಸತ್ಯಪ್ರತಾಪವುಳ್ಳ, ಸಕಲಭಾಷಾ ಸಾಮ್ರಾಜ್ಯಧುರಂಧರ, ನಾಲ್ಕುವಿಧವಾದ ಸರಸ ಕವಿತೆಗಳನ್ನು ಅಸಹಾಯಕನಾಗಿ ನಿರ್ಮಿಸುವಲ್ಲಿ ಅಗ್ರೇಸರನಾದ ಗಂಟೆಗೆ ನೂರುಗ್ರಂಥ(ಶ್ಲೋಕ)ಗಳನ್ನು, ಅನುದಿನವೂ ಕಾವ್ಯಗಳನ್ನು ರಚಿಸುವಲ್ಲಿ ನಿಷ್ಣಾತ, ತ್ರಿಭುವನಗಳಲ್ಲಿ ಪವಿತ್ರವಾದ ಆತ್ರೇಯ ಗೋತ್ರದ ಸುಚಾರಿತ್ರವುಳ್ಳ, ಚಾಮರಾಜ ಮಹಾರಾಜನ ಪುತ್ರ ನರಪತಿ ಎಂಬ ಬಿರುದುಳ್ಳ, ಮಹೀಶೂರ ಪುರಶ್ರೇಷ್ಠದ ಅಧೀಶನಾದ ಶ್ರೀಮದಂಬಾಪ್ರಸಾದ(ಅನುಗ್ರಹ)ದಿಂದ ಪಡೆದ ದಿವ್ಯದಷ್ಟಿಸಂಪತ್ತಿನಿಂದ ಪಡೆದಂಥ ನಾನಾ ಮಹಾಶಕ್ತಿ, ದೇವೀನಿಜಸ್ವರೂಪಸಾಕ್ಷಾತ್ಕಾರದಿಂದ ಕೃತಾರ್ಥನಾದ ಶ್ರೀಕೃಷ್ಣರಾಜಮಹಾರಾಜಕಂಠೀರವನಿಂದ ವಿರಚಿಸಲ್ಪಟ್ಟ ಶ್ರೀತತ್ತ್ವನಿಧಿ ಎಂಬ ಹೆಸರಿನ ಗ್ರಂಥದಲ್ಲಿ ಚಾಮುಂಡಾದಿಶಕ್ತಿದೇವೀಸ್ವರೂಪ ನಿರೂಪಣವೆಂಬ **ಮೊದಲ ನಿಧಿಯು ಸಂಪೂರ್ಣವಾಯಿತು.**

ಶ್ರೀಶಕ್ತಿನಿಧಿ ಎಂಬ ಮಾಣಿಕ್ಯದ ಪ್ರಶಸ್ತವಾದ ಕಾಂತಿಸಂಖ್ಯೆಯಿಂದ ಕೃಷ್ಣರಾಜೇಂದ್ರನಿಂದ ರಚಿತವಾದ ಈ ಗ್ರಂಥವು ಚಿರಕಾಲ ಬೆಳೆಯಲಿ.

ಯಾವ ಭಕ್ತರು ನಿತ್ಯವೂ ಭಕ್ತಿಯಿಂದ ಶ್ರೀಮಚ್ಛಕ್ತಿನಿಧಿಯನ್ನು ಪಠಿಸುವರೋ ಅವರ ಸರ್ವಕಾಮನೆಗಳನ್ನು ನೀಡುವ ಶಕ್ತಿಯೂ ತೇಜಸ್ಸೂ ಹೆಚ್ಚುತ್ತದೆ. ಶ್ರೀರಸ್ತು. 1093-1094

ಶ್ರೀಮದಂಬಿಕೆಗೆ ನಮನ- ಈ ಶಕ್ತಿನಿಧಿಯಲ್ಲಿ ಇರುವ ಪ್ರತಿಮೆಗಳ(ಚಿತ್ರಗಳ) ವಿವರಣಶ್ಲೋಕಗಳು

ಶ್ರೀಚಾಮುಂಡಾಂಬಿಕೆಗೆ ನಮನ. ಒಳ್ಳೆಯ ಚಿತ್ರಗಳಿರುವ ಶ್ರೀ ತತ್ತ್ವನಿಧಿರತ್ನಾಕರ ಎಂಬ ಈ ಗ್ರಂಥದಲ್ಲಿ ಶಕ್ತಿನಿಧಿ ಎಂಬ ಪ್ರಶಸ್ತವಾದ ಶುಭವಾದ ಮಾಣಿಕ್ಯನಿಧಿಯಲ್ಲಿ. ಮೊದಲ ಪ್ರಕರಣದಲ್ಲಿ ಎಲ್ಲ ಶಕ್ತಿದೇವತೆಗಳೂ ನಿರೂಪಿತವಾಗಿವೆ. ಅವುಗಳನ್ನು ಕ್ರಮವಾಗಿ ಪರಿವಾರಸಮೇತವಾಗಿ ನಿರೂಪಿಸಲಾಗುತ್ತದೆ. ಮೊದಲು ಶ್ರೀ ಚಾಮುಂಡಾ ಮಹಾಕಾಳಿ, ಅನಂತರದಲ್ಲಿ ಮಹಾಲಕ್ಷ್ಮೀ, ಮಹಾಸರಸ್ವತೀ ಮತ್ತು ರಾಜರಾಜೇಶ್ವರಿಯ ನಿರೂಪಣೆ ಇದೆ. ದೇವಿಯ ಶ್ರೀನಗರದಲ್ಲಿ ತತ್ತ್ವಸಾಲ(ಕೋಟೆ/ಅಂಕಣ)ಗಳಲ್ಲಿ ಇತರ ದೇವತೆಗಳು ಇರುವರು. ಆ ದೇವತೆಗಳ ಹೆಸರುಗಳನ್ನು ಸಪರಿವಾರವಾಗಿ ಕ್ರಮೇಣ ಹೇಳಲಾಗುವುದು.

62 a ಮೊದಲು ಕಬ್ಬಿಣದ ಕೋಟೆಯಲ್ಲಿ ಕಾಳಿಯಿಂದ ಆಲಂಗಿಸಲ್ಪಟ್ಟ ಶರೀರದ ಮಹಾಕಾಲನು ಪರಿವಾರಸಮೇತನಾಗಿ ದೇವಿಯ ಪೂಜೆಯಲ್ಲಿ ನಿರತನಾಗಿರುವನು. ಕಂಚಿನ ಎರಡನೆ ಕೋಟೆಯಲ್ಲಿ ಪರಿವಾರಸಮೇತನಾದ ವಸಂತನು ಮಧುಶ್ರೀ ಮತ್ತು ಮಾಧವಶ್ರೀಯರೊಂದಿಗೆ ದೇವಿಯ ಧ್ಯಾನಾಸಕ್ತನಾಗಿರುವನು. ತಾಮ್ರದ ಮೂರನೇ ಕೋಟೆಯಲ್ಲಿ ಗ್ರೀಷ್ಮನು ಪರಿವಾರಸಮೇತನಾಗಿ ಶುಕ್ರಶ್ರೀ ಮತ್ತು ಶುಚಿಶ್ರೀಗಳೊಂದಿಗೆ ದೇವಿಯ ಸೇವಾಭಾರವನ್ನು ಹೊತ್ತುಕೊಂಡಿರುವನು. ನಾಲ್ಕನೆ ಸೀಸದ ಕೋಟೆಯಲ್ಲಿ ವರ್ಷರ್ತುವು ನಭಃಶ್ರೀ, ನಭಸ್ಯಶ್ರೀ, ಅಮಲಾ, ಸರಸಾ, ಭೂಯಂತೀ, ವಾರಿಧಾರಾ, ನಿರುಕ್ತಿ, ಖಣಿಕಾ, ಮೇಘಯಂತಿ, ವರ್ಷಯಂತಿ, ಅಂಬಾ, ಸಸ್ಯಮಾಲಿನೀ ಈ ಭಾವಸಂಖ್ಯೆ (೧೨)ಯ ತನ್ನ ಪತ್ನಿಯರೊಂದಿಗೆ ದೇವಿಯ ಚರಣಕಮಲಗಳ ಪೂಜೆಯಲ್ಲಿ ನೆಟ್ಟಮನಸ್ಸುಳ್ಳವನಾಗಿರುವನು. ಐದನೆ ಹಿತ್ತಾಳೆಯ ಕೋಟೆಯಲ್ಲಿ ಶರದೃತುವು ಇರ್ಷಶ್ರೀ ಮತ್ತು ಊರ್ಜಶ್ರೀಯರನ್ನು ಆಲಿಂಗಿಸಿಕೊಂಡು ಪರಿವಾರಸಮೇತನಾಗಿ ದೇವಿಪೂಜೆಯಲ್ಲಿ ನಿಯಮಿತನಾಗಿರುವನು. ಆರನೆ ಪಂಚಲೋಹಮಯವಾದ ಮನೋಹರಪ್ರಾಕಾರದಲ್ಲಿ ಸಹಶ್ರೀ ಮತ್ತು ಸಹಸ್ಯಶ್ರೀಯರೊಂದಿಗೆ ಹೇಮಂತನೆಂಬ ಋತುವು ಪರಿವಾರಸಮೇತನಾಗಿ ದೇವಿಧ್ಯಾನವ್ರತದಲ್ಲಿ ನಿರತನಾಗಿರುವನು. ಏಳನೆ ಬೆಳ್ಳಿಯ ಕೋಟೆಯಲ್ಲಿ ಶಿಶಿರನೆಂಬ ಋತುವು ತಪಶ್ರೀ ಮತ್ತು ತಪಸ್ಯಶ್ರೀಯರೊಂದಿಗೆ ಸಪರಿವಾರನಾಗಿ ನಿತ್ಯವೂ ದೇವಿಯ ಚರಣಕಮಲಗಳ ಪೂಜೆಯಲ್ಲಿ ಆಸೆಯನ್ನು ಹೊತ್ತುಕೊಂಡು ಇರುವನು. ಎಂಟನೆ ಚಿನ್ನದ ಕೋಟೆಯಲ್ಲಿ ಪರಿವಾರಸಮೇತರಾದ ಸಿದ್ಧರು ದೇವಿ ಪೂಜಾನಿಷ್ಠವಾದ ಅಂತರಂಗವುಳ್ಳವರಾಗಿ ಸದಾಕಾಲವೂ ಆಲಸ್ಯರಹಿತರಾಗಿರುವರು. ಪುಷ್ಯರಾಗದಿಂದ ನಿರ್ಮಿತವಾದ ಒಂಭತ್ತನೆ ಕೋಟೆಯಲ್ಲಿ ಚಾರಣರು ಪರಿವಾರಸಮೇತರಾಗಿ ದೇವೀಧ್ಯಾನ ತಲ್ಲೀನರಾಗಿ ಇರುವರು. ಪದ್ಮರಾಗ ನಿರ್ಮಿತವಾದ ಶುಭ್ರವಾದ ಹತ್ತನೆ ಕೋಟೆಯಲ್ಲಿ ಯೋಗಿನಿಯರು ಮತ್ತು ಭೈರವರು ದೇವಿಧ್ಯಾನ ನಿಷ್ಠವಾದ ಮನಸ್ಸುಳ್ಳವರಾಗಿ ಇರುವರು. ಗೋಮೇದಕಮಯವಾದ, ಉತ್ತಮವಾದ ಹನ್ನೊಂದನೆ ಕೋಟೆಯಲ್ಲಿ ರಂಭೆ ಮೊದಲಾದ ಅಪ್ಸರೋಗಣ ಗಳು ದೇವೀಪೂಜಾತತ್ಪರರಾಗಿರುವುವು. ವಜ್ರನಿರ್ಮಿತವಾದ ಹನ್ನೆರಡನೆ ಕೋಟೆಯಲ್ಲಿ ಸಪರಿವಾರನಾದ ನಾಗರಾಜ ಆದಿಶೇಷನು, ದೈತ್ಯದಾನವರೊಂದಿಗೆ ಬಲೀಂದ್ರನೂ, ನಿರಂತರವಾಗಿ ದೇವಿಯ ಪಾದಪದ್ಮ ಗಳಲ್ಲಿ ನಿರತವಾದ ಮನಸ್ಸು ಳ್ಳವರಾಗಿರುವರು. ವೈಡೂರ್ಯಗಳಿಂದ ನಿರ್ಮಿತನಾದ ಹದಿಮೂರನೇ ಕೋಟೆಯಲ್ಲಿ ಪತ್ನೀಸಮೇತರಾದ ಮನುಗಳು ಮತ್ತು ಭೂಪಾಲಕರು ಅಂಬಿಕೆಯ ಚರಣಗಳನ್ನು ಆಶ್ರಯಿಸಿಕೊಂಡಿರುವರು.

ಇಂದ್ರನೀಲಮಣಿನಿರ್ಮಿತವಾದ ಹದಿನಾಲ್ಕನೆ ಕೋಟೆಯಲ್ಲಿ ಪರಿವಾರಸಮೇತರಾದ ದಿಕ್ಪಾಲಕರು ದೇವಿಪಾದಾರ್ಚನ ನಿರತರಾಗಿರುವರು. ಮುತ್ತುಗಳಿಂದ ನಿರ್ಮಿತವಾದ ಹದಿನೈದನೆ ಸುಂದರವಾದ ಕೋಟೆಯಲ್ಲಿ ಫಲಗಳ ಸಮೇತರಾಗಿ

ಕಿರಿಚಕ್ರದಲ್ಲಿರುವ ದೇವಿಯರೊಂದಿಗೆ ಶುಭವಾದ ಕಿರಿಚಕ್ರಾಸನದಲ್ಲಿ ದಂಡಿನಿವಾರಾಹಿಯು ದೇವಿಯ ಮನಸ್ಸನ್ನು
ಅನುಸರಿಸುವವಳಾಗಿ ನಿಯಮಿತಳಾಗಿರುವಳು. ಹದಿನಾರನೆ ಗಾರುತ್ಮತಮಣಿನಿರ್ಮಿತವಾದ ಕೋಟೆಯಲ್ಲಿ ಮರೀಚಿ
ಮೊದಲಾದ ಋಷಿಗಳೊಂದಿಗೆ ಚತುರ್ಮುಖಬ್ರಹ್ಮನು ಶ್ರೀದೇವಿಯ ಪಾದಾರವಿಂದಗಳ ಧ್ಯಾನದಲ್ಲಿ ನೆಟ್ಟಮನಸ್ಸುಳ್ಳ
62 b ವನಾಗಿರುವನು. ವಿದ್ರುಮಮಣಿಗಳಿಂದ ನಿರ್ಮಿತವಾದ ಹದಿನೇಳನೆ ಕೋಟೆಯಲ್ಲಿ ತನ್ನ ಅವತಾರಗಳೊಂದಿಗೆ, ಪರಿವಾರ
ದೊಂದಿಗೆ, ವ್ಯೂಹಮೂರ್ತಿಗಳೊಂದಿಗೆ ಶ್ರೀಮಾನ್ ಮಹಾವಿಷ್ಣುವು ದೇವಿಯ ಪಾದಕಮಲಪೂಜಕನಾಗಿರುವನು.
ಹೊಳೆಯುವ ಮಾಣಿಕ್ಯಗಳಿಂದ ನಿರ್ಮಿತವಾದ ಹದಿನೆಂಟನೆಯ ಕೋಟೆಯಲ್ಲಿ ಭವಾದಿಮೂರ್ತಿಗಳು, ರುದ್ರರು,
ಲೀಲಾಮೂರ್ತಿಗಳು, ವಿಘ್ನೇಶ,ಸ್ಕಂದ, ನಂದಿ ಮೊದಲಾದ ಪ್ರಮಥರುಗಳಿಂದ ಕೂಡಿದವನಾಗಿ ನಿತ್ಯವೂ ಶ್ರೀ ದೇವಿಯ
ಧ್ಯಾನತತ್ಪರನಾದ ಉಮಾಮಹೇಶ್ವರನು ನಾನಾರತ್ನಮಯವಾದ ದಿವ್ಯವಾದ ಸಹಸ್ರಸ್ತಂಭಮಂಟಪದಲ್ಲಿರುವನು. ನಾನಾ
ರತ್ನಮಯವಾದ ಮಂಗಳಕರವಾದ ಹತ್ತೊಂಬತ್ತನೆ ಕೋಟೆಯಲ್ಲಿ, ದಿವ್ಯವಾದ ಅಮೃತರಸಪರಿಪೂರ್ಣವಾದ ವಾಪಿ
ಯೊಳಗೆ ಆನಂದಪೂರ್ಣಳಾದ ತಾರಾದೇವಿಯು ಪರಿವಾರದೊಂದಿಗೆ ನೌಕೆಯ ಆಶ್ರಯವನ್ನು ಪಡೆದು ಸತತವಾಗಿ
ರಾಜರಾಜೇಶ್ವರಿಯ ಧ್ಯಾನದಲ್ಲಿ ತಲ್ಲೀನಳಾಗಿರುವಳು. ಮನೋಮಯವಾದ ಇಪ್ಪತ್ತನೆ ಕೋಟೆಯಲ್ಲಿ ಆನಂದವಾಪಿಯ
ನಡುವಿನಲ್ಲಿ ಪರಿವಾರಸಮೇತಳಾಗಿ ನೌಕೆಯನ್ನೇರಿ ಆನಂದದಿಂದ ಕ್ರೀಡಿಸುತ್ತಿರುವ, ಅಮೃತೇಶ್ವರಿಯಾದ ವಾರುಣಿ
ಯೆಂಬವಳು ಮದ್ಯಮದದಿಂದ ಓಲಾಡುವ ಕಣ್ಣುಗಳುಳ್ಳವಳಾಗಿ ಸತತವಾಗಿ ಕಾಮೇಶ್ವರಿಯ ಪಾದಕಮಲಗಳ ಧ್ಯಾನಾಸಕ್ತವಾದ
ಮನಸ್ಸುಳ್ಳವಳಾಗಿ ಇರುವಳು. ಮೂರ್ಛನಾಸಂಖ್ಯೆಯಿಂದ ಸಮ್ಮಿತವಾದ ಸುಂದರವಾದ ಬುದ್ಧಿಮಯ ಕೋಟೆಯಲ್ಲಿ
ವಿಮರ್ಶವಾಪಿಯ ನಡುವೆ ಪರಿವಾರಸಮೇತಳಾಗಿ ಕುರುಕುಲಾ ಎಂಬ ದೇವಿಯಿರುವಳು. ಅವಳು ಕಪ್ಪುಬಣ್ಣದ
ರವಿಕೆಯನ್ನು ತೊಟ್ಟು ನೌಕೆಯನ್ನೇರಿ ಕ್ರೀಡಿಸುತ್ತ ರತ್ನನಿರ್ಮಿತವಾದ ಶತ್ರುತ್ರಾಣಕರವಾದ ಆಯುಧವನ್ನು ಹಸ್ತದಲ್ಲಿ
ಹಿಡಿದುಕೊಂಡು ಜಗದಂಬೆಯ ಚರಣಕಮಲಗಳ ಸೇವೆಯಲ್ಲಿ ಆಸಕ್ತವಾದ ಮನಸ್ಸುಳ್ಳವಳಾಗಿರುವಳು. ' ಇಪ್ಪತ್ತೆರಡನೆ
ಮನೋಹರವಾದ ಅಹಂಕಾರಮಯವಾದ ಕೋಟೆಯಲ್ಲಿ ದ್ವಾದಶಾತ್ಮನಾದ ಅತಿಶಯಪ್ರಕಾಶಯುಕ್ತನಾದ ಶಕ್ತಿಮತ್ತು
ಪರಿವಾರ ಸಮೇತನಾಗಿ ಮಾರ್ತಾಂಡಭೈರವಾದಿತ್ಯನು ದೇವೀಧ್ಯಾನಾಸಕ್ತನಾಗಿರುವನು. ಇಪ್ಪತ್ತಮೂರನೆ ಸುಂದರವಾದ
ಸೂರ್ಯಬಿಂದಮಯವಾದ ಕೋಟೆಯಲ್ಲಿ ನಕ್ಷತ್ರಗಣಗಳಿಂದ ಕೂಡಿದ ಸೋಮನಾಥನು ಬೆಳಗುತ್ತಿದ್ದಾನೆ. ಆತನು
ನಿರಂತರವಾಗಿ ಸಂತೋಷವನ್ನುಂಟುಮಾಡುತ್ತ ಪರಿವಾರದೊಂದಿಗೆ ಲಲಿತಾಂಬೆಯ ಚರಣಕಮಲಗಳ ಧ್ಯಾನಲೀನವಾದ
ಮನಸ್ಸುಳ್ಳವನಾಗಿದ್ದಾನೆ. ಇಪ್ಪತ್ತನಾಲ್ಕನೆ ಚಂದ್ರಬಿಂಬಮಯವಾದ ಕೋಟೆಯಲ್ಲಿ ಶೃಂಗಾರರೂಪವಾದ ಕೋಟೆಯ
ಗೋಡೆಗಳ ನಡುವೆ ನೌಕೆಯನ್ನೇರಿದ, ಹೂವಿನ ಆಯುಧವನ್ನುಧರಿಸಿದ ಎಂಟು ಬಾಹುಗಳಿಂದ ಕೂಡಿದ, ಮದೋನ್ಮತ್ತನಾದ
ಶೃಂಗಾರರಸಕ್ಕೆ ನಾಯಕನಾಗಿರುವ, ರತಿಮೊದಲಾದ ಇಬ್ಬರು ಹೆಂಡಂದಿರೊಂದಿಗೆ, ಸ್ತ್ರೀ ಪರಿವಾರದಿಂದ ಕೂಡಿದ,
ಜಗನ್ಮೋಹನವೆಂಬ ಶಕ್ತಿಯಿಂದ ಕೂಡಿದ, ಲಕ್ಷ್ಮೀಪುತ್ರನಾದ ಕಂದರ್ಪನು ದೇವಿಯಚರಣಕಮಲಗಳ ಆಜ್ಞೆಗೆ ಅಧೀನನಾಗಿ
ಜಾಗರೂಕವಾಗಿದ್ದಾನೆ. ಹೊಳೆಯುವಂಥ ಶೃಂಗಾರಮಯವಾದ ಇಪ್ಪತ್ತೈದನೆ ಕೋಟೆಯ ಚಿಂತಾಮಣಿಗೃಹದ ಕಾಂತಿಮಯ
ವಾದ ಹೊರಗಿನ ಗೋಡೆಯ ಅಂತರಾಳದಲ್ಲಿ ನಾಲ್ಕುದಿಕ್ಕುಗಳಲ್ಲಿ ಶುಭಪ್ರದವಾದ ಪದ್ಮಾಟವಿಯಲ್ಲಿ ದಿವ್ಯಾಮೃತರಸ
ಗಳೊಂದಿಗೆ ಸತತವಾಗಿ ದೇವಿಯ ಉಪಚಾರಕ್ಕಾಗಿ ಪೂರ್ಣವಾಗಿರುವ ನಾಲ್ಕು ಅರ್ಘ್ಯಪಾತ್ರಗಳು ರಾರಾಜಿಸುತ್ತಿವೆ. ಈ
ನಾಲ್ಕು ಅರ್ಘ್ಯಪಾತ್ರಗಳಿಗೂ ಆಧಾರಪೀಠವಾಗಿ ಅಗ್ನಿಯು ತೇಜೋರೂಪವಾದ ಹತ್ತುಕಲೆಗಳೊಂದಿಗೆ ಸುತ್ತುವರೆಯ
ಲ್ಪಟ್ಟು ಜ್ವಲಂತರೂಪವಾಗಿ ಶೋಭಿಸುತ್ತಿರುವನು. ಸೂರ್ಯನೂ ಕೂಡಾ ನಾಲ್ಕುರೂಪವಾದ ಅರ್ಘ್ಯಪಾತ್ರರೂಪವನ್ನು
63 a ಹೊಂದಿ ಗೊಂಬೆಗಳ ರೂಪವಾಗಿರುವ ತನ್ನ ಹನ್ನೆರಡು ಕಲೆಗಳಿಂದ ಸತತವಾಗಿ ಸುತ್ತುವರೆಯಲ್ಪಟ್ಟವನಾಗಿ ತೇಜೋಮಯ
ನಾಗಿ ಶೋಭಿಸುತ್ತಾನೆ. ಅದೇಪ್ರಕಾರವಾಗಿ ದಿವ್ಯವಾದ ಅಮೃತರಸರೂಪನಾಗಿ ರೋಹಿಣಿಕಾಂತನಾದ ಚಂದ್ರನು ನಾಲ್ಕು

ಆ ಅರ್ಘ್ಯಪಾತ್ರೆಗಳಲ್ಲಿ ಸುತ್ತಲೂ, ದೋಣಿಯಲ್ಲಿ ವಿಹಾರಮಾಡುತ್ತಿರುವ ತನ್ನ ಹದಿನಾರು ಕಲೆಗಳಿಂದ ಕೂಡಿ ಜಗದಂಬೆಗೆ ಸತತವಾಗಿ ಸಂತೋಷವನ್ನುಂಟುಮಾಡುತ್ತ ಶೋಭಿಸುವನು. ಬ್ರಹ್ಮಾ, ವಿಷ್ಣು, ರುದ್ರ, ಈಶ್ವರ, ಸದಾಶಿವ ಇವರೆಲ್ಲರ ಕಲಾದೇವಿಗಳು ನಿರಂತರವಾಗಿ ಈ ಅರ್ಘ್ಯಪಾತ್ರೆಗಳಲ್ಲಿ ಕ್ರೀಡಿಸುತ್ತಸಣ್ಣ ನೌಕೆಗಳನ್ನು ಏರಿಕೊಂಡು ಅರ್ಘ್ಯಜಲವನ್ನು ಸತತವಾಗಿ ಶುಚಿಯಾಗಿ ಮಾಡುವರು. ಬ್ರಹ್ಮಾ, ವಿಷ್ಣು, ರುದ್ರ ಮತ್ತು ಅಗ್ನಿಯ ಕಲೆಗಳು ಬೇರೆ ಬೇರೆಯಾಗಿ ಹತ್ತು ಎಂದು ಹೇಳಲಾಗಿದೆ. ಸೂರ್ಯನಕಲೆಗಳು ಹನ್ನೆರಡು. ಚಂದ್ರ ಮತ್ತು ಸದಾಶಿವನ ಕಲೆಗಳು ಹದಿನಾರು ಬೇರೆ ಬೇರೆಯಾಗಿವೆ. ಈಶ್ವರನ ಕಲೆಗಳು ನಾಲ್ಕು ಎಂದು ಹೇಳಲಾಗಿದೆ. ಈ ಎಲ್ಲ ಕಲೆಗಳು ಸಿದ್ಧಿಲಕ್ಷ್ಮಿಗೆ ಸರಿಸಮಾನವಾದುವುಗಳು ಎಂದು ವಿಖ್ಯಾತವಾಗಿವೆ. ದೇವಿಗೆ ಔಪಾಸನೋಚಿತವಾದ ಚಿದಗ್ನಿಕುಂಡವು ಅಲ್ಲಿದೆ. ಲೋಕೋತ್ತರ (ಅತ್ಯುತ್ಕೃಷ್ಟ)ವಾದ ಜಗದಂಬೆಯು ಆರೋಹಣ ಮಾಡಲು ಸೂಕ್ತವಾದ ಒಂಬತ್ತು ಆವರಣಗಳಿಂದ ಶೋಭಿಸುವ ಶ್ರೀಚಕ್ರವಿದೆ. ಮಂತ್ರಿಣಿಯಾದ ಶ್ಯಾಮಲಾದೇವಿಯು ಆರೋಹಣ ಮಾಡಲು ಯೋಗ್ಯವಾದ, ಏಳು ಆವರಣಗಳಿಂದ ಕೂಡಿದ ಗೇಯಚಕ್ರವು ಅಲ್ಲಿ ಶೋಭಿಸುತ್ತಿದೆ. ದಂಡಿನಿಯೆಂಬವಾರಾಹೀದೇವಿಯು ಆರೋಹಣಮಾಡಲು ಸೂಕ್ತವಾದ ಐದು ಆವರಣಗಳಿಂದ ಕೂಡಿದ ಕಿರಿಚಕ್ರವೆಂಬುದು ಅಲ್ಲಿ ಶೋಭಿಸುತ್ತಿದೆ.

ಎಲ್ಲ ಕೋಟೆಗಳೊಳಗೆ ಇರುವ ಒಂಬತ್ತು ಆವರಣಗಳಿಂದ ಕೂಡಿ ಶೋಭಿಸುವ, ಅಂಬಿಕಾದೇವಿಯ ಮುಖ್ಯನಿವಾಸ ಮತ್ತು ಚಿಂತಾಮಣಿಗೃಹದ ಹೊರಗೋಡೆಯ ನಾಲ್ಕು ದಿಕ್ಕುಗಳಲ್ಲಿ ನಾಲ್ಕು ದ್ವಾರಗಳಿವೆ. ಪೂರ್ವದ್ವಾರದಲ್ಲಿ ಆಮ್ನಾಯ ರೂಪವಾದ ತರಂಗಿಣಿ(ನದಿ)ಯು ಇದೆ. ದಕ್ಷಿಣದ್ವಾರದಲ್ಲಿ ದಕ್ಷಿಣಾಮ್ನಾಯ ರೂಪವಾದ ಮಹಾನದಿ ಇದೆ. ಪಶ್ಚಿಮ ದ್ವಾರದಲ್ಲಿ ಪಶ್ಚಿಮಾಮ್ನಾಯರೂಪವಾದ ಶ್ರೇಷ್ಠವಾದ ನದಿಯಿದೆ. ಉತ್ತರ ದ್ವಾರದಲ್ಲಿ ಉತ್ತರಾಮ್ನಾಯರೂಪವಾದ ನದಿಯೊಂದಿದೆ. ಭೂಮಿಯಲ್ಲಿನ ಗೃಹತ್ರಯವೆಂದು ಪ್ರಸಿದ್ಧವಾದ ಮೂರು ಫಲಕಗಳಿಂದ ಸುಶೋಭಿತವಾದ, ತ್ರೈಲೋಕ್ಯ ಮೋಹನವೆಂಬ ಪ್ರಥಮಾವರಣದಲ್ಲಿ, ಅಣಿಮಾ, ಮಹಿಮಾ, ಗರಿಮಾ, ಲಘಿಮಾ, ಪ್ರಾಪ್ತಿ, ಪ್ರಾಕಾಮ್ಯ, ಈಶಿತ್ವ, ವಶಿತ್ವ, ಭುಕ್ತಿ ಮತ್ತು ಸರ್ವಸಿದ್ಧಿಗಳೆಂಬ ಹತ್ತು ಮುಖ್ಯಸಿದ್ಧಿಗಳು ಇರುವುವು. ರಸಸಿದ್ಧಿ, ಮೋಕ್ಷಸಿದ್ಧಿ, ಬಲಸಿದ್ಧಿ, ಖಡ್ಗಸಿದ್ಧಿ, ಪಾದುಕಾಸಿದ್ಧಿ, ಅಂಜನಸಿದ್ಧಿ, ವಾಕ್ಸಿದ್ಧಿ, ಲೋಹಸಿದ್ಧಿ, ದೇಹಸಿದ್ಧಿ, ಮತ್ತು ಮಂತ್ರಸಿದ್ಧಿಗಳೆಂಬ ಹತ್ತು ಉಪಸಿದ್ಧಿಗಳು ಇಲ್ಲಿವೆ. ಇವುಗಳಲ್ಲಿ ರೂಪಸಾದೃಶ್ಯವಿರುವುದರಿಂದಾಗಿ ಒಂದೇ ಮೂರ್ತಿಯನ್ನು ಇಲ್ಲಿ ಪ್ರದರ್ಶಿಸಲಾಗಿದೆ.

ಮೊದಲನೆ ಫಲಕದಲ್ಲಿ ಕೋಟಿ ಸಂಖ್ಯೆಯ ಇತರ ಸಿದ್ಧಿಗಳು ಇವೆ. ಚೌಕಾಕಾರದ ಎರಡನೆ ಫಲಕದಲ್ಲಿ, ಬ್ರಾಹ್ಮೀ, ಮಾಹೇಶ್ವರೀ, ಕೌಮಾರೀ, ವೈಷ್ಣವೀ, ವಾರಾಹೀ,ಮಾಹೇಂದ್ರಿ ಮತ್ತು ಚಾಮುಂಡಾ ಎಂಬ ಏಳನೆಯ, ಹಾಗೂ ಎಂಟನೆಯ ಮಹಾಲಕ್ಷ್ಮೀ ಎಂಬ ವಸುಮಾತೃಕೆಗಳು ಇವೆ. ಇವುಗಳಲ್ಲಿ ಧ್ಯಾನಸಾಮ್ಯ ಇರುವುದರಿಂದ ಒಂದೇ ಪ್ರತಿಮೆಯನ್ನು ಪ್ರದರ್ಶಿಸಲಾಗಿದೆ.

ಈ ವಿಭಾಗದ ಮೂರನೆಯ ಫಲಕದಲ್ಲಿ, ಸರ್ವಸಂಕ್ಷೋಭಿಣೀಮುದ್ರಾ, ಸರ್ವವಿದ್ರಾವಣೀಮುದ್ರಾ. ಸರ್ವಾ ಕರ್ಷಿಣಿಕಾಮುದ್ರಾ, ಸರ್ವವಶಂಕರೀಮುದ್ರಾ, ಸರ್ವೋನ್ಮಾದಿನಿಕಾಮುದ್ರಾ, ಸರ್ವಮಹಾಂಕುಶಮುದ್ರಾ, ಸರ್ವಖೇ ಚರಿಕಾ ಮುದ್ರಾ, ಸರ್ವಬೀಜಾಮುದ್ರಾ, ಸರ್ವಯೋನಿಮುದ್ರಾ, ಸರ್ವತ್ರಿಖಂಡಿತಾಮುದ್ರಾ, ಎಂಬ ಹತ್ತು ಮುದ್ರಾದೇವಿ ಯರು ಇರುವರು. ಇವರುಗಳ ಧ್ಯಾನಸಾದೃಶ್ಯದಿಂದಾಗಿ ಒಂದು ಮೂರ್ತಿಯನ್ನು ಪ್ರದರ್ಶಿಸಲಾಗಿದೆ. ಮೂರನೇ ಫಲಕದಲ್ಲಿ ಇರುವವರು ಪ್ರಕಟಯೋಗಿನಿಯರೆಂಬ ಹೆಸರುಳ್ಳವರಾಗಿದ್ದಾರೆ. ಚಕ್ರನಾಯಿಕೆಯಾದ ತ್ರಿಪುರಾಂಬೆಯು ಇವರೊಂದಿಗೆ ಸರ್ವ ಸಂಕ್ಷೋಭಿಣೀಮುದ್ರೆಯನ್ನು ಧಾರಣಮಾಡುತ್ತ ಜಗದಂಬೆಯಾದ ಕಾಮೇಶ್ವರಿಯನ್ನು ಧ್ಯಾನಿಸುತ್ತ

ಅಲ್ಲಿ ಶೋಭಿಸುತ್ತಾಳೆ. ಸಮಸ್ತರ ಆಸೆಗಳನ್ನು ಪೂರೈಸುವಂಥ, ಹದಿನಾರು ಅರ (ಚಕ್ರದ ಕಡ್ಡಿ)ಗಳಿಂದ ಕೂಡಿದ ಸಪ್ತ ದಳಕಮಲವೆಂಬ ಈ ಆವರಣದಲ್ಲಿ ಕಾಮಾಕರ್ಷಣಿಕಾ, ಋಧ್ಯಾಕರ್ಷಣಿಕಾ, ಅಹಂಕಾರಾಕರ್ಷಣಿಕಾ, ಶಬ್ದಾ ಕರ್ಷಣಿಕಾ, ಸ್ಪರ್ಶಾಕರ್ಷಣಿಕಾ, ರೂಪಾಕರ್ಷಣಿಕಾ, ರಸಾಕರ್ಷಣಿಕಾ, ಗಂಧಾಕರ್ಷಣಿಕಾ, ಚಿತ್ತಾಕರ್ಷಣಿಕಾ, ಧೈರ್ಯಾಕರ್ಷಣಿಕಾ, ಸ್ಮೃತ್ಯಾಕರ್ಷಣಿಕಾ, ನಾಮಾಕರ್ಷಣಿಕಾ, ಬೀಜಾಕರ್ಷಣಿಕಾ, ಆತ್ಮಾಕರ್ಷಣಿಕಾ, ಅಮೃತಾಕರ್ಷಣಿಕಾ. ಶರೀರಾಕರ್ಷಣಿಕಾ, ಎಂಬ ಈ ಹದಿನಾರು ಕಲೆಗಳು ಗುಪ್ತಯೋಗಿನಿಯರಾದ ದೇವಿಗಳಾಗಿ ಇಲ್ಲಿರುವರು. ಇವರುಗಳು ಸಮಾನರೂಪ ರಾದ್ದರಿಂದ ಒಂದೇ ಚಿತ್ರ ಮೂರ್ತಿಯು ಪ್ರದರ್ಶಿಸಲ್ಪಟ್ಟಿದೆ. ಸರ್ವವಿದ್ರಾವಣೀಮುದ್ರೆಯಿಂದ ಕೂಡಿದ ಚಕ್ರನಾಯಿಕೆ ಯಾದ ತ್ರಿಪುರೇಶಿಯು ಮೊದಲು ಹೇಳಿದ ದೇವಿಯರುಗಳಿಂದ ಸುತ್ತುವರೆಯಲ್ಪಟ್ಟವಳಾಗಿ ಸತತವಾಗಿ ಜಗದಂಬಿಕೆಯ ಚರಣಕಮಲಗಳನ್ನು ಧ್ಯಾನಿಸುತ್ತ ಇರುವಳು.

ವಸ್ಸರ (ಎಂಟು ಅರ) ಮತ್ತು ನಾಗದಳ(ನವದಳ)ಗಳಿಂದ ಶೋಭಿಸುವ 'ಸರ್ವಸಂಕ್ಷೋಭಿಣಿ' ಎಂಬ ಮೂರನೆ ಆವರಣದಲ್ಲಿ, ಅನಂಗಕುಸುಮಾ, ಅನಂಗಮೇಖಲಾ, ಅನಂಗಮದನಾ, ಅನಂಗಮದನಾತುರಾ, ಅನಂಗರೇಖಾ, ಅನಂಗ ವೇಗಾ, ಅನಂಗಾಂಕುಶಾ, ಮತ್ತು ಅನಂಗಮಾಲಿನೀ ಎಂಬ ಹೆಸರಿನ ಎಂಟು ಗುಪ್ತತರ ಯೋಗಿನಿಯರಿರುವರು. ಇವರಿಗೆ ರೂಪಸಾಮ್ಯವಿರುವುದರಿಂದ ಒಂದೇ ಪ್ರತಿಮೆಯನ್ನು ಬರೆಯಲಾಗಿದೆ. ಇಲ್ಲಿ ತ್ರಿಪುರಸುಂದರಿಯು ಚಕ್ರೇಶ್ವರಿಯಾಗಿದ್ದು ಈ ಗುಪ್ತತರಯೋಗಿನಿಯರೊಡಗೂಡಿ ಸರ್ವಾಕರ್ಷಿಣೀಮುದ್ರೆಯೊಂದಿಗೆ ದೇವಿಯ ಅರ್ಚನೆಯಲ್ಲಿ ನಿರಂತರವಾಗಿ ನಿರತಳಾಗಿರುತ್ತ ಶೋಭಿಸುವಳು.

ಮನು (ಹದಿನಾಲ್ಕು) ಕೋನಗಳಿಂದ ಕೂಡಿದ'ಭುವನಾಶ್ರ' ಎಂಬ ಸಕಲಸೌಭಾಗ್ಯದಾಯಕವಾದ ನಾಲ್ಕನೆ ಆವರಣ
ದಲ್ಲಿ, ಸರ್ವಸಂಕ್ಷೋಭಿಣೀ, ಸರ್ವವಿದ್ರಾವಿಣೀ, ಸರ್ವಾಕರ್ಷಣಿಕಾ, ಸರ್ವಾಹ್ಲಾದನಿಕಾ, ಸರ್ವಸಮ್ಮೋಹಿನಿ, ಸರ್ವಸ್ತಂಭನಿಕಾ,
ಸರ್ವಜೃಂಭಣಿಕಾ, ಸರ್ವವಶಂಕರೀ, ಸರ್ವರಂಜನಿಕಾ, ಸರ್ವೋನ್ಮಾದಿಕಾ, ಸರ್ವಾರ್ಥಸಾಧಿಕಾ, ಸರ್ವಸಂಪತ್ಪ್ರಪೂರಣೀ,
64 a ಸರ್ವಮಂತ್ರಮಯೀ, ಸರ್ವದ್ವಂದ್ವಕ್ಷಯಂಕರೀ, ಎಂಬ ಶಕ್ರ(ಹದಿನಾಲ್ಕು) ಸಂಖ್ಯೆಯ ಸಂಪ್ರದಾಯಯೋಗಿನಿಯರು
ಇಲ್ಲಿರುವರು. ಇವರುಗಳಿಗೆ ಧ್ಯಾನಸಾಮ್ಯವಿರುವುದರಿಂದ ಒಂದೇ ಪ್ರತಿಮೆಯನ್ನು ಇಲ್ಲಿ ಪ್ರದರ್ಶಿಸಲಾಗಿದೆ. ಇಲ್ಲಿ ತ್ರಿಪುರ
ವಾಸಿನೀ ಎಂಬ ಚಕ್ರೇಶ್ವರಿಯು ಸರ್ವವಶಂಕರೀ ಎಂಬ ಮುದ್ರೆಯನ್ನೊಳಗೊಂಡು ಅಂಬಾರ್ಚನೆಯಲ್ಲಿ ನಿರತಳಾಗಿದ್ದಾಳೆ.

ಹೊರಗಡೆಯಲ್ಲಿ ಹತ್ತು ಅರಗಳನ್ನೊಳಗೊಂಡ ಸರ್ವಾರ್ಥಸಾಧಕವೆಂಬ ಐದನೆಯ ಆವರಣದ ಚಕ್ರದಲ್ಲಿ ಹತ್ತು ದೇವತೆಗಳಿರುವರು. ಸರ್ವಸಿದ್ಧಿಪ್ರದಾ, ಸರ್ವಸಂಪತ್ಪ್ರದಾಯಿನೀ, ಸರ್ವಪ್ರಿಯಂಕರೀ, ಸರ್ವಮಂಗಲಕಾರಿಣೀ, ಸರ್ವಕಾಮ ಪ್ರದಾ, ಸರ್ವದುಃಖವಿನಾಶಿನೀ, ಸರ್ವಮೃತ್ಯುಪ್ರಶಮನೀ, ಸರ್ವವಿಘ್ನನಿವಾರಿಣೀ, ಸರ್ವಾಂಗಸುಂದರೀ, ಸರ್ವಸೌಭಾಗ್ಯ ದಾಯಿನೀ, ಮತ್ತು ಕುಲೋತ್ತೀರ್ಣಾ ಎಂಬ ದೇವಿಯರಿರುವರು. ಇವರೆಲ್ಲರೂ ಅನ್ಯೋನ್ಯವಾಗಿ ಸಮಾನ ರೂಪವುಳ್ಳ ವರು. ಇವರೆಲ್ಲರ ಪರವಾಗಿ ಸಂಗತವಾದ ಒಂದು ಮೂರ್ತಿಯನ್ನು ಇಲ್ಲಿ ಪ್ರದರ್ಶಿಸಲಾಗಿದೆ. ತ್ರಿಪುರಾಶ್ರೀ ಎಂಬ ಚಕ್ರನಾಯಿಕೆಯು ಇಲ್ಲಿ ಸರ್ವೋನ್ಮಾದಿಕಾ ಮುದ್ರೆಯನ್ನು ಧರಿಸಿಕೊಂಡು ದೇವಿಯ ಪಾದಾರ್ಚನೆಯಲ್ಲಿ ಉತ್ಸಾಹ ಪೂರ್ಣರಾಗಿರುವಳು.

ಒಳಗಡೆಯಲ್ಲಿ ಹತ್ತು ಅರಗಳಿರುವ ಸರ್ವರಕ್ಷಾಕರ ಎಂಬ ಆರನೆಯ ಆವರಣದಲ್ಲಿ ಸರ್ವಜ್ಞಾ, ಸರ್ವಶಕ್ತಿ, ಸರ್ವೈಶ್ವರ್ಯಪ್ರದಾಯಿನೀ, ಸರ್ವಜ್ಞಾನಮಯೀ, ಸರ್ವವ್ಯಾಧಿವಿನಾಶಿನೀ, ಸರ್ವಾಧಾರಸ್ವರೂಪಾ, ಸರ್ವಾಪಾಪಹರಾ, ಸರ್ವಾನಂದಮಯೀ, ಸರ್ವರಕ್ಷಾಸ್ವರೂಪಿಣೀ, ಸರ್ವೇಪ್ಸಿತಪ್ರದಾ ಎಂದು ಹನ್ನೊಂದು ಜನ ದೇವಿಯರಿದ್ದಾರೆ. ಇವರು ಗಳು ನಿಗರ್ಭಯೋಗಿನಿಯರೆಂದು ಹೆಸರುಳ್ಳವರು. ಇವರುಗಳು ಒಂದೇರೂಪವನ್ನು ಪಡೆದವರಾಗಿರುವುದರಿಂದ ಎಲ್ಲ

ಮೂರ್ತಿಗಳೊಂದಿಗೆ ಸರಿಹೊಂದುವ ಒಂದು ಮೂರ್ತಿಯನ್ನು ಇಲ್ಲಿ ಪ್ರದರ್ಶಿಸಲಾಗಿದೆ. ಇಲ್ಲಿ ಚಕ್ರೇಶ್ವರಿಯಾದ ತ್ರಿಪುರಮಾಲಿನಿಯು ಸರ್ವಮಹಾಂಕುಶಾ ಎಂಬ ಮುದ್ರೆಯನ್ನು ಧರಿಸಿ ನಿರಂತರವಾಗಿ ಶ್ರೀದೇವಿಯ ಚರಣಕಮಲಗಳಲ್ಲಿ ಮನಸ್ಸುಳ್ಳವಳಾಗಿ ಇರುವಳು.

ಎಂಟು ಅರಗಳೂ, ಎಂಟು ಕೋನಗಳೂ ಇರುವ ಏಳನೆಯ ಸರ್ವರೋಗಹರವೆಂಬ ಆವರಣದಲ್ಲಿ ರಮಾ(ಎಂಟು) ಸಂಖ್ಯೆಯ ದೇವತೆಗಳು ಇರುತ್ತಾರೆ. ಸ್ವರಾಧಿದೇವೀಯಾದವಶಿನೀ, ಕವರ್ಗದೇವತೆ ಕಾಮೇಶೀ, ಚವರ್ಗದೇವತೆ ಮೋದಿನೀ, ಟವರ್ಗದೇವತೆ ವಿಮಲಾ, ತವರ್ಗದೇವತೆ ಅರುಣಾ, ಪವರ್ಗದೇವತೆ ಜಯಿನೀ, ಯವರ್ಗದೇವತೆ ಸರ್ವೇಶೀ, ಶವರ್ಗದೇವತೆ ಕೌಲಿನೀ, ಇವರೆಲ್ಲರೂ ರಹಸ್ಯಯೋಗಿನಿಯರೆಂಬ ಹೆಸರುಳ್ಳವರು. ಇವರುಗಳ ಆಕಾರವು ಸಮಾನವಾದುದರಿಂದ ಇತರ ಆಕೃತಿಗಳೊಂದಿಗೆ ಸರಿಹೊಂದುವ ಒಂದು ಮೂರ್ತಿಯನ್ನು ಮಾತ್ರ ಇಲ್ಲಿ ತೋರಿಸಲಾಗಿದೆ. ಇಲ್ಲಿ ಚಕ್ರೇಶ್ವರಿಯಾದ ತ್ರಿಪುರಾಸಿದ್ಧಾ ಎಂಬ ದೇವತೆಯು ಸರ್ವಖೇಚರಿಕಾ ಎಂಬ ಮುದ್ರೆಯನ್ನು ಧರಿಸಿಕೊಂಡವಳಾಗಿ ದೇವಿಯ ಪಾದಗಳನ್ನು ಪೂಜಿಸುವುದರಲ್ಲಿ ತತ್ಪರಳಾಗಿರುವಳು.

ವಶಿನಿ ಮೊದಲಾದ ಅಂತರಾಳ (ನಡುಭಾಗ)ಗಳ ಮೇಲ್ಭಾಗದಲ್ಲಿ ಆಯುಧ ಶಾಲೆಯಿದೆ. ಅಲ್ಲಿಎರಡು ಕಬ್ಬಿನ ಬಿಲ್ಲುಗಳು, ಪುಷ್ಪಬಾಣಪಂಚಕ (ಐದು)ಗಳೆರಡು, ಎರಡುಪಾಶಗಳು, ಎರಡು ಅಂಕುಶಗಳು, ಇವು ಆದಿದಂಪತಿಗಳ (ಲಲಿತಾಂಬಾ ಶಿವ) ಮುಖ್ಯವಾದ ಎಂಟು ಆಯುಧಗಳು ಶೋಭಿಸುತ್ತಿವೆ. ವಜ್ರ (ಈ ಹೆಸರಿನ ಆಯುಧ) ಶತಘ್ನಿ (ನೂರಾರು ಜನರನ್ನು ಏಕ ಕಾಲದಲ್ಲಿ ಸಾವಿಗೀಡು ಮಾಡುವ ಫಿರಂಗಿ) ಭೃಶುಂಡಿ, ನೇಗಿಲು, ಒನಕೆ, ಪಟಸ, ಕೊಡಲಿ,
64 b ಈಟಿ, ಒನಕೆ, ಭಿಂಡಿವಾಳ, ಶಂಖ, ಚಕ್ರ ಮೊದಲಾದ ಆಯುಧಗಳು ಮತ್ತು ಕೋಟಿ ಸಂಖ್ಯೆಯ ಉಪಾಸ್ತ್ರಗಳು ಭಂಡ ಮೊದಲಾದ ರಾಕ್ಷಸರ ರಕ್ತದಿಂದ ತೊಯ್ದು ತೃಪ್ತಿಗೊಂಡು ಈ ಅಸ್ತ್ರಶಾಲೆಯಲ್ಲೇ ಸತತವಾಗಿ ದೇದೀಪ್ಯಮಾನ ವಾಗಿರುವುವು.

ಮೂರು ಮೂಲೆಗಳಿರುವ ಸರ್ವಸಿದ್ಧಿ ಪ್ರದಾಯಕವಾಗಿರುವ ಎಂಟನೇ ಆವರಣದಲ್ಲಿ ಕಾಮೇಶೀ, ವಜ್ರೇಶೀ, ಭಗಮಾಲಾ, ಎಂಬ ಮೂವರು ಅತಿ ರಹಸ್ಯಯೋಗಿನಿಯರೆಂದು ಪ್ರಸಿದ್ಧಿ ಹೊಂದಿರುವರು. ಧ್ಯಾನದಲ್ಲಿ ಸಾಮ್ಯವಿರು ವುದರಿಂದ ಇವರುಗಳ ಒಂದೇ ಪ್ರತಿಮೆಯನ್ನು ಪ್ರದರ್ಶಿಸಲಾಗಿದೆ. ಇವರುಗಳೊಂದಿಗಿರುವ 'ತ್ರಿಪುರಾ' ಎಂಬ ಚಕ್ರೇಶ್ವರಿಯು ಸರ್ವಬೀಜ ಎಂಬ ಮುದ್ರೆಯಿಂದ ಕೂಡಿದವಳಾಗಿ, ದೇವಿಯ ಪೂಜೆಯಲ್ಲಿ ಉತ್ಸಾಹ ತೋರುವವಳಾಗಿ, ಇಲ್ಲಿ ಶೋಭಿಸುವಳು.

ಆದರ ಮೇಲಿನ ನಾಥಾಂತರ ಎಂಬ ಗೃಹವನ್ನು ಆಶ್ರಯ ಮಾಡಿಕೊಂಡು ಇರುವ ಮಿತ್ರೇಶ, ಉಡ್ಡೀಶ, ಷಷ್ಠೀಶ, ಮತ್ತು ಚರ್ಯಾನಾಥ ಎಂದು ಕ್ರಮವಾಗಿ ಇರುವ ನಾಲ್ವರು ಯುಗನಾಥರು ಗುರುಗಳೆಂದು ಪ್ರಸಿದ್ಧರಾಗಿದ್ದಾರೆ. ಇವರುಗಳಿಗೂ ಸಾದೃಶ್ಯವಿರುವುದರಿಂದ ಒಂದು ಮೂರ್ತಿಯನ್ನು ಪ್ರದರ್ಶಿಸಲಾಗಿದೆ. ಇವರು ಲೋಕರಕ್ಷಣೆಗಾಗಿ ಪಾದುಕಾಸ್ವರೂಪದಿಂದ ಸೃಷ್ಟಿಸಿದ ಅನೇಕ ದಿವ್ಯಸಮೂಹ, ಮಾನವಸಮೂಹ, ಸಿದ್ಧಸಮೂಹ, ಸುರರು, ತಾಪಸರು, ಸಾಲೋಕ್ಯ, ಸಾರೂಪ್ಯ ಸಾಯುಜ್ಯಾದಿ ಸಿದ್ಧಿಗಳನ್ನು ಪಡೆದವರಾಗಿ ಈ ಗುರುಗಳನ್ನು ನಿರಂತರವಾಗಿ ಕ್ರಮವಾಗಿ ಸೇವೆ ಮಾಡುವರು.

ಈ ಗೃಹದ ಮೇಲ್ಭಾಗದ ಗೃಹವು ನಿತ್ಯಾಂತರವೆಂಬುದಾಗಿದೆ. ಇಲ್ಲಿ ಕಾಮೇಶೀ, ಭಗಮಾಲಾ, ನಿತ್ಯಕ್ಲಿನ್ನಾ, ಭೇರುಂಡಾ, ವಹ್ನಿವಾಸಿನಿ, ಮಹಾವಜ್ರೇಶ್ವರೀ, ಶಿವದೂತಿ, ತ್ವರಿತಾ, ಕುಲಸುಂದರೀ, ನಿತ್ಯಾ, ನೀಲಪತಾಕಾ, ವಿಜಯಾ,

ಸರ್ವಮಂಗಲಾ, ಜ್ವಾಲಾಮಾಲಿನಿಕಾ, ಚಿತ್ರಾಎಂಬ ದೇವಿಯರು ಇಲ್ಲಿ ಇರುವರು. ಇವರು ತಿಥಿ ಸಂಜ್ಞೆಯನ್ನು (ಹದಿನೈದು) ಹೊಂದಿದವರಾಗಿ 'ನಿತ್ಯ' ಎಂಬುದಾಗಿ ಪ್ರಸಿದ್ಧರಾಗಿದ್ದಾರೆ. ರೂಪದಲ್ಲಿ ಸರಿಸಮಾನತೆ ಇರುವುದರಿಂದ ಇವರುಗಳ ಒಂದು ಮೂರ್ತಿಯನ್ನು ಪ್ರದರ್ಶಿಸಲಾಗಿದೆ. ಇತರ ಗ್ರಂಥದ ಅನುಸಾರವಾಗಿ ಬೇರೆ ಬೇರೆ ಪ್ರತಿಮೆಗಳನ್ನು ತೋರಿಸಿದ್ದೇವೆ. ಚಕ್ರೇಶಿಯಾದ ತ್ರಿಪುರಸುಂದರಿಯು ಇವರೊಂದಿಗೆ ಸರ್ವಯೋಗಿನಿಯೆಂಬ ಮುದ್ರಾಧಾರಣ ಮಾಡಿಕೊಂಡು ಅಂಬಾರ್ಚನೆಯಲ್ಲಿ ನಿರತಳಾಗಿದ್ದಾಳೆ. ಮೊದಲನೆಯವಳು ತ್ರಿಪುರಾ, ಎರಡನೆಯವಳು ತ್ರಿಪುರೇಶೀ, ಮೂರನೆಯವಳು ತ್ರಿಪುರಸುಂದರೀ, ನಾಲ್ಕನೆಯವಳು ತ್ರಿಪುರವಾಸಿನೀ, ಐದನೆಯವಳು ತ್ರಿಪುರಾಶ್ರೀ, ಆರನೆಯವಳು ತ್ರಿಪುರಮಾಲಿನೀ, ಏಳನೆಯವಳು ತ್ರಿಪುರಾಸಿದ್ಧಾ, ಎಂಟನೆಯವಳು ತ್ರಿಪುರಾಂಬಾ, ಒಂಭತ್ತನೆಯವಳು ಚಕ್ರೇಶ್ವರಿಯಾದ ಮಹಾತ್ರಿಪುರ ಸುಂದರೀ ಇವರುಗಳು ಮುದ್ರಾಶೋಭಿತವಾದ ಹಸ್ತಕಮಲಗಳುಳ್ಳವರಾಗಿ, 'ಚಕ್ರೇಶ್ವರೀ' ಎಂಬುದಾಗಿ ಖ್ಯಾತರಾಗಿದ್ದಾರೆ. ಒಂಭತ್ತು ದೇವಿಯರ ರೂಪವು ಒಂದೇ ತೆರನಾಗಿರುವುದರಿಂದ ಒಂದು ಪ್ರತಿಮೆಯನ್ನು ಮಾತ್ರ ಪ್ರದರ್ಶಿಸಲಾಗಿದೆ.

ಇದರ ಮೇಲ್ಭಾಗವು ಅಂಗದೇವ್ಯಂತರ ಎಂದು ಹೇಳಲಾಗಿದೆ. ಇಲ್ಲಿ ಹೃದ್ದೇವೀ, ಶಿರೋದೇವಿ, ಶಿಖಾದೇವೀ, ವರ್ಮದೇವೀ; ದೃಷ್ಟಿದೇವೀ, ಅಸ್ತ್ರದೇವೀ, ಎಂಬುದಾಗಿ ಕ್ರಮವಾಗಿ ಆರು ಅಂಗದೇವಿಯರು ಭಕ್ತಿಯುತರಾಗಿ ಮಹಾ ದೇವಿಯ ಬಿಂದುಪೀಠದ ದಕ್ಷಿಣಭಾಗದಲ್ಲಿ ನಿರಂತರಜಾಗರೂಕರಾಗಿ ನೆಲೆಸಿರುವರು. ಲಕ್ಷಣ ಸಾದೃಶ್ಯವಿರುವುದರಿಂದ ಇವರುಗಳ ಒಂದೇ ಮೂರ್ತಿಯನ್ನು ಪ್ರದರ್ಶಿಸಿರುವೆವು.

ಒಂಬತ್ತನೆ ಸರ್ವಾನಂದಮಯವೆಂಬ ಶುಭವಾದ ಆವರಣದ ಸಮಗ್ರವಾಗಿ ಚಿತ್ತಾಕರ್ಷಕವಾದ ಶ್ರೀಪೀಠ ಎಂಬ
65 a ಬಿಂದು ಸ್ಥಾನದಲ್ಲಿ ಸರ್ವತ್ರಿಖಂಡಿಕಾ ಎಂಬ ಮುದ್ರೆಯನ್ನು ಧರಿಸಿದ ಶ್ರೀ ಲಲಿತಾಂಬೆಯು ಇರುವಳು. ಈ ದೇವಿಯು ಪರಬ್ರಹ್ಮಸ್ವರೂಪಿಣಿಯಾಗಿ ಪಂಚಪ್ರೇತಾಸನದಲ್ಲಿ ಆಸೀನಳಾಗಿರುವಳು. ನಾಲ್ಕು ಭುಜಗಳನ್ನೂ, ಮೂರು ಕಣ್ಣು ಗಳನ್ನೂ, ಚಂದ್ರಕಲಾಭೂಷಣವನ್ನು ಧರಿಸಿರುವಳು, ಕುಸುಂಭ (ಕೇಸರಿ) ವರ್ಣದ ವಸ್ತ್ರಗಳನ್ನು ದಿವ್ಯವಾದ ರವಿಕೆಯನ್ನು ಧರಿಸಿದ ಈ ದೇವಿಯು ಕಬ್ಬಿನ ಬಿಲ್ಲು, ಪುಷ್ಪಬಾಣಗಳು, ಪಾಶ, ಅಂಕುಶಗಳಿರುವ ತನ್ನ ಕರಗಳಿಂದ ಶೋಭಿಸುವಳು. ಸರ್ವಮಂಗಳಗಳಿಂದ ಪರಿಪೂರ್ಣೆಯೂ ಸಚ್ಚಿದಾನಂದಶರೀರಿಣಿಯೂ ಆಗಿರುವ ಇವಳು ದಾಸವಾಳದ ಹೂವಿನಂತೆ ರಕ್ತವರ್ಣದಿಂದ ಕೂಡಿದ್ದು ಸೃಷ್ಟಿಸ್ಥಿತಿಲಯಗಳನ್ನು ನಿರ್ಮಾಣ ಮಾಡುವವಳೂ, ಅನೇಕ ಕೋಟಿ ಬ್ರಹ್ಮಾಂಡಗಳ ಪಾಲನೆಯಲ್ಲಿ ನಿಪುಣೆಯೂ ಆಗಿದ್ದಾಳೆ. ಇವಳ ಕಂಠವು ಕಾಮೇಶನು ಕಟ್ಟಿದ ಮಾಂಗಲ್ಯಸೂತ್ರದಿಂದ ಶೋಭಿಸುವುದು. ಇವಳ ಜಡೆಯು ಪಾರಿಜಾತ ಮೊದಲಾದ ಪುಷ್ಪ ಮಾಲೆಯಿಂದ ಕಂಪನಯುಕ್ತವಾಗಿದೆ. ನವನವೀನ ವಿಭೂಷಣಗಳಿಂದ ಕೂಡಿದ ಈಕೆಯು ಜಗನ್ಮಂಗಲವನ್ನುಂಟುಮಾಡುವವಳು. ಕಾಮೇಶ್ವರನ ತೊಡೆಯೆಂಬ ಪೀಠ (ಆಸನ)ದಲ್ಲಿ ಕುಳಿತಿರುವ ಶ್ರೀದೇವಿಯು ಇಷ್ಟಾರ್ಥಗಳನ್ನು ನೀಡುವವಳು. ಈ ಮಹೇಶ್ವರಿಯು ಸಮಸ್ತ ದೇವರುಗಳಿಂದ ನಮಸ್ಕರಿಸಲ್ಪಡುವ ಪಾದ ಕಮಲಗಳನ್ನು ಹೊಂದಿರುವಳು. ಸಮಸ್ತವೇದಗಳಿಂದ ಸ್ತೋತ್ರ ಮಾಡಲ್ಪಡುತ್ತಿರುವ ಮಹಿಮಾನ್ವಿತವಾದ ವಿಚಿತ್ರ ಪರಾಕ್ರಮವಿರುವವಳೂ, ಕಾಮೇಶ್ವರೀ ಮೊದಲಾದ ಅನಂತ ಹೆಸರುಗಳಿಂದ ಸಮರ್ಥನೀಯಳೂ, ಮೂಲ ಪ್ರಕೃತಿರೂಪಳೂ, ಪರಂಜ್ಯೋತಿ ಮತ್ತು ಪರಾತ್ಪರ (ಅತಿಶ್ರೇಷ್ಠ)ಳೂ ಆಗಿರುವ ಈ ಮಹಾದೇವಿಯು ಈ ಶ್ರೀ ಚಕ್ರದಲ್ಲಿ ರಾರಾಜಿ ಸುತ್ತಿರುವಳು.

1095-1236

ಈ ಪ್ರಕಾರವಾಗಿ ಶ್ರೀನಗರದಲ್ಲಿ ಶೋಭಾಯಮಾನರಾದ ಸಾಲ ಮೊದಲಾಗಿ ಬಿಂದು ಪೀಠದವರೆಗೆ ವಾಸಿಸುವ ಇಪ್ಪತ್ತೈದು ದೇವತೆಗಳ ಹೆಸರುಗಳು

ಅನಂತರ ಇತರ ಶಕ್ತಿದೇವತೆಗಳನ್ನು ಹೇಳಲಾಗುವುದು. ಯೋಗನಿದ್ರಾ, ಮನೋನ್ಮನೀ, ಮಂತ್ರಿಣೀ, ಶ್ಯಾಮಲಾ, ರಾಜಮಾತಂಗಿಕಾ, ಬಾಲಾ, ಭುವನೇಶ್ವರೀ, ಸೌಭಾಗ್ಯಭುವನೇಶ್ವರೀ, ಮಾಯಾಭುವನೇಶ್ವರೀ, ಸೂರ್ಯಾತ್ಮಾ ಭುವನೇಶ್ವರೀ, ಅಷ್ಟಾದಶ ಭುಜಾಭದ್ರಕಾಳೀ, ಅಷ್ಟಭುಜಕಾಳೀ, ಷೋಡಶಭುಜಾದುರ್ಗಾ, ವಿಂಧ್ಯವಾಸಿನೀದುರ್ಗಾ, ರುದ್ರಾಂಶದುರ್ಗಾ, ಜಯದುರ್ಗಾ, ವನದುರ್ಗಾ, ರಿಪುಮಾರಿಣಿಕಾದುರ್ಗಾ, ಅಗ್ನಿದುರ್ಗಾ, (ಮೊದಲನೆಯವಳು) ಶೈಲಪುತ್ರೀ (ಎರಡನೆ ಯವಳು) ಬ್ರಹ್ಮಚಾರಿಣೀ, ಚಂಡಖಂಡಾ, ಸ್ಕಂದಮಾತಾ, ಕೂಶ್ಮಾಂಡಾ, ಕಾತ್ಯಾಯನೀ, ರಾತ್ರಿದುರ್ಗಾ, ಗೌರೀ, ಸಿದ್ಧಿದಾಯಿನೀ ಹೀಗೆ ಶೈವಾಗಮದಲ್ಲಿ ನವದುರ್ಗೆಯರು ಪ್ರಸಿದ್ಧರಾಗಿದ್ದಾರೆ.

ಗ್ರಂಥಾಂತರದಲ್ಲಿ ಚಂಡಾ, ಶಚೀ, ಶೈವಾ, ಚಂಡೀ, ಕ್ರೂರಾ, ಅನುಚಂಡಿಕಾ, ನವಮಿ, ಉಗ್ರಚಂಡಾ, ರುದ್ರಾ ಎಂದು ಒಂಬತ್ತು ದುರ್ಗೆಯರು ಇರುವರು. ಇವರುಗಳಲ್ಲಿ ಮೊದಲ ಎಂಟು ದುರ್ಗೆಯರು ಹದಿನಾರು ಭುಜಗಳುಳ್ಳವರೂ, ಸಮಾನರೂಪಿಣಿಯರೂ ಆಗಿರುವುದರಿಂದ ಅಷ್ಟದುರ್ಗೆಯರ ಮಧ್ಯೆ ಒಂದು ಪ್ರತಿಮೆಯನ್ನು ಪ್ರದರ್ಶಿಸಲಾಗಿದೆ. ರುದ್ರಾ ಎಂಬ ದುರ್ಗೆಯು ಹದಿನೆಂಟು ಭುಜಗಳುಳ್ಳ ವಳಾದ್ದರಿಂದ ಆ ಪ್ರತಿಮೆಯನ್ನು ಬೇರೆಯಾಗಿ ಪ್ರದರ್ಶಿಸಲಾಗಿದೆ. ನವದುರ್ಗೆಯರು ಸೇರಿ ಇಲ್ಲಿ ಎರಡು ರೂಪಗಳು ಇವೆ.

ಶ್ರೀವಿದ್ಯಾ, ಶುದ್ಧವಿದ್ಯಾ, ಬಗಲಾ, ಇಂದ್ರಾಕ್ಷಿಕಾ, ದಂಡನಾಥಾ, ವಾರಾಹೀ, ಶುದ್ಧವಾರಾಹೀ, ಸ್ವಪ್ನವಾರಾಹೀ,
ವಾಗೀಶ್ವರೀ, ಸೌಭಾಗ್ಯವಾಗೀಶ್ವರೀ, ಧೇನುವಾಗೀಶ್ವರೀ, ತ್ರಿಪುರಾ, ಭೈರವೀ, ಸಂವಿತ್ರಿಪುರಾ, ನಿತ್ಯಾ, ಮೋಹಿನೀನಿತ್ಯಾ
65 b ಬಾಲಾತ್ರಿಪುರಸುಂದರೀ, ಪ್ರತ್ಯಂಗಿರಾ, ವಶ್ಯಮುಖೀ, ಪ್ರಾಣಶಕ್ತಿ, ಶೂಲಿನೀ, ಮೃತಸಂಜೀವಿನೀ, ಸ್ವಸ್ಥಾವೇಶಿನೀ,
ಶತ್ರುವಿಧ್ವಂಸಿನೀ, ವಜ್ರ ಪ್ರಸ್ತಾರಿಣೀ, ಧೂಮಾವತೀ, ತ್ವರಿತಾ, ಅತಿಕಂಟಕೀ, ಅಪರಾಜಿತಾ, ಸರ್ವವರ್ಣೇಶ್ವರೀ, ಕಾಮ
ಕಲೇಶ್ವರೀ, ತಿರಸ್ಕರಿಣೀ, ಆಸುರೀ, ಅಶ್ವಾರೂಢಾ, ಉಗ್ರತಾರಕಾ, ಚತುರ್ಭುಜಾನ್ನಪೂರ್ಣಾ, ದ್ವಿಭುಜಾನ್ನಪೂರ್ಣಾ
ಶಾಕಂಭರೀ, ದ್ವಾದಶಾರ್ಧದೇವೀ, ಬನಶಂಕರೀ, ಲೋಪಾಮುದ್ರಾ, ತುಲಜಾಭವಾನೀ, ತುಲಸೀ, ಸಮಷ್ಟಿಗಾಯತ್ರೀ,
ಸಾವಿತ್ರೀ, ಸರಸ್ವತೀ, ಗಾಯತ್ರೀ, ಸಾಕಿನೀ, ಕಾಕಿನೀ, ಲಾಕಿನೀ, ರಾಕಿಣೀ, ಢಾಕಿನೀ, ಹಾಕಿನೀ, ಯಾಕಿನೀ, ಚತುಃಷಷ್ಟಿಕಲಾ,
ಚಂಡಾಪರಮೇಶ್ವರೀ, ಬ್ರಾಹ್ಮೀ, ಮಾಹೇಶ್ವರೀ, ಕೌಮಾರೀ, ವೈಷ್ಣವೀ, ವಾರಾಹೀ, ಇಂದ್ರಾಣೀ, ಚಂಡಿಕಾ, ದಿವ್ಯಯೋಗೀ,
ಮಹಾಯೋಗೀ, ಸಿದ್ಧಯೋಗೀ, ಮಹೇಶ್ವರೀ, ಪಿಶಾಚಿನೀ, ಡಾಕಿನೀ, ಕಾಲರಾತ್ರಿ, ನಿಶಾಚರೀ (ಪ್ರಥಮಾಷ್ಟಕ ದೇವತೆಗಳು)
ಕಂಕಾಲೀ, ರೌದ್ರೀ, ವೇತಾಲೀ, ಹುಂಕಾರೀ, ಭುವನೇಶ್ವರೀ, ಊರ್ಧ್ವಕೇಶೀ, ವಿರೂಪಾಕ್ಷೀ, ಶುಷ್ಕಾಂಗೀ, ನರಭೋಜನೀ
(ದ್ವಿತೀಯಾಷ್ಟಕ) ಫಟ್ಕಾರೀ, ವೀರಭದ್ರೀ, ಧೂಮ್ರಾಕ್ಷೀ, ಕಲಹಪ್ರಿಯಾ, ರಕ್ತಾಕ್ಷೀ, ರಾಕ್ಷಸೀ, ಘೋರಾ, ವಿಶ್ವರೂಪಾ
(ತೃತೀಯಾಷ್ಟಕ) ಭಯಂಕರೀ, ಕಾಮಾಕ್ಷೀ, ಉಗ್ರಚಾಮುಂಡಾ, ಭೀಷಣಾ, ತ್ರಿಪುರಾಂತಕಾ, ವೀರಕೌಮಾರಿಕಾ, ಚಂಡೀ,
ವಾರಾಹೀ (ಚತುರ್ಥಾಷ್ಟಕ) ಮುಂಡಧಾರಿಣೀ, ಭೈರವೀ, ಹಸ್ತಿನೀ, ಕ್ರೋಧದುರ್ಮುಖೀ, ಪ್ರೇತವಾಹಿನೀ, ಖಟ್ವಾಂಗ
ದೀರ್ಘಲಂಬೋಷ್ಠೀ, ಮಾಲತೀ, ಮಂತ್ರಯೋಗಿನೀ (ಪಂಚಮಾಷ್ಟಕ) ಅಸ್ಥಿನೀ, ಚಕ್ರಿಣೀ, ಗ್ರಾಹಾ, ಕಂಕಾಲೀ,
ಭುವನೇಶ್ವರೀ, ಕಂಟಕೀ, ತಾಟಕೀ, ಶುಭ್ರಾ (ಷಷ್ಠಾಷ್ಟಕ)ಕ್ರಿಯಾದೂತೀ, ಕರಾಲಿನೀ, ಶಂಖಿನೀ, ಪದ್ಮಿನೀ, ಕ್ಷೀರಾ,
ಅಸಂಘಾ, ಪ್ರಹಾರಿಣೀ, ಲಕ್ಷ್ಮೀ (ಸಪ್ತಮಾಷ್ಟಕ) ಕಾಮುಕೀ, ಲೋಲಕಾಕದೃಷ್ಟಿ, ಅಧೋಮುಖೀ, ಧೂರ್ಜಟೀ
ಮಾಲಿನೀ, ಘೋರಾ, ಕಪಾಲೀ ವಿಷಭೋಜಿನೀ (ಅಷ್ಟಮಾಷ್ಟಕ) ಇವರು ಅರ್ವತ್ತನಾಲ್ಕು ಯೋಗಿನಿಯರೆಂದು
ವಿಖ್ಯಾತರಾಗಿದ್ದಾರೆ. ವಿದ್ವಾಂಸರು ಈ ಯೋಗಿನಿಯರ ಎಂಟು ಅಷ್ಟಕಗಳನ್ನು ಕ್ರಮವಾಗಿ ತಿಳಿದುಕೊಳ್ಳಬೇಕು.
ಒಂದೊಂದು ಅಷ್ಟಕಕ್ಕೂ ರೂಪ ಸಾಮ್ಯವಿರುವುದರಿಂದ ಒಂದು ಅಷ್ಟಕಕ್ಕೆ ಒಂದು ಪ್ರತಿಮೆಯನ್ನು ಬರೆಯಲಾಗಿದೆ. ಅದೇ

ಪ್ರಕಾರವಾಗಿ, ದ್ವಿಭುಜಲಕ್ಷ್ಮೀ, ಗಜಲಕ್ಷ್ಮೀ, ಶ್ರೀದೇವೀ, ಮಹಾಲಕ್ಷ್ಮೀ, ವೀರಲಕ್ಷ್ಮೀ, ದ್ವಿಭುಜವೀರಲಕ್ಷ್ಮೀ, ಸಿದ್ಧಲಕ್ಷ್ಮೀ, ಅಷ್ಟಭುಜಾ ವೀರಲಕ್ಷ್ಮೀ, ಪದ್ಮಾಲಕ್ಷ್ಮೀ, ಪ್ರಸನ್ನಲಕ್ಷ್ಮೀ, ಈ ಪ್ರಕಾರವಾಗಿ ಹತ್ತುಲಕ್ಷ್ಮಿಯರನ್ನು ಹೇಳಲಾಗಿದೆ.

ಶ್ರೀ, ಭೂ, ಸರಸ್ವತೀ, ಪ್ರೀತಿ, ಶಾಂತಿ, ಕೀರ್ತಿ, ಕೃತಿ, ತುಷ್ಟಿ, ಪುಷ್ಟಿ, ಈ ಒಂಬತ್ತು ವಿಷ್ಣುವಿನ ಪರಿವಾರ ಶಕ್ತಿಗಳು. ಒಂಬತ್ತು ದೇವತೆಗಳ ರೂಪ ಸಮಾನವಾದ್ದರಿಂದ ಒಂದೇ ಪ್ರತಿಮೆಯನ್ನು ಬರೆಯಲಾಗಿದೆ. ಅಜಾಮುಖೀ, ಅಥರ್ವಣೀ,
66 a ಇಲಾ, ಈಶ್ವರೀ, ಉಗ್ರಾ, ಊರ್ಜಸ್ವಲಾ, ಋತುಧಾಮಾ, ರೇಣುಕಾ, ಲೃತಂಬರಾ, ಲೃಂಜಿಕಾ, ರೇವತೀ ಶುಷ್ಕರೇವತೀ ಓಜಸ್ವಿನೀ, ಅಘೋರಾ, ಅಂಜನಾ, ಅಜಾ, ಭೂತವಿನ್ಯಾಸಿನೀ, ಖದ್ಯೋತಿನೀ, ಧೂಮ್ರಾಘರೂಪಿಣೀ, ಆರು ಮುಖಗಳಿಂದ ಕೂಡಿದ ಅನಂತಶಕ್ತಿದೇವೀ, ಸುಷಮಾ, ನಿರ್ಝರಾರುಂಧತೀ, ಭೋಗದಾ, ನಿರ್ಝರನದೀ, ಪ್ರಬೋಧಿನೀ, ಧಾರಿಣೀ, ಕ್ರಿಯಾಸರಸ್ವತೀ, ತತ್ಕಾರಿಣೀ, ಶ್ರೀ ಘನಾ, ಮಯೂರವಾಹನೆಯಾದ ಅನಂತ ಶಕ್ತಿದೇವೇಶೀ, ಸರಸ್ವತೀ, ನೀಲಕಂಠಾಸರಸ್ವತೀ, ಭೋಗದಾಯಿನೀ, ಶ್ಯಾಮಲಾ, ಮದ್ದಾನೆಯ ಮೇಲೆ ಕುಳಿತಿರುವ ಅನಂತಶಕ್ತಿದೇವೇಶೀ, ಇಚ್ಛಾಶಕ್ತಿ, ಜಯಶ್ಯಾಮಲಾ, ಚಿಚ್ಛ್ಯಾಮಲಾ, ಅನುಶ್ಯಾಮಲಾ, ವಿದ್ಯಾಶ್ಯಾಮಲಾ, ದೀಪಿನೀ, ರೇಚಿಕಾ, ಮೋಚಿನೀ, ಪಾರಾಯಣೀ, ಮಂಗಳಗೌರೀ.

ಅನುಕ್ರಿಯಾ, ಸಿದ್ಧಕ್ರಿಯಾ, ಆಪ್ಯಾಯನೀ, ಬಂಧಮೋಚಿನೀ, ಮಾಯಾ ಮಾಲಿನೀ ಎಂಬುದಾಗಿ 'ಅ'ಕಾರದಿಂದ 'ಕ್ಷ'ಕಾರ ಕೊನೆಯವರೆಗೆ ಕ್ರಮವಾಗಿ ಅಕ್ಷರದೇವತೆಗಳು ಪ್ರಸಿದ್ಧರು. ನಾರಾಯಣ ದೇವತೆಯು ಪ್ರಣವದ ಅಭಿಮಾನಿಯೆಂದು ಹೇಳಲಾಗಿದೆ. ಹಾಗೆಯೆ ರಕ್ತಚಾಮುಂಡಾ, ಕಾಲರಾತ್ರಿ, ಸೀತಲಾ, ಜ್ಯೇಷ್ಠಾಲಕ್ಷ್ಮೀ, ಮೋಹಿನೀ, ಜಗನ್ಮೋಹಿನೀ, ಪುಲಿಂದಿನೀ, ರೇಣುಕಾ, ಮಹಿಷಮರ್ದಿನೀದುರ್ಗಾ, ಚಾಮುಂಡಿಕಾ, (ಸಪ್ತ ಮಾತೃಕಾಂತರ್ಗತಾ) ಅಷ್ಟಾಕ್ಷರೀದುರ್ಗಾ ಚಿಂತಾಮಣಿ, ಚಿತ್ರಿಣೀ, ಯಕಲಾ, ಚಿಂತಾಮಣಿ ಸರಸ್ವತೀ, ಬಾಲಾಸರಸ್ವತೀ, ಸೂರ್ಯಮಂಡಲಾಂತಸ್ಥಾಮಣಿಕರ್ಣಿಕಾ, ಈ ದೇವತೆಗಳು ವಿವರಿಸಲ್ಪಟ್ಟಿವೆ. ಹಾಗೆಯೇ ದೇವಿಯ ಕರಕಮಲದಲ್ಲಿರುವ ಪಂಚಾಕ್ಷರೀ ಶುಕಲಕ್ಷಣವನ್ನು, ಗುಣ ವಾರ್ಧಿ ಅಕ್ಷಿ (243) ಸಂಖ್ಯೆಯ ದೇವತೆಗಳ ಮೂರ್ತಿಗಳನ್ನೂ ಶ್ರೀ ಶಕ್ತಿನಿಧಿಯಲ್ಲಿ ತೋರಿಸಿವೆ. ಇವು ಅನ್ಯೋನ್ಯ ಭಿನ್ನರೂಪಗಳಾಗಿವೆ. ಶ್ರೀದುರ್ಗಾಭೂಮಿ ಸಂಖ್ಯೆ (198)ಯ ದೇವಿಯರು ಏಕರೂಪರಾದ್ದರಿಂದ ಪ್ರದರ್ಶನ ಮಾಡ ಲಾದ ದೇವಿಯರೊಂದಿಗೆ ಈ ಮೂರ್ತಿಗಳನ್ನು ಪ್ರದರ್ಶಿಸಿಲ್ಲ. ಶಕ್ತಿನಿಧಿಯಲ್ಲಿ ಒಟ್ಟಿಗೆ ಚಂದ್ರಸಾಗರಸಾಗರ (441) ಪ್ರತಿಮೆಗಳಿವೆ.
1237-1287

ಮೊದಲ ಈ ಶಕ್ತಿನಿಧಿಯಲ್ಲಿ ರೂಪ ಸಾದೃಶ್ಯದಿಂದ ಹೇಳಲಾದ 44 ಪ್ರತಿಮೆಗಳು ಹಾಗೂ ಹೇಳದೇ ಇರುವ 198 ಪ್ರತಿಮೆಗಳ ವಿವರಣೆ

ಅಣಿಮಾದಿ ಇಪ್ಪತ್ತು ಸಿದ್ಧಿಗಳಲ್ಲಿ ಹತ್ತೊಂಬತ್ತು, ಎಂಟು ಮಾತೃಕಾದೇವಿಯರಲ್ಲಿ ಏಳು, ಹತ್ತು ಮುದ್ರಾದೇವಿಯರಲ್ಲಿ ಒಂಬತ್ತು, ಹದಿನಾರು ಗುಪ್ತಯೋಗಿನಿಯರಲ್ಲಿ ಹದಿನೈದು, ಎಂಟು ಗುಪ್ತತರ ಯೋಗಿನಿಯರಲ್ಲಿ ಏಳು, ಹದಿನಾಲ್ಕು ಸಂಪ್ರದಾಯ ಯೋಗಿನಿಗಳಲ್ಲಿ ಹದಿಮೂರು, ಬಹಿರ್ದಶಾರದಲ್ಲಿರುವ ಹತ್ತು, ಕುಲೋತ್ತೀರ್ಣೆಯರಲ್ಲಿ ಒಂಭತ್ತು, ಅಂತರ್ದಶಾರದಲ್ಲಿರುವ ಹತ್ತು ನಿಗರ್ಭಯೋಗಿನಿಯರಲ್ಲಿ ಒಂಬತ್ತು, ಎಂಟು ರಹಸ್ಯ ಯೋಗಿನಿಯರಲ್ಲಿ ಏಳು, ಮೂರು ಅತಿರಹಸ್ಯಯೋಗಿನಿಯರಲ್ಲಿ ಎರಡು, ನಾಲ್ಕು ಯುಗನಾಥರಲ್ಲಿ ಮೂರು, ಹದಿನೈದು ನಿತ್ಯಕ್ಲಿನ್ನೆಯರಲ್ಲಿ ಹದಿನೈದು ರೂಪಾಂತರದಿಂದ ಹದಿನೈದು, ಒಟ್ಟಿಗೆ ಮೂವತ್ತು. ಅವುಗಳಲ್ಲಿ ಹದಿನಾಲ್ಕು, ಆರು ಅಂಗ ದೇವಿಯರಲ್ಲಿ
66 b ಐದು, ಒಂಬತ್ತು ಚಕ್ರೇಶ್ವರಿಯರಲ್ಲಿ ಎಂಟು ಯಾಮಲದಲ್ಲಿ ಹೇಳಿದ ಒಂಬತ್ತು ದುರ್ಗೆಯರಲ್ಲಿ ಎಂಟು. ಈ ರೀತಿಯಾಗಿ 198 ಪ್ರತಿಮೆಗಳನ್ನು ಬಿಟ್ಟು ಉಳಿದ 243 ಪ್ರತಿಮೆಗಳನ್ನು ಬರೆಯಲಾಗಿದೆ.

ಮಹಾಕಾಳಿಸ್ವರೂಪ, ತಂತ್ರೋಪಾಖ್ಯಾನದಲ್ಲಿ

ಆಗ ತಾನೆ ಕತ್ತರಿಸಿದ ಶಿರಸ್ಸನ್ನು ಖಡ್ಗವನ್ನು, ಅಭಯ ಮತ್ತು ವರದ ಮುದ್ರೆಯನ್ನು ಧರಿಸಿರುವ, ಘೋರವಾದ ಮುಖವುಳ್ಳ ಶಿರಸ್ಸುಗಳ ಹಾರದಿಂದ ಅತಿಮನೋಹರಳಾದ, ಮುಕ್ತಕೇಶಸಮೂಹವುಳ್ಳ, ಕಟವಾಯಿಯಿಂದ ರಕ್ತ ಪ್ರವಾಹವನ್ನು ಹೊಂದಿರುವ, ಸ್ಮಶಾನದಲ್ಲಿ ವಾಸಮಾಡುವ, ಕರ್ಣಗಳಲ್ಲಿ ಶವಾಲಂಕಾರವನ್ನು ಮಾಡಿಕೊಂಡಿರುವ, ಶ್ಯಾಮವರ್ಣದವಳಾದ, ಶವಗಳ ಭುಜಗಳಿಂದ ಸೊಂಟದ ಪಟ್ಟಿಯ ಅಲಂಕಾರವುಳ್ಳ ಕಾಳಿಕಾದೇವಿಯನ್ನು ಭಜಿಸುತ್ತೇನೆ. 1288

ಇನ್ನೊಂದು ಬಗೆಯ ಧ್ಯಾನದಂತೆ, ಕಾಳೀಕಾದೇವಿಯ ಧ್ಯಾನವನ್ನು ಹೇಳುವೆನು

ಇದನ್ನು ಶ್ರವಣ ಮಾಡುವ ಮಾತ್ರದಿಂದ (ಜೀವಿಯು) ಶಿವತಾದಾತ್ಮ್ಯವನ್ನು ಹೊಂದುವನು. ಕರಾಳವಾದ (ಭೀಕರ) ಮುಖವುಳ್ಳ, ಘೋರಸ್ವರೂಪಿಣಿಯಾದ, ಕೆದರಿದ ಕೂದಲುಗಳುಳ್ಳ, ನಾಲ್ಕು ಭುಜಗಳಿರುವ, ದಿವ್ಯಸ್ವರೂಪಳಾದ, ಮುಂಡಮಾಲಾಲಂಕೃತಳಾದ, ಆಗತಾನೇ ತುಂಡರಿಸಲ್ಪಟ್ಟ ಶಿರಸ್ಸನ್ನೂ, ಖಡ್ಗವನ್ನು ಎಡಬದಿಯ ಮೇಲಿನ ಹಾಗೂ ಕೆಳಗಿನ ಹಸ್ತಾಂಬುಜಗಳಲ್ಲಿ ಧರಿಸಿರುವ, ಅಭಯ ಮತ್ತು ವರದ ಮುದ್ರೆಗಳನ್ನು ಬಲಭಾಗದ ಕರಕಮಲಗಳಲ್ಲಿ ಧರಿಸಿರುವ, ಮಹಾಮೇಘದಂತೆ ಕಾಂತಿಯುಳ್ಳ (ಅತಿ ಶ್ಯಾಮವರ್ಣ) ದಿಗಂಬರೆಯಾದ, ಕಂಠದಲ್ಲಿರುವ ಮುಂಡಸಮೂಹದಿಂದ ಸುರಿಯುತ್ತಿರುವ ರಕ್ತದಿಂದ ಲೇಪಿತವಾಗಿರುವ ಎರಡು ಶವಗಳನ್ನು ಕರ್ಣಾವತಂಸ (ಕಿವಿಯ ಆಭರಣ)ವನ್ನಾಗಿ ಮಾಡಿಕೊಂಡಿರುವ ಭಯಾನಕವಾದ ಕೋರೆಹಲ್ಲುಗಳಿರುವ, ಪುಷ್ಟವಾದ ಮತ್ತು ಉನ್ನತವಾಗಿರುವ ಸ್ತನಗಳಿರುವ, ಶವಗಳ ಹಸ್ತಸಮೂಹಗಳಿಂದ ಕಾಂಚಿ (ಸೊಂಟದ ಪಟ್ಟಿ)ಯನ್ನು ನಿರ್ಮಿಸಿಕೊಂಡಿರುವ, ಹಸನ್ಮುಖಿಯಾಗಿರುವ, ಎರಡು ಕಟವಾಯಿಗಳಿಂದ ಸುರಿಯುವ ರಕ್ತಧಾರೆಯಿಂದಾಗಿ ಹೊಳೆಯುವ ಮುಖವುಳ್ಳ, ಘೋರವಾಗಿ ಕೂಗುಹಾಕುತ್ತಿರುವ, ಮಹಾರೌದ್ರಸ್ವರೂಪಿಣಿಯಾದ, ಶ್ಮಶಾನವಾಸಸ್ಥಳದಲ್ಲಿ ವಾಸಮಾಡಿಕೊಂಡಿರುವ, ದಿವ್ಯಳಾದ, ಉದ್ದವಾಗಿ ಬಿಚ್ಚಿಕೊಂಡಿರುವ ಕೇಶ ಸಮೂಹವುಳ್ಳ, ಶವರೂಪವನ್ನು ಪಡೆದ ಮಹಾದೇವನ ಹೃದಯದ ಮೇಲೆ ಕುಳಿತಿರುವ, ನಾಲ್ಕು ದಿಕ್ಕುಗಳಲ್ಲೂ ಘೋರವಾಗಿ ಕಿರಿಚಿಕೊಳ್ಳುತ್ತಿರುವ ಹೆಣ್ಣು ನರಿಗಳಿಂದ ಕೂಡಿರುವ, ಮಹಾಕಾಲ (ಪ್ರಳಯ)ದ ಅಗ್ನಿಯಂತೆ ಇರುವ, ವಿಪರೀತ ರತದಲ್ಲಿ ಆಸಕ್ತಿಯುಳ್ಳ, ಅತಿಯಾಗಿ ಸಂತೋಷಪಟ್ಟ ಮುಖಕಮಲವುಳ್ಳ, ಘೋರವಾದ ಮುಖಪಂಕಜವುಳ್ಳ, ಯೋಗಿನೀಸಮೂಹದೊಂದಿಗಿರುವ ಕಾಳಿಕೆಯನ್ನು ಮನಸ್ಸಿನಲ್ಲಿ ಧ್ಯಾನಿಸಬೇಕು. ಈ ಪ್ರತಿಮೆಯ ರೂಪವನ್ನು ಬರೆದಿಲ್ಲ. 1289-1297

ಇಲ್ಲಿಗೆ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ್ ವಿರಚಿತವಾದ ಶ್ರೀತತ್ತ್ವನಿಧಿಯಲ್ಲಿ ಮೊದಲನೆ ಶಕ್ತಿನಿಧಿ ಸಂಪೂರ್ಣವಾಯಿತು

ŚRĪTATTVANIDHI

Volume - 1

ŚAKTINIDHI

English Translation
by
Vidvān H.V. NAGARAJA RAO, M.A

CONTENTS

Subject	Page No.
Benedictory verses and titles of the king	273-274
Subject of nine Nidhis	274
Description of Cāmuṇḍā	275
Description of Mahākālī	275
Description of Mahālakṣmī	275
Description of Mahāsarasvatī	275
Meditation on Rājarājeśvarī	276
Twenty-five names of Rājarājeśvarī	277
Meditation of Ṣoḍaśī	277
Meditation on Mahākāla and Mahākālī in the First Fort;	277-279
Second Fort: Vasantartu with Madhuśrī and Mādhavaśrī	280
Third Fort: Grīṣmartu with Śukraśrī and Śuciśrī	280
Fourth Fort: Varṣartu with his twelve wives	281
Fifth Fort: Śaradṛtu with Iṣaśrī and Ūrjaśrī	282
Sixth Fort: Hemantaṛtu with Sahaśrī and Sahasyaśrī	283
Seventh Fort: Śiśiraṛtu with Tapaḥśrī and Tapasyaśrī	284
Eighth Fort: Siddhas with Siddhaśrī's	285
Ninth Fort: Cāraṇas with their wives	285
Tenth Fort: Bhairavas and Yoginīs	286
Eleventh Fort: Gandharvas with nymphs	286
Twelfth Fort: Nāgas with their wives and Balīndra	287
Thirteenth Fort: Manus and Kings	288
Fourteenth Fort: Rulers of directions, Indra etc	288-290
Fifteenth Fort: Daṇḍinī and Vārahī	291
Sixteenth Fort: Brahmā with retinue	292
Seventeenth Fort: Viṣṇu with retinue	293
Eighteenth Fort: Maheśvara with retinue	294
Ninteenth Fort: Tārādevī with retinue	295
Twentieth Fort: Vāruṇī with retinue	297
Twenty-first Fort: Kurukulā with retinue	297
Twenty-second Fort: Sun and his retinue	298
Twenty-third Fort: Somanātha with his retinue	298
Twenty-fourth Fort: Manmatha with Rati	299
Twenty-fifth Fort; Vessels used for worship	300-304
Meditation on the rivers in the form of four Vedas	304-305
Meditation on Devatās in nine sheaths (Coverings)	306

Subject	Page No.
Gods in the first plank of the first sheath	307
Gods in the second plank of the first sheath	308
Gods in the third plank of the first sheath	309
Gods in the second covering	309-310
Gods in the third covering	310
Gods in the fourth covering	312
Gods in the fifth covering	312
Gods in the sixth covering	312
Gods in the seventh covering	313
Weapons in the armoury	314
Gods in the eighth covering	315
Description of Nāthāntara	315
Description of goddesses in Nityāntara	316
Description of goddess Kāmeśī	317
Description of Nityaklinnā	317
Description of Bheruṇḍā	318
Description of goddess Vahnivāsinī	318
Description of goddess Mahāvajreśvarī	318
Description of goddess Śivadūtī	318
Description of Tvaritā	319
Description of goddess Kulasundarī	319
Description of goddess Nityā	319
Description of goddess Nīlapatākā	319
Description of goddess Vijayā	320
Description of goddess Sarvamaṅgalā	320
Description of goddess Jvālāmālinī	320
Description of goddess Citrā	320
Meditation on nine Cakreśvarīs	321
Meditation on subsidiary goddesses	321
Description of Aṅgadevyantara	321

Subject	Page No.
Description of Lalitā in the ninth covering	321-22
Description of Kameśvarī's manifestation and marriage	325-334
Eulogy of Mahiṣāsuramardini	334-335
Realisation of Śrīcakra	336
Meditation on Yoginī	337
Meditation on Manonmaṇī	337
Meditation on Śyāmalā	338
Meditation on Rājamātaṅgi	339
Meditation on Bālā	339
Meditation on Bhuvaneśvari	338-339
Meditation on Saubhāgyabhuvaneśvarī	339
Meditation on Māyābhuvanesvarī	339
Meditation on Sūryātmaka Bhuvaneśvarī	339
Meditation on Bhadrakālī with 18 arms	340
Meditation of Kālī with eight arms	340
Meditation on Durgā with sixteen arms	340
Meditation on Vindhyavāsini Durgā	340
Meditation on Rudrāṁsadurgā	341
Meditation on Jayadurgā	341
Meditation on Vanadurgā	341
Meditation on Ripumāriṇī Durgā	341
Meditation on Agnidurgā	342
Meditation on Durgā, the Mountian's daughter	342
Meditation on the spinster Durgā	342
Meditation on Caṇḍakhaṇḍā Durgā	342
Meditation on Skandamātā Durgā	342
Meditation on Kūṣmāṇḍa Durgā	343
Meditation on Kātyāyanī Durgā	343
Meditation on Rātridurgā	343
Meditation on Gaurīdurgā	343

Subject	Page No.
Meditation on Siddhidāyinī Durgā	343
Meditation on Rudrādurgā	344
Meditation on Śrīvidyā	344
Meditation on Śuddhavidyā	345
Meditation on Bagalā	345
Meditation on Indrākṣī	345
Meditation on Daṇḍanātha	345
Meditation on Śuddhavārāhī	346
Meditation on Svapnavārāhī	346
Meditation on Vāgīśvarī	346
Meditation on Saubhāgyavāgīsvarī	347
Meditation on Dhenuvāgīśvarī	347
Meditation on Tripurabhairavī	347
Meditation on Saṁvittripurā	348
Meditation on Bālātripurasundarī	348
Meditation on Nityā	348
Meditation on Mohinīnityā	348
Meditation on Vaśyamukhī	349
Meditation on Pratyaṅgirā	349
Meditation on Śūlinī	349
Meditation on Prāṇaśakti	349
Meditation on Mṛtasaṁjīvinī	350
Meditation on Svasthāveśinī	350
Meditation on Śatruvidhvaṁsinī	350
Meditation on Vajraprastāriṇī	350
Meditation on Trikaṇṭakī	351
Meditation on Aparājitā	351
Meditation on Dhūmāvatī	351
Meditation on Kāmakaleśvarī	352
Meditation on Sarvavarṇeśvarī	352
Meditation on Tvaritā	352
Meditation on Dvādaśārdhadevī	352
Meditation on Tiraskariṇī	353
Meditation on Aśvārūḍhā	353
Meditation on Āsurī	353
Meditation on Ugratārā	354
Meditation on Lopāmudrā	354
Meditation on Annapūrṇā (four-armed)	354
Meditation on Annapūrṇā (two-armed)	354
Meditation on Gāyatrī	355
Meditation on Sāvitrī	355
Meditation on Sarasvatī	355
Meditation on Samaṣṭigāyatrī	356
Meditation on Śākambharī	356
Meditation on Banaśankarī	356
Meditation on Tulajābhavānī	357
Meditation on Tulasī	357
Meditation on Candrāparameśvarī	357
Meditation on Catuṣṣaṣṭikalādevī	358
Meditation on Śākinī	358
Meditation on Kākinī	358
Meditation on Lākinī	358
Meditation on Rakiṇī	359
Meditation on Ḍhākinī	359
Meditation on Hākinī	359
Meditation on Yākinī	360
Description of six wheels	361
Description of Brāhmī	361
Description of Māheśvarī	361
Description of Kaumārī	361
Description of Vaiṣṇavī	362
Description of Vārāhī	362
Description of Indrāṇī	362
Description of Candrikā	362
Meditation on sixty-four yoginīs	363
First group of eight	363
Second group of eight	363
Third group of eight	363
Fourth group of eight	364
Fifth group of eight	364
Sixth group of eight	364
Seventh group of eight	365

Subject	Page No.
Eighth group of eight	365
Meditation on eight Mahālakṣmīs	365
Lakṣmī with two arms	365
Gajalakṣmī	366
Mahālakṣmī	366
Śrīdevī	366
Meditation on Vīralakṣmī	366
Meditation on Vīralakṣmī (two arms)	367
Meditation on Vīralakṣmī (eight arms)	367
Meditation on Prasannalakṣmī	367
Meditation on Siddhalakṣmī	367
Meditation on Lakṣmī called Padmā	368
Meditation on deities of Viṣṇu's retinue	368
Form of letters from A to Kṣa	368-382
Description of Praṇavanārāyaṇa	383
Meditation on Raktacāmuṇḍī	383
Meditation on Kālarātri	383
Meditation on Sītalā	384
Meditation on Mohinī	384
Meditation on Māyājaganmohinī	384
Meditation on Jyeṣṭhālakṣmī	384
Meditation on Pulindinī	384
Meditation on Reṇukā	385
Meditation on Mahiṣāsuramardini Durgā	385
Meditation on Aṣṭākṣarī Durgā	385
Meditation on Cāmuṇḍā included among Mātṛkās	385
Meditation on Cintāmaṇi Durgā	386
Meditation on Citriṇī	386
Meditation on Yakalā	387
Meditation on Cintāmaṇi Sarasvatī	387
Meditation on Bālāsarasvatī	387
Meditation on Durgā in the sun	388
Meditation on Maṇikarṇikā	388
Description of Pañcākṣarī in the parrot's wing	389
Meditation on Caṇḍaghātijvalajjihvā	390
Śivapañcākṣarīmantra permutations	391
Jagadambācakra	392
Names of 108 Śaktikṣetras and their goddesses	393-396
Names of 18 Śaktipīṭhas	396
Sixteen names of Gaurī	396
Names of Sopānatattvas	397
Names of nine Navanātha Siddhas	397
Names of Siddhas	397
Names of swords	397
Names of lions of the throne	398
Names of gods to be invited for the defeat of enemies	398
Names of decorative dolls in the throne	399
Śaktimantrajapa	399
Devīmantranyāsa	399
Eight Mountains (Dalaparvatas)	399
Brief contents of Śaktinidhi	400-408
Mahākāli's meditation	409
Samāpti of the Śaktinidhi	409

ŚAKTINIDHI

1 a May the work Śrītattvanidhi, which is illustrated and contains secrets of *Mantras*, and which is authored by King Sri Kṛṣṇarāja, be written without any obstacle. Salutation to Lord Gaṇādhipati and Goddess Cāmuṇḍāmbikā. 1

Let us contemplate on the god who wears white clothes, who pervades all, who is white like the moon, and has four hands and who has a pleasant face, for removal of all obstacles. I surrender to goddess Ambā, who looks like a fresh coral while granting fortunes, like the autumn moon while giving knowledge, like a blue diamond while defeating groups of enemies and who is the mother of the three worlds and has herself no birth. 2

Hail goddess Cāmuṇḍā, Bhadrakāli, hail destroyer of all worlds, hail omnipresent one! Salutations to you. 3

1 a+b The kingdom of Karnāṭaka shines like an ornament of the whole earth and like a jewel among all countries. The state of Mysore is the centre of that country. There a king who has descended in the line of the full moon reigns. He is adorned with many titles like The king of kings, the greatest of kings, the unrivalled valiant, **Narapati Birudentembara Gaṇḍa, Lokaikavīra** etc. That king of Mysore Sri Kṛṣṇarāja Wodeyar is commencing to write a work called **Śrītattvanidhi** with illustrations. May the work be completed unhindered!

Sarasvatī, the goddess of learning is white like the jasmine flower, the moon, snow and a diamond necklace. She wears white garments. She holds the Vīṇā in her hands and is seated on a white lotus. Gods like Viṣṇu, Brahmā and Śiva worship her always. She removes all sluggishness from the mind. May she protect me! 4

1 b With the grace of goddess Cāmuṇḍī, Sri Kṛṣṇarāja Wodeyar brings to light the following in the book called **Śrītattvanidhi** which contains nine *nidhi's* (treasures): The form, weapons, colour, ornaments, vehicle, features, flower and garments of many gods, and goddesses like Cāmuṇḍāmbā; the main features of gods like Viṣṇu, Brahmā, Śiva, Indra etc; different divisions of times like the *Yugas* and the excellences and defects of different times; whatever else that is to be said incidentally and their order.

The following matters have been dealt with in this work: **5-11**

First Nidhi	:	The features of Mahāśaktis (goddesses) like Cāmuṇḍā.
Second Nidhi	:	The features of different forms of Viṣṇu.
Third Nidhi	:	The Features of the forms of Śiva and Śaiva gods.
Fourth Nidhi	:	Description of the forms of Brahmā, Indra etc.
Fifth Nidhi	:	Characteristics of planets, stars, time etc.
Sixth Nidhi	:	Characteristics of Śālagrāma and description of the centres of pilgrimage belonging to Viṣṇu.
Seventh Nidhi	:	Description of the centres of pilgrimage belonging to Śiva and features of Śivaliṅga.
Eighth Nidhi	:	Features of Veda, Āgama, Tantra etc.
Ninth Nidhi	:	Interesting things regarding numbers, scripts etc.

With the knowledge of those nine *nidhis*, all the nine treasures (of the world) will become easily accessible. **12-16**

Description of goddess Cāmuṇḍī. (Birth day of this goddess falls on the day of Revatī star in the month of Āṣāḍha).

Goddess Caṇḍī (Cāmuṇḍī) is of golden lustre and beautiful. She is in full youth and has three eyes. She looks angry but has a hidden smile. Her waist is slim and eyes

are wide. She has charming, plump breasts. She has one face and twenty hands. With her ten right hands, she carries a trident, a sword, a śakti, a discus, an arrow, a conch, a *vajra*, a protective gesture, a small drum and a knife in that order from top to bottom.

2 a/1 In the ten left hands she carries (in that order) a serpent, a noose, a shield, a sickle, an aṅkuśa[1], a bow, a bell, a flag and a mirror. Mahiṣāsura, in the form of a buffalo lies at her feet with his head cut off. A person emerging out of the severed neck of the buffalo looks angry with a raised hand. He is pierced with the spear by Caṇḍī and the oozing blood has made his brows, moustache and eyes appear red. A noose is around his neck. The lion is gnawing at his body. Caṇḍī's left leg is on the lion and her right leg is pressing the demon down. This goddess, who holds the weapons, can destroy all her enemies. Golden Colour. **17-23**

2 a/2 **Mahākālī, as described in Caṇḍīkalpa.** Mahākālī carries a sword, a discus, a mace, an arrow, a bow, a rod, a trident, a *bhṛṣuṇḍī* [2], a head and a conch in her hands. She shines like a blue diamond. She has ten faces. Even lord Brahmā eulogised her, when Lord Hari was asleep, for liquidating Madhu and Kaiṭabha. Blue Colour. 24

2 b/1 **Mahālakṣmī as described in Caṇḍīkalpa.** Mahālakṣmī carries dice, a garland, a *paraśu*[2], a mace, an arrow, a *vajra*[2], a lotus, a bow, a pot, a stick, a *śakti*, a sword, a shield, a conch, a bell, a liquor vessel, a trident, a noose and Sudarśana discus. She shines like coral and kills the demon in the form of a buffalo. She is seated on a lotus. I meditate upon her. Coral Colour. **25**

2 b/2 **Mahāsarasvatī as described in Caṇḍīkalpa.** Mahāsarasvatī carries a bell, a trident, a plough, a conch, a pestle, a discus, a bow and an arrow. Her lustre is like that of the moon shining at the fringe of a cloud. She has sprung from the body of Gaurī. She is the support of all the three worlds. She is the destroyer of demons like Śumbha. I meditate upon her. White Colour. **26**

---

1 a hook used by elephant riders to control the elephant

Meditation of Rajarājeśvarī as given in Ṣoḍaśīkalpa:

3 a/1 Rajarājeśvarī is seated on the left lap of lord Śiva who is equal to a crore gods of love in beauty. She is equal in brilliance to millions of suns and moons rising together. Her brightness has turned crores of worlds into crimson red. She resembles a fresh hibiscus flower in colour. Her another form is Ajapā gāyatrī hymn. She is comparable to the Kuṅkuma (Saffron) flower. Her red lustre is like that of the pomegranate flower. She is equal to a million rising suns in brilliance. She has three eyes and has a shining crown adorned with the crescent moon. Her hands are holding a noose, a hook, a bow of sugarcane and five arrows. Her robes are yellowish like the light of millions of lightnings. Her loins and breasts are round. She is being showered with moonlight by the crescent moon shining on her crown. Her third eye looks like the decorative

3 b mark on her forehead. Her eyes are full of mercy that oozes from her side glances. She is decorated with two earrings which resemble the sun and the moon. She is shining with her nose - ornament which is like the planet Venus. Her teeth make one wonder whether it is a cluster of the pomegranate seeds. Her voice is so sweet that after hearing it, one feels that even the music of the Vīṇā is loathsome. The fragrance of the betel mixed with camphor in her mouth is spreading to the quarters of the world. Rajarājeśvarī's cheeks are so bright that they put even a mirror to shame. She has a smiling face. An auspicious garland adorns her neck which resembles a conch. She has four hands which act as wish-yielding divine creepers to her devotees. Her fingers shine with gem-studded rings. Her breast which resemble hills are adorned with river-like necklaces. Her waist bends due to the weight of breasts and her abdomen shines with three folds. A diamond-studded belt encircles her waist. Her thighs are round. The knots of her legs are hidden. She has curly hairs. When she walks, her anklets trinkle and produce a melodious sound.

Rājarājeśvarī wears necklaces, bangles, a crown, bracelets and wrist-bands that shine with gems. Her neck is like a conch and nose is fine. Her lips resemble the *bimba* fruit and her face is like the moon. She wears lovely garments and fine ornaments. She exudes the fragrance of sandal, *aguru*, camphor, *kastūrī* etc. The

diamonds in the crowns of Karaṇeśas rub the lotus feet of Rājarājeśvarī when they prostrate. She is seated in *pancapretāsana*. Her form consists of five Omkāras.

Vermilion colour. **27-42**

Twenty five names of Rājarājeśvarī according to Lalitopākyāna:

Simhāsaneśī, Lalitā, Mahārājñī, Parāṅkuśā, Cāpinī, Tripurā, Mahātriurasundarī, Sundarā, Cakranābhā, Samrājñī, Cakriṇī, Cakreśvarī, Mahādevī, Kāmeśī, Parameśvarī, Kāmarājapriyā, Kāmakoṭikā, Cakravartinī, Mahāvidyā, Śivā, Anaṅgavallabhā, Sarvapāṭalā, Kulanāthā, Āmnayanāthā, Sarvāmnāyavilāsinī, Śṛṅgāranāyikā are the twenty five names of Rājarājeśvarī. 43-46

Meditation on Ṣoḍaśī according to Śrīvidyāvilāsa of Gaganānandanātha:

